ಗುರುವಾರ, ಜನವರಿ 29, 2026 | ₹ 7.00
prajavani.net prajavani
www.prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

**ಗಾಯದ 'ನೋವು'**

ಇಟಲಿಯ ಲೊರೆಂಜೊ ಮುಸೆಟ್ಟಿ ಅವರು ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ಪುರುಷರ ಕ್ವಾರ್ಟರ್‌ಫೈನಲ್‌ನಲ್ಲಿ ಬುಧವಾರ ಗಾಯಾಳಾಗಿ ಹೊರನಡೆದರು. ಜೊಕೊವಿಕ್ ನಾಲ್ಕರ ಘಟ್ಟಕ್ಕೆ ಮುನ್ನಡೆದರು



**ಆಗ್ರಹ...**

ವಿಶ್ವ ವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಜಾರಿಗೆ ತಂದಿರುವ ಹೊಸ ನಿಯಮಗಳನ್ನು ವಿರೋಧಿಸಿ ದೆಹಲಿ ವಿಶ್ವವಿದ್ಯಾಲಯದಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ವಿದ್ಯಾರ್ಥಿ



## ಪ್ರಶ್ನೋತ್ತರ

### 'ದೌರ್ಜನ್ಯ ತಡೆಯುವ ಹೊಣೆ ಸಾರ್ವಜನಿಕರಿಗೂ ಇದೆ'

ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟಲು 'ಅಕ್ಕಪಡೆ' ರಚಿಸಲಾಗಿದೆ. ದಿನದ 12 ಗಂಟೆಯೂ ಈ ಪಡೆ ಗಸ್ತು ತಿರುಗಲಿದೆ. ದೌರ್ಜನ್ಯಕ್ಕೊಳಗಾಗಿ ದೂರು ನೀಡುವವರ ಹೆಸರನ್ನು ಗೋಪ್ಯವಾಗಿ ಇಡಲಾಗುವುದು. ಜತೆಗೆ ಮಹಿಳೆಯರ ಹಾಗೂ ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟುವ ಜವಾಬ್ದಾರಿ ಸಾರ್ವಜನಿಕರಿಗೂ ಇದೆ. ದೌರ್ಜನ್ಯ ತಡೆಗಟ್ಟಲು ದಿನದ 24 ಗಂಟೆಯೂ ಸಹಾಯವಾಣಿಗಳನ್ನು ತೆರೆಯಲಾಗಿದೆ.

**ಲಕ್ಷ್ಮೀ ಹೆಬ್ಬಾಳಕರ**, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ
**ಪ್ರಶ್ನೆ: ಡಾ.ಭರತ್ ಶೆಟ್ಟಿ**, ಬಿಜೆಪಿ

### ತುಳುಭಾಷೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆ ಸಭೆ

ತುಳುಭಾಷೆಯನ್ನು ರಾಜ್ಯದ ಎರಡನೇ ಹೆಚ್ಚುವರಿ ಅಧಿಕೃತ ಭಾಷೆಯನ್ನಾಗಿ ಘೋಷಣೆ ಮಾಡುವ ಸಂಬಂಧ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧ್ಯಕ್ಷತೆಯ ತಂಡ ಆಂಧ್ರ ಪ್ರದೇಶಕ್ಕೆ ಭೇಟಿ ನೀಡಿದೆ. ಆಂಧ್ರದಲ್ಲಿ ಉರ್ದು ಭಾಷೆಯನ್ನು ಎರಡನೇ ಅಧಿಕೃತ ಭಾಷೆಯನ್ನಾಗಿ ಮಾಡಿದ್ದು, ಅದರ ಮಾನದಂಡಗಳ ಕುರಿತು ವರದಿ ಸಲ್ಲಿಸಿದ ಬಳಿಕ ಮುಖ್ಯಮಂತ್ರಿ ಅವರ ಜತೆ ಸಭೆ ನಡೆಸಿ ತುಳು ಭಾಷೆಗೆ ಎರಡನೇ ಅಧಿಕೃತ ಭಾಷೆಯ ಸ್ಥಾನ ನೀಡುವ ಕುರಿತು ತೀರ್ಮಾನ ತೆಗೆದುಕೊಳ್ಳಲಾಗುವುದು.

**ಶಿವರಾಜ ತಂಗಡಗಿ**, ಕನ್ನಡ ಮತ್ತು ಸಂಸ್ಕೃತಿ ಸಚಿವ
**ಪ್ರಶ್ನೆ: ಅಶೋಕ್ ಕುಮಾರ್ ರೈ**, ಕಾಂಗ್ರೆಸ್

### ಸವಳು–ಜವಳು: ಕೇಂದ್ರದಿಂದ ₹4.18 ಕೋಟಿ ಅನುದಾನ

ಕೇಂದ್ರ ಪುರಸ್ಕೃತ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ– ಸಮಸ್ಯಾತ್ಮಕ ಮಣ್ಣುಗಳ ಸುಧಾರಣೆ ಕಾರ್ಯಕ್ರಮಡಡಿ ₹4.18 ಕೋಟಿ ಹೆಚ್ಚುವರಿ ಅನುದಾನಕ್ಕೆ ಅನುಮೋದನೆ ಸಿಕ್ಕಿದೆ. ಸದ್ಯದ ಬಿಡುಗಡೆ ಆಗಲಿದೆ. ಅಲ್ಲದೇ, ಸವಳು-ಜವಳು ಭೂಮಿ ಅಭಿವೃದ್ಧಿಗೆ ರಾಜ್ಯ ಸರ್ಕಾರ ವತಿಯಿಂದ ಹೆಚ್ಚಿನ ಅನುದಾನವನ್ನು ಮುಂಬರುವ ಬಜೆಟ್‌ನಲ್ಲಿ ನಿಗದಿಪಡಿಸಲಾಗುವುದು.

**ಎನ್. ಚಲುವರಾಯಸ್ವಾಮಿ**, ಕೃಷಿ ಸಚಿವ
**ಪ್ರಶ್ನೆ: ಭರಮಗೌಡ ಅಲಗೌಡ ಕಾಗೆ**, ಕಾಂಗ್ರೆಸ್

## ಕಲಾಪ ವೀಕ್ಷಣೆ

ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.



ಬೆಂಗಳೂರಿನ ವಿಧಾನಸೌಧದಲ್ಲಿ ಬುಧವಾರ ನಡೆದ ವಿಧಾನ ಪರಿಷತ್ ಕಲಾಪವನ್ನು ಶಾಲಾ ವಿದ್ಯಾರ್ಥಿಗಳು ವೀಕ್ಷಣೆ ಮಾಡಿದರು

# ಫೋನ್ ಕದ್ದಾಲಿಕೆ ಆರೋಪ: ವಾಗ್ವಾದ

## ಲೋಕಭವನ: ಸಿಬಿಐ ತನಿಖೆಗೆ ಬಿಜೆಪಿ ಆಗ್ರಹ ವಿಧಾನಸಭೆಯಲ್ಲಿ ವಾಗ್ಯುದ್ಧ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಚಿವರಾದ ಎಚ್.ಕೆ. ಪಾಟೀಲ, ಪ್ರಿಯಾಂಕ್ ಖರ್ಗೆ ಅಣತಿಯಂತೆ ಲೋಕಭವನ ಮತ್ತು ಆರ್‌ಎಸ್‌ಎಸ್ ಕಚೇರಿ ಕೇಶವಕೃಪಾದ ದೂರವಾಣಿ ಕದ್ದಾಲಿಕೆ ಮಾಡಲಾಗುತ್ತಿದ್ದು, ಈ ಬಗ್ಗೆ ಸಿಬಿಐ ತನಿಖೆ ನಡೆಸಬೇಕು ಎಂದು ಬಿಜೆಪಿ ಸದಸ್ಯರು ವಿಧಾನಸಭೆಯಲ್ಲಿ ಆಗ್ರಹಿಸಿದರು.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯ ವೇಳೆ ಬಿಜೆಪಿ ಸದಸ್ಯರು ಕದ್ದಾಲಿಕೆ ವಿಷಯ ಪ್ರಸ್ತಾಪಿಸಿದರು.

'ವಂದನೆಯ ಬದಲಿಗೆ ಖಂಡನಾ ನಿರ್ಣಯದ ಮೂಲಕ ರಾಜ್ಯಪಾಲರಿಗೆ ಅಗೌರವ ತೋರಿಸಿದ್ದಾರೆ. ಅದ್ದರಿಂದ ಈ ಕುರಿತು ಸರ್ಕಾರ ಕ್ಷಮೆ ಯಾಚಿಸಬೇಕು' ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಪಟ್ಟು ಹಿಡಿದರು. ಬಿಜೆಪಿ ಸದಸ್ಯರು ಧ್ವನಿಗೂಡಿಸಿದರು.

ಆಗ ಪ್ರತಿಕ್ರಿಯೆ ನೀಡಿದ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು, 'ದೆಹಲಿಯಿಂದ ಬರುವ ದೂರವಾಣಿ ಕರೆಗಳ ನಿರ್ದೇಶನದಂತೆಯೇ ರಾಜ್ಯಪಾಲರು ನಡೆದುಕೊಳ್ಳುತ್ತಿದ್ದಾರೆ. ಹೀಗಾಗಿ ಅವರು ಪೂರ್ತಿ ಭಾಷಣ ಓದಿಲ್ಲ' ಎಂದರು.

ಅವರ ಮಾತನ್ನೇ ಗಟ್ಟಿಯಾಗಿ ಹಿಡಿದುಕೊಂಡ ಬಿಜೆಪಿ ಸದಸ್ಯರು, 'ಹಾಗಿದ್ದರೆ ನೀವು ಲೋಕಭವನದ ದೂರವಾಣಿ ಕರೆಗಳನ್ನು ಕದ್ದಾಲಿಕೆ ಮಾಡುತ್ತಿದ್ದೀರಾ? ದೆಹಲಿಯಿಂದ ಎಷ್ಟು ಕರೆಗಳು ಬಂದಿವೆ, ಯಾವ ನಿರ್ದೇಶನ ನೀಡಿದ್ದಾರೆ ಎಂಬುದು ಗೊತ್ತಿರಬೇಕು. ಅವುಗಳ ವಿವರ ಬಹಿರಂಗಪಡಿಸಿ' ಎಂದು ಪಟ್ಟು ಹಿಡಿದರು.

### 'ಕದ್ದಾಲಿಕೆಗೆ ಸಚಿವರ ಷಡ್ಯಂತ್ರ'

ರಾಜ್ಯಪಾಲರು ಓಡಿ ಹೋದರು ಎಂದು ಸಚಿವ ಎಚ್.ಕೆ.ಪಾಟೀಲರು ಹೇಳಿದ್ದರು. ನರೇಗಾ ಕುರಿತೇ ಇಲ್ಲಿ ಚರ್ಚೆ ನಡೆಯುತ್ತಿದೆ. ಸಂಸತ್ತಿನಲ್ಲಿ ನರೇಗಾ ಕುರಿತು ಚರ್ಚೆ ನಡೆಯುವಾಗ ಅದರಲ್ಲಿ ಭಾಗವಹಿಸದೇ ರಾಹುಲ್‌ಗಾಂಧಿ ವಿದೇಶಕ್ಕೆ ಓಡಿ ಹೋಗಿದ್ದರು. ದೆಹಲಿಯಿಂದ ಲೋಕ ಭವನಕ್ಕೆ ಕರೆ ಬಂದಿದ್ದಕ್ಕೆ ದಾಖಲೆ ಇದ್ದರೆ ಬಿಡುಗಡೆ ಮಾಡಲಿ. ಕಾನೂನು ಮಂತ್ರಿ ಮತ್ತು ಐಟಿ ಸಚಿವರು ಸೇರಿ ಷಡ್ಯಂತ್ರ ಮಾಡಿ ಕದ್ದಾಲಿಕೆ ಮಾಡುತ್ತಿದ್ದಾರೆ.

**ವಿ.ಸುನಿಲ್ ಕುಮಾರ್**, ಬಿಜೆಪಿ

### 'ಯಾರ ಕರೆಯನ್ನೂ ಕದ್ದಾಲಿಸಿಲ್ಲ'

ನಾವು ಯಾರ ಕರೆಯನ್ನೂ ಕದ್ದಾಲಿಕೆ ಮಾಡಿಲ್ಲ. ವಿರೋಧ ಪಕ್ಷದವರ ಕರೆಗಳನ್ನೂ ಕದ್ದಾಲಿಸುವುದಿಲ್ಲ. ದೆಹಲಿ, ಹೈಕಮಾಂಡ್‌ನಿಂದ ರಾಜ್ಯಪಾಲರಿಗೆ ಸೂಚನೆ ಬಂದಿರಬಹುದೆಂದು ಎಚ್.ಕೆ.ಪಾಟೀಲರು ಹೇಳಿರಬಹುದು. ಇದನ್ನು ದೊಡ್ಡ ವಿಚಾರ ಮಾಡಿಕೊಂಡು ಮಾತನಾಡುವುದು ಬೇಡ. ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದು ಬಿಟ್ಟು ಕಾಲಹರಣ ಮಾಡುತ್ತಿದ್ದೀರಿ. ಬೇಕಾದರೆ ತನಿಖೆ ನಡೆಸೋಣ.

**ಸಿದ್ದರಾಮಯ್ಯ**, ಮುಖ್ಯಮಂತ್ರಿ

### 'ಆದೇಶಿಸಿದ್ದು ಯಾರು?'

ರಾಜ್ಯಪಾಲರಿಗೆ ದೆಹಲಿಯಿಂದ ಎಷ್ಟು ಬಾರಿ ಕರೆಗಳು ಬಂದಿವೆ? ಪದೇ ಪದೇ ಕರೆ ಬಂದಿದೆ ಎಂದು ಹೇಳುತ್ತೀರಿ, ಹಾಗಿದ್ದರೆ ಯಾರ ನಿರ್ದೇಶನದ ಮೇರೆಗೆ ನೀವು ದೂರವಾಣಿ ಕದ್ದಾಲಿಕೆ ಮಾಡಿಸುತ್ತಿದ್ದೀರಿ? 'ಅಲೆಡ್ ಸೆನ್ಸಿಟಿವ್ ಪರ್ಸನ್ ಗೇಟ್' ಅದನ್ನು ಬಲ್ ಸ್ಟೇಟ್‌ಮೆಂಟ್. ಇದು ಎಚ್.ಕೆ.ಪಾಟೀಲರ ಅನ್ವಯ. ನಿಮ್ಮ (ಪಾಟೀಲ) ಮಾತುಗಳಲ್ಲಿ ತೂಕ ಇರಬೇಕು. ಆದರೆ, ಕೆಟ್ಟ ಮೇಲ್ಪಂಕ್ತಿ ಹಾಕುತ್ತಿದ್ದೀರಿ.

**ಎಸ್. ಸುರೇಶ್ ಕುಮಾರ್**, ಬಿಜೆಪಿ

### 'ನಮ್ಮ ಕರೆಗಳನ್ನೂ ಕದ್ದಾಲಿಕೆ ಮಾಡುತ್ತಿದ್ದೀರಾ?'

ದೆಹಲಿಯಿಂದ ಲೋಕಭವನಕ್ಕೆ ಬರುವ ದೂರವಾಣಿ ಕರೆ ಪ್ರಕಾರ ರಾಜ್ಯಪಾಲರು ನಡೆದುಕೊಳ್ಳುತ್ತಾರೆ ಎಂದು ಎಚ್.ಕೆ.ಪಾಟೀಲರು ಹೇಳಿದ್ದಾರೆ. ಅಂದರೆ ದೂರವಾಣಿ ಕದ್ದಾಲಿಕೆ ನಡೆಯುತ್ತಿದೆಯೆಂದರ್ಥ. ಇಲ್ಲವೆಂದರೆ ಅವರಿಗೆ ಈ ವಿಷಯ ಹೇಗೆ ಗೊತ್ತಾಗುತ್ತದೆ?

ಪ್ರಿಯಾಂಕ್ ಖರ್ಗೆ ಅವರು ಆರ್‌ಎಸ್‌ಎಸ್ ಕಚೇರಿಯಿಂದ ಲೋಕಭವನಕ್ಕೆ ಕರೆ ಬರುತ್ತಿತ್ತು ಎಂದು ಆರೋಪಿಸಿದ್ದಾರೆ. ಅಂದರೆ ಆರ್‌ಎಸ್‌ಎಸ್ ಕಚೇರಿ ದೂರವಾಣಿ ಕೂಡ 'ಟ್ಯಾಪ್' ಆಗುತ್ತಿದೆ. ಇದು 'ಫೋನ್ ಟ್ಯಾಪಿಂಗ್' ಸರ್ಕಾರವೇ? ನಮ್ಮ 'ಫೋನ್ ಕೂಡ ಟ್ಯಾಪ್' ಮಾಡಲಾಗುತ್ತಿದೆಯೇ? ರಾಮಕೃಷ್ಣ ಹೆಗಡೆ ಸರ್ಕಾರ ದೂರವಾಣಿ ಕದ್ದಾಲಿಕೆಯಿಂದ ಬಿದ್ದು ಹೋಗಿತ್ತು. ಈ ಸರ್ಕಾರ ಕೂಡ ದೂರವಾಣಿ ಕದ್ದಾಲಿಕೆಯಿಂದ ಬಿದ್ದು ಹೋಗುತ್ತದೆ.

ರಾಜ್ಯಪಾಲರಿಂದಲೇ ಪ್ರಮಾಣ ಸ್ವೀಕರಿಸಿರುವ ಕಾನೂನು ಸಚಿವರು ಈಗ ಅವರ ವಿರುದ್ಧವೇ ಮಾತನಾಡುತ್ತಾರೆ. ಸಚಿವರು ಗೋಪ್ಯತೆ ಕಾಪಾಡಬೇಕು. ಅವರು ಸಂಸದೀಯ ವ್ಯವಹಾರಗಳ ಸಚಿವರಾಗಿರುವುದೇ ನಮಗೆ ಅಗೌರವ.

**ಆರ್. ಅಶೋಕ**, ವಿರೋಧ ಪಕ್ಷದ ನಾಯಕ

### 'ಸಭಾಪತಿ ಹೇಳಿದರೂ ನಿಲ್ಲದ ರಾಜ್ಯಪಾಲರು'

ರಾಷ್ಟ್ರಗೀತೆ ಇದೆ, ಹೋಗಬೇಡಿ ಎಂದು ಸಭಾಪತಿ ಬಸವರಾಜ ಹೊರಟ್ಟಿಯವರು ರಾಜ್ಯಪಾಲರಿಗೆ ಹೇಳಿದರೂ ಅವರು ನಿಲ್ಲಲಿಲ್ಲ. ಇದನ್ನು ಸಭಾಪತಿಯವರು ನಿಮ್ಮ ಪಕ್ಷದ ನಾಯಕರ ಮುಂದೆಯೇ ನನಗೆ ಹೇಳಿದ್ದಾರೆ. ಹೀಗಾಗಿ, ರಾಜ್ಯಪಾಲರಿಗೆ ಮಾಹಿತಿ ಇರಲಿಲ್ಲ ಎಂದು ನೀವು ಹೇಳುವುದರಲ್ಲಿ ಸತ್ಯಾಂಶವಿಲ್ಲ. ರಾಷ್ಟ್ರಗೀತೆ ಬಿಟ್ಟು ಹೋಗುವುದು ಸರಿಯೇ? ಅವರು ಬಿಟ್ಟು ಹೋಗಿದ್ದರ ಕುರಿತು ಇಲ್ಲಿ ಚರ್ಚೆ ಆಗಬೇಕು. ರಾಷ್ಟ್ರಗೀತೆ ಮೊಳಗುವವರೆಗೆ ನಿಲ್ಲದೇ ಹೋಗಿದ್ದು ಸಂವಿಧಾನದ ಉಲ್ಲಂಘನೆ.

ರಾಜ್ಯಪಾಲರಿಗೆ ದೆಹಲಿಯಿಂದ ಕರೆ ಬರುತ್ತಿರುವ ಬಗ್ಗೆ ಒಂದು ವಾರದ ಹಿಂದೆಯೇ ಹೇಳಿದ್ದೇವೆ. ದೂರವಾಣಿ ಕದ್ದಾಲಿಕೆ ಆಗಿದ್ದರೆ ಕೇಂದ್ರ ಗೃಹ ಇಲಾಖೆ ಒಂದು ಪತ್ರ ಬರೆದು ಹೇಳಬೇಕಿತ್ತು, ಬಿಡುಗಡೆ ಮಾಡಬೇಕಿತ್ತು. ಈವರೆಗೂ ಏಕೆ ಬಿಡುಗಡೆ ಮಾಡಿಲ್ಲ? ಯಾರ ಮೇಲೆ ಆಪಾದನೆ ಬಂದಿದೆಯೋ ಅವರೇ ಉತ್ತರ ನೀಡಬೇಕು. ಅಂದರೆ ಕೇಂದ್ರವೇ ಇದಕ್ಕೆ ಉತ್ತರ ನೀಡಬೇಕು. ಕದ್ದಾಲಿಕೆ ಬಗ್ಗೆ ನೀವು ಕೇಳಿದರೆ, ನಾವು ತನಿಖೆಗೆ ಒಪ್ಪಿಸುತ್ತೇವೆ.

**ಎಚ್.ಕೆ.ಪಾಟೀಲ**, ಕಾನೂನು ಮತ್ತು ಸಂಸದೀಯ ಸಚಿವ

### 'ರಾಜ್ಯಪಾಲರಿಗೆ ಪುರಸೊತ್ತು ಇರಲಿಲ್ಲ'

ರಾಜ್ಯಪಾಲರು ರಾಷ್ಟ್ರಗೀತೆಗೆ ಮಾಡಿದ ಅಪಮಾನದ ಬಗ್ಗೆ ಚರ್ಚೆ ಆಗಬಾರದೇ? ರಾಜ್ಯಪಾಲರಿಗೆ ಅದು ಗೊತ್ತಾಗಲಿಲ್ಲ ಎನ್ನುವುದು ಸರಿಯಲ್ಲ. ಅಂದಿನ ಕಾರ್ಯಸೂಚಿ ಪಟ್ಟಿಯನ್ನು ಸರ್ಕಾರ ವಿವರವಾಗಿಯೇ ನೀಡಿದೆ.

ರಾಹುಲ್ ಗಾಂಧಿ ಓಡಿ ಹೋದರು ಎನ್ನುತ್ತೀರಿ. ಪ್ರಧಾನಿಯವರು ಕಳೆದ 12 ವರ್ಷಗಳಲ್ಲಿ ಒಂದು ಪತ್ರಿಕಾಗೋಷ್ಠಿಯನ್ನು ಮಾಡಿಲ್ಲ. ಅವರಿಗೆ ಪತ್ರಕರ್ತರನ್ನು ಕಂಡರೆ ಹೆದರಿಕೆ. ಅದಕ್ಕಾಗಿ ಪತ್ರಿಕಾಗೋಷ್ಠಿ ಮಾಡುತ್ತಿಲ್ಲ.

ರಾಜ್ಯಪಾಲರಿಗೆ ದೆಹಲಿಯಿಂದ ಮಾತ್ರವಲ್ಲ ಕೇಶವಕೃಪಾದಿಂದಲೂ ಕರೆಗಳು ಬರುತ್ತವೆ. ದೆಹಲಿ ಮತ್ತು ಕೇಶವಕೃಪಾ ಏನು ನಿರ್ದೇಶನ ನೀಡುತ್ತವೆಯೋ ಅದೇ ಪ್ರಕಾರ ನಡೆದುಕೊಳ್ಳುತ್ತಾರೆ.

**ಪ್ರಿಯಾಂಕ್ ಖರ್ಗೆ**, ಗ್ರಾಮೀಣಾಭಿವೃದ್ಧಿ ಸಚಿವ

# ಚರ್ಚೆಯೇ ಇಲ್ಲದೆ ಮುಗಿದ ದಿನದ ಕಲಾಪ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯಕ್ಕೆ ಅಡ್ಡಿ, ರಾಷ್ಟ್ರಗೀತೆಗೆ ರಾಜ್ಯಪಾಲರ ಅಗೌರವದ ಆರೋಪ, ವಿರೋಧ ಪಕ್ಷದ ನಾಯಕರು ಸದನದ ನಿಯಮಗಳ ಪುಸ್ತಕ ಹರಿದು ಹಾಕಿದ ವಿಷಯಗಳು ವಿಧಾನಪರಿಷತ್‌ನಲ್ಲಿ ದಿನಪೂರ್ತಿ ಗದ್ದಲ, ಆಕ್ರೋಶ, ಆರೋಪ, ವಾಗ್ವಾದಕ್ಕೆ ಕಾರಣವಾಗಿ, ಬುಧವಾರದ ಕಲಾಪ ಚರ್ಚೆಯಿಲ್ಲದೆ ಮುಗಿಯಿತು.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಖಂಡನೆ– ನಿಂದನೆ ಬಗ್ಗೆ ಬೆಳಿಗ್ಗೆಯಿಂದಲೇ ವಾಗ್ವಾದ ನಡೆಯಿತು. ಎರಡು ಬಾರಿ ಮುಂದೂಡಿ, ಭೋಜನದ ನಂತರ ಆರಂಭವಾದ ಕಲಾಪದಲ್ಲಿ, ರಾಷ್ಟ್ರಗೀತೆಗೆ ಅವಮಾನದ ವಿಷಯ ಬಗ್ಗೆ ಪ್ರಸ್ತಾಪವಾಯಿತು. ಇದಾದ ಮೇಲೆ, ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ವಿಧಾನ ಪರಿಷತ್‌ನ ನಿಯಮಗಳ ಪುಸ್ತಕವನ್ನು ಹರಿದು ಹಾಕಿದ ಪ್ರಕರಣದಿಂದ ಆಡಳಿತ– ವಿರೋಧ ಪಕ್ಷಗಳ ಸದಸ್ಯರ ವಾದ–ಪ್ರತಿವಾದಗಳ ಕೋಲಾಹಲದಲ್ಲೇ ದಿನದ ಕಲಾಪ ಮುಕ್ತಾಯಗೊಂಡಿತು.

ಭೋಜನದ ನಂತರ ಆರಂಭವಾದ ಕಲಾಪದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಅವರು ಪ್ರಶ್ನೋತ್ತರಕ್ಕೆ ಅವಕಾಶ ಮಾಡಿಕೊಟ್ಟ ಸಂದರ್ಭದಲ್ಲಿ 'ರಾಜ್ಯಪಾಲರ ಭಾಷಣದ ಬಗ್ಗೆ ಸಭಾನಾಯಕರು ಹೇಳಿಕೆಯನ್ನು ಖಂಡಿಸುತ್ತಾ ನಮ್ಮ ಸದಸ್ಯರು ಸಭಾಪತಿ ಅವರ ಪೀಠದ ಎದುರು ಧರಣಿ ನಡೆಸುತ್ತಿದ್ದಾರೆ. ಅದಕ್ಕೆ ಪರಿಹಾರ ನೀಡದೆ ನೀವು ಪ್ರಶ್ನೋತ್ತರ ತೆಗೆದುಕೊಳ್ಳುವುದು ಸರಿಯಲ್ಲ' ಎಂದು ನಾರಾಯಣಸ್ವಾಮಿ ಆರೋಪಿಸಿದರು.

'ನಿನ್ನೆಯಿಂದಲೂ ನಾವು ಕೇಳುತ್ತಿದ್ದೇವೆ. ಕಲಾಪ ನಿಯಮದಂತೆ ನಡೆಯುತ್ತಿಲ್ಲ. ಹಾಗಿದ್ದ ಮೇಲೆ, ನಮಗೆ ಈ 'ರೂಲ್ ಬುಕ್' ಏಕೆ ಬೇಕು' ಎಂದು ನಾರಾಯಣಸ್ವಾಮಿ ಪುಸ್ತಕವನ್ನು ಹರಿದು ಹಾಕಿದರು. ಆಕ್ರೋಶಗೊಂಡ ಕಾಂಗ್ರೆಸ್ ಸದಸ್ಯರು ಸಭಾನಾಯಕರ ಆಸನದ ಬಳಿ ಬಂದು, 'ಸದನಕ್ಕೆ ಸಂವಿಧಾನದಂತಿರುವ ನಿಯಮಗಳ ಪುಸ್ತಕವನ್ನು ಹರಿದು ಹಾಕಿರುವುದು ಸರಿಯಲ್ಲ, ವಿರೋಧ ಪಕ್ಷದ ನಾಯಕರನ್ನು ಹೊರಹಾಕಬೇಕು' ಎಂದು ಒತ್ತಾಯಿಸಿದರು.

'ಸಭಾಪತಿಯವರ ಪೀಠಕ್ಕೆ ಚ್ಯುತಿ ತಂದಿದ್ದಾರೆ, ಅವರನ್ನು ವಜಾ ಮಾಡಬೇಕು, ಅಮಾನತು ಮಾಡಬೇಕು. ವಿರೋಧ ಪಕ್ಷದ ನಾಯಕರು ಸಂವಿಧಾನದ ವಿರೋಧಿ, ಡೌನ್‌ಡೌನ್ ಬಿಜೆಪಿ' ಎಂದು ಕಾಂಗ್ರೆಸ್‌ನ ಐವನ್ ಡಿಸೋಜ, ನಾಗರಾಜ್ ಯಾದವ್, ಶಿವಕುಮಾರ್, ರಮೇಶ್ ಬಾಬು, ಆರತಿ ಕೃಷ್ಣ, ಬಿ.ಕೆ. ಹರಿಪ್ರಸಾದ್ ಆಗ್ರಹಿಸಿದರು. ಈ ಸಂದರ್ಭದಲ್ಲಿ ಬಿಜೆಪಿ– ಕಾಂಗ್ರೆಸ್ ಸದಸ್ಯರ ಮಧ್ಯೆ ಮಾತಿನ ಚಕಮಕಿ ನಡೆಯಿತು.

ಮಧ್ಯ ಪ್ರವೇಶಿಸಿದ ಹೊರಟ್ಟಿ, 'ನಿಯಮಗಳ ಪುಸ್ತಕ ಹರಿಯುವುದು ಸರಿಯಲ್ಲ. ಇದಕ್ಕೆ ವಿಷಾದ ಹೇಳಬೇಕು' ಎಂದರು. ನಾರಾಯಣ ಸ್ವಾಮಿ ಮಾತನಾಡಲು ಮುಂದಾದಾಗ, 'ವಿಷಾದವಲ್ಲ, ಅವರು ಕ್ಷಮೆ ಕೋರಬೇಕು. ಅವರನ್ನು ಅಮಾನತು ಮಾಡಬೇಕು' ಎಂದು ಕಾಂಗ್ರೆಸ್ ಸದಸ್ಯರು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಮತ್ತೆ ಕೋಲಾಹಲ ಉಂಟಾಯಿತು. ಸಭಾಪತಿಯವರು ಕಲಾಪವನ್ನು ಹತ್ತು ನಿಮಿಷ ಮುಂದೂಡಿದರು.

ಮತ್ತೆ ಕಲಾಪ ಆರಂಭವಾದ ಮೇಲೂ ಕಾಂಗ್ರೆಸ್ ಸದಸ್ಯರು ಪ್ರತಿಭಟನೆ ಮುಂದುವರಿಸಿದರು. ಬಿಜೆಪಿ ಸದಸ್ಯರೂ ಧರಣಿ ನಡೆಸುತ್ತಿದ್ದರು. 'ವಿರೋಧ ಪಕ್ಷದ ನಾಯಕರು ವಿಷಾದ ವ್ಯಕ್ತಪಡಿಸುತ್ತಾರೆ, ಅವಕಾಶ ನೀಡಿ' ಎಂದು ಸಭಾಪತಿ ಮನವಿ ಮಾಡಿದರೂ, ಕಾಂಗ್ರೆಸ್ ಸದಸ್ಯರು ಒಪ್ಪಲಿಲ್ಲ. 'ವಿಷಾದವಲ್ಲ ಕ್ಷಮೆ ಕೋರಬೇಕು, ಅವರನ್ನು ಅಮಾನತು ಮಾಡಬೇಕು' ಎಂದು ಒತ್ತಾಯಿಸಿದರು.

'ನಿಯಮದ ಪ್ರಕಾರ, ಸದನದಲ್ಲಿ ಘೋಷಣೆ ಕೂಗುವಂತಿಲ್ಲ, ಕಾಗದ ಪತ್ರಗಳನ್ನು ಹರಿಯುವಂತಿಲ್ಲ. ಎರಡೂ ಕಡೆ ಸದಸ್ಯರೂ ತಪ್ಪು ಮಾಡಿದ್ದೀರಿ' ಎಂದು ಹೊರಟ್ಟಿ ಹೇಳಿದರು. ಗದ್ದಲ ಮುಂದುವರಿದಾಗ, ಕಲಾಪವನ್ನು ಗುರುವಾರಕ್ಕೆ ಮುಂದೂಡಿದರು.

### ರಾಜ್ಯಪಾಲರ ಜತೆ ಮಾತನಾಡಿಲ್ಲ: ಹೊರಟ್ಟಿ

'ರಾಜ್ಯಪಾಲರು ಜಂಟಿ ಅಧಿವೇಶನಕ್ಕೆ ಬಂದಾಗ, ಹೊರ ಹೋದಾಗ, ಸದನದಲ್ಲಿ ಇದ್ದಾಗ ಅವರೊಂದಿಗೆ ನಾನು ಏನೂ ಮಾತಾಡಿಲ್ಲ' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸ್ಪಷ್ಟಪಡಿಸಿದರು.

'ವಿಧಾನಸಭೆಯಲ್ಲಿ ಮಾತನಾಡಿರುವ ಕಾನೂನು ಸಚಿವ ಎಚ್.ಕೆ. ಪಾಟೀಲ ಅವರು, 'ರಾಷ್ಟ್ರಗೀತೆ ಮುಗಿಸಿ ಹೋಗಿ ಎಂದು ಮೂರು ಬಾರಿ ರಾಜ್ಯಪಾಲರಿಗೆ ಸಭಾಪತಿಯವರು ಹೇಳಿದ್ದಾರೆ' ಎಂದು ಹೇಳಿದ್ದಾರೆ' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ವಿಷಯ ಪ್ರಸ್ತಾಪಿಸಿದರು.

ಆಗ ಪ್ರತಿಕ್ರಿಯಿಸಿದ ಹೊರಟ್ಟಿ, 'ಯಾವ ಮಾತೂ ಆಡಿಲ್ಲ. ವಿಧಾನ ಸೌಧದ ಮೆಟ್ಟಿಲುಗಳವರೆಗೆ ಹೋಗಿ, ಕಳುಹಿಸಿಕೊಟ್ಟು ಬಂದಿದ್ದೇನೆ' ಎಂದರು. 'ತಪ್ಪು ಹೇಳಿಕೆ ನೀಡಿರುವ ಎಚ್.ಕೆ. ಪಾಟೀಲ ಅವರಿಂದ ಸದನದ ಹಕ್ಕುಚ್ಯುತಿ ಆಗಿದೆ. ಅವರು ಹೇಳಿರುವ ಹೇಳಿಕೆ ವಿಡಿಯೊ ಇದೆ ನೋಡಿ' ಎಂದು ನಾರಾಯಣಸ್ವಾಮಿ ಹೇಳಿದರು.

'ಸಭಾಪತಿಯವರು ಆಡದಿರುವ ಮಾತನ್ನು ಅವರೇ ಹೇಳಿದ್ದಾರೆ ಎಂದು ಹೇಳಿರುವ ಕಾನೂನು ಸಚಿವರು ಸದನಕ್ಕೆ ಅಪಮಾನ ಮಾಡಿದ್ದಾರೆ. ಅವರ ಮೇಲೆ ಕ್ರಮವಾಗಬೇಕು ' ಎಂದು ಜೆಡಿಎಸ್‌ನ ಎಲ್.ಎಸ್. ಭೋಜೇಗೌಡ ಆಗ್ರಹಿಸಿದರು. 'ಸಚಿವರನ್ನು ಸದನಕ್ಕೆ ಕರೆಯಿಸಿ ಮಾಹಿತಿ ಪಡೆದುಕೊಳ್ಳಿ' ಎಂದು ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಹೇಳಿದರು.

'ನಿಯಮದ ಪ್ರಕಾರ ನೋಡಿ ಕ್ರಮ ಕೈಗೊಳ್ಳುತ್ತೇನೆ' ಎಂದು ಸಭಾಪತಿ ಹೇಳಿದರು.

## ಹಿಂದೂ ಸಂಘಟನೆ ಮುಖಂಡರಿಗೆ ನಿರ್ಬಂಧ: ಕಿಡಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿವಿಧ ಜಿಲ್ಲೆಗಳಿಗೆ ತೆರಳಿ ಹಿಂದೂ ಸಮಾಜೋತ್ಸವಗಳಲ್ಲಿ ಭಾಗವಹಿಸದಂತೆ ಹಿಂದೂ ಸಂಘಟನೆಗಳ ಕಾರ್ಯಕರ್ತರು ಹಾಗೂ ಮುಖಂಡರುಗಳಿಗೆ ಪೊಲೀಸರು, ಜಿಲ್ಲಾಡಳಿತಗಳು ನಿರ್ಬಂಧ ವಿಧಿಸುವ, ಸ್ವಯಂಪ್ರೇರಿತವಾಗಿ ದೂರು ದಾಖಲಿಸುವ ವಿಷಯವನ್ನು ವಿಧಾನ ಸಭೆಯಲ್ಲಿ ಪ್ರಸ್ತಾಪಿಸಿದ ಬಿಜೆಪಿ ಸದಸ್ಯರು, ಸರ್ಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ವಿಷಯ ಪ್ರಸ್ತಾಪಿಸಿದ ವಿ. ಸುನಿಲ್ ಕುಮಾರ್, 'ಕಲ್ಲಡ್ಕ ಪ್ರಭಾಕರ ಭಟ್, ವಿಕಾಸ್ ಪುತ್ತೂರು, ಪುನೀತ್ ಕೆರೆಹಳ್ಳಿ, ಚಕ್ರವರ್ತಿ ಸೂಲಿಬೆಲೆ ಸೇರಿದಂತೆ ಹಿಂದೂ ಸಂಘಟನೆಗಳ ಮುಖಂಡರುಗಳು ಹಿಂದೂ ಸಮಾಜೋತ್ಸವಗಳಿಗೆ ತೆರಳಿ ಭಾಷಣ ಮಾಡಿದರೆ ಏನೊ ಆಗಿಬಿಡುತ್ತದೆ ಎಂದು ಊಹಿಸಿಕೊಂಡು ಪೊಲೀಸರು ನೋಟಿಸ್ ನೀಡುತ್ತಿದ್ದಾರೆ. ರಾಜ್ಯಪಾಲರ ಅಂಕಿತಕ್ಕೆ ಬಾಕಿ ಇರುವ ದ್ವೇಷ ಭಾಷಣ ತಡೆ ಮಸೂದೆ ಮೇಲೆ ತರೀಕೆರೆ ಪೊಲೀಸ್ ಇನ್‌ಸ್ಪೆಕ್ಟರ್ ನೋಟಿಸ್ ನೀಡಿದ್ದಾರೆ. ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದು ಆಗ್ರಹಿಸಿದರು.



ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ಬುಧವಾರ ವಿಧಾನಸಭೆಯಲ್ಲಿ ಮಾತನಾಡಿದರು —ಪಿಟಿಐ ಚಿತ್ರ

'ಪ್ರಭಾಕರ್ ಭಟ್ ಅವರ ಮೇಲೆ ಅನಗತ್ಯವಾಗಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಲಾಗಿದೆ. ಹಿಂದೂ ಕಾರ್ಯಕರ್ತರನ್ನು ಸಹಿಸಲು ಸರ್ಕಾರಕ್ಕೆ ಆಗುತ್ತಿಲ್ಲವೇ' ಎಂದೂ ಪ್ರಶ್ನಿಸಿದರು. ವಿರೋಧ ಪಕ್ಷದ ನಾಯಕ ಆರ್. ಅಶೋಕ ಸೇರಿದಂತೆ ಬಿಜೆಪಿಯ ಇತರ ಸದಸ್ಯರೂ ದನಿಗೂಡಿಸಿದರು.

ಉತ್ತರ ನೀಡಿದ ಕಾನೂನು ಸಚಿವ ಎಚ್.ಕೆ. ಪಾಟೀಲ, 'ಇಂತಹ ನಿರ್ಧಾರಗಳು ಸರ್ಕಾರದ ಮಟ್ಟದಲ್ಲಿ ಆಗುವುದಿಲ್ಲ. ಜಿಲ್ಲಾ ಮಟ್ಟದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು, ಕೋಮು ಪ್ರಚೋದನೆ, ಭಾಷಣ ನಿರ್ಬಂಧಿಸುವ ಸಲುವಾಗಿ ಜಿಲ್ಲಾ ಮಟ್ಟದಲ್ಲೇ ಡಿಸಿಗಳು, ಎಸ್‌ಪಿಗಳು ಚಿಂತನೆ ಮಾಡಿ ನಿರ್ಧರಿಸುವ ಪ್ರಕ್ರಿಯೆ ನಮ್ಮ ಸರ್ಕಾರದಲ್ಲಿ ಮಾತ್ರವಲ್ಲ, ಎಲ್ಲ ಸರ್ಕಾರಗಳಲ್ಲೂ ಆಗಿದೆ. ಇದರಲ್ಲಿ ಸರ್ಕಾರದ ಹಸ್ತಕ್ಷೇಪ ಏನೂ ಇಲ್ಲ. ಕರ್ನಾಟಕವು ಸರ್ವ ಜನಾಂಗದ ಶಾಂತಿಯ ತೋಟ ಆಗಿರಬೇಕು ಎಂಬುದಷ್ಟೆ ನಮ್ಮ ಗುರಿ' ಎಂದರು.

'ದ್ವೇಷ ಭಾಷಣ ತಡೆ ಮಸೂದೆ ಇನ್ನೂ ಕಾನೂನು ಆಗಿಲ್ಲ. ಅದರ ಮೇಲೆ ಪೊಲೀಸ್ ಅಧಿಕಾರಿ ಹೇಗೆ ನೋಟಿಸ್ ನೀಡಿದರೆಂದು ಗೊತ್ತಿಲ್ಲ. ಗೃಹ ಸಚಿವರೊಂದಿಗೆ ಚರ್ಚಿಸಿ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಪಾಟೀಲ ತಿಳಿಸಿದರು.

## ಸಂಕ್ಷಿಪ್ತ ಸುದ್ದಿ

### 'ಇ–ಸ್ವತ್ತು ತಂತ್ರಾಂಶ: 25 ದಿನಗಳಲ್ಲಿ ಸುಸ್ಥಿತಿಗೆ'

**ಬೆಂಗಳೂರು:** ಗ್ರಾಮ ಪಂಚಾಯತ್‌ಗಳಲ್ಲಿ ಇ–ಸ್ವತ್ತು ಖಾತಾ ವಿತರಣೆಗೆ ತಂತ್ರಾಂಶದಲ್ಲಿ ಸಮಸ್ಯೆ ಇದ್ದು, 15–25 ದಿನಗಳಲ್ಲಿ ಸರಿಪಡಿಸಿ ಖಾತಾ ವಿತರಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಸಚಿವ ಪ್ರಿಯಾಂಕ್ ಖರ್ಗೆ ಭರವಸೆ ನೀಡಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಕಿರಣ್ ಕುಮಾರ್ ಕೊಡ್ಗಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಡಿ.1 ರಿಂದ ಇ-ಸ್ವತ್ತು ಖಾತಾ ವಿತರಣೆ ಆರಂಭಿಸಿದರೂ ತಂತ್ರಾಂಶದಲ್ಲಿ ಸಮಸ್ಯೆಯಿಂದ ಖಾತಾ ವಿತರಣೆ ಸಾಧ್ಯವಾಗುತ್ತಿಲ್ಲ ಎಂದು ಪ್ರಿಯಾಂಕ್ ಹೇಳಿದರು.

ತಂತ್ರಾಂಶವನ್ನು ಇನ್ನಷ್ಟು ಸರಳೀಕರಣ ಮತ್ತು ಸಬಲೀಕರಣ ಮಾಡಲಾಗುವುದು. ಈವರೆಗೆ ಇ–ಸ್ವತ್ತು 2.0 ತಂತ್ರಾಂಶದ ಮೂಲಕ 44,508 ಅರ್ಜಿಗಳು ಸಲ್ಲಿಕೆಯಾಗಿವೆ. ಅನುಮೋದನೆಗೊಂಡಿರುವ ಅರ್ಜಿಗಳ ಸಂಖ್ಯೆ 7,978 ಎಂದರು.

ತಂತ್ರಾಂಶ ಸರಿಪಡಿಸುವಂತೆ ಎನ್‌ಐಸಿಗೆ ಪತ್ರ ಬರೆಯಲಾಗಿದೆ. ಅವರಿಗೆ ಹಣವನ್ನೂ ಬಿಡುಗಡೆ ಮಾಡಲಾಗಿದೆ. ಇದನ್ನು ಸರಿಪಡಿಸಲು ಹೆಚ್ಚು ಮಾನವ ಸಂಪನ್ಮೂಲ ನೀಡುವುದಾಗಿ ಎನ್‌ಐಸಿ ತಿಳಿಸಿದೆ ಎಂದರು.

ವಿಷಯ ಪ್ರಸ್ತಾಪಿಸಿದ ಕಿರಣ್ ಕೊಡ್ಗಿ, ಗ್ರಾಮಾಂತರ ಪ್ರದೇಶದಲ್ಲಿ ಕಳೆದ ಎರಡು ತಿಂಗಳಿಂದ 11 ಎ ಮತ್ತು 11 ಬಿ ಖಾತಾಗಳ ವಿತರಣೆ ಸಂಪೂರ್ಣ ನಿಂತು ಹೋಗಿದೆ. ಸಾರ್ವಜನಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಹೇಳಿದರು.

### ವಿತರಿಸದ ಕೃತಕ ಅಂಗಾಂಗ: ತಪ್ಪೊಪ್ಪಿದ ಲಕ್ಷ್ಮಿ

**ಬೆಂಗಳೂರು:** ಮೈಸೂರು ನಗರ ವ್ಯಾಪ್ತಿಯಲ್ಲಿ ಒಟ್ಟು 12,022 ಅಂಗವಿಕಲರಿದ್ದು, ಕೃತಕ ಕಾಲು ಜೋಡಣೆ ಕೋರಿ ಕಳೆದ ಮೂರು ವರ್ಷಗಳಲ್ಲಿ ಒಂದೇ ಒಂದು ಅರ್ಜಿ ಸಲ್ಲಿಕೆಯಾಗಲಿಲ್ಲ ಎಂಬ ಸರ್ಕಾರದ ಉತ್ತರಕ್ಕೆ ಬಿಜೆಪಿ ಶಾಸಕ ಶ್ರೀವತ್ಸ ಟಿ.ಎಸ್ ಅವರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.



ಲಕ್ಷ್ಮೀ ಹೆಬ್ಬಾಳಕರ

ವಿಧಾನಸಭೆಯಲ್ಲಿ ಮಂಡಿಸಿದ ಲಿಖಿತ ಉತ್ತರದಿಂದ ಮುಜುಗರಕ್ಕೆ ಒಳಗಾದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರು, 'ತಪ್ಪಾಗಿದೆ. ಅಧಿಕಾರಿಗಳನ್ನು ಕರೆಸಿ ವಿವರಣೆ ಪಡೆಯುತ್ತೇನೆ' ಎಂದು ಸಮಜಾಯಿಷಿ ನೀಡಿದರು.

'ಸರ್ಕಾರದಿಂದ ಅಂಗವಿಕಲರಿಗೆಂದು ಹಲವು ಉತ್ತಮ ಯೋಜನೆಗಳಿವೆ. ಆದರೆ, ಅವು ಅರ್ಹ ಫಲಾನುಭವಿಗಳಿಗೆ ಸಿಗುತ್ತಿಲ್ಲ. ಸೇವಾ ಸಿಂಧುಗೆ ಹೋಗಿ ಅರ್ಜಿ ಸಲ್ಲಿಸಿ ಎಂದರೆ ಎಲ್ಲರಿಗೂ ಅಲ್ಲಿ ಹೋಗಿ ಅರ್ಜಿ ಸಲ್ಲಿಸುವುದು ಕಷ್ಟ. ಆದ್ದರಿಂದ, ವಿಶೇಷ ಕ್ಯಾಂಪ್‌ಗಳನ್ನು ಮಾಡಿ ಅಲ್ಲಿಯೇ ಅರ್ಜಿಗಳನ್ನು ಪಡೆದು ಕೃತಕ ಕಾಲುಗಳನ್ನು ವಿತರಿಸಬೇಕು. ಅಲ್ಲದೇ, ಕೆಲವರ ಕೃತಕ ಕಾಲುಗಳು ಬಹಳ ವರ್ಷ ಬಳಸಿ ಶಿಥಿಲ ಅವಸ್ಥೆಯಲ್ಲಿದ್ದರೆ ಅಂತಹವರಿಗೆ ಹೊಸ ಕೃತಕ ಕಾಲು ಕೊಡಲು ವ್ಯವಸ್ಥೆ ಮಾಡಬೇಕು' ಎಂದು ಶ್ರೀವತ್ಸ ಸಲಹೆ ನೀಡಿದರು. ಅದಕ್ಕೆ ಸಚಿವರು ಒಪ್ಪಿಗೆ ನೀಡಿದರು.

### ರಾಜ್ಯಪಾಲರ ಟೀಕೆ ಸಲ್ಲದು: ಖಾದರ್ ರೂಲಿಂಗ್

**ಬೆಂಗಳೂರು:** 'ರಾಜ್ಯಪಾಲರು ಭಾಷಣ ಮಾಡಿ ತೆರಳುವಾಗ ನಡೆದಂತಹ ಘಟನೆಗಳು ಇನ್ನು ಮುಂದೆ ನಡೆಯದಂತೆ ಸದನದ ಎಲ್ಲ ಸದಸ್ಯರು ಎಚ್ಚರ ವಹಿಸಬೇಕು. ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಚರ್ಚೆಯಲ್ಲಿ ಭಾಗವಹಿಸುವ ಯಾವುದೇ ಸದಸ್ಯ, ರಾಜ್ಯಪಾಲರ ನಡವಳಿಕೆಯ ಬಗ್ಗೆ ಮಾತನಾಡಬಾರದು' ಎಂದು ಸಭಾಧ್ಯಕ್ಷ ಯು.ಟಿ. ಖಾದರ್ ರೂಲಿಂಗ್ ನೀಡಿದರು.

ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಿ ರಾಜ್ಯಪಾಲರ ನಡವಳಿಕೆಯ ಬಗ್ಗೆ ವಿಧಾನಸಭೆಯಲ್ಲಿ ಆಡಳಿತಾರೂಢ ಕಾಂಗ್ರೆಸ್ ಮತ್ತು ವಿರೋಧ ಪಕ್ಷಗಳಾದ ಬಿಜೆಪಿ, ಜೆಡಿಎಸ್ ಸದಸ್ಯರ ನಡುವಿನ ಆರೋಪ–ಪ್ರತ್ಯಾರೋಪ ಬುಧವಾರ ತಾರಕಕ್ಕೇರಿತು. ಕಲಾಪವನ್ನು ಹತ್ತು ನಿಮಿಷ ಮುಂದೂಡಲಾಗಿತ್ತು.

ಈ ವೇಳೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಮ್ಮುಖದಲ್ಲಿ ಉಭಯ ಪಕ್ಷಗಳ ಪ್ರಮುಖರ ಜೊತೆ ತಮ್ಮ ಕೊಠಡಿಯಲ್ಲಿ ಸಭಾಧ್ಯಕ್ಷರು ಚರ್ಚೆ ನಡೆಸಿದರು. ಬಳಿಕ, ಕಲಾಪ ಆರಂಭವಾದಾಗ ರೂಲಿಂಗ್ ನೀಡಿದ ಸಭಾಧ್ಯಕ್ಷರು, ರಾಜ್ಯಪಾಲರ ನಡವಳಿಕೆಯ ಕುರಿತ ಚರ್ಚೆಗೆ ಅಂತ್ಯವಾಡಿದರು.

'ರಾಜ್ಯಪಾಲರು ಭಾಷಣ ಮಾಡಿದ ನಂತರ ಸದನದಲ್ಲಿ ನಡೆದಿರುವ ಘಟನೆಗಳು ಮತ್ತು ಚರ್ಚೆಯು ಸಾರ್ವಜನಿಕರಲ್ಲಿ ತಪ್ಪು ಸಂದೇಶ ಮೂಡಲು ಕಾರಣವಾಗಿದೆ. ಈ ಸದನದ ಸದಸ್ಯರಾಗಿರುವ ನಮ್ಮ ನಡತೆ ಮತ್ತು ವ್ಯಕ್ತಪಡಿಸುವ ಅಭಿಪ್ರಾಯಗಳು ಸದಭಿರುಚಿಯಿಂದ ಮತ್ತು ಸಂವಿಧಾನದತ್ತವಾಗಿ ಇರಬೇಕಾಗಿದೆ. ಅಲ್ಲದೆ, ಈ ಸದನದ ಹಾಗೂ ಸದಸ್ಯರ ಘನತೆ ಮತ್ತು ಗೌರವವನ್ನು ಎತ್ತಿ ಹಿಡಿಯುವಂತಿರಬೇಕು. ಈ ನಿಟ್ಟಿನಲ್ಲಿ ನಾವೆಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕು. ಈ ವಿಷಯವನ್ನು ಇಲ್ಲಿಗೆ ಮುಕ್ತಾಯಗೊಳಿಸಿ, ರಾಜ್ಯಪಾಲರು ಮಾಡಿದ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಚರ್ಚೆ ಮಾಡಬೇಕು' ಎಂದೂ ಖಾದರ್ ರೂಲಿಂಗ್ ನೀಡಿದರು.

# ಅಧ್ಯಕ್ಷ 'ಭಾಗ್ಯ' ಮುಂದುವರಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅವಧಿ ಪೂರ್ಣಗೊಂಡಿರುವ ವಿವಿಧ 25 ನಿಗಮ ಮಂಡಳಿಗಳ ಅಧ್ಯಕ್ಷರ ಪದಾವಧಿಯನ್ನು ಮುಂದಿನ ಆದೇಶದವರೆಗೆ ವಿಸ್ತರಿಸಿ ರಾಜ್ಯ ಸರ್ಕಾರ ಬುಧವಾರ ಆದೇಶ ಹೊರಡಿಸಿದೆ.

ಅಪ್ಪಾಜಿ ನಾಡಗೌಡ, ರಾಜು ಕಾಗೆ, ಎಚ್‌.ಸಿ. ಬಾಲಕೃಷ್ಣ, ಕೆ.ಎಂ. ಶಿವಲಿಂಗೇಗೌಡ, ಬೇಲೂರು ಗೋಪಾಲಕೃಷ್ಣ, ಟಿ.ಡಿ. ರಾಜೇಗೌಡ, ಶರತ್ ಬಚ್ಚೇಗೌಡ ಸೇರಿ 25 ಶಾಸಕರನ್ನು 2024ರ ಜ. 26ರಂದು ಸಚಿವ ಸಂಪುಟ ಸ್ಥಾನ–ಮಾನಗಳೊಂದಿಗೆ ವಿವಿಧ ನಿಗಮ–ಮಂಡಳಿಗಳ ಅಧ್ಯಕ್ಷ ಹುದ್ದೆಗೆ ನೇಮಕ ಮಾಡಲಾಗಿತ್ತು.

ನೇಮಕದ ಅವಧಿ ಎರಡು ವರ್ಷವಾಗಿದ್ದು, ಇದೇ 26ಕ್ಕೆ ಕೊನೆ ಆಗಬೇಕಿತ್ತು. 25 ಶಾಸಕರೂ ತಾವು ಈಗ ಇರುವ ನಿಗಮ–ಮಂಡಳಿಗಳ ಅಧ್ಯಕ್ಷ ಹುದ್ದೆಯಲ್ಲೇ ಮುಂದುವರಿಸಲಾಗಿದೆ. ಅವರಿಗೆ ನೀಡಲಾಗುತ್ತಿದ್ದ ಎಲ್ಲ ಸೌಲಭ್ಯಗಳನ್ನು ಮುಂದುವರಿಸಬೇಕು ಎಂದು ಸರ್ಕಾರವು ಆಡಳಿತ ಇಲಾಖೆಗಳಿಗೆ ಸೂಚಿಸಿದೆ.

ಪದಾವಧಿ ಪೂರ್ಣಗೊಂಡ ಕಾರಣ ಶಾಸಕರು ಅಧ್ಯಕ್ಷರ ಗಾದಿ ಕೈತಪ್ಪುವ ಆತಂಕದಲ್ಲಿದ್ದರು. ಹೊಸ ಆದೇಶದಲ್ಲಿ ಮುಂದಿನ ಆದೇಶವರೆಗೆ ಎಂದು ಸ್ಪಷ್ಟವಾಗಿ ಉಲ್ಲೇಖಿಸಿರುವುದರಿಂದ ಯಾವಾಗ ಬೇಕಾದರೂ ಅಧ್ಯಕ್ಷರ ಸ್ಥಾನ ಬದಲಾಗಬಹುದಾಗಿದೆ.

ಸಚಿವ ಸಂಪುಟದಲ್ಲಿ ಅವಕಾಶ ಸಿಗದ ಶಾಸಕರಿಗೆ ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ನೀಡಿ ಸಮಾಧಾನಪಡಿಸಲಾಗಿತ್ತು. ಕಾಂಗ್ರೆಸ್ ಪಾಳಯದಲ್ಲಿ ಸದ್ಯ ನಾಯಕತ್ವ ಬದಲಾವಣೆ ಮತ್ತು ಸಚಿವ ಸಂಪುಟ ಪುನರ್ ರಚನೆ ಕುರಿತ ಚರ್ಚೆ ಜೋರಾಗಿ ನಡೆಯುತ್ತಿದೆ. ನಿಗಮ– ಮಂಡಳಿಗಳ ಅಧ್ಯಕ್ಷರಾಗಿರುವ ಶಾಸಕರ ಪೈಕಿ ಕೆಲವು ಪ್ರಭಾವಿಗಳು ಸಚಿವ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆ. ಸಂಪುಟ ಪುನರ್‌ರಚನೆ ಯಾದರೆ ಕೆಲವರು ಸಚಿವರಾಗಿ ಬಡ್ತಿ ಪಡೆಯುವ ಸಾಧ್ಯತೆಗಳೂ ಇವೆ.

## 'ತಿಮ್ಮಾಪುರ ಬೆನ್ನಿಗೆ ನಿಲ್ಲೋಣ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಸದನದಲ್ಲಿ ನಮ್ಮ ಸಚಿವರೇ ಇರುವುದಿಲ್ಲ. ಸಚಿವರು ಸದನಕ್ಕೆ ತಪ್ಪದೇ ಹಾಜರಾಗಬೇಕು. ಸಚಿವರಿಲ್ಲ ಎಂದು ಸದನದಲ್ಲಿ ವಿರೋಧ ಪಕ್ಷಗಳ ಸದಸ್ಯರು ಗಲಾಟೆ ಮಾಡದಂತೆ ನೋಡಿಕೊಳ್ಳಬೇಕು. ಅಧಿವೇಶನ ನಡೆಯುವಾಗ ಸಚಿವರು ಅಧಿಕೃತ ಸಭೆಗಳನ್ನು ನಡೆಸಬಾರದು' ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ರ್‍ಯಾಡಿಸನ್ ಬ್ಲ್ಯೂ ಹೋಟೆಲ್‌ನಲ್ಲಿ ಬುಧವಾರ ರಾತ್ರಿ ಸಭೆ ನಡೆಯಿತು.

'ಅಬಕಾರಿ ಸಚಿವ ಆರ್‌.ಬಿ. ತಿಮ್ಮಾಪುರ ರಾಜೀನಾಮೆ ನೀಡುವ ಅಗತ್ಯ ಇಲ್ಲ. ಯಾರೋ ಅಧಿಕಾರಿ ಹೇಳಿದ್ದಾನೆಂಬ ಆರೋಪ ಹೊರಿಸಿ ರಾಜೀನಾಮೆ ಕೇಳುವುದು ಸರಿಯಲ್ಲ' ಎಂದು ಮುಖ್ಯಮಂತ್ರಿ ಪ್ರತಿಪಾದಿಸಿದರು ಎಂದೂ ತಿಳಿದುಬಂದಿದೆ.

ನರೇಗಾ ಬಗೆಗಿನ ಚರ್ಚೆ ತಪ್ಪಿಸಲೆಂದೇ ವಿರೋಧ ಪಕ್ಷದವರು ಕಾಲಹರಣ ಮಾಡುತ್ತಿದ್ದಾರೆ. ಜಿಎಸ್‌ಟಿ ಕಡಿತದಿಂದ ತೊಂದರೆಯಾಗಿದೆ. ಕೇಂದ್ರದಿಂದ ರಾಜ್ಯಕ್ಕೆ ಸತತವಾಗಿ ಅನ್ಯಾಯ ಆಗುತ್ತಿದ್ದರೂ ರಾಜ್ಯದ ಬಿಜೆಪಿ ಸಂಸದರು ಚಕಾರ ಎತ್ತುತ್ತಿಲ್ಲ. ಆದರೂ ಹಣಕಾಸು ನಿರ್ವಹಣೆ ಮಾಡುತ್ತಿದ್ದೇವೆ. ಬಜೆಟ್ ಅಧಿವೇಶನ ಮಾರ್ಚ್‌ನಲ್ಲಿ ನಡೆಯಲಿದೆ ಎಂದು ಮುಖ್ಯಮಂತ್ರಿ ಮಾಹಿತಿ ನೀಡಿದರು ಎಂದೂ ತಿಳಿದುಬಂದಿದೆ.

## 'ಸಂತೋಷ್ ಲಾಡ್ ಅವರ ಗಣಿ ಪರವಾನಗಿ ರದ್ದು ಮಾಡಿದ್ದರೂ ಮಂತ್ರಿ ಸ್ಥಾನ ನೀಡಿದ ಸಿದ್ದರಾಮಯ್ಯ'

# ಸಿ.ಎಂಗೆ ಚುಚ್ಚಿದ ರೆಡ್ಡಿ: ಕೆರಳಿದ 'ಕೈ' ಸದಸ್ಯರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸದನಕ್ಕೆ ತಪ್ಪು ಮಾಹಿತಿ ಕೊಡುತ್ತಿದ್ದಾರೆ. ಅವರು ಪಾದಯಾತ್ರೆ ಮಾಡಿದ್ದು 2010ರ ಜುಲೈನಲ್ಲಿ. ಸಂತೋಷ್ ಲಾಡ್ ಅವರ ಗಣಿ ಪರವಾನಗಿಯನ್ನು ಸುಪ್ರೀಂ ಕೋರ್ಟ್ ರದ್ದು ಮಾಡಿತ್ತು. ಅಂಥವನನ್ನು ಸಿದ್ದರಾಮಯ್ಯ ಮಂತ್ರಿ ಮಾಡಿದ್ದಾರೆ. ನಿಮಗೆ ನಾಚಿಕೆ ಆಗಬೇಕು' ಎಂದು ವಿಧಾನಸಭೆಯಲ್ಲಿ ಬಿಜೆಪಿಯ ಜನಾರ್ದನ ರೆಡ್ಡಿ ಹೇಳಿದ ಮಾತು ಕೋಲಾಹಲಕ್ಕೆ ಕಾರಣವಾಯಿತು.

ಜಂಟಿ ಅಧಿವೇಶನ ಉದ್ದೇಶಿಸಿ ರಾಜ್ಯಪಾಲರು ಭಾಷಣ ಮಾಡಿ ತೆರಳಿದ ನಂತರದ ಘಟನೆಗಳ ಬಗ್ಗೆ ಬುಧವಾರ ನಡೆದ ಕಾವೇರಿದ ಚರ್ಚೆಯ ವೇಳೆಯಲ್ಲಿ, 2011ರ ಪ್ರಕರಣದ ಕಡತವನ್ನು ಓದಿದ ಬಿಜೆಪಿಯ ಎಸ್. ಸುರೇಶ್ ಕುಮಾರ್, ಸಿದ್ದರಾಮಯ್ಯ ವಿರೋಧ ಪಕ್ಷದ ನಾಯಕರಾಗಿದ್ದಾಗ ನಡೆದ ಘಟನೆಯನ್ನು ಪ್ರಸ್ತಾಪಿಸಿದರು.

ಅಂದು ರಾಜ್ಯಪಾಲರು ಭಾಷಣ ಮಾಡುತ್ತಿದ್ದಾಗ, 'ಇದು ಭ್ರಷ್ಟ ಸರ್ಕಾರ. ದಯಮಾಡಿ ನೀವು ಓದಬೇಡಿ' ಎಂದು ಸಿದ್ದರಾಮಯ್ಯ ಹೇಳಿದ್ದರು ಎಂದು ಸುರೇಶ್ ಕುಮಾರ್ ಹೇಳಿದರು. ಅದಕ್ಕೆ ಸಿದ್ದರಾಮಯ್ಯ, 'ನಾನು ಆ ಮಾತನ್ನು ರಾಜ್ಯ ಸರ್ಕಾರಕ್ಕೆ ಹೇಳಿದ್ದೆ. ರಾಜ್ಯಪಾಲರಿಗೆ ಹೇಳಿದ್ದೆ ಎನ್ನುವುದು ಸತ್ಯಕ್ಕೆ ದೂರವಾದ ಮಾತು' ಎಂದು ಸಮರ್ಥನೆ ನೀಡಿದರು.

'ಆವತ್ತಿನ ಪರಿಸ್ಥಿತಿಯೇ ಬೇರೆ. ಇವತ್ತಿನ ಪರಿಸ್ಥಿತಿಯೇ ಬೇರೆ. ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ ಪಾದಯಾತ್ರೆ ಮಾಡಿದ್ದೆ. ಗಣಿಗಾರಿಕೆಯಲ್ಲಿ ದೊಡ್ಡ ಭ್ರಷ್ಟಾಚಾರ ನಡೆದಿದೆ ಎಂದು ಲೋಕಯುಕ್ತದಿಂದಲೇ ವರದಿ ಕೊಟ್ಟಿದ್ದರು. ಇದೇ ಸದನದಲ್ಲಿ ಆ ವರದಿಯ ಬಗ್ಗೆ ಚರ್ಚೆ ಆಗಿತ್ತು' ಎಂದೂ ಮುಖ್ಯಮಂತ್ರಿ ಹೇಳಿದರು. ಆಗ ಮಧ್ಯಪ್ರವೇಶಿಸಿದ ರೆಡ್ಡಿ ಮಾತಿಗೆ ಕಾಂಗ್ರೆಸ್ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದಾಗ ಸದನದಲ್ಲಿ ಗದ್ದಲ ಉಂಟಾಯಿತು. ಕಲಾಪವನ್ನು ಸಭಾಧ್ಯಕ್ಷ ಯು.ಟಿ. ಖಾದರ್ 10 ನಿಮಿಷ ಮುಂದೂಡಿದರು.

### 'ಕಳಪೆ ತೊಗರಿ ಬೇಳೆ: ಮುಲಾಜಿಲ್ಲದೆ ಕ್ರಮ'

'ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಮಕ್ಕಳ ಬಿಸಿಯೂಟಕ್ಕೆ ಪೂರೈಕೆಯಾಗುತ್ತಿರುವ ತೊಗರಿ ಬೇಳೆಯ ಗುಣಮಟ್ಟ ಪರಿಶೀಲಿಸಲಾಗುವುದು. ಕಳಪೆ ಬೇಳೆ ಪೂರೈಸುತ್ತಿರುವುದು ಕಂಡುಬಂದರೆ ಸಂಬಂಧ ಪಟ್ಟ ಅಧಿಕಾರಿ, ಟೆಂಡರ್‌ದಾರರು ಮತ್ತು ಪೂರೈಕೆದಾರರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಬಿ. ಸುರೇಶ್ ಗೌಡ ವಿಷಯ ಪ್ರಸ್ತಾಪಿಸಿದಾಗ ಉತ್ತರಿಸಿದ ಸಚಿವರು, 'ಇಡೀ ರಾಜ್ಯದಲ್ಲಿ ಬಿಸಿಯೂಟಕ್ಕೆ ಪೂರೈಕೆಯಾಗುತ್ತಿರುವ ತೊಗರಿ ಬೇಳೆಯ ಗುಣಮಟ್ಟ ಕಳಪೆಯಾಗಿದೆ ಎನ್ನುವುದನ್ನು ನಾನು ಒಪ್ಪುವುದಿಲ್ಲ' ಎಂದರು.

'ಬಿಸಿಯೂಟಕ್ಕೆ ನಿಯಮಾನುಸಾರ ಗುಣಮಟ್ಟದ ದಿನಸಿ ಪೂರೈಕೆ ಆಗುತ್ತಿಲ್ಲ. ಗುಣಮಟ್ಟ ಪರೀಕ್ಷೆಯನ್ನೂ ನಡೆಸುತ್ತಿಲ್ಲ. ನನ್ನ ಕ್ಷೇತ್ರದ ಕೆಪಿಎಸ್ ಶಾಲೆಯೊಂದಕ್ಕೆ ಹುಳ ಬಿದ್ದಿರುವ ತೊಗರಿ ಬೇಳೆ ಪೂರೈಕೆಯಾಗಿದೆ. ಹಂದಿಗಳು ತಿನ್ನಲು ಕೂಡಾ ಯೋಗ್ಯವಲ್ಲದ ಬೇಳೆ ಪೂರೈಕೆಯಾಗುತ್ತಿದೆ. ಮಾರುಕಟ್ಟೆಯಲ್ಲಿ ತೊಗರಿ ಬೇಳೆಗೆ ₹ 95ಕ್ಕಿಂತ ಹೆಚ್ಚು ದರ ಇದೆ. ಆದರೆ, ಬಿಸಿಯೂಟಕ್ಕೆ ಟೆಂಡರ್‌ದಾರರು ₹65ಕ್ಕೂ ಕಡಿಮೆ ದರದಲ್ಲಿ ಬಿಡ್ ಮಾಡಿ ಸರಬರಾಜು ಮಾಡುತ್ತಿದ್ದಾರೆ. ಈ ರೀತಿ ನಷ್ಟ ಮಾಡಿಕೊಂಡು ಹೇಗೆ ಗುಣಮಟ್ಟದ ಬೇಳೆ ಪೂರೈಸಲು ಸಾಧ್ಯ. ಇದರಲ್ಲಿ ದೊಡ್ಡ ಹಗರಣ ನಡೆಯುತ್ತಿದ್ದು, ತನಿಖೆ ಆಗಬೇಕು' ಎಂದು ಸುರೇಶ್‌ಗೌಡ ಆಗ್ರಹಿಸಿದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ, ವಿ. ಸುನಿಲ್ ಕುಮಾರ್, ಶರಣು ಸಲಗರ ಸೇರಿದಂತೆ ಬಿಜೆಪಿಯ ಸದಸ್ಯರು ದನಿಗೂಡಿಸಿ, 'ದಿನಸಿ ಪೂರೈಕೆದಾರರು ಸರ್ಕಾರದ ಕಣ್ಣಿಗೆ ಮಣ್ಣೆರಚುತ್ತಿದ್ದಾರೆ. ಈ ಬಗ್ಗೆ ತನಿಖೆ ನಡೆಸಬೇಕು' ಎಂದು ಒತ್ತಾಯಿಸಿದರು.

ಗುರುವಾರ, ಜನವರಿ 29, 2026 | ₹ 7.00

prajavani.net | prajavani

www.prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

**7ನೇ ಸ್ಥಾನಕ್ಕೆ ಸೂರ್ಯ**

ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರು ಬುಧವಾರ ಪ್ರಕಟವಾದ ಐಸಿಸಿ ಪುರುಷರ ಟಿ20 ರ‍್ಯಾಂಕಿಂಗ್ ಪಟ್ಟಿಯ ಬ್ಯಾಟರ್‌ಗಳ ವಿಭಾಗದಲ್ಲಿ ಏಳನೇ ಸ್ಥಾನಕ್ಕೆ ಏರಿದ್ದಾರೆ



**ಶ್ವಾನಪ್ರೇಮ...**

ಪಶ್ಚಿಮ ಬಂಗಾಳದ ನಾದಿಯಾದಲ್ಲಿ ನಡೆದ ಶ್ವಾನ ಪ್ರದರ್ಶನ ಕಾರ್ಯಕ್ರಮದಲ್ಲಿ ಮಹಿಳೆಯೊಬ್ಬರು ತಮ್ಮ ಮುದ್ದಿನ ಸಾಕು ನಾಯಿಯನ್ನು ಎತ್ತಿಕೊಂಡ ಪರಿ



# ಸಕ್ಕರೆ ಕಣದ ಅಕ್ಕರೆಯ ನಾಯಕ

## ಡಿಸಿಎಂ ಆಗಿ ದಾಖಲೆ ನಿರ್ಮಿಸಿದ್ದ ಅಜಿತ್ ಕನಸಾಗಿಯೇ ಉಳಿದ ಸಿ.ಎಂ ಪಟ್ಟ

ಮುಂಬೈ (ಪಿಟಿಐ): 'ಸದಾ ವಧುವಿನ ಸಖಿ, ಖುದ್ದು ಎಂದಿಗೂ ವಧು ಆಗಲಾರಳು' ಎಂಬ ನಾಣ್ನುಡಿ ಅಜಿತ್ ಪವಾರ್ (66) ಅವರ ರಾಜಕೀಯ ಜೀವನಕ್ಕೆ ಹೊಂದಿಕೆಯಾಗುತ್ತದೆ.

ಆರು ಬಾರಿ ಮಹಾರಾಷ್ಟ್ರದ ಉಪ ಮುಖ್ಯಮಂತ್ರಿಯಾಗಿ ದಾಖಲೆ ನಿರ್ಮಿಸಿದ್ದ ಪವಾರ್ ಅವರಿಗೆ ಒಮ್ಮೆಯೂ ಮುಖ್ಯಮಂತ್ರಿ ಕುರ್ಚಿಯನ್ನು ಏರುವ ಭಾಗ್ಯ ಒಲಿಯಲಿಲ್ಲ. ಮುಖ್ಯಮಂತ್ರಿ ಆಗಬಹುದಿತ್ತು, ಆದರೆ, ಅವರ ವಿಷಯದಲ್ಲಿ ಹಾಗೆ ಆಗಲಿಲ್ಲ. ಅವರು ಕೊನೆಯವರೆಗೂ ವಧುವಿನ ಸಖಿಯಾಗಿಯೇ ಉಳಿದರು.

ಆಶಾ ಮತ್ತು ಅನಂತರಾವ್ ದಂಪತಿಗೆ 1959ರ ಜುಲೈ 22ರಂದು ಜನಿಸಿದ್ದ ಪವಾರ್, ದೊಡ್ಡಪ್ಪ ಶರದ್ ಪವಾರ್ ಅವರ ಹೆಜ್ಜೆ ಗುರುತುಗಳನ್ನು ಅನುಸರಿಸಿ, 1982ರಲ್ಲಿ ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿಗೆ ಆಯ್ಕೆಯಾಗುವ ಮೂಲಕ ರಾಜಕೀಯ ಪ್ರವೇಶಿಸಿದ್ದರು.

1991ರಲ್ಲಿ ಬಾರಾಮತಿ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿದ್ದ ಪವಾರ್, ನಂತರ ಈ ಕ್ಷೇತ್ರವನ್ನು ತಮ್ಮ ದೊಡ್ಡಪ್ಪನಿಗೆ ಬಿಟ್ಟು ಕೊಟ್ಟರು. ಶರದ್ ಅವರು ಪಿ.ವಿ ನರಸಿಂಹರಾವ್ ಸರ್ಕಾರದಲ್ಲಿ ರಕ್ಷಣಾ ಸಚಿವರಾದರು. 1991ರಿಂದ 8 ಬಾರಿ ಅಜಿತ್ ಬಾರಾಮತಿ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದಾರೆ.



ತಳಮಟ್ಟದ ರಾಜಕಾರಣಿಯಾಗಿದ್ದ ಪವಾರ್, ಆಡಳಿತದಲ್ಲಿ ಕುಶಾಗ್ರಮತಿಯಾಗಿಯೂ ಹೆಸರಾಗಿದ್ದರು. ಮುಖ್ಯಮಂತ್ರಿ ಆಗಬೇಕು ಎಂಬ ಆಸೆಯನ್ನು ಅವರೆಂದೂ ಮರೆಮಾಚಿರಲಿಲ್ಲ. 2019ರಲ್ಲಿ ದೇವೇಂದ್ರ ಫಡಣವೀಸ್ ಮುಖ್ಯಮಂತ್ರಿಯಾದಾಗ ಕೇವಲ 2 ದಿನಗಳ ಮಟ್ಟಿಗೆ ಅವರು ಉಪ ಮುಖ್ಯಮಂತ್ರಿ ಆಗಿದ್ದರು. ಈ ಸರ್ಕಾರ ಕೇವಲ ಎರಡು ದಿನ ಇತ್ತು. ಕಾಂಗ್ರೆಸ್, ಶಿವಸೇನಾ, ಬಿಜೆಪಿ ಸರ್ಕಾರದಲ್ಲೂ ಉಪ ಮುಖ್ಯಮಂತ್ರಿ ಹುದ್ದೆಗೆ ಏರಿದ ಹೆಗ್ಗಳಿಕೆ ಅವರದು.

ದೊಡ್ಡಪ್ಪ, ಎನ್‌ಸಿಪಿ ಸ್ಥಾಪಕ ಶರದ್ ಪವಾರ್ ವಿರುದ್ಧ 2023ರಲ್ಲಿ ಬಂಡೆದ್ದು ಅವರ ನೆರಳಿನಿಂದ ಹೊರಬಂದಿದ್ದ ಅಜಿತ್ ಪವಾರ್, ಪಕ್ಷದ ಚಿಹ್ನೆ, ಹೆಸರಿನ ಜತೆಗೆ ಬಹುತೇಕ ಶಾಸಕರನ್ನು ಕರೆದುಕೊಂಡು ಬಿಜೆಪಿ ಮತ್ತು ಶಿವಸೇನಾ ಮೈತ್ರಿ ಸರ್ಕಾರ ಸೇರಿದ್ದರು.

ಪವಾರ್ ಅವರ ರಾಜಕೀಯ ಜೀವನವು ಹಲವು ತಿರುವುಗಳಿಂದ ಕೂಡಿತ್ತು. ಆದರೆ, ಅವರು ಎಲ್ಲ ಸವಾಲುಗಳನ್ನು ಮೆಟ್ಟಿ ನಿಂತರು. ಇತ್ತೀಚೆಗೆ ಅವರ ಪುತ್ರ, ಪಾರ್ಥ್ ಪವಾರ್ ಒಡೆತನದ ಕಂಪನಿಯು, ಮುದ್ರಾಂಕ ಶುಲ್ಕವನ್ನು ವಂಚಿಸಿ, ಪುಣೆಯ ಮುಂಧ್ವಾ ಪ್ರದೇಶದಲ್ಲಿರುವ ಸುಮಾರು ₹1,800 ಕೋಟಿ ಮೌಲ್ಯದ 40 ಎಕರೆ ಜಮೀನನ್ನು ಕೇವಲ ₹300 ಕೋಟಿಗೆ ಅಕ್ರಮವಾಗಿ ಖರೀದಿಸಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿದ್ದವು. 'ಮಹಾ ವಿಕಾಸ್ ಆಘಾಡಿ' ಮೈತ್ರಿಕೂಟವು ಪವಾರ್ ರಾಜೀನಾಮೆಗೆ ಒತ್ತಾಯಿಸಿತ್ತು.

ಕಳೆದ ವರ್ಷದ ಲೋಕಸಭಾ ಚುನಾವಣೆಯಲ್ಲಿ ಅವರ ಪಕ್ಷವು ಕೇವಲ ಒಂದು ಸ್ಥಾನ ಗೆಲ್ಲುವ ಮೂಲಕ ತೀವ್ರ ಹಿನ್ನಡೆ ಅನುಭವಿಸಿತ್ತು. 5 ತಿಂಗಳ ನಂತರ, ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಜತೆಗೆ ಮೈತ್ರಿ ಮಾಡಿಕೊಂಡು ಒಟ್ಟು 41 ಸ್ಥಾನಗಳನ್ನು ಗೆಲ್ಲುವ ಮೂಲಕ ಪವಾರ್ ಟೀಕಾಕಾರರ ಬಾಯಿ ಮುಚ್ಚಿಸಿದ್ದರು.

ಬಿಜೆಪಿ ಮತ್ತು ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಮೈತ್ರಿಯ ಹೊರತಾಗಿಯೂ, ಅಭಿವೃದ್ಧಿಗಾಗಿ ತಾವು ಆಡಳಿತಾರೂಢ ಮೈತ್ರಿಕೂಟಕ್ಕೆ ಸೇರಿರುವುದಾಗಿ ಪವಾರ್ ಒತ್ತಿ ಹೇಳುತ್ತಿದ್ದರು. ವಿಳಂಬಕ್ಕೆ ಕುಖ್ಯಾತರಾಗಿರುವ ಹಲವು ರಾಜಕಾರಣಿಗಳಿಗಿಂತ ಭಿನ್ನರಾಗಿ ಸಮಯನಿಷ್ಠೆಗೆ ಮತ್ತು ಅವಿರತ ದುಡಿಮೆಗೂ ಪವಾರ್ ಹೆಸರಾಗಿದ್ದರು. ಪ್ರೀತಿಯಿಂದ 'ದಾದಾ' (ಅಣ್ಣ) ಎಂದು ಕರೆಯಿಸಿಕೊಳ್ಳುತ್ತಿದ್ದ ಅವರು, ಸಾರ್ವಜನಿಕ ವೇದಿಕೆಗಳಲ್ಲಿ ತಮ್ಮ ಮನದ ಭಾವನೆಯನ್ನು ಮುಕ್ತವಾಗಿ ಹಂಚಿಕೊಳ್ಳಲು ಹಿಂಜರಿಯುತ್ತಿರಲಿಲ್ಲ.

ಹಣಕಾಸು ಮತ್ತು ಯೋಜನಾ ಸಚಿವರೂ ಆಗಿದ್ದ ಪವಾರ್, 2026–27ನೇ ಸಾಲಿನ ಬಜೆಟ್ ಅನ್ನು ಫೆಬ್ರುವರಿ 23ರಿಂದ ಆರಂಭವಾಗಲಿರುವ ರಾಜ್ಯ ವಿಧಾನಮಂಡಲದ ಬಜೆಟ್ ಅಧಿವೇಶನದಲ್ಲಿ ಮಂಡಿಸಬೇಕಿತ್ತು. ಎನ್‌ಸಿಪಿಯ ಎರಡು ಬಣಗಳ ವಿಲೀನದ ಮೂಲಕ ಮಹಾರಾಷ್ಟ್ರದ ರಾಜಕೀಯದಲ್ಲಿ ಮಹತ್ವದ ಬದಲಾವಣೆಗಳು ಸಂಭವಿಸಲಿವೆ ಎಂಬ ಚರ್ಚೆಗಳು ನಡೆಯುತ್ತಿರುವ ಸಂದರ್ಭದಲ್ಲೇ ಪವಾರ್ ಅವರು ನಿರ್ಗಮಿಸಿದ್ದಾರೆ.



ಬಾರಾಮತಿಯಲ್ಲಿ ಬುಧವಾರ ಸಂಭವಿಸಿದ ವಿಮಾನ ಪತನದಲ್ಲಿ ಮೃತಪಟ್ಟ ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರಿಗೆ ಅಂತಿಮ ನಮನ ಸಲ್ಲಿಸಲು ಅಪಾರ ಸಂಖ್ಯೆಯ ಜನರು ಸೇರಿದ್ದರು ಪಿಟಿಐ ಚಿತ್ರ

### ಕೆಳಗಿಳಿಯುವ ಯತ್ನದಲ್ಲಿ ದುರಂತ: ರಾಮ ಮೋಹನ್ ನಾಯ್ಡು

'ಡಿಜಿಸಿಎ ಮತ್ತು ಎಎಐಬಿ ತಂಡ ಸ್ಥಳಕ್ಕೆ ಬಂದಿದ್ದು, ದುರಂತಕ್ಕೆ ಕಾರಣವಾದ ಅಂಶಗಳನ್ನು ಪರಿಶೀಲಿಸುತ್ತಿದೆ. ಪ್ರಾಥಮಿಕ ವರದಿಗಳ ಪ್ರಕಾರ, ಲ್ಯಾಂಡಿಂಗ್ ವೇಳೆ ಅಸ್ಪಷ್ಟ ಗೋಚರತೆಯ ಕಾರಣದಿಂದ ದುರಂತ ಸಂಭವಿಸಿದೆ' ಎಂದು ಕೇಂದ್ರ ವಿಮಾನಯಾನ ಸಚಿವ ಕೆ. ರಾಮ ಮೋಹನ್ ನಾಯ್ಡು ಹೇಳಿದ್ದಾರೆ.

'ಬಾರಾಮತಿಯಲ್ಲಿ ಲ್ಯಾಂಡಿಂಗ್‌ಗೆ ಮೊದಲ ಪ್ರಯತ್ನ ನಡೆದಾಗ ಎಟಿಸಿ ಸಿಬ್ಬಂದಿ ಪೈಲಟ್‌ಗೆ ರನ್‌ವೇ ಗೋಚರಿಸುತ್ತಿದೆಯೇ ಎಂದು ಪ್ರಶ್ನಿಸಿದರು. ಅವರ ಉತ್ತರ ನಕಾರಾತ್ಮಕವಾಗಿತ್ತು. ಹಾಗಾಗಿ, ಒಂದು ಸುತ್ತು ಹಾರಾಟ ನಡೆಸಿದ ಬಳಿಕ ಎರಡನೆಯ ಬಾರಿ ಲ್ಯಾಂಡಿಂಗ್‌ಗೆ ಪ್ರಯತ್ನಿಸುವಂತೆ ಸೂಚಿಸಲಾಗಿತ್ತು. ಪೈಲಟ್ ಎರಡನೆಯ ಬಾರಿ ಲ್ಯಾಂಡಿಂಗ್‌ಗೆ ಪ್ರಯತ್ನಿಸಿದಾಗ ಎಟಿಸಿ ಸಿಬ್ಬಂದಿ ರನ್‌ವೇ ಗೋಚರಿಸುತ್ತಿದೆಯೇ ಎಂದು ಪ್ರಶ್ನಿಸಿದರು. ಆಗ ಪೈಲಟ್ ನೀಡಿದ ಉತ್ತರ ಸಕಾರಾತ್ಮಕವಾಗಿತ್ತು. ಹಾಗಾಗಿ ಲ್ಯಾಂಡಿಂಗ್‌ಗೆ ಅನುಮತಿ ನೀಡಲಾಯಿತು. ಬೆನ್ನಲ್ಲೇ, ದುರಂತ ಸಂಭವಿಸಿತು. ಡಿಜಿಸಿಎ ಮತ್ತು ಎಎಐಬಿ ತಂಡ ಇನ್ನಷ್ಟು ಮಾಹಿತಿ ಕಲೆ ಹಾಕುತ್ತಿದ್ದು, ಪಾರದರ್ಶಕವಾಗಿ ತನಿಖೆ ನಡೆಯಲಿದೆ' ಎಂದು ಅವರು ಹೇಳಿದರು.

> ಮಹಾರಾಷ್ಟ್ರದ ಅಭಿವೃದ್ಧಿಗೆ, ವಿಶೇಷವಾಗಿ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಅಜಿತ್ ಪವಾರ್ ನೀಡಿದ ಕೊಡುಗೆ ಸದಾ ಸ್ಮರಣೀಯ
> **ದ್ರೌಪದಿ ಮುರ್ಮು,** ರಾಷ್ಟ್ರಪತಿ

# ಪತನದ ಹಾದಿ...



### ಏನೇನಾಯ್ತು?

- **ಬೆಳಿಗ್ಗೆ 8.18:** ಬಾರಾಮತಿ ವಿಮಾನ ನಿಲ್ದಾಣದ ಎಟಿಸಿ (ಏರ್ ಟ್ರಾಫಿಕ್ ಕಂಟ್ರೋಲ್) ಸಂಪರ್ಕಕ್ಕೆ
- ಬಾರಾಮತಿಯಿಂದ 30 ನಾಟಿಕಲ್ ಮೈಲಿ ದೂರವಿದ್ದಾಗಲೇ ವಿಮಾನ ಸಿಬ್ಬಂದಿಯಿಂದ ಕರೆ. ಹವಾಮಾನ ಪರಿಸ್ಥಿತಿಯನ್ನು ಅವಲೋಕಿಸಿ ಸ್ವಂತ ವಿವೇಚನೆಯಿಂದ ವಿಮಾನವನ್ನು ಕೆಳಗಿಳಿಸುವಂತೆ ಎಟಿಸಿಯಿಂದ ಪೈಲಟ್‌ಗೆ ಸೂಚನೆ
- ಗಾಳಿಯ ವೇಗ ಮತ್ತು ಗೋಚರತೆಯ ಬಗ್ಗೆ ವಿಮಾನದ ಸಿಬ್ಬಂದಿಯಿಂದ ವಿಚಾರಣೆ. ಗಾಳಿಯ ವೇಗ ಕಡಿಮೆಯಿದೆ, ಗೋಚರತೆ ಸುಮಾರು 3,000 ಮೀಟರ್ ಎಂಬ ಮಾಹಿತಿ ರವಾನಿಸಿದ ಎಟಿಸಿ
- ರನ್‌ವೇ 11ರಲ್ಲಿ ಇಳಿಯುವುದಾಗಿ ಕೋರಿಕೆ. ರನ್‌ವೇ ಸರಿಯಾಗಿ ಗೋಚರಿಸದ ಕಾರಣ ಆಗಸದಲ್ಲೇ ಹಾರಾಟ ನಡೆಸಿದ ವಿಮಾನ
- ರನ್‌ವೇ ಗುರುತಿಸಬಹುದೇ ಎಂದು ಮತ್ತೊಮ್ಮೆ ಪ್ರಶ್ನೆ. ಸರಿಯಾಗಿ ಗೋಚರಿಸುತ್ತಿಲ್ಲ, ಸ್ಪಷ್ಟವಾಗಿ ಕಂಡೊಡನೆ ತಿಳಿಸುತ್ತೇವೆ ಎಂಬ ಉತ್ತರ
- **ಬೆಳಿಗ್ಗೆ 8.43:** ರನ್‌ವೇ 11ರಲ್ಲಿ ಇಳಿಸಲು ಸೂಚನೆ. ಪ್ರತಿಕ್ರಿಯೆ ನೀಡದ ವಿಮಾನ ಸಿಬ್ಬಂದಿ
- **ಬೆಳಿಗ್ಗೆ 8.44:** ರನ್‌ವೇ 11ರ ಬಳಿ ಬೆಂಕಿಯ ಜ್ವಾಲೆ ಗಮನಿಸಿದ ಎಟಿಸಿ. ದುರಂತದ ಸ್ಥಳಕ್ಕೆ ದೌಡಾಯಿಸಿದ ತುರ್ತು ಸೇವೆ ಸಿಬ್ಬಂದಿ
- ರನ್‌ವೇ ಎಡಭಾಗದಲ್ಲಿ ಬಿದ್ದ ವಿಮಾನದ ಭಗ್ನಾವಶೇಷ


### ನತದೃಷ್ಟ ಪೈಲಟ್‌ಗಳು

**ಕ್ಯಾಪ್ಟನ್ ಸುಮಿತ್ ಕಪೂರ್**
(ಎಟಿಪಿಎಲ್ ಹೋಲ್ಡರ್)
ಪೈಲಟ್ ಇನ್ ಕಮಾಂಡ್
ಹಾರಾಟ ನಡೆಸಿದ ಅವಧಿ: 15 ಸಾವಿರ ಗಂಟೆಗಳಿಗಿಂತಲೂ ಹೆಚ್ಚು

**ಶಾಂಭವಿ ಪಾಠಕ್**
(ಸಿಪಿಎಲ್ ಹೋಲ್ಡರ್), ಸಹ ಪೈಲಟ್
ಹಾರಾಟ ನಡೆಸಿದ ಅವಧಿ: 1.5 ಸಾವಿರ ಗಂಟೆಗಳಿಗಿಂತಲೂ ಹೆಚ್ಚು

### ಯಾರಿಗೆ ಸೇರಿದ್ದು ಈ ವಿಮಾನ?

- **ವಿಮಾನದ ಮಾಲೀಕರು:** ವಿಎಸ್‌ಆರ್ ವೆಂಚರ್ಸ್ (ನಿಗದಿತವಲ್ಲದ ನಿರ್ವಾಹಕ): ಪರವಾನಗಿ ಸಂಖ್ಯೆ 07/2014
- **ಪರವಾನಗಿ:** 2014ರ ಏ.21 • **ನವೀಕರಣ:** 2023ರ ಏ.3, 2028ರ ಏ.20ರವರೆಗೂ ಮಾನ್ಯ
- ಡಿಜಿಸಿಎಯಿಂದ 2025ರ ಫೆಬ್ರುವರಿಯಲ್ಲಿ ಪರಿಶೀಲನೆ
- ದುರಂತಕ್ಕೀಡಾದ ವಿಮಾನದ ತಯಾರಿಕೆ 2010ರಲ್ಲಿ
- ವಿಟಿ–ಡಿಬಿಎಲ್ ನೋಂದಣಿ ಹೊಂದಿದ್ದ ಲಿಯರ್‌ಜೆಟ್–45 ವಿಮಾನವೊಂದು 2023ರ ಸೆ. 14ರಂದು ಮುಂಬೈ ವಿಮಾನ ನಿಲ್ದಾಣದಲ್ಲಿ ಇಳಿಯುವಾಗ ಅಪಘಾತಕ್ಕೀಡಾಗಿತ್ತು. ಎಎಐಬಿಯಿಂದ ತನಿಖೆ




> ನಮ್ಮ ನಡುವೆ ಉತ್ತಮ ಬಾಂಧವ್ಯ ಇತ್ತು. ಅಜಿತ್ ಮುಕ್ತ ಮನಸ್ಸಿನ ವ್ಯಕ್ತಿ. ರಾಜಕೀಯದಲ್ಲಿ ಅವರು ಪಥ ಬದಲಿಸಿದ್ದರೂ, ನಮ್ಮಿಬ್ಬರ ಸಂಬಂಧ ಕಡಿದುಕೊಂಡಿರಲಿಲ್ಲ
> **ಉದ್ಧವ್ ಠಾಕ್ರೆ,** ಶಿವಸೇನಾ ಮುಖ್ಯಸ್ಥ

> ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರ ಅಗಲಿಕೆಯಿಂದ ಎನ್‌ಡಿಎ ಕುಟುಂಬಕ್ಕೆ ಮಾತ್ರವಲ್ಲದೆ, ನನಗೂ ವೈಯಕ್ತಿಕವಾಗಿ ನಷ್ಟವಾಗಿದೆ
> **ಅಮಿತ್ ಶಾ,** ಕೇಂದ್ರ ಗೃಹ ಸಚಿವ

> ಉತ್ತಮ ಸ್ನೇಹಿತನನ್ನು ಕಳೆದುಕೊಂಡಿದ್ದೇನೆ. ರಾಜ್ಯದ ಬಗ್ಗೆ ಚೆನ್ನಾಗಿ ತಿಳಿದಿದ್ದ, ಸಮಸ್ಯೆಗಳ ಬಗ್ಗೆ ಆಳವಾದ ಅರಿವು ಹೊಂದಿದ್ದ ನಾಯಕ
> **ದೇವೇಂದ್ರ ಫಡಣವೀಸ್,** ಮುಖ್ಯಮಂತ್ರಿ, ಮಹಾರಾಷ್ಟ್ರ

> ನಾನು ಅಣ್ಣನನ್ನು ಕಳೆದುಕೊಂಡಿದ್ದೇನೆ. ಆತ್ಮೀಯ ಸ್ನೇಹಿತನಾಗಿದ್ದರು. ಅವರ ಸಾವು ದುರದೃಷ್ಟಕರ. ವಿಮಾನ ಅಪಘಾತದ ಬಗ್ಗೆ ತನಿಖೆ ನಡೆಸಲಾಗುವುದು
> **ಏಕನಾಥ ಶಿಂದೆ,** ಉಪ ಮುಖ್ಯಮಂತ್ರಿ,

# 'ತನಿಖೆಗೆ 'ಸುಪ್ರೀಂ' ನೇತೃತ್ವ ವಹಿಸಲಿ'

## ಸಾಕ್ಷ್ಯ ಹೊರಬರಲಿ: ಪಶ್ಚಿಮ ಬಂಗಾಳದ ಸಿ.ಎಂ ಮಮತಾ ಬ್ಯಾನರ್ಜಿ ಆಗ್ರಹ

ಕೋಲ್ಕತ್ತ (ಪಿಟಿಐ): 'ವಿಮಾನ ದುರಂತದಲ್ಲಿ ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಮೃತಪಟ್ಟ ಪ್ರಕರಣವನ್ನು ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ಸ್ವತಂತ್ರ ತನಿಖೆಗೆ ಒಳಪಡಿಸಬೇಕು' ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆಗ್ರಹಿಸಿದ್ದಾರೆ.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಈಗ ಅಸ್ತಿತ್ವದಲ್ಲಿರುವ ತನಿಖಾ ಸಂಸ್ಥೆಗಳಿಂದ ಸತ್ಯ ಹೊರಬರುವುದಿಲ್ಲ. ಎಲ್ಲ ಸಂಸ್ಥೆಗಳು ರಾಜಿ ಮಾಡಿಕೊಂಡಿವೆ. ಹಾಗಾಗಿ, ಸುಪ್ರೀಂಕೋರ್ಟ್ ಮೇಲ್ವಿಚಾರಣೆಯಲ್ಲೇ ತನಿಖೆ ನಡೆಯಬೇಕು. ಸುಪ್ರೀಂ ಕೋರ್ಟ್ ಮಾತ್ರ ವಿಶ್ವಾಸಾರ್ಹ' ಎಂದು ಅವರು ಹೇಳಿದರು.



ಮಮತಾ

'ಅಜಿತ್ ಪವಾರ್ ಅವರು, ತಮ್ಮ ದೊಡ್ಡಪ್ಪ ಶರದ್ ಪವಾರ್ ಅವರ ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿ (ಎನ್‌ಸಿಪಿ)– ಎಸ್‌ಪಿ ಬಣಕ್ಕೆ ಮರಳುವ ಯೋಜನೆಯಲ್ಲಿದ್ದರು. ಈಚಿನ ದಿನಗಳಲ್ಲಿ ಹರಡಿದ್ದ ಸುದ್ದಿಗಳು ಸಹ ಈ ನಡೆಯನ್ನು ಸೂಚಿಸುವಂತೆ ಇದ್ದವು. ಈ ಸಂದರ್ಭದಲ್ಲೇ ಅವರ ಸಾವು ಸಂಭವಿಸಿರುವುದು ತೀವ್ರ ಆಘಾತ ತಂದಿದೆ' ಎಂದರು.

**'ರಾಜಕೀಯ ಮುಖಂಡರೂ ಸುರಕ್ಷಿತರಲ್ಲ':** 'ದೇಶದಲ್ಲಿ ಯಾವುದೇ ಸುರಕ್ಷತೆ ಇಲ್ಲ. ರಾಜಕೀಯ ಮುಖಂಡರೂ ಇದರಿಂದ ಹೊರತಲ್ಲ ಎನ್ನುವುದಕ್ಕೆ ಈ ದುರಂತವೇ ಸಾಕ್ಷಿ. ಈಗ ಆಡಳಿತ ವ್ಯವಸ್ಥೆಯ ಭಾಗವಾಗಿರುವವರೂ ಸಹ ಸುರಕ್ಷಿತರಲ್ಲ' ಎಂದು ಮಮತಾ ಹೇಳಿದರು.

**ವಿರೋಧ ಪಕ್ಷಗಳ ಬೆಂಬಲ:** ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸಬೇಕು ಎಂಬ ಮಮತಾ ಬೇಡಿಕೆಗೆ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ವಿಪಕ್ಷಗಳ ಮುಖಂಡರು ಬೆಂಬಲ ವ್ಯಕ್ತಪಡಿಸಿದ್ದಾರೆ.

'ಅಜಿತ್ ಪವಾರ್ ಪ್ರಯಾಣಿಸುತ್ತಿದ್ದ ಲಘು ವಿಮಾನ ಪತನಗೊಂಡಿರುವ ಬಗ್ಗೆ ತನಿಖೆ ನಡೆಯಬೇಕು, ಮಮತಾ ಅವರು ನ್ಯಾಯಯುತ ಬೇಡಿಕೆಯನ್ನೇ ಮುಂದಿಟ್ಟದ್ದಾರೆ' ಎಂದು ಖರ್ಗೆ ಹೇಳಿದ್ದಾರೆ. ಶಿವಸೇನಾ (ಯುಬಿಟಿ) ಸಂಸದ ಅನಿಲ್ ದೇಸಾಯಿ, ಬಿಜೆಡಿ ಮುಖಂಡ ದೇವಿ ಪ್ರಸಾದ್ ಮಿಶ್ರಾ ಕೂಡ ತನಿಖೆಗೆ ಒತ್ತಾಯಿಸಿದ್ದಾರೆ.

ಅಜಿತ್ ಅವರ ಸಾವಿನ ನೋವಿನಲ್ಲಿ ಅವರ ಕುಟುಂಬ ಇರುವಾಗ 'ಕೊಳಕು ರಾಜಕೀಯ ಸಲ್ಲ' ಎಂದು ಕೇಂದ್ರ ಸಚಿವ ರವನೀತ್ ಸಿಂಗ್ ಬಿಟ್ಟು ಹೇಳಿದ್ದಾರೆ.

### 'ವಿಮಾನ ಅಪಘಾತ ರಾಜಕೀಯಗೊಳಿಸಬೇಡಿ'

ಪುಣೆ (ಪಿಟಿಐ): ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಮತ್ತು ಇತರ ನಾಲ್ವರು ವಿಮಾನ ಅಪಘಾತದಲ್ಲಿ ಮೃತಪಟ್ಟಿದ್ದನ್ನು ರಾಜಕೀಯಗೊಳಿಸಬಾರದು ಎಂದು ಅಜಿತ್ ಅವರ ದೊಡ್ಡಪ್ಪ, ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ಮನವಿ ಮಾಡಿದರು.

ಈ ಮೂಲಕ ಅವರು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಹೇಳಿಕೆಯನ್ನು ಟೀಕಿಸಿದ್ದಾರೆ.



ಶರದ್ ಪವಾರ್

'ಅಜಿತ್ ಸಾವು ಮಹಾರಾಷ್ಟ್ರಕ್ಕೆ ದೊಡ್ಡ ಆಘಾತ ತರಿಸಿದೆ. ಕಠಿಣ ಪರಿಶ್ರಮಿ, ದಕ್ಷ ನಾಯಕನನ್ನು ರಾಜ್ಯ ಕಳೆದುಕೊಂಡಿದ್ದು, ತುಂಬಲಾರದ ನಷ್ಟವಾಗಿದೆ. ಎಲ್ಲವೂ ನಮ್ಮ ಕೈಯಲ್ಲಿಲ್ಲ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

'ಇದೊಂದು ಅಪಘಾತ. ಇದರಲ್ಲಿ ಯಾವುದೇ ರಾಜಕೀಯ ಇಲ್ಲ. ಅನಗತ್ಯವಾಗಿ ರಾಜಕೀಯ ತರಬೇಡಿ ಎಂದು ನಾನು ಮಮತಾ ಅವರಲ್ಲಿ ವಿನಂತಿಸುತ್ತೇನೆ' ಎಂದು ಅವರು ಪ್ರತಿಕ್ರಿಯಿಸಿದರು.

# 'ನಾಳೆ ಮಾತನಾಡುತ್ತೇನೆ ಅಪ್ಪಾ...'

ಮುಂಬೈ (ಪಿಟಿಐ): 'ಅಪ್ಪಾ, ನಾನು ನಾಳೆ (ಬುಧವಾರ) ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರೊಂದಿಗೆ ಬಾರಾಮತಿಗೆ ಹೋಗುತ್ತಿದ್ದೇನೆ. ಬಾರಾಮತಿಯಲ್ಲಿ ಅವರು ವಿಮಾನದಿಂದ ಇಳಿದ ನಂತರ, ನಾನು ನಾಂದೇಡ್‌ಗೆ ಹೋಗುತ್ತೇನೆ, ಹೋಟೆಲ್ ತಲುಪಿದ ತಕ್ಷಣವೇ ನಿಮಗೆ ಫೋನ್ ಮಾಡುತ್ತೇನೆ...'



ಪಿಂಕಿ ಮಾಲಿ

'ಮಗಳು ಪಿಂಕಿ ಮಾಲಿ ನನ್ನೊಂದಿಗೆ ಆಡಿದ ಕೊನೆಯ ನುಡಿಗಳಿವು. ನಾಳೆ ಮಾತನಾಡುತ್ತೇನೆ ಎಂದು ಆಕೆ ನೀಡಿದ ಭರವಸೆ ಇನ್ನೆಂದೂ ಈಡೇರುವುದಿಲ್ಲ. ವಿಮಾನ ದುರಂತದಲ್ಲಿ ಅಜಿತ್ ಪವಾರ್ ಅವರೊಂದಿಗೆ ಮಗಳು ಸಹ ಮೃತಪಟ್ಟಿದ್ದಾಳೆ' ಎಂದು ಪಿಂಕಿಯ ತಂದೆ, ಸೆಂಟ್ರಲ್ ಮುಂಬೈನ ಪ್ರಭಾದೇವಿ ಪ್ರದೇಶದ ನಿವಾಸಿ ಶಿವಕುಮಾರ್ ಮಾಲಿ ಬಿಕ್ಕಳಿಸಿದರು.

ದೆಹಲಿಯ ವಿಎಸ್‌ಆರ್ ವೆಂಚರ್ಸ್‌ಗೆ ಸೇರಿದ, ಅಜಿತ್ ಪವಾರ್ ಪ್ರಯಾಣಿಸುತ್ತಿದ್ದ ವಿಶೇಷ ವಿಮಾನದಲ್ಲಿ ಪಿಂಕಿ ಮಾಲಿ ಸಹಾಯಕಿ ಆಗಿದ್ದರು. ಸಿಬ್ಬಂದಿ ಸೇರಿ ಒಟ್ಟು ಐವರು ದುರಂತದಲ್ಲಿ ಮೃತಪಟ್ಟಿದ್ದಾರೆ.

'ಕೆಲಸ ಮುಗಿದ ನಂತರ ನಾಳೆ ನಿಮ್ಮೊಂದಿಗೆ ಖಂಡಿತ ಮಾತನಾಡುತ್ತೇನೆ ಎಂದು ಮಗಳು ಭರವಸೆ ನೀಡಿದ್ದಳು. ಆದರೆ, ಆ ಕ್ಷಣ ಇನ್ನೆಂದಿಗೂ ಬರುವುದಿಲ್ಲ' ಎಂದು ಶಿವಕುಮಾರ್ ನೋವಿನಿಂದ ನುಡಿದರು.

ಶಿವಕುಮಾರ್ ಸಹ ಎನ್‌ಸಿಪಿ– ಎಸ್‌ಪಿ ಬಣದ ಕಾರ್ಯಕರ್ತರು. 'ಸ್ಥಳೀಯ ಮುಖಂಡರಾದ ಸಮಾಧಾನ್ ಸಾರ್ವಂಕರ್ ಅವರು, ಅಜಿತ್ ಪವಾರ್ ಅವರ ವಿಮಾನ ಪತನಗೊಂಡಿರುವುದನ್ನು ಫೋನ್ ಮೂಲಕ ನನ್ನ ಗಮನಕ್ಕೆ ತಂದರು' ಎಂದು ಅವರು ಹೇಳಿದರು.

ಪಿಂಕಿ ಮಾಲಿ ಐದು ವರ್ಷಗಳಿಂದ ಫ್ಲೈಟ್ ಅಟೆಂಡೆಂಟ್ ಆಗಿ ಕಾರ್ಯನಿರ್ವಹಿಸುತ್ತಿದ್ದರು. ಆರಂಭದಲ್ಲಿ ಏರ್ ಇಂಡಿಯಾದಲ್ಲಿದ್ದ ಅವರು ನಂತರ, ಖಾಸಗಿ ವಿಶೇಷ ವಿಮಾನಗಳಲ್ಲಿ ಸಹಾಯಕಿ ಆಗಿ ಸೇರಿದ್ದರು. ಜನವರಿ 16ರಂದು ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಮತ ಚಲಾಯಿಸಲು ಮುಂಬೈಗೆ ಬಂದಿದ್ದಾಗ ಪಿಂಕಿ, ತಂದೆಯನ್ನು ಕೊನೆಯ ಬಾರಿ ಭೇಟಿಯಾಗಿದ್ದರು.

ಪಿಂಕಿ ಮತ್ತು ಪವಾರ್ ಅವರೊಂದಿಗೆ ಭದ್ರತಾ ಸಿಬ್ಬಂದಿ ವಿದೀಪ್ ಜಾಧವ್, ಪೈಲಟ್ ಕ್ಯಾಪ್ಟನ್ ಸುಮಿತ್ ಕಪೂರ್, ಸಹ ಪೈಲಟ್ ಕ್ಯಾಪ್ಟನ್ ಶಾಂಭವಿ ಪಾಠಕ್ ಮೃತಪಟ್ಟಿದ್ದಾರೆ. ಮುಂಬೈನ ಠಾಣೆ ಸಮೀಪದ ವಿಟವಾ ನಿವಾಸಿ ಜಾಧವ್ ಅವರಿಗೆ ತಾಯಿ, ಪತ್ನಿ, ಮತ್ತು ಪುತ್ರ ಇದ್ದಾರೆ.

ಕ್ಯಾಪ್ಟನ್ ಶಾಂಭವಿ ಪಾಠಕ್ ಅವರು, ವಿಎಸ್‌ಆರ್ ವೆಂಚರ್ಸ್‌ನಲ್ಲಿ ಮೂರು ವರ್ಷಗಳಿಂದ ಪೈಲಟ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ನ್ಯೂಜಿಲೆಂಡ್‌ನ ಅಂತರರಾಷ್ಟ್ರೀಯ ವಾಣಿಜ್ಯ ಪೈಲಟ್ ಅಕಾಡೆಮಿಯಿಂದ ವಾಣಿಜ್ಯ ಪೈಲಟ್ ತರಬೇತಿ ಪಡೆದುಕೊಂಡಿದ್ದಾರೆ. ಏರೊನಾಟಿಕ್ಸ್, ಏವಿಯೇಷನ್ ಮತ್ತು ಏರೋಸ್ಪೇಸ್ ಸೈನ್ಸ್‌ನಲ್ಲಿ ಮುಂಬೈ ವಿಶ್ವವಿದ್ಯಾಲಯದಿಂದ ಪದವಿ ಪಡೆದಿದ್ದಾರೆ ಎಂಬ ಮಾಹಿತಿ ಅವರ ಸಾಮಾಜಿಕ ಮಾಧ್ಯಮ ಖಾತೆಯಲ್ಲಿದೆ.

# 'ಕೈಗಡಿಯಾರದಿಂದ ಗುರುತು ಪತ್ತೆ'

ಪುಣೆ(ಪಿಟಿಐ): ಜಿಲ್ಲೆಯ ಬಾರಾಮತಿ ವಿಮಾನ ನಿಲ್ದಾಣದಲ್ಲಿ ವಿಮಾನ ಪತನಗೊಂಡು ಮೃತಪಟ್ಟ ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರ ಗುರುತು ಪತ್ತೆಗೆ ಕೈಗಡಿಯಾರ ನೆರವಾಯಿತು ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

ಸುಟ್ಟು ಕರಕಲಾದ ಮೃತದೇಹವೊಂದರ ಬಳಿ ಇದ್ದ ಕೈಗಡಿಯಾರವನ್ನು ವ್ಯಕ್ತಿಯೊಬ್ಬರು ತೋರಿಸುತ್ತಿರುವ ಹಾಗೂ ಈ ಅಪಘಾತದಲ್ಲಿ ಅಜಿತ್ ಪವಾರ್ ಮೃತಪಟ್ಟಿದ್ದಾರೆ ಎಂಬುದಾಗಿ ಹೇಳುತ್ತಿದ್ದ ದೃಶ್ಯವಿರುವ ವಿಡಿಯೊ ವ್ಯಾಪಕವಾಗಿ ಹರಿದಾಡಿದೆ.

ಕೈಗಡಿಯಾರವು ಅಜಿತ್ ಪವಾರ್ ನೇತೃತ್ವ ವಹಿಸಿದ್ದ ಎನ್‌ಸಿಪಿಯ ಚುನಾವಣೆ ಚಿಹ್ನೆ ಎಂಬುದು ಗಮನಾರ್ಹ.

# ಸೂಚನೆ ಪಾಲಿಸದ ರಾಜ್ಯಗಳ ವಿರುದ್ಧ 'ಸುಪ್ರೀಂ' ಕಿಡಿ

ನವದೆಹಲಿ: ಬೀದಿ ನಾಯಿಗಳ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ನಡೆಸುವ ಸಾಮರ್ಥ್ಯ ಹೆಚ್ಚಿಸುವಂತೆ ನೀಡಿದ್ದ ನಿರ್ದೇಶನಗಳನ್ನು ಪಾಲನೆ ಮಾಡುವಲ್ಲಿ ವಿಫಲವಾಗಿರುವ ರಾಜ್ಯ ಸರ್ಕಾರಗಳ ವಿರುದ್ಧ ಸುಪ್ರೀಂ ಕೋರ್ಟ್ ಬುಧವಾರ ಅಸಮಾಧಾನ ವ್ಯಕ್ತಪಡಿಸಿದೆ.

ಈ ವಿಚಾರವಾಗಿ ಅಸ್ಪಷ್ಟ ಹೇಳಿಕೆಗಳನ್ನು ನೀಡದಂತೆ ಎಚ್ಚರಿಕೆ ನೀಡಿದ ಸುಪ್ರೀಂ ಕೋರ್ಟ್, 'ನ್ಯಾಯಾಲಯದ ನಿರ್ದೇಶನಗಳನ್ನು ಕಾರ್ಯಗತಗೊಳಿಸುವ ಬದಲು ರಾಜ್ಯಗಳು ಕಾಲಹರಣ ಮಾಡುತ್ತಿವೆ' ಎಂದು ಕಿಡಿಕಾರಿದೆ. ನ್ಯಾಯಮೂರ್ತಿಗಳಾದ ವಿಕ್ರಮ ನಾಥ್, ಸಂದೀಪ್ ಮೆಹ್ತಾ ಹಾಗೂ ಎನ್.ವಿ.ಅಂಜಾರಿಯಾ ಅವರು ಇದ್ದ ನ್ಯಾಯಪೀಠವು, ವಿವಿಧ ರಾಜ್ಯಗಳ ನಿವೇದನೆಗಳನ್ನು ಆಲಿಸಿದ ಬಳಿಕ ವಿಚಾರಣೆಯನ್ನು ಗುರುವಾರಕ್ಕೆ ಮುಂದೂಡಿತು.

# 'ಸೇರ್ಪಡೆ, ಕೈಬಿಡುವುದು ಪರಿಷ್ಕರಣೆ ಭಾಗ'

ನವದೆಹಲಿ(ಪಿಟಿಐ): ಮತದಾರರ ಹೆಸರುಗಳನ್ನು ಪಟ್ಟಿಗೆ ಸೇರ್ಪಡೆ ಮಾಡುವುದು ಮತ್ತು ತೆಗೆದು ಹಾಕುವುದು ಮತದಾರರ ಪಟ್ಟಿಯ ಪರಿಷ್ಕರಣೆಯ ಭಾಗವೇ ಆಗಿದೆ ಎಂದು ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ.

'ಪಟ್ಟಿಯಿಂದ ದೊಡ್ಡ ಸಂಖ್ಯೆಯಲ್ಲಿ ಮತದಾರರ ಹೆಸರುಗಳನ್ನು ಕೈಬಿಡಲಾಗಿದೆ' ಎಂಬ ಅರ್ಜಿದಾರರ ಪರ ವಕೀಲರ ವಾದಕ್ಕೆ ಸುಪ್ರೀಂ ಕೋರ್ಟ್ ಈ ಪ್ರತಿಕ್ರಿಯೆ ನೀಡಿದೆ.

ಮತದಾರರ ಪಟ್ಟಿಯ 'ವಿಶೇಷ ಸಮಗ್ರ ಪರಿಷ್ಕರಣೆ'(ಎಸ್‌ಐಆರ್) ಪ್ರಶ್ನಿಸಿ ಸಲ್ಲಿಸಲಾಗಿರುವ ಮೇಲ್ಮನವಿಗಳ ಕುರಿತ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಹಾಗೂ ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರು ಇದ್ದ ಪೀಠವು ನಡೆಸಿತು.

ಪಟ್ಟಿಯಿಂದ ಮತದಾರರ ಹೆಸರುಗಳನ್ನು ಸೇರಿಸುವುದು ಮತ್ತು ಕೈಬಿಡುವುದು ಈ ಪರಿಷ್ಕರಣೆಯ ಭಾಗ ಎಂಬ ಪೀಠದ ಅಭಿಪ್ರಾಯಕ್ಕೆ ಪ್ರತಿಕ್ರಿಯಿಸಿದ ಕಪಿಲ್ ಸಿಬಲ್,'ಪ್ರತಿ ವರ್ಷ ಮತದಾರರ ಪಟ್ಟಿಯ ಪರಿಷ್ಕರಣೆ ಇದ್ದೇ ಇರುತ್ತದೆ. ಆದರೆ, ಈಗ ದೊಡ್ಡ ಪ್ರಮಾಣದಲ್ಲಿ ಪರಿಷ್ಕರಣೆ ನಡೆಸಲಾಗುತ್ತಿದೆ. ಈ ಕ್ರಮವನ್ನು ಸಮರ್ಥಿಸಲು ಸಮರ್ಪಕ ದತ್ತಾಂಶಗಳು ಅಗತ್ಯ' ಎಂದರು.

### ವಿದ್ಯಾರ್ಥಿಗಳಿಗೆ ಅಂಚೆ ಮತಪತ್ರ ಸೌಲಭ್ಯ

ಅಂಚೆ ಮತಪತ್ರ ಬಳಸಿ ತಮ್ಮ ಹಕ್ಕು ಚಲಾವಣೆ ಮಾಡುವುದಕ್ಕೆ ವಿದ್ಯಾರ್ಥಿಗಳಿಗೆ ಅವಕಾಶ ನೀಡುವಂತೆ ಕೇಂದ್ರ ಸರ್ಕಾರ ಹಾಗೂ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡುವಂತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ಬುಧವಾರ ಸಮ್ಮತಿಸಿದೆ.

ಈ ಕುರಿತ ಅರ್ಜಿಯ ವಿಚಾರಣೆಯನ್ನು ಕೈಗೆತ್ತಿಕೊಂಡ, ನ್ಯಾಯಮೂರ್ತಿಗಳಾದ ವಿಕ್ರಮ ನಾಥ್, ಸಂದೀಪ್ ಮೆಹ್ತಾ ಹಾಗೂ ಎನ್.ವಿ.ಅಂಜಾರಿಯಾ ಅವರು ಇದ್ದ ಪೀಠವು, ತಿಂಗಳ ಒಳಗಾಗಿ ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಸರ್ಕಾರ ಹಾಗೂ ಆಯೋಗಕ್ಕೆ ನೋಟಿಸ್ ನೀಡಿತು.

ತಮ್ಮ ತವರು ಕ್ಷೇತ್ರ ಬದಲಾಗಿ ಇತರೆಡೆ ಇರುವ ಶೈಕ್ಷಣಿಕ ಸಂಸ್ಥೆಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಈ ಸೌಲಭ್ಯ ನೀಡಬೇಕು ಎಂದು ಕೋರಿ ತಮಿಳುನಾಡು ಕಾನೂನು ವಿಶ್ವವಿದ್ಯಾಲಯದ ವಿದ್ಯಾರ್ಥಿ ಜಯಸುಧಾಕರ್ ಅರ್ಜಿ ಸಲ್ಲಿಸಿದ್ದಾರೆ.

# ಯುಜಿಸಿ ನಿಯಮ: ವಿಚಾರಣೆಗೆ ಒಪ್ಪಿಗೆ

ನವದೆಹಲಿ (ಪಿಟಿಐ): ಕ್ಯಾಂಪಸ್‌ಗಳಲ್ಲಿ ತಾರತಮ್ಯ ನಿವಾರಣೆಗೆ ಸಂಬಂಧಿಸಿದಂತೆ, ಯುಜಿಸಿ ಅನುಷ್ಠಾನಗೊಳಿಸಿರುವ ನೂತನ ನಿಯಮಗಳನ್ನು ಪ್ರಶ್ನಿಸಿರುವ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ಬುಧವಾರ ಒಪ್ಪಿಗೆ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರನ್ನೊಳಗೊಂಡ ಪೀಠವು, ತುರ್ತು ವಿಚಾರಣೆ ನಡೆಸುವಂತೆ ಕೋರಿ ವಕೀಲರೊಬ್ಬರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿತು.

'ನೂತನ ನಿಯಮದಂತೆ ಸಮಿತಿಗಳು ರಚನೆ ಆದರೆ, ಸಾಮಾನ್ಯ ವರ್ಗದವರ ಮೇಲೆ ತಾರತಮ್ಯ ನಡೆಯುವ ಸಾಧ್ಯತೆ ಇದೆ' ಎಂದು ವಕೀಲರು ನ್ಯಾಯಪೀಠದ ಗಮನಕ್ಕೆ ತಂದರು.

'ಏನು ನಡೆಯುತ್ತಿದೆ ಎಂಬುದು ನಮಗೆ ಗೊತ್ತಿಲ್ಲ. ಲೋಪಗಳು ನಿವಾರಣೆ ಆಗಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಿ. ಅರ್ಜಿಯನ್ನು ವಿಚಾರಣೆಗೆ ಪಟ್ಟಿ ಮಾಡುವಂತೆ ನಾವು ಹೇಳುತ್ತೇವೆ' ಎಂದು ಸಿಜೆಐ ಸೂರ್ಯಕಾಂತ್ ಹೇಳಿದರು.

### ಮಾಯಾವತಿ ಸಮರ್ಥನೆ

ಲಖನೌ (ಪಿಟಿಐ): ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ 'ಈಕ್ವಿಟಿ (ನ್ಯಾಯಸಮ್ಮತ) ಕಮಿಟಿಗಳ' ರಚನೆಯನ್ನು ಕಡ್ಡಾಯಗೊಳಿಸಿರುವ ಯುಜಿಸಿಯ ಹೊಸ ನಿಯಮಗಳನ್ನು ಬಹುಜನ ಸಮಾಜ ಪಕ್ಷದ ವರಿಷ್ಠರಾದ ಮಾಯಾವತಿ ಸಮರ್ಥಿಸಿಕೊಂಡಿದ್ದಾರೆ.

ಸಾಮಾನ್ಯ ವರ್ಗದವರು ಇದಕ್ಕೆ ವಿರೋಧ ವ್ಯಕ್ತಪಡಿಸುವುದು ಸಮರ್ಥನೀಯ ಅಲ್ಲ ಎಂದಿದ್ದಾರೆ. ವ್ಯಾಪಕ ಸಮಾಲೋಚನೆಯ ಬಳಿಕವೇ ಈ ನಿಯಮಗಳನ್ನು ಜಾರಿಗೊಳಿಸಿ ಎಂದೂ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಉಲ್ಲೇಖಿಸಿದ್ದಾರೆ.

## ಸಂಸದರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಕಿವಿಮಾತು

# ರಾಷ್ಟ್ರೀಯ ಹಿತಾಸಕ್ತಿ: ಒಗ್ಗಟ್ಟು ಪ್ರದರ್ಶಿಸಿ

ಪ್ರಜಾವಾಣಿ ವಾರ್ತೆ

ನವದೆಹಲಿ: 'ದೇಶದ ಪ್ರಗತಿಗೆ ಹೊಸ ಶಕ್ತಿ ತುಂಬಲು ವಿಕಸಿತ ಭಾರತ, ಆತ್ಮನಿರ್ಭರ, ಸ್ವದೇಶಿ ಮುಂತಾದ ರಾಷ್ಟ್ರೀಯ ಹಿತಾಸಕ್ತಿಯ ವಿಷಯಗಳಲ್ಲಿ ಸಂಸದರು ಪಕ್ಷಭೇದ ಮರೆತು ಒಗ್ಗಟ್ಟಿನಿಂದ ನಿಲ್ಲಬೇಕು' ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಬುಧವಾರ ಸಲಹೆ ನೀಡಿದರು.

ಬಜೆಟ್ ಅಧಿವೇಶನದ ಮೊದಲ ದಿನ ಲೋಕಸಭೆ ಹಾಗೂ ರಾಜ್ಯಸಭೆಯ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಿದ ಅವರು, 'ವಿವಿಧ ಜಾಗತಿಕ ಬಿಕ್ಕಟ್ಟುಗಳ ಹೊರತಾಗಿಯೂ ಭಾರತವು ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಉಳಿದಿದೆ' ಎಂದು ಪ್ರತಿಪಾದಿಸಿದರು.

ಸುಮಾರು 6,000 ಪದಗಳ ಅವರ ಭಾಷಣವು ರವೀಂದ್ರನಾಥ ಟ್ಯಾಗೋರ್, ಬಂಕಿಮ್ ಚಂದ್ರ ಚಟ್ಟೋಪಾಧ್ಯಾಯ (ಪಶ್ಚಿಮ ಬಂಗಾಳ), ಶ್ರೀ ನಾರಾಯಣ ಗುರು (ಕೇರಳ), ಭೂಪೇನ್ ಹಜಾರಿಕಾ (ಅಸ್ಸಾಂ), ರಾಜೇಂದ್ರ ಚೋಳ ಮತ್ತು ತಿರುವಳ್ಳುವರ್ (ತಮಿಳುನಾಡು) ಸೇರಿದಂತೆ ಚುನಾವಣೆಗೆ ಸಜ್ಜಾಗಿರುವ ರಾಜ್ಯಗಳ ಮಹಾನ್ ಸಾಧಕರ ಉಲ್ಲೇಖ ಹೊಂದಿತ್ತು ಹಾಗೂ ಆ ರಾಜ್ಯಗಳಲ್ಲಿ ಕೈಗೊಂಡ ಅಭಿವೃದ್ಧಿ ಯೋಜನೆಗಳ ಪ್ರಸ್ತಾಪಗಳನ್ನು ಒಳಗೊಂಡಿತ್ತು.

ಪಾಕಿಸ್ತಾನದ ಉಗ್ರರ ನೆಲೆಗಳನ್ನು ಧ್ವಂಸಗೊಳಿಸಿದ 'ಆಪರೇಷನ್ ಸಿಂಧೂರ' ಶ್ಲಾಘಿಸಿದ ಅವರು, 'ಈ ಮೂಲಕ, ಯಾವುದೇ ಭಯೋತ್ಪಾದನಾ ದಾಳಿಗೆ ದೃಢ ಹಾಗೂ ನಿರ್ಣಾಯಕ ಪ್ರತಿಕ್ರಿಯೆ ನೀಡಲಾಗುತ್ತದೆ ಎಂಬ ಬಲವಾದ ಸಂದೇಶ ರವಾನಿಸಲಾಗಿದೆ' ಎಂದರು.

ಸಾಮಾಜಿಕ ನ್ಯಾಯ, ಕೃಷಿ, ಮೂಲಸೌಕರ್ಯ, ಶಿಕ್ಷಣ ಮತ್ತು ಕೈಗಾರಿಕೆಗಳಂತಹ ವಿವಿಧ ಕ್ಷೇತ್ರಗಳಲ್ಲಿ ಸರ್ಕಾರದ ಸಾಧನೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಮಾವೋವಾದಿಗಳ ವಿರುದ್ಧದ ಕ್ರಮವನ್ನೂ ಶ್ಲಾಘಿಸಿದರು. ಅವರ ಭಾಷಣವು, 'ಸೋಮನಾಥ ದೇವಾಲಯದ ಮೇಲಿನ ದಾಳಿಯ ನಂತರದ ಸಾವಿರ ವರ್ಷಗಳ ಪಯಣ', ಸ್ವಾತಂತ್ರ್ಯದ ನಂತರದ ನಿರ್ಲಕ್ಷ್ಯ ಸೇರಿದಂತೆ ಆಡಳಿತಾರೂಢ ಬಿಜೆಪಿಯ ನೆಚ್ಚಿನ ವಿಷಯಗಳ ಬಗ್ಗೆಯೂ ಉಲ್ಲೇಖಗಳನ್ನು ಹೊಂದಿತ್ತು.

ಕೃತಕ ಬುದ್ಧಿಮತ್ತೆಯ ದುರುಪಯೋಗದಿಂದ ಉಂಟಾಗುವ ಅಪಾಯಗಳ ಬಗ್ಗೆಯೂ ರಾಷ್ಟ್ರಪತಿ ಎಚ್ಚರಿಕೆ ನೀಡಿದರು. 'ಡೀಪ್ ಫೇಕ್, ತಪ್ಪು ಮಾಹಿತಿ ಮತ್ತು ನಕಲಿ ವಿಷಯಗಳು ಪ್ರಜಾಪ್ರಭುತ್ವ, ಸಾಮಾಜಿಕ ಸಾಮರಸ್ಯ ಮತ್ತು ಸಾರ್ವಜನಿಕ ನಂಬಿಕೆಗೆ ಗಮನಾರ್ಹ ಬೆದರಿಕೆಯಾಗುತ್ತಿವೆ ಮತ್ತು ಈ ಗಂಭೀರ ವಿಷಯದ ಬಗ್ಗೆ ಸಂಸದರೆಲ್ಲರೂ ಚರ್ಚಿಸುವುದು ಅತ್ಯಗತ್ಯ' ಎಂದು ಹೇಳಿದರು.

'ವಿಕಸಿತ ಭಾರತದ ಗುರಿ ಯಾವುದೇ ಒಂದು ಸರ್ಕಾರ ಅಥವಾ ಒಂದು ಪೀಳಿಗೆಗೆ ಸೀಮಿತವಾಗಿಲ್ಲ' ಎಂದು ಸ್ಪಷ್ಟಪಡಿಸಿದರು.

### 'ಸಂವೇದನೆಯಿಂದ ಸರ್ಕಾರ ಕೆಲಸ'

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಜಾತಿ ತಾರತಮ್ಯ ತಡೆಯಲು ಯುಜಿಸಿ ರೂಪಿಸಿರುವ ನಿಯಮಗಳ ಬಗ್ಗೆ ದೇಶದ ಹಲವಾರು ಭಾಗಗಳಲ್ಲಿ ಅಸಮಾಧಾನ ವ್ಯಕ್ತವಾಗಿರುವ ನಡುವೆಯೇ, 'ನನ್ನ ಸರ್ಕಾರವು ದಲಿತರು, ಹಿಂದುಳಿದ ವರ್ಗಗಳು ಮತ್ತು ಬುಡಕಟ್ಟು ಸಮುದಾಯಗಳು ಸೇರಿದಂತೆ ಎಲ್ಲರ ವಿಷಯದಲ್ಲಿ ಸಂಪೂರ್ಣ ಸಂವೇದನೆಯೊಂದಿಗೆ ಕೆಲಸ ಮಾಡುತ್ತಿದೆ' ಎಂದು ದ್ರೌಪದಿ ಮುರ್ಮು ಹೇಳಿದರು.

ಯುಜಿಸಿ ವಿಷಯವನ್ನು ನೇರವಾಗಿ ಉಲ್ಲೇಖಿಸದ ಅವರು, 'ಸಬ್ಕಾ ಸಾಥ್, ಸಬ್ಕಾ ವಿಕಾಸ್' ಎಂಬ ದೃಷ್ಟಿಕೋನವು ಎಲ್ಲ ನಾಗರಿಕರ ಜೀವನದಲ್ಲಿ ಸಕಾರಾತ್ಮಕ ಬದಲಾವಣೆ ತರುತ್ತಿದೆ ಎಂದು ಹೇಳಿದರು.

### ನರೇಗಾ ಮರುಜಾರಿಗೆ ವಿಪಕ್ಷ ಗದ್ದಲ

ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆ (ಮನರೇಗಾ) ಮರುಸ್ಥಾಪನೆಗೆ ಒತ್ತಾಯಿಸಿ ವಿಪಕ್ಷಗಳ ಸಂಸದರು ಪ್ರತಿಭಟಿಸಿದರು.

ರಾಷ್ಟ್ರಪತಿಯವರು ತಮ್ಮ ಭಾಷಣ ಆರಂಭಿಸಲು ಎದ್ದು ನಿಂತ ತಕ್ಷಣ, 'ಮನರೇಗಾ ಮರು ಜಾರಿ ಮಾಡಿ' ಎಂದು ಒತ್ತಾಯಿಸಿ ಸಂಸದರು ಘೋಷಣೆಗಳನ್ನು ಕೂಗಿದರು. ಆದರೆ, ಒಂದೇ ನಿಮಿಷದಲ್ಲಿ ಈ ಪ್ರತಿಭಟನೆ ಅಂತ್ಯವಾಯಿತು. ಮುರ್ಮು ಅವರು ಕೇಂದ್ರ ಸರ್ಕಾರ ಇತ್ತೀಚೆಗೆ ಜಾರಿಗೊಳಿಸಿರುವ ಹೊಸ ಕಾಯ್ದೆ 'ವಿಬಿ–ಜಿ ರಾಮ್ ಜಿ' ಕಾಯ್ದೆ ಬಗ್ಗೆ ಪ್ರಸ್ತಾಪಿಸಿದಾಗ ವಿರೋಧ ಪಕ್ಷಗಳ ಸಂಸದರು ಗದ್ದಲ ಎಬ್ಬಿಸಿದರು.

ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ (ರಾಜ್ಯಸಭೆ) ಮತ್ತು ರಾಹುಲ್ ಗಾಂಧಿ (ಲೋಕಸಭೆ) ಸಹ ಪ್ರತಿಭಟನೆಯಲ್ಲಿ ಸೇರಿಕೊಂಡರು.

prajavani.net prajavani | ಗುರುವಾರ, ಜನವರಿ 29, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 29 | ಪುಟ 18 | www.prajavani.net



**‘ಗಮಿರಾ’**
ಪಶ್ಚಿಮ ಬಂಗಾಳದ ಗ್ರಾಮ-ವೊಂದರಲ್ಲಿ ಕಲಾವಿದರೊಬ್ಬರು ವೇಷಭೂಷಣದೊಂದಿಗೆ ಸಾಂಪ್ರದಾಯಿಕ ‘ಗಮಿರಾ’ ಜಾನಪದ ನೃತ್ಯ ಪ್ರದರ್ಶಿಸಿದರು


# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ




ಸೆನ್ಸೆಕ್ಸ್ 82,344 | ನಿಫ್ಟಿ 25,342 | $/₹ 91.99 | ಚಿನ್ನ (Std. 10g) ₹1,70,150 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹3,86,300 (ಬೆಂಗಳೂರು)

# ಅಜಿತ್ ಪವಾರ್ ದುರ್ಮರಣ

## ವಿಮಾನ ಪತನ • ಮಹಾರಾಷ್ಟ್ರ ಡಿಸಿಎಂ ಸೇರಿ ಐವರ ಸಾವು • ಚುನಾವಣಾ ಪ್ರಚಾರಕ್ಕೆ ತೆರಳುವಾಗ ಘಟನೆ

**ಪುಣೆ (ಪಿಟಿಐ):** ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ, ಎನ್‌ಸಿಪಿ ಮುಖ್ಯಸ್ಥ ಅಜಿತ್ ಪವಾರ್ (66) ಮತ್ತು ಇತರ ನಾಲ್ವರು ಪ್ರಯಾಣಿಸುತ್ತಿದ್ದ ಲಘು ವಿಮಾನ ಬುಧವಾರ ಬೆಳಿಗ್ಗೆ ಪುಣೆ ಜಿಲ್ಲೆಯ ಬಾರಾಮತಿ ವಿಮಾನ ನಿಲ್ದಾಣದಲ್ಲಿ ಪತನಗೊಂಡಿದ್ದು, ವಿಮಾನದಲ್ಲಿದ್ದ ಎಲ್ಲರೂ ಮೃತಪಟ್ಟಿದ್ದಾರೆ.

ದೆಹಲಿ ಮೂಲದ ವಿಎಸ್‌ಆರ್ ವೆಂಚರ್ಸ್‌ನ ‘ಲಿಯರ್‌ಜೆಟ್–45’ ಅಪಘಾತಕ್ಕೀಡಾದ ವಿಮಾನ. ಸಿಬ್ಬಂದಿ ಸೇರಿದಂತೆ ಒಟ್ಟು ಐವರು ವಿಮಾನದಲ್ಲಿದ್ದರು ಎಂದು ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (ಡಿಜಿಸಿಎ) ಮಾಹಿತಿ ನೀಡಿದೆ.

ದುರಂತದಲ್ಲಿ ಪವಾರ್ ಅವರ ವೈಯಕ್ತಿಕ ಭದ್ರತಾ ಅಧಿಕಾರಿ (ಪಿಎಸ್‌ಒ) ವಿದೀಪ್ ಜಾಧವ್, ವಿಮಾನ ಸಹಾಯಕಿ ಪಿಂಕಿ ಮಾಲಿ, ಪೈಲಟ್ ಕ್ಯಾಪ್ಟನ್ ಸುಮಿತ್ ಕಪೂರ್, ಸಹ ಪೈಲಟ್ ಕ್ಯಾಪ್ಟನ್ ಶಾಂಭವಿ ಪಾಠಕ್ ಮೃತಪಟ್ಟಿದ್ದಾರೆ. ಸುಮಿತ್ ಅವರು 15,000 ಗಂಟೆಗಳ ಹಾರಾಟದ ಅನುಭವ ಹೊಂದಿದ್ದರೆ, ಶಾಂಭವಿ ಅವರು 1,500 ಗಂಟೆಗಳ ಹಾರಾಟದ ಅನುಭವ ಹೊಂದಿದ್ದರು.

**ಚುನಾವಣಾ ಪ್ರಚಾರಕ್ಕೆ ಹೊರಟಿದ್ದರು:** ಮಹಾರಾಷ್ಟ್ರದಲ್ಲಿ ಫೆಬ್ರುವರಿ 5ರಂದು ನಡೆಯಲಿರುವ ಜಿಲ್ಲಾ ಪರಿಷತ್ ಚುನಾವಣೆಯ ಪ್ರಚಾರದ ಭಾಗವಾಗಿ, ಕೆಲ ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸಲು ಅಜಿತ್ ಪವಾರ್ ಮುಂಬೈನಿಂದ ಬಾರಾಮತಿಗೆ ಪ್ರಯಾಣಿಸುತ್ತಿದ್ದಾಗ ಈ ದುರ್ಘಟನೆ ನಡೆದಿದೆ. ವಿಮಾನ ರೇಡಾರ್ ಪ್ರಕಾರ, ವಿಮಾನವು ಬೆಳಿಗ್ಗೆ 8.10ಕ್ಕೆ ಮುಂಬೈನಿಂದ ಹೊರಟಿತ್ತು. 8.50ಕ್ಕೆ ವಿಮಾನ ಪತನಗೊಂಡಿದೆ. ವಿಮಾನದ ಬಹುತೇಕ ಭಾಗ ಸುಟ್ಟು ಕರಕಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

**ಅಪ್ಪಳಿಸಿದ ಕೂಡಲೇ ಸ್ಫೋಟ:** ‘ವಿಮಾನವು ಗಾಳಿಯಲ್ಲಿ ಅಸ್ಥಿರವಾಗಿ ಕಾಣಿಸಿಕೊಂಡಿತು. ಅದು ನೆಲಕ್ಕೆ ಅಪ್ಪಳಿಸಿದ ಕೂಡಲೇ ಸ್ಫೋಟಗೊಂಡಿತು’ ಎಂದು ಪ್ರತ್ಯಕ್ಷದರ್ಶಿಯೊಬ್ಬರು ಪ್ರತಿಕ್ರಿಯಿಸಿದ್ದಾರೆ. ‘ವಿಮಾನ ಪತನದ ಬೆನ್ನಲ್ಲೇ ಭಾರಿ ಪ್ರಮಾಣದಲ್ಲಿ ಬೆಂಕಿ, ಹೊಗೆ ಕಾಣಿಸಿಕೊಂಡಿತು. ಈ ವೇಳೆ ಸತತವಾಗಿ ನಾಲ್ಕರಿಂದ ಐದು ಬಾರಿ ಸ್ಫೋಟಗಳೂ ಸಂಭವಿಸಿದವು’ ಎಂದು ಮತ್ತೊಬ್ಬ ಪ್ರತ್ಯಕ್ಷದರ್ಶಿ ಹೇಳಿದ್ದಾರೆ. ‘ಮೃತದೇಹಗಳನ್ನು ಬಾರಾಮತಿ ಜಿಲ್ಲಾ ಆಸ್ಪತ್ರೆಗೆ ರವಾನಿಸಲಾಗಿದೆ’ ಎಂದು ಪೊಲೀಸ್ ವರಿಷ್ಠಾಧಿಕಾರಿ ಸಂದೀಪ್ ಸಿಂಗ್ ಗಿಲ್ ತಿಳಿಸಿದ್ದಾರೆ.

▶ 9

> **‘ಅಜಿತ್ ದಾದಾ’ ಅವರು ತಳಮಟ್ಟದಲ್ಲಿ ಬಲವಾದ ಸಂಪರ್ಕ ಹೊಂದಿದ್ದ ಜನ ನಾಯಕ. ಗ್ರಾಮೀಣ ಪ್ರದೇಶದ ಏಳಿಗೆಗೆ ಶ್ರಮಿಸಿದವರು. ಮಹಾರಾಷ್ಟ್ರ ಮತ್ತು ಭಾರತದ ಅಭಿವೃದ್ಧಿಗೆ ದೊಡ್ಡ ಕೊಡುಗೆ ನೀಡಿದ್ದಾರೆ**
> **ನರೇಂದ್ರ ಮೋದಿ,** ಪ್ರಧಾನಿ





1959 - 2026

ಬಾರಾಮತಿಯಲ್ಲಿ ಪತನಗೊಂಡು, ಸುಟ್ಟು ಕರಕಲಾದ ಬಳಿಕ ಉಳಿದಿರುವ ವಿಮಾನದ ಅವಶೇಷ —ಪಿಟಿಐ ಚಿತ್ರ

### ಅಸ್ಪಷ್ಟ ಗೋಚರತೆ: ಪತನಕ್ಕೆ ಕಾರಣ

**ಮುಂಬೈ:** ಅಸ್ಪಷ್ಟ ಗೋಚರತೆಯ ಕಾರಣ ವಿಮಾನ ನಿಲ್ದಾಣದ ಮೇಲೆ ಒಮ್ಮೆ ‘ಗೋ–ಅರೌಂಡ್’ (ಸುತ್ತು ಹಾಕಿದ) ಮಾಡಿದ ಬಳಿಕ ವಿಮಾನಕ್ಕೆ ಇಳಿಯಲು ಅನುಮತಿ ನೀಡಲಾಯಿತು. ಆದರೆ ಅನುಮತಿಯ ಸಂದೇಶ ಪಡೆದ ಬಗ್ಗೆ ಪೈಲಟ್‌ನಿಂದ ಅಂತಿಮವಾಗಿ ಯಾವುದೇ ‘ರೀಡ್‌ಬ್ಯಾಕ್’ (ದೃಢೀಕರಣ) ಬರಲಿಲ್ಲ, ಕೆಲ ಕ್ಷಣಗಳಲ್ಲಿಯೇ ರನ್‌ವೇ ಅಂಚಿನಲ್ಲಿ ಬೆಂಕಿ ಕಾಣಿಸಿಕೊಂಡಿತು ಎಂದು ವಿಮಾನಯಾನ ಸಚಿವಾಲಯ ತಿಳಿಸಿದೆ.

> **ಪ್ರಾಥಮಿಕ ಮಾಹಿತಿ ಪ್ರಕಾರ ವಿಮಾನ ಪತನಕ್ಕೆ ಅಸ್ಪಷ್ಟ ಗೋಚರತೆ ಕಾರಣ. ಅಪಘಾತದ ಕುರಿತು ಡಿಜಿಸಿಎ ಮತ್ತು ವಿಮಾನ ಅಪಘಾತ ತನಿಖಾ ಬ್ಯೂರೊ (ಎಎಐಬಿ) ತಂಡಗಳು ತನಿಖೆ ಆರಂಭಿಸಿವೆ**
> **ಕೆ. ರಾಮ್ ಮೋಹನ್ ನಾಯ್ಡು,** ಕೇಂದ್ರ ವಿಮಾನಯಾನ ಸಚಿವ

▶ 9

## ರಾಜ್ಯಪಾಲರ ದೂರವಾಣಿ ಕದ್ದಾಲಿಕೆ: ಬಿಜೆಪಿ ಆರೋಪ

# ಕಲಾಪದಲ್ಲಿ ಭಾರಿ ಗದ್ದಲ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಜಂಟಿ ಅಧಿವೇಶನ ಉದ್ದೇಶಿಸಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರ ಅಪೂರ್ಣ ಭಾಷಣ ಹಾಗೂ ಅವರು ಸದನದಿಂದ ತೆರಳುವಾಗ ಕಾಂಗ್ರೆಸ್ ಸದಸ್ಯರು ನಡೆಸಿದ ಗದ್ದಲದ ವಿಷಯ ಬುಧವಾರವೂ ಉಭಯ ಸದನಗಳಲ್ಲಿ ಕಾವೇರಿದ ಚರ್ಚೆಗೆ ಕಾರಣವಾಯಿತು.

ಲೋಕಭವನ ಮತ್ತು ಆರ್‌ಎಸ್‌ಎಸ್ ಕಚೇರಿಗಳ ದೂರವಾಣಿ ಕದ್ದಾಲಿಕೆ ಮಾಡಲಾಗುತ್ತಿದೆ ಎಂದು ಬಿಜೆಪಿ ಸದಸ್ಯರು ವಿಧಾನಸಭೆಯಲ್ಲಿ ಆರೋಪಿಸಿದರು. ರಾಜ್ಯಪಾಲರ ನಡವಳಿಕೆ ಪರ ಮತ್ತು ವಿರುದ್ಧವಾಗಿ ಎರಡು ದಿನ ಉಭಯ ಸದನಗಳಲ್ಲೂ ವಾಗ್ವಾದ ನಡೆಯಿತು. ಈ ಬಗ್ಗೆ ತಮ್ಮ ಸದನಗಳಲ್ಲಿ ಪ್ರತ್ಯೇಕವಾಗಿ ರೂಲಿಂಗ್ ನೀಡಿದ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮತ್ತು ಸಭಾಧ್ಯಕ್ಷ ಯು.ಟಿ.ಖಾದರ್ ಅವರು, ‘ರಾಜ್ಯಪಾಲರ ಹೆಸರು ಬಳಸಿ ಚರ್ಚೆ ನಡೆಸುವಂತಿಲ್ಲ’ ಎಂದು ತಾಕೀತು ಮಾಡಿದರು.

ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಕಾಂಗ್ರೆಸ್‌ನ ಎ.ಎಸ್.ಪೊನ್ನಣ್ಣ ಮತ್ತು ಪ್ರದೀಪ್ ಈಶ್ವರ್ ಅವರು ರಾಜ್ಯಪಾಲರನ್ನು ನಿಂದಿಸುವುದಕ್ಕೆ ಚರ್ಚೆಯನ್ನು ಸೀಮಿತವಾಗಿ ಮಾತನಾಡಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡರು. ರಾಜ್ಯಪಾಲರು ಸಂವಿಧಾನಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ ಎಂದು ಕಾಂಗ್ರೆಸ್ ಸದಸ್ಯರು ಪ್ರತ್ಯಾರೋಪ ಮಾಡಿದರು.

▶ 4



ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ನಡವಳಿಕೆಯ ನಿಯಮಗಳ ಪುಸ್ತಕ ಹರಿದು ಹಾಕಿದ ಬಳಿಕ ಕಾಂಗ್ರೆಸ್ ಸದಸ್ಯರು ವಿಪಕ್ಷ ನಾಯಕರನ್ನು ಅಮಾನತುಗೊಳಿಸಬೇಕೆಂದು ಪಟ್ಟು ಹಿಡಿದರು ಪ್ರಜಾವಾಣಿ ಚಿತ್ರ

### ನಿಯಮ ಪುಸ್ತಕ ಹರಿದ ವಿಪಕ್ಷ ನಾಯಕ

ಬುಧವಾರ ಗದ್ದಲದಿಂದಲೇ ಕೂಡಿದ್ದ ವಿಧಾನ ಪರಿಷತ್ತಿನ ಕಲಾಪವು, ಸಂಜೆಯ ವೇಳೆಗೆ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮದ ಪುಸ್ತಕ ಹರಿದು-ಹಾಕಿದ್ದಕ್ಕೆ ಸಾಕ್ಷಿಯಾಯಿತು.

ಕಲಾಪ ಆರಂಭವಾದಾಗ ವಿರೋಧ ಪಕ್ಷಗಳ ಸದಸ್ಯರು, ‘ರಾಜ್ಯಪಾಲರ ಭಾಷಣದ ಕುರಿತಾಗಿ ಸರ್ಕಾರ ವ್ಯತಿರಿಕ್ತ ಹೇಳಿಕೆ ನೀಡಿದೆ. ಸರ್ಕಾರ ತಮ್ಮ ನಿಲುವು ತಿಳಿಸಬೇಕು’ ಎಂದು ಧರಣಿ ಆರಂಭಿಸಿದರು. ಸಭಾನಾಯಕ ಎನ್.ಎಸ್.ಬೋಸರಾಜು, ‘ರಾಷ್ಟ್ರಗೀತೆಗೆ ಅಗೌರವ ತೋರಿದ್ದನ್ನು ಖಂಡಿಸಿದ್ದೇವೆ. ಭಾಷಣವನ್ನು ಒಪ್ಪಿ ವಂದನಾ ನಿರ್ಣಯದ ಮೇಲೆ ಚರ್ಚಿಸುತ್ತಿದ್ದೇವೆ’ ಎಂದರು. ಈ ವೇಳೆ ಮಧ್ಯಪ್ರವೇಶಿಸಿದ ಸಭಾಪತಿ ಹೊರಟ್ಟಿ, ‘ಚರ್ಚೆಗೆ ರಾಜ್ಯಪಾಲರ ಹೆಸರು ಬಳಸಿಕೊಳ್ಳುವಂತಿಲ್ಲ’ ಎಂದು ರೂಲಿಂಗ್ ನೀಡಿದರು. ವಿರೋಧ ಪಕ್ಷಗಳು ಮತ್ತು ಆಡಳಿತ ಪಕ್ಷದ ಸದಸ್ಯರ ಜಟಾಪಟಿ ಮಧ್ಯೆ, ನಾರಾಯಣಸ್ವಾಮಿ ಅವರು ಸದನದ ನಿಯಮದ ಪುಸ್ತಕವನ್ನು ಹರಿದುಹಾಕಿದರು.

> **ಅಧಿವೇಶನ 2 ದಿನ ವಿಸ್ತರಣೆ?**
> ಇದೇ 31ರವರೆಗೆ ನಿಗದಿಯಾಗಿದ್ದ ವಿಧಾನ ಮಂಡಲ ಅಧಿವೇಶನ ಫೆ. 2 ಮತ್ತು 3ರಂದು ನಡೆಯುವ ಸಾಧ್ಯತೆ ಇದೆ.

## ಗ್ರಾಮ ಪಂಚಾಯಿತಿ ಹಾಗೂ ನಗರ ಸ್ಥಳೀಯ ಸಂಸ್ಥೆ ಚುನಾವಣೆ

# ಮೀಸಲು ನಿಗದಿಗೆ ಅಂತಿಮ ಗಡುವು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ ಚುನಾವಣೆ ನಡೆಯಬೇಕಿರುವ ಗ್ರಾಮ ಪಂಚಾಯಿತಿಗಳ ಸದಸ್ಯ ಸ್ಥಾನಗಳಿಗೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ವಾರ್ಡ್‌ವಾರು ಮೀಸಲಾತಿ ನಿಗದಿಪಡಿಸುವ ಸಂಬಂಧ ಉತ್ತರಿಸಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಅಂತಿಮ ಗಡುವು ನೀಡಿದೆ.

‘ಚುನಾವಣೆಗಾಗಿ ಮೀಸಲಾತಿ ಅಧಿಸೂಚನೆ ಹೊರಡಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಕೋರಿ ರಾಜ್ಯ ಚುನಾವಣಾ ಆಯೋಗ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಚುನಾವಣಾ ಆಯೋಗದ ಪರ ಪದಾಂಕಿತ ಹಿರಿಯ ವಕೀಲ ಕೆ.ಎನ್.ಫಣೀಂದ್ರ, ‘ರಾಜ್ಯದಲ್ಲಿನ 187 ನಗರ ಸ್ಥಳೀಯ ಸಂಸ್ಥೆಗಳ ಅವಧಿ ಈಗಾಗಲೇ ಪೂರ್ಣಗೊಂಡಿದೆ. ಬಹುತೇಕ ಗ್ರಾಮ ಪಂಚಾಯಿತಿಗಳ ಅವಧಿ ಮಾಸಾಂತ್ಯದಲ್ಲಿ ಪೂರ್ಣಗೊಳ್ಳಲಿದೆ. ಸಕಾಲದಲ್ಲಿ ಚುನಾವಣೆ ನಡೆಸುವುದಕ್ಕಾಗಿ, ಮೀಸಲಾತಿ ಅಧಿಸೂಚನೆ ಹೊರಡಿಸುವಂತೆ ರಾಜ್ಯ ಸರ್ಕಾರಕ್ಕೆ ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ’ ಎಂದು ಆಕ್ಷೇಪಿಸಿದರು. ‘ರಾಜ್ಯದಲ್ಲಿ ಸುಮಾರು 6 ಸಾವಿರ ಗ್ರಾಮ ಪಂಚಾಯಿತಿ ಹಾಗೂ 187 ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಬೇಕಿದೆ. ಅವಧಿ ಪೂರ್ಣಗೊಂಡಿರುವ ಎಲ್ಲ ನಗರ ಸ್ಥಳೀಯ ಸಂಸ್ಥೆಗಳಿಗೆ ಈಗಾಗಲೇ ಆಡಳಿತಾಧಿಕಾರಿ ನೇಮಕ ಮಾಡಲಾಗಿದೆ’ ಎಂದು ನ್ಯಾಯಪೀಠಕ್ಕೆ ವಿವರಿಸಿದರು.

ಇದಕ್ಕೆ ಪ್ರತಿಯಾಗಿ ರಾಜ್ಯ ಸರ್ಕಾರದ ಪರ ವಕೀಲರು, ‘ಮೀಸಲಾತಿ ನಿಗದಿಪಡಿಸುವ ಸಂಬಂಧ ಎಲ್ಲ ಜಿಲ್ಲಾಧಿಕಾರಿಗಳಿಗೆ ಈಗಾಗಲೇ ನಿರ್ದೇಶನ ನೀಡಲಾಗಿದೆ. ಅರ್ಜಿ ವಿಚಾರಣೆಯನ್ನು ಅಲ್ಪಾವಧಿಗೆ ಮುಂದೂಡಬೇಕು’ ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಅರ್ಜಿಗೆ ಸಂಬಂಧಿಸಿದಂತೆ ಉತ್ತರಿಸಲು ಅಂತಿಮ ಕಾಲಾವಕಾಶ ನೀಡಿ ವಿಚಾರಣೆಯನ್ನು ಫೆಬ್ರುವರಿ 5ಕ್ಕೆ ಮುಂದೂಡಿತು.

**ಮನವಿ ಏನು?:** ‘ರಾಜ್ಯದ ಗ್ರಾಮ ಪಂಚಾಯಿತಿಗಳ ಚುನಾಯಿತ ಅವಧಿ ಈ ಮಾಸಾಂತ್ಯಕ್ಕೆ ಮುಕ್ತಾಯವಾಗಲಿದೆ. ಜತೆಗೆ, ಅವಧಿ ಪೂರ್ಣಗೊಂಡಿರುವ 187 ನಗರ ಸ್ಥಳೀಯ ಸಂಸ್ಥೆಗಳಿಗೂ (47 ನಗರಸಭೆ, 91 ಪುರಸಭೆ, 49 ಪಟ್ಟಣ ಪಂಚಾಯಿತಿ) ಚುನಾವಣೆ ನಡೆಸಬೇಕಿದೆ. ಮುಂದಿನ ಅವಧಿಗೆ ಹೊಸದಾಗಿ ಚುನಾವಣೆ ನಡೆಸಬೇಕಾದರೆ ಮೀಸಲಾತಿ ನಿಗದಿಯಾಗಬೇಕಿದೆ. ಮೀಸಲಾತಿ ಅಧಿಸೂಚನೆ ಹೊರಡಿಸುವಂತೆ ರಾಜ್ಯ ಸರ್ಕಾರಕ್ಕೆ ಹಲವು ಬಾರಿ ಮನವಿ ಮಾಡಿದರೂ, ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಆದ್ದರಿಂದ, ಸರ್ಕಾರಕ್ಕೆ ಈ ನಿಟ್ಟಿನಲ್ಲಿ ಸೂಕ್ತ ನಿರ್ದೇಶನ ನೀಡಬೇಕು’ ಎಂದು ಚುನಾವಣಾ ಆಯೋಗ ಮನವಿ ಮಾಡಿದೆ.

> **ಮೀಸಲಾತಿ ನಿಗದಿಪಡಿಸುವುದು ರಾಜ್ಯ ಸರ್ಕಾರದ ಜವಾಬ್ದಾರಿ. ಚುನಾವಣೆ ನಡೆಸುವುದು ರಾಜ್ಯ ಚುನಾವಣಾ ಆಯೋಗದ ಹೊಣೆಗಾರಿಕೆ. ಮೀಸಲಾತಿ ಅಂತಿಮಗೊಳ್ಳುವ ತನಕ ಚುನಾವಣಾ ದಿನಾಂಕ ಘೋಷಿಸಲು ಸಾಧ್ಯವಿಲ್ಲ.**
> **ಕೆ.ಎನ್.ಫಣೀಂದ್ರ,** ಪದಾಂಕಿತ ಹಿರಿಯ ವಕೀಲ

# ಮುಡಾ ಪ್ರಕರಣ: ಸಿದ್ದರಾಮಯ್ಯ ಸದ್ಯ ನಿರಾಳ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ (ಮುಡಾ) ಅಕ್ರಮವಾಗಿ ನಿವೇಶನ ಪಡೆದಿದ್ದಾರೆಂದು ಆರೋಪಿಸಲಾದ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಪತ್ನಿ ಬಿ.ಎಂ.ಪಾರ್ವತಿ ಸೇರಿದಂತೆ ನಾಲ್ವರ ವಿರುದ್ಧ ಲೋಕಾಯುಕ್ತ ಪೊಲೀಸರು ಸಲ್ಲಿಸಿದ್ದ ‘ಬಿ’ ರಿಪೋರ್ಟ್ ಅನ್ನು ಜನ ಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಮಾನ್ಯ ಮಾಡಿದೆ. ಹೀಗಾಗಿ, ಈ ಪ್ರಕರಣದಲ್ಲಿ ಸಿದ್ದರಾಮಯ್ಯ ಸದ್ಯಕ್ಕೆ ನಿರಾಳರಾಗಿದ್ದಾರೆ.

‘ಬಿ’ ರಿಪೋರ್ಟ್ ಪ್ರಶ್ನಿಸಿ ದೂರುದಾರ ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ಪ್ರತಿಭಟನಾ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ತಿರಸ್ಕರಿಸಿ, ಆದೇಶಿಸಿದ್ದಾರೆ.

‘ಸಿದ್ದರಾಮಯ್ಯ, ಬಿ.ಎಂ.ಪಾರ್ವತಿ, ಅವರ ಭಾವಮೈದುನ ಮಲ್ಲಿಕಾರ್ಜುನ ಸ್ವಾಮಿ ಮತ್ತು ಆಕ್ಷೇಪಾರ್ಹ ಜಮೀನಿನ ಮಾಲೀಕ ಜೆ.ದೇವರಾಜ್ ವಿರುದ್ಧ ಲೋಕಾಯುಕ್ತ ಪೊಲೀಸರು ಸಲ್ಲಿಸಿರುವ ‘ಬಿ’ ಅಂತಿಮ ವರದಿಯನ್ನು ಒಪ್ಪಿಕೊಳ್ಳಲಾಗಿದೆ.

▶ 4



ಸಿದ್ದರಾಮಯ್ಯ

**ಮುಖ್ಯಾಂಶಗಳು**
- ‘ಬಿ’ ರಿಪೋರ್ಟ್ ಮಾನ್ಯ ಮಾಡಿದ ನ್ಯಾಯಾಲಯ
- ಪ್ರತಿಭಟನಾ ಅರ್ಜಿ ತಿರಸ್ಕಾರ

# ರಾಮಮೂರ್ತಿಗೆ ‘ಸುಪ್ರೀಂ’ನಲ್ಲಿ ಹಿನ್ನಡೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಚುನಾವಣಾ ತಕರಾರು ಅರ್ಜಿಗೆ ಸಂಬಂಧಿಸಿ ದಂತೆ ಹೈಕೋರ್ಟ್ ಆದೇಶ ಪ್ರಶ್ನಿಸಿ ಜಯನಗರ ಬಿಜೆಪಿ ಶಾಸಕ ಸಿ.ಕೆ.ರಾಮಮೂರ್ತಿ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ಬುಧವಾರ ವಜಾಗೊಳಿಸಿದೆ.

ಪ್ರಕರಣದ ವಿಸ್ತೃತ ವಿಚಾರಣೆಗೆ ತಡೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿಗಳಾದ ವಿಕ್ರಮ್‌ನಾಥ್, ಸಂದೀಪ್ ಮೆಹ್ತಾ ಹಾಗೂ ಎನ್.ವಿ. ಅಂಜಾರಿಯಾ ಪೀಠವು ವಜಾಗೊಳಿಸಿದೆ.

ಜಯನಗರ ವಿಧಾನಸಭೆ ಕ್ಷೇತ್ರದ ಸಾರ್ವತ್ರಿಕ ಚುನಾವಣೆಯ 827 ಅಂಚೆ ಮತಗಳನ್ನು (ಪೋಸ್ಟಲ್ ಬ್ಯಾಲೆಟ್) ಮರು ಎಣಿಕೆ ಮಾಡುವಂತೆ ಪರಾಜಿತ ಅಭ್ಯರ್ಥಿ ಸೌಮ್ಯಾ ರೆಡ್ಡಿ ಅವರು ಹೈಕೋರ್ಟ್‌ಗೆ ಚುನಾವಣಾ ತಕರಾರು ಅರ್ಜಿ ಸಲ್ಲಿಸಿದ್ದರು.

▶ 3



ಸಿ.ಕೆ. ರಾಮಮೂರ್ತಿ

**ಚಿನಕುರುಳಿ** ಪ್ರಕಾಶ್ ಶೆಟ್ಟಿ



**ಹವಾಮಾನ ಮುನ್ಸೂಚನೆ:** ನಗರದಲ್ಲಿ ಮೋಡ ಕವಿದ ಹಾಗೂ ಬಿಸಿಲಿನ ವಾತಾವರಣ ಇರಲಿದೆ

# ‘ಇಂಟರ್ನ್‌ಶಿಪ್: ನಿಗಾ ವಹಿಸಲು ವಿಚಕ್ಷಣಾ ದಳ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಎಂಜಿನಿಯರಿಂಗ್ ವಿದ್ಯಾರ್ಥಿಗಳ ಇಂಟರ್ನ್‌ಶಿಪ್ ಮೇಲೆ ನಿಗಾ ಇರಿಸಲು ಪ್ರತ್ಯೇಕ ವಿಚಕ್ಷಣಾ ದಳ ನೇಮಕ ಮಾಡುತ್ತೇವೆ’ ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ (ವಿಟಿಯು) ಕುಲಪತಿ ಎಸ್. ವಿದ್ಯಾಶಂಕರ್ ಹೇಳಿದರು.

ನಗರದ ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಬುಧವಾರ ಆಯೋಜಿಸಿದ್ದ, ‘ಕಾಲೇಜು ಇಂಟರ್ನ್‌ಶಿಪ್ ಸಂಯೋಜಕರಿಗೆ ಇಂಟರ್ನ್‌ಶಿಪ್ ಅನುಷ್ಠಾನ ಕಾರ್ಯಾಗಾರ’ದಲ್ಲಿ ಮಾತನಾಡಿದರು.

‘ಈ ಹಿಂದೆ ವಿದ್ಯಾರ್ಥಿಗಳು ಇಂಟರ್ನ್‌ಶಿಪ್‌ಗೆ ಹಾಜರಾಗದೆಯೇ ನಕಲಿ ಪ್ರಮಾಣಪತ್ರ ಸಲ್ಲಿಸುತ್ತಿರುವುದು ಮತ್ತು ಕೆಲವು ಕಂಪನಿಗಳು ಇಂಟರ್ನ್‌ಶಿಪ್ ಹೆಸರಿನಲ್ಲಿ ವಿದ್ಯಾರ್ಥಿಗಳಿಂದ ಹಣ ವಸೂಲಿ ಮಾಡುತ್ತಿರುವುದು ಪತ್ತೆಯಾಗಿತ್ತು. ಇವೆಲ್ಲಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ‘ಇಂಟರ್ನ್‌ಶಿಪ್ ಪೋರ್ಟಲ್’ ಆರಂಭಿಸಲಾಗಿತ್ತು. ಅದರ ಮುಂದುವರಿದ ಭಾಗವಾಗಿ ಇಂಟರ್ನ್‌ಶಿಪ್ ವಿಚಕ್ಷಣಾ ದಳ ಸ್ಥಾಪಿಸುತ್ತೇವೆ’ ಎಂದರು.

‘ಇಂಟರ್ನ್‌ಶಿಪ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡಿರುವ ಎಲ್ಲ ಕಂಪನಿಗಳಿಗೆ ವಿಚಕ್ಷಣಾ ದಳವು ಭೇಟಿ ನೀಡಿ, ಅಲ್ಲಿ ಅಗತ್ಯ ಮೂಲಸೌಕರ್ಯ ಲಭ್ಯವಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲಿದೆ. ಜತೆಗೆ ವಿದ್ಯಾರ್ಥಿಗಳು ಇಂಟರ್ನ್‌ಶಿಪ್‌ಗೆ ಹಾಜರಾಗುತ್ತಿದ್ದಾರೆಯೇ ಎಂಬುದನ್ನೂ ಪರಿಶೀಲಿಸಲಿದೆ. ಈ ಮೂಲಕ ಇಂಟರ್ನ್‌ಶಿಪ್ ಅನ್ನು ಪರಿಣಾಮಕಾರಿ ಆಗಿಸಲಿದ್ದೇವೆ’ ಎಂದು ಹೇಳಿದರು.

# ರೈತರ ಸಾಲಮನ್ನಾಕ್ಕೆ ಒತ್ತಾಯ

## ಕೇಂದ್ರ, ರಾಜ್ಯ ಸರ್ಕಾರದ ವಿರುದ್ಧ ರಾಜ್ಯ ರೈತ ಸಂಘ, ಹಸಿರು ಸೇನೆ ಆಕ್ರೋಶ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**
- ಕುಲಾಂತರಿ ಆಹಾರ ಪದಾರ್ಥ ನಿಷೇಧಿಸಲು ಆಗ್ರಹ
- ಕೃಷ್ಣಾ, ಮೇಕೆದಾಟು, ಮಹದಾಯಿ ಯೋಜನೆ ಕೈಗೆತ್ತಿಕೊಳ್ಳಲು ಮನವಿ

**ಬೆಂಗಳೂರು:** ಭೂಸುಧಾರಣಾ ಕಾಯ್ದೆ-2020ರ ತಿದ್ದುಪಡಿ ರದ್ದುಪಡಿಸುವುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ (ಕೋಡಿಹಳ್ಳಿ ಚಂದ್ರಶೇಖರ್ ಬಣ) ನೇತೃತ್ವದಲ್ಲಿ ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಯಿತು.

ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ಪ್ರತಿಭಟನಕಾರರು ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು.

ವಿದೇಶಗಳಿಂದ ಆಮದು ಆಗುವ ಕುಲಾಂತರಿ ಆಹಾರ ಪದಾರ್ಥಗಳನ್ನು ಕೇಂದ್ರ ಸರ್ಕಾರವು ನಿಷೇಧಿಸಬೇಕು. ಕೃಷ್ಣಾ, ಮೇಕೆದಾಟು, ಮಹದಾಯಿ ಯೋಜನೆಗಳನ್ನು ಶೀಘ್ರದಲ್ಲೇ ಕೈಗೆತ್ತಿಕೊಳ್ಳಬೇಕು. ತುಂಗಭದ್ರಾ ಜಲಾಶಯದ ಕ್ರಸ್ಟ್‌ಗೇಟ್‌ಗಳ ಬದಲಾವಣೆಯನ್ನು ಮುಂದಿನ ಮುಂಗಾರು ಮಳೆಗೂ ಮುಂಚೆ ಕಾರ್ಯಗತಗೊಳಿಸಬೇಕು. ಕೃಷಿ ಭೂಮಿಗೆ ಅಪಾಯ ತಂದಿರುವ ಭೂಸ್ವಾಧೀನ ಕಾಯ್ದೆ 2018-19ರ ತಿದ್ದುಪಡಿಯನ್ನು ವಾಪಸ್ ಪಡೆಯಬೇಕು. 2013ರ ಭೂಸ್ವಾಧೀನ ಕಾಯ್ದೆಯನ್ನೇ ಮುಂದುವರಿಸಬೇಕು ಎಂದು ಆಗ್ರಹಿಸಿದರು.



ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು —ಪ್ರಜಾವಾಣಿ ಚಿತ್ರ

ರೈತರಿಗೆ ಬೆಳೆ ವಿಮೆ ಪರಿಹಾರ ಸಿಗುತ್ತಿಲ್ಲ. ಪೂರ್ಣ ಪ್ರಮಾಣದಲ್ಲಿ ಪರಿಹಾರ ದೊರೆಯುವಂತೆ ನೋಡಿಕೊಳ್ಳಬೇಕು. ರೈತರಿಗೆ ಅನುಕೂಲ ಆಗುವಂತೆ ಬೆಳೆ ವಿಮೆ ನೀತಿಗೆ ತಿದ್ದುಪಡಿ ತರಬೇಕು ಎಂದು ರೈತರು ಆಗ್ರಹಿಸಿದರು.

ಬಗರ್‌ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ನೀಡಲು ಕಾನೂನಿನ ತೊಡಕು ಎದುರಾಗಿದೆ. ಶೀಘ್ರದಲ್ಲೇ ತಿದ್ದುಪಡಿ ತಂದು ಸಮಸ್ಯೆ ಬಗೆಹರಿಸಬೇಕು ಎಂದು ಕೋರಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು, ರೈತರ ಸಾಲವನ್ನು ಮನ್ನಾ ಮಾಡಬೇಕು. ಒಂದು ಎಕರೆಗೆ ಕನಿಷ್ಠ 10 ಲಕ್ಷ ಬೆಳೆ ಸಾಲ ನೀಡಬೇಕು. ಯಾವುದೇ ಬಡ್ಡಿ ವಿಧಿಸಬಾರದು ಎಂದು ಆಗ್ರಹಿಸಿದರು.

ಸೌರ ವಿದ್ಯುತ್ ಉತ್ಪಾದಿಸಲು ರೈತರಿಗೆ ಉತ್ತೇಜನ ನೀಡಬೇಕು ಎಂದು ಪ್ರತಿಭಟನಕಾರರು ಕೋರಿದರು.

# ಅನಧಿಕೃತ ಕಟ್ಟಡಗಳ ನಿಯಂತ್ರಣಕ್ಕೆ ಕಾರ್ಯಪಡೆ

## ಪೌರಕಾರ್ಮಿಕರಿಗೆ ಮುಖಚಹರೆ ಹಾಜರಾತಿ ವ್ಯವಸ್ಥೆ: ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಐದು ನಗರ ಪಾಲಿಕೆಗಳಲ್ಲಿ ರಸ್ತೆ ವಿಸ್ತರಣೆ ಹಾಗೂ ಅನಧಿಕೃತ ಕಟ್ಟಡಗಳ ನಿಯಂತ್ರಣಕ್ಕೆ ಪ್ರತ್ಯೇಕ ಕಾರ್ಯಪಡೆ (ಟಾಸ್ಕ್ ಫೋರ್ಸ್) ರಚಿಸಲು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚಿಸಿದರು.

ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಗಳ ಕಾಮಗಾರಿಗಳ ಅನುಷ್ಠಾನ ಸಂದರ್ಭದಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ಪರಿಹರಿಸಲು ಬುಧವಾರ ನಡೆದ ಸಮನ್ವಯ ಸಭೆಯಲ್ಲಿ ಅವರು ಮಾತನಾಡಿದರು.

ರಸ್ತೆ ವಿಸ್ತರಣೆ ಹಾಗೂ ಅನಧಿಕೃತ ಕಟ್ಟಡಗಳ ನಿರ್ಮಾಣವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಬೇಕು. ಈ ನಿಟ್ಟಿನಲ್ಲಿ ಆಯಾ ನಗರ ಪಾಲಿಕೆಗಳಲ್ಲಿ ಕೂಡಲೇ ಕಾರ್ಯಪಡೆ ರಚಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಪೌರಕಾರ್ಮಿಕರಿಗೆ ಮುಖಚಹರೆ ಹಾಜರಾತಿ ವ್ಯವಸ್ಥೆಯನ್ನು ಜಾರಿಗೊಳಿಸಲಾಗುತ್ತಿದ್ದು, ಎಲ್ಲಾ ನಗರ ಪಾಲಿಕೆಗಳಲ್ಲಿಯೂ ಇದರ ಅನುಷ್ಠಾನಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಉತ್ತಮ ಪ್ರಗತಿ ಸಾಧಿಸಲಾಗಿದ್ದು, ಮುಂದಿನ ಎರಡು ವಾರಗಳೊಳಗೆ ಎಲ್ಲ ನಗರ ಪಾಲಿಕೆಗಳಲ್ಲಿಯೂ ಜಾರಿಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ನಗರದಲ್ಲಿ ರೈಲ್ವೆ ಇಲಾಖೆ ವತಿಯಿಂದ ಕೈಗೆತ್ತಿಕೊಂಡಿರುವ ಕಾಮಗಾರಿಗಳ ವಿವರ ಹಾಗೂ ಪ್ರಗತಿ ಪರಿಶೀಲನೆಗಾಗಿ ಸಮಗ್ರ ಪಟ್ಟಿ ಸಿದ್ಧಪಡಿಸಿ ವರದಿ ಸಲ್ಲಿಸಬೇಕು. ನಂತರ ಜಿಬಿಎ ಹಾಗೂ ರೈಲ್ವೆ ಇಲಾಖೆಯೊಂದಿಗೆ ಸಭೆ ನಡೆಸಿ ಕಾಮಗಾರಿಗಳಿಗೆ ವೇಗ ನೀಡಲು ಕ್ರಮ ಕೈಗೊಳ್ಳಬೇಕು ಎಂದರು.

ರಾಜಕಾಲುವೆಗೆ ಕೊಳಚೆ ನೀರು ಹರಿದು ಬರದಂತೆ ಸಂಪೂರ್ಣ ತಡೆಯಬೇಕು. ಡೈಯಿಂಗ್ ಘಟಕಗಳಿಂದ ಬಣ್ಣದ ನೀರು ಹಾಗೂ ಕಸಾಯಿಖಾನೆಗಳಿಂದ ರಕ್ತ ಮಿಶ್ರಿತ ನೀರು ರಾಜಕಾಲುವೆಗೆ ಹರಿಯುತ್ತಿರುವ ಕುರಿತು ಸ್ಥಳ ಪರಿಶೀಲನೆ ನಡೆಸಿ, ಸಂಬಂಧಿಸಿದವರಿಗೆ ದುಪ್ಪಟ್ಟು ದಂಡ ವಿಧಿಸಬೇಕು. ಮತ್ತೆ ನೀರು ಬಿಡದಂತೆ ಕಟ್ಟುನಿಟ್ಟಿನ ಸೂಚನೆ ನೀಡುವಂತೆ ನಿರ್ದೇಶನ ನೀಡಿದರು.

### ಪ್ರಮುಖ ಸೂಚನೆಗಳು

- ಟ್ಯಾನರಿ ರಸ್ತೆ ವಿಸ್ತರಣೆ ಕಾರ್ಯ ತಕ್ಷಣೆ ಆರಂಭಿಸಬೇಕು
- 'ಸುರಕ್ಷ-75' ಯೋಜನೆಯಡಿ ಜಂಕ್ಷನ್‌ಗಳ ಅಭಿವೃದ್ಧಿ ಕಾರ್ಯ ಶೀಘ್ರ ಪೂರ್ಣವಾಗಲಿ
- ಬಹು ಅಂತಸ್ತಿನ ಕಾರು ಪಾರ್ಕಿಂಗ್ ವ್ಯವಸ್ಥೆಗೆ ಸ್ಥಳ ಗುರುತಿಸಬೇಕು
- ನಗರದೆಲ್ಲೆಡೆ ಒಂದೇ ಮಾದರಿಯ ಸೈನ್ ಬೋರ್ಡ್‌ಗಳ ವಿನ್ಯಾಸಕ್ಕೆ ಕ್ರಮ
- ಬೆಸ್ಕಾಂ ಟ್ರಾನ್ಸ್‌ಫಾರ್ಮರ್, ವಿದ್ಯುತ್ ಕಂಬಗಳಿಂದ ಪಾದಚಾರಿಗಳಿಗೆ ಅಡ್ಡಿಯಾಗಬಾರದು
- ಪಾದಚಾರಿ ಮಾರ್ಗಗಳಲ್ಲಿನ ತ್ಯಾಜ್ಯ ಹಾಗೂ ಅವಶೇಷಗಳು ತೆರವಾಗಬೇಕು
- ರಸ್ತೆ ಬದಿಗಳಲ್ಲಿ ವರ್ಷಗಳಿಂದ ನಿಂತಿರುವ ಅನಾಥ ವಾಹನಗಳ ತೆರವುಗೊಳಿಸಿ
- ರಸ್ತೆ ಗುಂಡಿಗಳನ್ನು ನಿರಂತರವಾಗಿ ಮುಚ್ಚುವ ಕಾರ್ಯ ನಡೆಯಲಿ

### ನಗರದಲ್ಲಿ 101 ಸ್ಕೈವಾಕ್

ಸುರಕ್ಷಿತವಾಗಿ ರಸ್ತೆ ದಾಟುವ ಸಲುವಾಗಿ ಸಂಚಾರ ಪೊಲೀಸ್ ವಿಭಾಗವು 101 ಸ್ಥಳಗಳಲ್ಲಿ ಪಾದಚಾರಿ ಮೇಲ್ಸೇತುವೆ ನಿರ್ಮಾಣಕ್ಕೆ ಪಟ್ಟಿ ನೀಡಿದೆ. ಅದರಂತೆ ಆಯಾ ನಗರ ಪಾಲಿಕೆಗಳಲ್ಲಿ ಸ್ಥಳ ಪರಿಶೀಲನೆ ನಡೆಸಿ, ಸಾಧ್ಯವಿರುವ ಸ್ಥಳಗಳಲ್ಲಿ ಸ್ಕೈವಾಕ್ ನಿರ್ಮಿಸಬೇಕು ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚಿಸಿದರು.


ಮಹೇಶ್ವರ್ ರಾವ್

ನಗರ ಸಂಚಾರ ದಟ್ಟಣೆ ನಿವಾರಣೆಗೆ ಸಂಬಂಧಿಸಿದಂತೆ 103 ಕಡೆ ಬಸ್ ತಂಗುದಾಣ ಸ್ಥಳಾಂತರ, 35 ರಸ್ತೆಗಳ ಅಭಿವೃದ್ಧಿ, 63 ಕಡೆ ಬಸ್ ಬೇ ವ್ಯವಸ್ಥೆ, 84 ಕಡೆ ರಸ್ತೆ ಹಂಪ್‌ಗಳ ತೆರವು ಕುರಿತು ಸಂಚಾರ ವಿಭಾಗ ನೀಡಿರುವ ಪಟ್ಟಿಯನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು ಎಂದರು.

ಈ ಹಿಂದೆ ಮಳೆಗಾಲದ ಅವಧಿಯಲ್ಲಿ ಗುರುತಿಸಿದ್ದ 44 ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಮುನ್ನೆಚ್ಚರಿಕಾ ಕ್ರಮವಾಗಿ, ಈ ಬಾರಿಯ ಮಳೆಗಾಲಕ್ಕೆ ಮುಂಚಿತವಾಗಿ ಸಮಸ್ಯೆಗಳನ್ನು ಶಾಶ್ವತವಾಗಿ ಬಗೆಹರಿಸಬೇಕು. ಸಿಲ್ಕ್ ಬೋರ್ಡ್ ಜಂಕ್ಷನ್, ಹೆಬ್ಬಾಳ ಜಂಕ್ಷನ್ ಹಾಗೂ ಕೋಗಿಲು ಕ್ರಾಸ್ ಪ್ರದೇಶಗಳಲ್ಲಿ ಯಾವುದೇ ರೀತಿಯ ತೊಂದರೆ ಉಂಟಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

# ಅಡುಗೆ ಪದಾರ್ಥಗಳ ಆಯ್ಕೆ ಜಾಗರೂಕರಾಗಿರಿ: ಕೀರ್ತಿ ಸುರೇಶ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಹಬ್ಬಗಳೆಂದರೆ ಕೌಟುಂಬಿಕ ಸಮಯ ಮತ್ತು ಮನೆಯ ಅಡುಗೆಯನ್ನು ಸಂಭ್ರಮಿಸುವ ಸುಸಂದರ್ಭ. ಉತ್ತಮವಾದ ಅಡುಗೆ ಎಣ್ಣೆ ಬಳಸುವುದರಿಂದ ಇಡೀ ಕುಟುಂಬದ ಆರೋಗ್ಯ ಸುರಕ್ಷಿತವಾಗಿರಲಿದೆ' ಎಂದು ಫಿಯೋನಾ ರಾಯಭಾರಿ ನಟಿ ಕೀರ್ತಿ ಸುರೇಶ್ ಅಭಿಪ್ರಾಯಪಟ್ಟರು.

ಫಿಯೋನಾ ರಿಫೈನ್ಡ್ ಸನ್‌ಫ್ಲವರ್ ಆಯಿಲ್ ಸಂಸ್ಥೆಯು ಕರ್ನಾಟಕ, ಆಂಧ್ರ ಪ್ರದೇಶ ಮತ್ತು ತೆಲಂಗಾಣದ ತನ್ನ ವ್ಯಾಪಾರ ಪಾಲುದಾರರ ಒಕ್ಕೂಟದೊಂದಿಗೆ ಇಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಉತ್ತಮವಾದುದನ್ನೇ ಆಯ್ಕೆ ಮಾಡಿ, ಉತ್ತಮ ಆಹಾರ ಸೇವನೆ ಮಾಡಿ' ಎನ್ನುವ ಘೋಷವಾಕ್ಯ ನನಗೆ ಇಷ್ಟವಾಯಿತು. ನಿತ್ಯದ ಅಡುಗೆ ಪದಾರ್ಥಗಳ ಆಯ್ಕೆ ಬಗ್ಗೆ ಜಾಗರೂಕರಾಗಿರಬೇಕು' ಎಂದರು.

ಬಜ್ ಇಂಡಿಯಾ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸಂದೀಪ್ ಸಿಂಗ್, 'ಹಬ್ಬ ಸಂದರ್ಭಗಳಲ್ಲಿ ಜನರು ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಅಡುಗೆಗೆ ಬಳಸುವ ಎಣ್ಣೆಯ ಬಗ್ಗೆ ಜಾಗೃತರಾಗಿಬೇಕು' ಎಂದು ಹೇಳಿದರು.


ಶೋಭಾಯಾತ್ರೆಯಲ್ಲಿ ಮಹಿಳೆಯರು ಕಳಶಗಳನ್ನು ಹೊತ್ತು ಸಾಗಿದರು

# 'ಹಿಂದೂಗಳಲ್ಲಿ ಒಗ್ಗಟ್ಟು ಮೂಡಲಿ'

ಪ್ರಜಾವಾಣಿ ವಾರ್ತೆ

**ಯಲಹಂಕ:** 'ಹಿಂದೂಗಳಲ್ಲಿ ಸೂಕ್ತ ಜಾಗೃತಿ, ಒಗ್ಗಟ್ಟು ಹಾಗೂ ರಾಷ್ಟ್ರಪ್ರಜ್ಞೆ ಮೂಡದಿದ್ದರೆ 2050ರ ವೇಳೆಗೆ ಭಾರತ ಆಡಳಿತಾತ್ಮಕವಾಗಿ ಹಿಂದೂಗಳಿಂದ ಕೈತಪ್ಪುವ ಸ್ಥಿತಿ ನಿರ್ಮಾಣವಾಗಬಹುದು' ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯ ಮುಖಂಡ ಎಂ.ಆರ್. ಅನಂತ್ ಎಚ್ಚರಿಸಿದರು.

ಆರ್‌ಎಸ್‌ಎಸ್ 100 ವರ್ಷ ಪೂರೈಸಿದ್ದರಿಂದ ವಿವಿಧ ಹಿಂದೂಪರ ಸಂಘಟನೆಗಳು, ಯಲಹಂಕ ಕ್ಷೇತ್ರ ಬಿಜೆಪಿ ಸಹಯೋಗದಲ್ಲಿ ಸಿಂಗನಾಯಕನಹಳ್ಳಿಯಲ್ಲಿ ಆಯೋಜಿಸಿದ್ದ ಹಿಂದೂ ಸಮಾಜೋತ್ಸವದಲ್ಲಿ ಮಾತನಾಡಿದರು.

ಶಾಸಕ ಎಸ್.ಆರ್.ವಿಶ್ವನಾಥ್ ಮಾತನಾಡಿ, 'ಯಲಹಂಕ ಕ್ಷೇತ್ರದ ಪ್ರತಿ ವಾರ್ಡ್, ಹಳ್ಳಿ ಮಟ್ಟದಲ್ಲಿ ಹಿಂದೂ ಸಮಾಜೋತ್ಸವ ಆಚರಿಸಲಾಗಿದೆ. ಪರಕೀಯರಿಂದ ಹಿಂದೂ ಸಮಾಜ ರಕ್ಷಿಸಲು ಜಾಗೃತಿ ಮೂಡಿಸುವುದೇ ಸಮಾಜೋತ್ಸವದ ಉದ್ದೇಶ' ಎಂದರು.

ಆದಿ ಚುಂಚನಗಿರಿ ವಿಜಯನಗರ ಶಾಖಾ ಮಠದ ಸೌಮ್ಯನಾಥ ಸ್ವಾಮೀಜಿ ಆಶೀರ್ವಚನ ನೀಡಿದರು. ಹಿಂದೂ ಸಮಾಜೋತ್ಸವ ಸಮಿತಿ ಅಧ್ಯಕ್ಷ ಟಿ.ಚೆಲುವರಾಜ್ ಉಪಸ್ಥಿತರಿದ್ದರು.

**ಶೋಭಾಯಾತ್ರೆ:** ಸಿಂಗನಾಯಕನಹಳ್ಳಿಯಲ್ಲಿ ವಿವಿಧ ಜಾನಪದ ಕಲಾ ತಂಡಗಳ ಪ್ರದರ್ಶನದೊಂದಿಗೆ ಶೋಭಾಯಾತ್ರೆ ನಡೆಯಿತು. ಭಾರತಾಂಬೆ, ಮೈಲಪ್ಪನಹಳ್ಳಿ, ಹೊನ್ನೇನಹಳ್ಳಿ ಗ್ರಾಮದೇವತೆ ಮೂರ್ತಿಗಳೊಂದಿಗೆ ನಡೆದ ಶೋಭಾಯಾತ್ರೆಯಲ್ಲಿ 5 ಸಾವಿರಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು.

# 'ಗಣರಾಜ್ಯೋತ್ಸವ ರಾಷ್ಟ್ರೀಯತೆಯ ಹೆಗ್ಗುರುತು'

**ಬೆಂಗಳೂರು:** 'ಏಕತೆ, ಸೇವಾ ಮನೋಭಾವ ಮತ್ತು ಸಾಮೂಹಿಕ ಜವಾಬ್ದಾರಿಯು ರಾಷ್ಟ್ರೀಯತೆಯ ಹೆಗ್ಗುರುತು ಎಂಬುದನ್ನು ಗಣರಾಜ್ಯೋತ್ಸವ ನೆನಪಿಸುತ್ತದೆ' ಎಂದು ಫಿನಿಕ್ಸ್ ಮಾಲ್ ಆಫ್ ಏಷ್ಯಾದ ಮಾರುಕಟ್ಟೆ ನಿರ್ದೇಶಕ (ದಕ್ಷಿಣ) ರಿತು ಮೆಹ್ತಾ ಅಭಿಪ್ರಾಯಪಟ್ಟರು.

ಗಣರಾಜ್ಯೋತ್ಸವದ ಅಂಗವಾಗಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಿಪಬ್ಲಿಕ್ ರೈಮ್ಸ್, ರಿಪಬ್ಲಿಕ್ ರನ್, ಸೇನೆಯ ಸಿಬ್ಬಂದಿಯನ್ನು ಗೌರವಿಸುವ ಮೂಲಕ ವಿಶಿಷ್ಟವಾಗಿ ಗಣರಾಜೋತ್ಸವ ಆಚರಿಸಲಾಗಿದೆ. ಮಹಿಳೆಯರ ಉದ್ಯಮಶೀಲತೆಗೂ ಒತ್ತು ನೀಡಲಾಗಿದೆ ಎಂದರು.

ಶೌರ್ಯ ಪ್ರಶಸ್ತಿ ಪುರಸ್ಕೃತ ಕರ್ನಲ್ ಜೆ.ಬಿ.ಸಿಂಗ್ ಧ್ವಜಾರೋಹಣ ನೆರವೇರಿಸಿದರು. ರಿಪಬ್ಲಿಕ್ ರನ್ ಕಾರ್ಯಕ್ರಮದಲ್ಲಿ ಎರಡು ಸಾವಿರಕ್ಕೂ ಅಧಿಕ ಮಂದಿ ಪಾಲ್ಗೊಂಡಿದ್ದರು. ಗಣರಾಜ್ಯೋತ್ಸವ ಗೀತೆಗಳ ಗಾಯನ ಸೇರಿದಂತೆ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳನ್ನು ಆಯೋಜಿಸಲಾಗಿತ್ತು.

ಮಹಿಳಾ ಉದ್ಯಮಿಗಳಿಂದ ವಸ್ತುಪ್ರದರ್ಶನ ಮತ್ತು ಮಾರಾಟಕ್ಕೂ ಅವಕಾಶ ಕಲ್ಪಿಸಲಾಗಿತ್ತು. ಕರಕುಶಲ ವಸ್ತುಗಳು, ಸೀರೆಗಳು, ಬೇಕರಿ ಉತ್ಪನ್ನಗಳು, ಸೌಂದರ್ಯವರ್ಧಕಗಳು ಸೇರಿದಂತೆ ವಿವಿಧ ವಸ್ತುಗಳ ಮಾರಾಟ ಭರ್ಜರಿಯಾಗಿ ನಡೆಯಿತು.

## ಡಾಕ್ ಘರ್ ನಿರ್ಯಾತ್ ಕೇಂದ್ರಗಳನ್ನು ತೆರೆದ ಅಂಚೆ ಇಲಾಖೆ

# ಸಣ್ಣ ರಫ್ತಿಗೆ ಜಿಲ್ಲಾ ಹಂತದಲ್ಲೇ ಅವಕಾಶ

● ಬಾಲಕೃಷ್ಣ ಪಿ.ಎಚ್.

**ಬೆಂಗಳೂರು:** ಯಾವುದೇ ಜಿಲ್ಲೆಯ ಯಾವುದೇ ವಸ್ತು ರಫ್ತು ಮಾಡಲು ಬೆಂಗಳೂರಿಗೆ ಬರುವುದನ್ನು ತಪ್ಪಿಸಲು ಅಂಚೆ ಇಲಾಖೆಯು ಪ್ರತಿ ಜಿಲ್ಲೆಯಲ್ಲಿ ಎರಡು–ಮೂರು ಡಾಕ್ ಘರ್ ನಿರ್ಯಾತ್ ಕೇಂದ್ರಗಳನ್ನು ತೆರೆದಿದೆ.

ಅಂಚೆ ಇಲಾಖೆಯು 200ಕ್ಕೂ ಹೆಚ್ಚು ದೇಶಗಳನ್ನು ಒಳಗೊಂಡ ಅಂತರ ರಾಷ್ಟ್ರೀಯ ಲಾಜಿಸ್ಟಿಕ್ಸ್ ಜಾಲವನ್ನು ನಿರ್ವಹಿಸುತ್ತಿದೆ. ಸಾರ್ವತ್ರಿಕ ಅಂಚೆ ಒಕ್ಕೂಟ (ಯುಪಿಯು) ಮತ್ತು ಅಂತರ ರಾಷ್ಟ್ರೀಯ ಅಂಚೆ ಆಡಳಿತವು ಭಾರತೀಯ ಅಂಚೆಗೆ ಬೆಂಬಲ ನೀಡಿವೆ. ಕರ್ನಾಟಕದಲ್ಲಿ, ಅಂಚೆ ವೃತ್ತವು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ 106 ಡಾಕ್ ಘರ್ ನಿರ್ಯಾತ್ ಕೇಂದ್ರಗಳನ್ನು (ಡಿಎನ್‌ಕೆಎಸ್) ಸ್ಥಾಪಿಸಿದೆ. ಇದರಲ್ಲಿ ಆರು ಕೇಂದ್ರಗಳು ಬೆಂಗಳೂರು ನಗರ ವ್ಯಾಪ್ತಿಯಲ್ಲಿವೆ.

### ಅಂಕಿ ಅಂಶಗಳು

**135** ದೇಶಗಳಿಗೆ
ಐಟಿಪಿಎಸ್ ಸೇವೆ (5 ಕೆ.ಜಿ. ವರೆಗೆ)

**108** ದೇಶಗಳಿಗೆ
ಇಎಂಎಸ್ ಸ್ಪೀಡ್ ಪೋಸ್ಟ್ (35 ಕೆ.ಜಿ.ವರೆಗೆ)

**200** ದೇಶಗಳಿಗೆ
ಏರ್ ಪಾರ್ಸೆಲ್ (20 ಕೆ.ಜಿ.ವರೆಗೆ)

### ಕಡಿಮೆ ವೆಚ್ಚ, ಸಮಯ ಉಳಿತಾಯ

ರಾಜ್ಯದ ಯಾವುದೋ ಮೂಲೆಯಲ್ಲಿರುವ ವೈದ್ಯರೊಬ್ಬರು ಮಾತ್ರೆಗಳನ್ನು ರಫ್ತು ಮಾಡಬೇಕಾಗಿರುತ್ತದೆ. ಆ ಮಾತ್ರೆಗಳು ಒಂದು ಕೆ.ಜಿ. ಕೂಡ ಇರುವುದಿಲ್ಲ. ಅವರು ಬೆಂಗಳೂರಿಗೆ ಬರುವ ಬದಲು ಅಲ್ಲೇ ರಫ್ತು ಮಾಡಿದರೆ ವೆಚ್ಚವೂ ಕಡಿಮೆಯಾಗುತ್ತದೆ. ಅಲ್ಲದೇ ಇದರಿಂದ ಸಮಯವೂ ಉಳಿತಾಯವಾಗುತ್ತದೆ. ಹೀಗಾಗಿ 35 ಕೆ.ಜಿ.ವರೆಗೂ ರಫ್ತು ಮಾಡಲು ಇಲ್ಲಿ ಅವಕಾಶವನ್ನು ನೀಡಲಾಗುತ್ತಿದೆ ಎಂದು ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಕೆ. ಪ್ರಕಾಶ್ ಅವರು ತಿಳಿಸಿದರು

ರಾಜ್ಯದ ಮೂಲೆ ಮೂಲೆಯಿಂದ ರಫ್ತುದಾರರು ಇಂಡಿಯಾ ಅಂಚೆಯ ರಫ್ತು ಸೌಲಭ್ಯ ಮತ್ತು ಅಂತರ ರಾಷ್ಟ್ರೀಯ ಮೇಲ್ ಸೇವೆಗಳನ್ನು ಅನುಕೂಲಕರವಾಗಿ ಬಳಸಿಕೊಳ್ಳಲು ಅನುವು ಮಾಡಿಕೊಡುತ್ತದೆ. ಜಾಗತಿಕ ವ್ಯಾಪ್ತಿಯು, ಪ್ರಮುಖ ಸರ್ಕಾರಿ ವೇದಿಕೆಗಳೊಂದಿಗೆ ತಡೆರಹಿತ ಡಿಜಿಟಲ್ ಸಂಯೋಜನೆಯೊಂದಿಗೆ ರಫ್ತುದಾರರಿಗೆ ಅದರಲ್ಲಿಯೂ ಸಣ್ಣ ಉದ್ದಿಮೆದಾರರಿಗೆ ಕುಶಲಕರ್ಮಿಗಳಿಗೆ, ಇ–ಕಾಮರ್ಸ್ ಮಾರಾಟಗಾರರಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯನ್ನು ಸರಳ ಮತ್ತು ಕಡಿಮೆ ವೆಚ್ಚದಲ್ಲಿ ತೆರೆದಿಟ್ಟಿದೆ ಎಂದು ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಕೆ. ಪ್ರಕಾಶ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಸಣ್ಣ ಮತ್ತು ಮಧ್ಯಮ ಉದ್ಯಮಗಳು, ಗ್ರಾಮೀಣ ಉದ್ಯಮಿಗಳಷ್ಟೇ ಅಲ್ಲದೆ ಮೊದಲ ಬಾರಿಗೆ ರಫ್ತು ಮಾಡುವವರಿಗೂ ಸಹಕಾರಿಯಾಗಲಿದೆ. ಆನ್‌ಲೈನ್ ರಫ್ತು ದಸ್ತಾವೇಜು ಮತ್ತು ಸುಂಕ ಘೋಷಣೆಗಳಲ್ಲಿ ಸಹಾಯ, ಪ್ಯಾಕೇಜಿಂಗ್, ವರ್ಗೀಕರಣಗಳ ಬಗ್ಗೆ ಮಾರ್ಗದರ್ಶನ, ಡಿಜಿಟಲ್ ಅಂಚೆ ರಫ್ತು ಪ್ರಕ್ರಿಯೆಗೆ ಪ್ರವೇಶ ನೀಡುವುದು, ಸಾಧ್ಯ ಇರುವ ಪ್ರದೇಶಗಳಲ್ಲಿ ರಫ್ತುದಾರರ ಮನೆ ಬಾಗಿಲಿಗೆ ಹೋಗಿ ವಸ್ತುಗಳನ್ನು ಸ್ವೀಕರಿಸುವ ಸೌಲಭ್ಯ ನೀಡಲಾಗಿದೆ ಎಂದು ಸಹಾಯಕ ನಿರ್ದೇಶಕ (ಅಂತರ ರಾಷ್ಟ್ರೀಯ ಅಂಚೆ) ವೆಂಕಟೇಶಯ್ಯ ಎ.ವಿ. ಅವರು ತಿಳಿಸಿದರು.

# 'ಹೆಣ್ಣು ಮಕ್ಕಳು ಮುಖ್ಯವಾಹಿನಿಗೆ ಬರಲಿ'

**ಬೆಂಗಳೂರು:** 'ಹೆಣ್ಣು ಮಕ್ಕಳಿಗೂ ಸಮಾಜದಲ್ಲಿ ಸಮಾನ ಅವಕಾಶಗಳಿವೆ. ಅವುಗಳ ಸದುಪಯೋಗ ಪಡೆದುಕೊಂಡು ಸಮಾಜದ ಮುಖ್ಯವಾಹಿನಿಗೆ ಬರಬೇಕು' ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ ಹೇಳಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಮ್ಮಿಕೊಂಡಿದ್ದ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನವನ್ನು ಉದ್ಘಾಟಿಸಿ ಮಾತನಾಡಿದರು.

'ಹೆಣ್ಣು ಮಗು ಮನೆಯ ನಂದಾ ದೀಪ ಇದ್ದಂತೆ. ಸ್ವಾತಂತ್ರ್ಯ, ಸಮಾನತೆ ಪ್ರತಿ ಹೆಣ್ಣು ಮಗುವಿಗೂ ಸಿಗಬೇಕು' ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಜಗದೀಶ್ ಜಿ.ನಾಯಕ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ರವೀಂದ್ರನಾಥ ಮೇಟಿ ಉಪಸ್ಥಿತರಿದ್ದರು.


ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನ ಕಾರ್ಯಕ್ರಮದಲ್ಲಿ ಜಿ.ಜಗದೀಶ್, ಡಾ. ರವೀಂದ್ರನಾಥ ಮೇಟಿ ಉಪಸ್ಥಿತರಿದ್ದರು

# ಶಾಸಕ ರಾಮಮೂರ್ತಿಗೆ 'ಸುಪ್ರೀಂ'ನಲ್ಲಿ ಹಿನ್ನಡೆ

ಒಂದನೇ ಪುಟದಿಂದ...

'ಜಯನಗರ ವಿಧಾನಸಭಾ ಕ್ಷೇತ್ರಕ್ಕೆ 2023ರ ಮೇ 10ಕ್ಕೆ ಚುನಾವಣೆ ಮತ್ತು ಮೇ 13ರಂದು ಮತ ಎಣಿಕೆ ನಡೆದಿತ್ತು. ಈ ಕ್ಷೇತ್ರದಲ್ಲಿ ಒಟ್ಟು 827 ಅಂಚೆ ಮತಗಳು ಚಲಾವಣೆಯಾಗಿದ್ದವು. ಈ ಪೈಕಿ 198 ಮತಗಳನ್ನು ತಿರಸ್ಕೃತ ಗೊಳಿಸಿ 629 ಮತಗಳನ್ನು ಮಾತ್ರ ಪರಿಗಣಿಸಲಾಗಿತ್ತು. ಅವುಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ 164 ಮತ್ತು ಬಿಜೆಪಿಗೆ ಅಭ್ಯರ್ಥಿಗೆ 415 ಮತಗಳು ಬಂದಿದ್ದವು. ಮತ ಎಣಿಕೆಯ ಕೊನೆಯ 16ನೇ ಸುತ್ತಿನ ಬಳಿಕ ಬಿಜೆಪಿ ಅಭ್ಯರ್ಥಿ 57,297 ಮತಗಳು, ಕಾಂಗ್ರೆಸ್ ಅಭ್ಯರ್ಥಿ 57,591 ಮತಗಳನ್ನು ಪಡೆದಿದ್ದರು' ಎಂದು ಸೌಮ್ಯಾರೆಡ್ಡಿ ಅರ್ಜಿಯಲ್ಲಿ ತಿಳಿಸಿದ್ದರು.

'ಕಾಂಗ್ರೆಸ್ ಪಕ್ಷದ ಅಭ್ಯರ್ಥಿ 294 ಮತಗಳಿಂದ ಮುನ್ನಡೆ ಸಾಧಿಸಿದ್ದರು. ಆದರೆ, ಚುನಾವಣಾ ವೀಕ್ಷಕರು ತಿರಸ್ಕೃತ ಅಂಚೆ ಮತಗಳ ಮರು ಪರಿಶೀಲನೆಗೆ ಸೂಚಿಸಿದ್ದರು. ಅದರಂತೆ ಹಲವು ಸುತ್ತುಗಳಲ್ಲಿ ತಿರಸ್ಕೃತ ಅಂಚೆ ಮತಗಳ ಮರುಪರಿಶೀಲನೆ ನಡೆದಿತ್ತು. ಇದರಿಂದ ಫಲಿತಾಂಶದಲ್ಲಿ ಏರಿಳಿತ ಉಂಟಾಯಿತು. ಅಂತಿಮವಾಗಿ ಬಿಜೆಪಿ ಅಭ್ಯರ್ಥಿಯನ್ನು ಚುನಾಯಿತ ಎಂದು ಘೋಷಿಸಲಾಯಿತು' ಎಂದು ಅರ್ಜಿಯಲ್ಲಿ ಆರೋಪಿಸಿದ್ದರು.

# ಡ್ರಗ್ಸ್ ಮಾರಾಟ: ಸಿಕ್ಕಿಬಿದ್ದ ವಿದ್ಯಾರ್ಥಿಗಳು, ಬೌನ್ಸರ್

## ಅಮೃತಹಳ್ಳಿ, ತಲಘಟ್ಟಪುರ ಪೊಲೀಸರ ಕಾರ್ಯಾಚರಣೆ

•ರಾಜ್ಯ, ಹೊರ ರಾಜ್ಯದ 12 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ಹಲವೆಡೆ ಕಾರ್ಯಾಚರಣೆ ನಡೆಸಿದ ಅಮೃತಹಳ್ಳಿ ಹಾಗೂ ತಲಘಟ್ಟಪುರ ಠಾಣೆ ಪೊಲೀಸರು, ರಾಜ್ಯ ಹಾಗೂ ಹೊರ ರಾಜ್ಯದ 12 ಡ್ರಗ್ ಪೆಡ್ಲರ್‌ಗಳನ್ನು ಬಂಧಿಸಿ ₹4.60 ಕೋಟಿ ಮೌಲ್ಯದ ವಿವಿಧ ಮಾದರಿಯ ಸಿಂಥೆಟಿಕ್ ಹಾಗೂ ನೈಸರ್ಗಿಕ ಗಾಂಜಾ ಜಪ್ತಿ ಮಾಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಅಮೃತಹಳ್ಳಿ ಠಾಣೆಯ ಪೊಲೀಸರು ಕಾರ್ಯಾಚರಣೆ ನಡೆಸಿ, ಯಲಹಂಕದ ಕೋಗಿಲು ಲೇಔಟ್‌ನ ನಿವಾಸಿ, ಏರೋನಾಟಿಕಲ್ ಎಂಜಿನಿಯರಿಂಗ್ ವಿದ್ಯಾರ್ಥಿ ಕುಶಾಲ್‌ಗೌಡ (23), ನವದೆಹಲಿಯ ಲಕ್ಷ್ಮೀನಗರದ ನಿವಾಸಿ, ಎಲ್.ಎಲ್.ಬಿ ವಿದ್ಯಾರ್ಥಿ ಶಶಾಂಕ್(22), ರಾಮನಗರ ಜಿಲ್ಲೆಯ ಚಿಕ್ಕಪಿಳ್ಳಪ್ಪ ನಿವಾಸಿ, ಬೌನ್ಸರ್ ಕೆಲಸ ಮಾಡುತ್ತಿದ್ದ ಸಾಗರ್ (29) ಹಾಗೂ ಕೇರಳದ ಕಣ್ಣೂರು ಜಿಲ್ಲೆಯ ವಿವೇಕನಗರದ ನಿವಾಸಿ, ಕಾರು ಚಾಲಕ ಎಸ್.ವಿಲ್ಸನ್ (48), ಅದೇ ರಾಜ್ಯದ ನಿವಾಸಿ, ಕಾರು ಚಾಲಕ ಆಶಿರ್ ಅಲಿ (36), ಲಾರಿ ಚಾಲಕ ರಿಯಾಸ್ (35), ಬಾಣಸಿಗ ಸಜಾದ್ (34), ಕಾರು ಚಾಲಕ ಕೆ.ಪಿ. ಶಿಹಾಬ್ (30) ಕೇರಳದ ಮಲ್ಲಪುರಂ ನಿವಾಸಿ, ಮೆಡಿಕಲ್ ಶಾಪ್‌ನಲ್ಲಿ ಕೆಲಸ ಮಾಡುತ್ತಿದ್ದ ಅಬ್ದುಲ್ ನಾಸಿರ್ (28), ಕೇರಳದ ವಡಗೇರ ನಿವಾಸಿ ಅಭಿನವ್ ಡಿ. ನಂದಿಯಾರ್ (21) ಬಂಧಿತ ಆರೋಪಿಗಳು.

ಬೆಂಗಳೂರಿನ ಬೇರೆ ಬೇರೆ ಕಡೆಗಳಲ್ಲಿ ನೆಲೆಸಿದ್ದ ಡ್ರಗ್ ಪೆಡ್ಲಿಂಗ್‌ನಲ್ಲಿ ತೊಡಗಿದ್ದರು.

ಬಂಧಿತರಿಂದ ₹4 ಕೋಟಿ ಮೌಲ್ಯದ 3 ಕೆ.ಜಿ ಹೈಡ್ರೊ ಗಾಂಜಾ, 50 ಗ್ರಾಂ ಎಂಡಿಎಂಎ ಕ್ರಿಸ್ಟಲ್, 500 ಗ್ರಾಂ ಚರಸ್, 500 ಎಲ್.ಎಸ್.ಡಿ ಸ್ಟ್ರಿಪ್ಸ್, 10 ಕೆ.ಜಿ ನೈಸರ್ಗಿಕ ಗಾಂಜಾ, ಎರಡು ಕಾರು, 14 ಮೊಬೈಲ್ ಫೋನ್‌ಗಳು, ₹36 ಸಾವಿರ ನಗದು ಜಪ್ತಿ ಮಾಡಲಾಗಿದೆ ಎಂದು ನಗರದ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಪತ್ರಿಕಾ ಗೋಷ್ಠಿಯಲ್ಲಿ ಬುಧವಾರ ಮಾಹಿತಿ ನೀಡಿದರು.

ಖಚಿತ ಮಾಹಿತಿ ಆಧರಿಸಿ, ಜಕ್ಕೂರು ರೈಲ್ವೆ ಟ್ರ್ಯಾಕ್, ಕನಕಪುರ ರಸ್ತೆಯ ಕಗ್ಗಲಿಪುರದ ಬಳಿ ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಡ್ರಗ್ಸ್ ಮಾರಾಟ ದಂಧೆಯಲ್ಲಿ ತೊಡಗಿರುವುದಾಗಿ ಒಪ್ಪಿಕೊಂಡಿದ್ದಾರೆ ಎಂದು ಮಾಹಿತಿ ನೀಡಿದರು.

ಹೆಚ್ಚಿನ ವಿಚಾರಣೆಗೆ ಬಂಧಿತರನ್ನು ಕಸ್ಟಡಿಗೆ ಪಡೆದುಕೊಳ್ಳಲಾಗಿದೆ. ಎಲ್ಲರೂ ಸ್ನೇಹಿತರು ಎಂಬುದು ಗೊತ್ತಾಗಿದೆ. ಥಾಯ್ಲೆಂಡ್, ದುಬೈ ಹಾಗೂ ಹೊರ ರಾಜ್ಯದಿಂದ ಬಂಧಿತರು ಕಡಿಮೆ ಬೆಲೆಗೆ ಹೈಡ್ರೊ ಗಾಂಜಾ, ಎಂಡಿಎಂಎ ಕ್ರಿಸ್ಟಲ್, ಚರಸ್, ಎಲ್‌ಎಸ್‌ಟಿ ಸ್ಟ್ರಿಪ್ಸ್ ಹಾಗೂ ನೈಸರ್ಗಿಕ ಗಾಂಜಾ ಖರೀದಿಸಿ ಬೆಂಗಳೂರಿನಲ್ಲಿ ಸಾರ್ವಜನಿಕರು ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಮಾರಾಟ ಮಾಡುತ್ತಿದ್ದರು ಎಂದು ತಿಳಿಸಿದರು.

**78 ಕೆ.ಜಿ ಡ್ರಗ್ಸ್ ಜಪ್ತಿ:** ತಲಘಟ್ಟಪುರ ಠಾಣೆಯ ಪೊಲೀಸರು ಕಾರ್ಯಾಚರಣೆ ನಡೆಸಿ, ಡ್ರಗ್ ಮಾರಾಟ ಮಾಡುತ್ತಿದ್ದ ಇಬ್ಬರನ್ನು ಬಂಧಿಸಿದ್ದಾರೆ.

ಮಂಡ್ಯ ತಾಲ್ಲೂಕಿನ ಬಸರಾಳು ಗ್ರಾಮದ ಬಿ.ಡಿ.ಧನುಷ್ (27) ಹಾಗೂ ಬೆಂಗಳೂರಿನ ಜ್ಞಾನಭಾರತಿ ಬಳಿಯ ಉಲ್ಲಾಳ ರಸ್ತೆಯ ಐದನೇ ಬ್ಲಾಕ್‌ನ ನಿವಾಸಿ, ಸ್ಪಾ ಥೈಯಾಂಗ್ ಕೆಲಸಗಾರ ಆರ್.ರಾಘವೇಂದ್ರ (30) ಬಂಧಿತರು. ಬಂಧಿತರಿಂದ ₹60 ಲಕ್ಷ ಮೌಲ್ಯದ 78 ಕೆ.ಜಿ ಡ್ರಗ್ಸ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಬನಶಂಕರಿ 6ನೇ ಹಂತದ ಕರಿಯನ ಪಾಳ್ಯದ ಖಾಲಿ ಪ್ರದೇಶದಲ್ಲಿ ಆರೋಪಿಗಳು ಡ್ರಗ್ಸ್ ಮಾರಾಟ ಮಾಡುತ್ತಿದ್ದರು ಎಂದು ಮೂಲಗಳು ಹೇಳಿವೆ.

**ಡ್ರಗ್ಸ್ ಮಾರುತ್ತಿದ್ದ ಪ್ರದೇಶಗಳು?**
- ಬೇಗೂರು
- ಕೋರಮಂಗಲ
- ಬನ್ನೇರುಘಟ್ಟ
- ಎಲೆಕ್ಟ್ರಾನಿಕ್ ಸಿಟಿ
- ಎಚ್‌ಎಸ್‌ಆರ್ ಲೇಔಟ್
- ಬೊಮ್ಮನಹಳ್ಳಿ

ಅಪರಾಧ ಸುದ್ದಿ




ಅಮೃತಹಳ್ಳಿ ಠಾಣೆಯ ಪೊಲೀಸರು ಜಪ್ತಿ ಮಾಡಿಕೊಂಡ ವಿವಿಧ ಮಾದರಿಯ ಡ್ರಗ್ಸ್ ಅನ್ನು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಪರಿಶೀಲಿಸಿದರು

## ಸುದ್ದಿ 2 ನಿಮಿಷ

### ಬಾಲಿವುಡ್ ನಟ ರಣವೀರ್ ಸಿಂಗ್ ವಿರುದ್ಧ ಎಫ್‌ಐಆರ್ ದಾಖಲು

**ಬೆಂಗಳೂರು:** ಬಾಲಿವುಡ್ ನಟ ರಣವೀರ್ ಸಿಂಗ್ ಅವರು 'ಕಾಂತಾರ' ಚಿತ್ರದಲ್ಲಿನ 'ದೈವ' ಸಂಪ್ರದಾಯವನ್ನು ಅಪಹಾಸ್ಯ ಮಾಡುವ ಮೂಲಕ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿದ್ದಾರೆ ಎಂದು ಆರೋಪಿಸಿ ನೀಡಿದ್ದ ದೂರಿನ ಮೇರೆಗೆ ನಗರದ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಬುಧವಾರ ಎಫ್‌ಐಆರ್ ದಾಖಲಾಗಿದೆ.

ನಟನ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಕೋರಿ ವಕೀಲ ಪ್ರಶಾಂತ್ ಮೆಥಲ್ ಎಂಬುವವರು ಡಿ.3ರಂದು ದೂರು ನೀಡಿದ್ದರು. ದೂರು ಆಧರಿಸಿ ಪೊಲೀಸರು ಎನ್‌ಸಿಆರ್ ದಾಖಲಿಸಿಕೊಂಡಿದ್ದರು. ಈಗ ನ್ಯಾಯಾಲಯದ ಸೂಚನೆಯ ಮೇರೆಗೆ ಎಫ್‌ಐಆರ್ ದಾಖಲು ಮಾಡಿಕೊಂಡಿದ್ದಾರೆ. ರಣವೀರ್ ಸಿಂಗ್ ಅವರು ಹಿಂದೂಗಳ ಹಾಗೂ ಕರ್ನಾಟಕದ ತುಳು ಭಾಷಿಕರ ಭಾವನೆಗಳಿಗೆ ಧಕ್ಕೆ ತರುವ ರೀತಿ ಹೇಳಿಕೆ ನೀಡಿದ್ದು, ಅವರ ಹೇಳಿಕೆಯಿಂದ ನೋವು ಉಂಟಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.



ಗೋವಾದಲ್ಲಿ ನ.28ರಂದು ನಡೆದ ಅಂತರ-ರಾಷ್ಟ್ರೀಯ ಚಲನಚಿತ್ರೋತ್ಸವದ ಸಮಾರೋಪ ಸಮಾರಂಭದಲ್ಲಿ ರಣವೀರ್ ಸಿಂಗ್ ಅಪಹಾಸ್ಯ ಮಾಡಿದ್ದಾರೆ. ನಟನ ವಿರುದ್ಧ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್‌ಗಳಾದ 299, 302, 196, 352ರ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಬೇಕು ಎಂದು ದೂರಿನಲ್ಲಿ ಕೋರಿದ್ದರು. ಹೇಳಿಕೆ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿದ ಬಳಿಕ ರಣವೀರ್ ಸಿಂಗ್ ಕ್ಷಮೆ ಕೋರಿದ್ದರು.

### ಕೆರೆ ಜಾಗ ಒತ್ತುವರಿ: ಮಹಿಳೆಗೆ ಒಂದು ವರ್ಷ ಜೈಲು ಶಿಕ್ಷೆ

**ಬೆಂಗಳೂರು:** ಕೆರೆ ಒತ್ತುವರಿ ಮಾಡಿದ್ದ ಮಹಿಳೆಯೊಬ್ಬರಿಗೆ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯವು ಒಂದು ವರ್ಷ ಜೈಲು ಶಿಕ್ಷೆ ವಿಧಿಸಿದೆ.

ಯಶವಂತಪುರ ಹೋಬಳಿ ಅಬ್ಬಿಗೆರೆ ಗ್ರಾಮದ ನಿವಾಸಿ ಜಿ.ಆರ್. ವಿಜಯಲಕ್ಷ್ಮಿ ಸದಾಶಿವರೆಡ್ಡಿ ಶಿಕ್ಷೆಗೆ ಒಳಗಾದವರು.

ಗ್ರಾಮದ ಸರ್ವೆ ನಂ.75ರಲ್ಲಿರುವ ಕೆರೆಗೆ ಸೇರಿದ 26.06 ಎಕರೆ ಜಮೀನಿನಲ್ಲಿ 9 ಗುಂಟೆಯನ್ನು ವಿಜಯಲಕ್ಷ್ಮಿ ಅವರು ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಉತ್ತರ ತಾಲ್ಲೂಕು ತಹಶೀಲ್ದಾರ್ ದೂರು ನೀಡಿದ್ದರು.

2018ರಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದ ನ್ಯಾಯಾಲಯ ವಿಚಾರಣೆ ನಡೆಸಿತ್ತು. ಒತ್ತುವರಿ ಮಾಡಿಕೊಂಡಿರುವುದು ಸಾಬೀತಾಗಿದ್ದರಿಂದ ವಿಜಯಲಕ್ಷ್ಮಿ ಅವರಿಗೆ ಶಿಕ್ಷೆ ವಿಧಿಸಿ, ವಿಶೇಷ ನ್ಯಾಯಾಲಯದ ನ್ಯಾಯಿಕ ಸದಸ್ಯ ಪಾಟೀಲ ನಾಗಲಿಂಗನಗೌಡ ಹಾಗೂ ಕಂದಾಯ ಸದಸ್ಯ ಕೆ.ಎಚ್.ಅಶ್ವತ್ಥನಾರಾಯಣಗೌಡ ಅವರಿದ್ದ ಪೀಠವು ತೀರ್ಪು ನೀಡಿದೆ.

ವಿಜಯಲಕ್ಷ್ಮಿ ಅವರಿಗೆ ಒಂದು ವರ್ಷ ಸಾದಾ ಶಿಕ್ಷೆ , ₹5 ಸಾವಿರ ದಂಡ ವಿಧಿಸಲಾಗಿದೆ. ದಂಡ ಪಾವತಿಸಲು ಆಗದೇ ಇದ್ದರೆ 3 ತಿಂಗಳು ಹೆಚ್ಚುವರಿ ಸಾದಾ ಶಿಕ್ಷೆ ಅನುಭವಿಸಬೇಕಾಗುತ್ತದೆ.

ಒತ್ತುವರಿ ಮಾಡಿಕೊಂಡಿರುವ ಕೆರೆಯ ಜಮೀನನ್ನು ಕೂಡಲೇ ತೆರವುಗೊಳಿಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕು ಎಂದು ಉತ್ತರ ತಹಶೀಲ್ದಾರ್ ಅವರಿಗೆ ನಿರ್ದೇಶನ ನೀಡಲಾಗಿದೆ ಎಂದು ನ್ಯಾಯಾಲಯದ ಸರ್ಕಾರಿ ಅಭಿಯೋಜಕರು ತಿಳಿಸಿದ್ದಾರೆ.

# ₹2 ಕೋಟಿ ಮೌಲ್ಯದ ಹೈಡ್ರೊ ಗಾಂಜಾ ಜಪ್ತಿ: ಇಬ್ಬರ ಬಂಧನ

**ದೇವನಹಳ್ಳಿ:** ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 6.38 ಕೆ.ಜಿ ಹೈಡ್ರೋಪೊನಿಕ್ ಗಾಂಜಾ ಕಳ್ಳಸಾಗಣೆ ಮಾಡುತ್ತಿದ್ದ ಇಬ್ಬರು ಪ್ರಯಾಣಿಕರನ್ನು ಕಸ್ಟಮ್ಸ್ ಅಧಿಕಾರಿಗಳು ಬಂಧಿಸಿದ್ದಾರೆ.

ಬ್ಯಾಂಕಾಕ್‌ನಿಂದ ಆಗಮಿಸುವ ವಿಮಾನಗಳಲ್ಲಿ ಮಾದಕವಸ್ತು ಹಾಗೂ ಅಪರೂಪದ ವನ್ಯಜೀವಿಗಳ ಕಳ್ಳಸಾಗಣೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ವೈಮಾನಿಕ ಗುಪ್ತಚರ ದಳ ಹಾಗೂ ಕಸ್ಟಮ್ಸ್ ಅಧಿಕಾರಿಗಳು ತಪಾಸಣೆ ನಡೆಸುತ್ತಿ ದ್ದಾಗ ಹೈಡ್ರೋಪೋನಿಕ್ ಗಾಂಜಾ ಪತ್ತೆ ಯಾಗಿದೆ. ಜಪ್ತಿಯಾದ ಗಾಂಜಾದ ಮೌಲ್ಯ ವನ್ನು ಸುಮಾರು ₹2.23 ಕೋಟಿ ಎಂದು ಅಂದಾಜಿಸ ಲಾಗಿದೆ. ಮಾದಕ ದ್ರವ್ಯಗಳ ನಿಯಂತ್ರಣ ಕಾಯಿದೆ (ಎನ್‌ಡಿಪಿಎಸ್) ಅಡಿ ಪ್ರಕರಣ ದಾಖಲಿಸಿ, ಆರೋಪಿಗಳ ವಿಚಾರಣೆ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ..

# 25 ಪ್ರಕರಣಗಳಲ್ಲಿ ಭಾಗಿಯಾದ ಇಬ್ಬರ ಸೆರೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮನೆಗಳಲ್ಲಿ ಕಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಸುಬ್ರಹ್ಮಣ್ಯಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು ಕೋಟೆಬೆಟ್ಟ ಗ್ರಾಮದ ಗಣೇಶ್ ಅಲಿಯಾಸ್ 'ಟಚ್' ಗಣೇಶ್ (34), ಹೆಸರುಘಟ್ಟ ಸಮೀಪದ ತರಬನ ಹಳ್ಳಿಯ ಟಿ.ಎಸ್.ಶ್ರೀಧರ್ (35) ಬಂಧಿತರು.

₹50 ಲಕ್ಷ ಮೌಲ್ಯದ 350 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ. ಉತ್ತರಹಳ್ಳಿಯ ಎಜಿಎಸ್ ಲೇಔಟ್‌ನ ಎ.ರಾಘವೇಂದ್ರ ಅವರ ದೂರು ಆಧರಿಸಿ, ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಚಿತ್ರದುರ್ಗ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 2025ರ ಆಗಸ್ಟ್ 11ರಂದು ನಡೆದಿದ್ದ ಕೊಲೆ ಪ್ರಕರಣ ದಲ್ಲಿ 'ಟಚ್' ಗಣೇಶ್ ತಲೆಮರೆಸಿಕೊಂಡಿದ್ದ. ಬಳಿಕ ಆತನನ್ನು ಪೊಲೀಸರು ಬಂಧಿಸಿದ್ದರು. ಮನೆಗಳಲ್ಲಿ ನಡೆದ ಕಳ್ಳತನ ಪ್ರಕರಣದಲ್ಲಿ ತನಿಖೆ ನಡೆಸಿದಾಗ ಗಣೇಶ್ ಪಾತ್ರ ಪತ್ತೆಯಾಗಿತ್ತು. ನ್ಯಾಯಾಲಯದ ಅನುಮತಿ ಪಡೆದು ಚಿತ್ರದುರ್ಗ ಕಾರಾಗೃಹದಿಂದ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿದಾಗ ಕೃತ್ಯ ಎಸಗಿದ್ದಾಗಿ ಗಣೇಶ್ ಒಪ್ಪಿಕೊಂಡಿದ್ದಾನೆ. ಪ್ಲಂಬರ್ ಕೆಲಸ ಮಾಡುತ್ತಿದ್ದ ಗಣೇಶ್ ವಿರುದ್ಧ ಸಿ.ಕೆ.ಅಚ್ಚುಕಟ್ಟು, ಆನೇಕಲ್, ಕೋಣನಕುಂಟೆ, ಬಸವೇಶ್ವರ ನಗರ,ಸೂರ್ಯನಗರ, ಮಹದೇವಪುರ, ವಿದ್ಯಾರಣ್ಯಪುರ, ಬಾಗಲಗುಂಟೆ, ಕುದೂರು ಸೇರಿ ವಿವಿಧ ಠಾಣೆಗಳಲ್ಲಿ 21 ಪ್ರಕರಣ ಇದ್ದವು. ಶ್ರೀಧರ್ ವಿರುದ್ಧ ಸೋಲದೇವನಹಳ್ಳಿ ಠಾಣೆಯಲ್ಲಿ 4 ಪ್ರಕರಣ ಇದ್ದವು ಎಂದು ಪೊಲೀಸರು ಹೇಳಿದರು.

ಎ.ರಾಘವೇಂದ್ರ ಅವರು ಕುಟುಂಬ ಸಮೇತ 2025ರ ಫೆಬ್ರುವರಿ 23ರಿಂದ ಉತ್ತರಪ್ರದೇಶದ ಪ್ರಯಾಗ್‌ರಾಜ್‌ಗೆ ತೆರಳಿದ್ದರು. ಎರಡು ದಿನ ಬಿಟ್ಟು ಬಂದಾಗ ಕಳ್ಳತನ ನಡೆದಿರುವುದು ಪತ್ತೆಯಾಗಿತ್ತು.



# ಅಮೆರಿಕದ ದಂಪತಿ ನೆಲಸಿದ್ದ ವಿಲ್ಲಾದಲ್ಲಿ ಕಳವು

## ಆರೋಪಿ ಬಂಧಿಸಿದ ಪೊಲೀಸರು • 176 ಗ್ರಾಂ ಚಿನ್ನ, ವಜ್ರಾಭರಣ ವಶ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಮೆರಿಕದ ಮೆರಿಯಲ್ ಮೊರೆನೊ ಅವರು ನಗರದಲ್ಲಿ ನೆಲಸಿದ್ದ ವಿಲ್ಲಾದಲ್ಲಿ ಚಿನ್ನ, ವಜ್ರದ ಆಭರಣ, ನಗದು ಕಳ್ಳತನ ಮಾಡಿದ್ದ ಆರೋಪಿಯನ್ನು ಜೀವನ್ ಭಿಮಾನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.



ಚಂದನ್ ರೌಲ್

ಪಶ್ಚಿಮ ಬಂಗಾಳದ ಚಂದನ್ ರೌಲ್ ಬಂಧಿತ ಆರೋಪಿ.

ಆರೋಪಿಯಿಂದ ₹1 ಕೋಟಿ ಮೌಲ್ಯದ 176 ಗ್ರಾಂ ಚಿನ್ನ ಹಾಗೂ ವಜ್ರದ ಆಭರಣ, ₹39 ಸಾವಿರ ನಗದು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಅಮೆರಿಕದ ಟೆಕ್ಸಾಸ್‌ನ ಮೆರಿಯಲ್ ಮೊರೆನೊ ಅವರು ನಗರದ ಎಂಎನ್‌ಸಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಕೋಡಿಹಳ್ಳಿಯ ರುಸ್ತುಂಭಾಗ್ ಮುಖ್ಯರಸ್ತೆಯಲ್ಲಿರುವ ವಿಲ್ಲಾದಲ್ಲಿ ನೆಲಸಿದ್ದರು.




ಜಪ್ತಿ ಮಾಡಿಕೊಂಡ ಚಿನ್ನದ ಆಭರಣ

ಜ.21ರಂದು ಅವರು ಕೆಲಸಕ್ಕೆ ತೆರಳಿದ್ದರು. ಕೆಲಸ ಮುಗಿಸಿಕೊಂಡು ವಿಲ್ಲಾಕ್ಕೆ ವಾಪಸ್ ಬಂದು ನೋಡಿದಾಗ ಕೊಠಡಿಯಲ್ಲಿದ್ದ ಲಾಕರ್‌ನಲ್ಲಿ ಇಡಲಾಗಿದ್ದ ಚಿನ್ನ ಹಾಗೂ ವಜ್ರದ ಆಭರಣಗಳು ಕಳ್ಳತನ ಆಗಿರುವುದು ಗೊತ್ತಾಗಿತ್ತು ಎಂದು ಮೂಲಗಳು ಹೇಳಿವೆ.

ಮೆರಿಯಲ್ ಮೊರೆನೊ ಅವರ ವಿಲ್ಲಾದಲ್ಲಿ ಚಂದನ್ ರೌಲ್ ಕೆಲಸ ಮಾಡುತ್ತಿದ್ದ. ಮೆರಿಯಲ್ ಕೆಲಸಕ್ಕೆ ಹೋಗಿದ್ದಾಗ ಆರೋಪಿ ಚಿನ್ನಾಭರಣ ದೋಚಿ ಪರಾರಿಯಾಗಿದ್ದ ಎಂದು ಪೊಲೀಸರು ಹೇಳಿದರು.

ವಿಲ್ಲಾದಲ್ಲಿ ಕಳ್ಳತನ ನಡೆದಿರುವ ಮಾಹಿತಿಯನ್ನು ಮೆರಿಯಲ್ ಅವರು ಅಮೆರಿಕಕ್ಕೆ ತೆರಳಿದ್ದ ಪತಿಗೆ ಕರೆ ಮಾಡಿ ತಿಳಿಸಿದ್ದರು. ಅವರು ತಕ್ಷಣವೇ ಭಾರತದಲ್ಲಿರುವ ಅಮೆರಿಕದ ರಾಯಭಾರ ಕಚೇರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರು. ಅಲ್ಲಿನ ಅಧಿಕಾರಿಗಳು, ರಾಜ್ಯ ಪೊಲೀಸ್ ಮಹಾನಿರ್ದೇಶಕರ ಕಚೇರಿಗೆ ದೂರು ನೀಡಿದ್ದರು. ಮೆರಿಯಲ್ ಅವರಿಂದ ದೂರು ಪಡೆದ ಜೀವನ್ ಭಿಮಾನಗರ ಠಾಣೆ ಪೊಲೀಸರು, ಚಂದನ್ ರೌಲ್ ಪತ್ತೆ ಮಾಡಿ ಬಂಧಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಯುಎಸ್ ಡಾಲರ್‌ಗಳನ್ನು ಭಾರತೀಯ ಕರೆನ್ಸಿಗೆ ಬದಲಾವಣೆ ಮಾಡಿಕೊಂಡು ಪಶ್ಚಿಮ ಬಂಗಾಳಕ್ಕೆ ಪರಾರಿಯಾಗಲು ಆರೋಪಿ ಯತ್ನಿಸಿದ್ದ. ಅಷ್ಟರಲ್ಲಿ ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು. ಕ್ಷಿಪ್ರವಾಗಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ನಗರ ಪೊಲೀಸರು ಬಂಧಿಸಿದ್ದಾರೆ. ಕಾರ್ಯಾಚರಣೆ ನಡೆಸಿದ ತಂಡಕ್ಕೆ ಧನ್ಯವಾದ ತಿಳಿಸಿರುವುದಾಗಿ ಮೆರಿಯಲ್ ಮೊರೆನೊ ಹೇಳಿದರು.

## ₹18 ಕೋಟಿ ಮೌಲ್ಯದ ಆಭರಣ ಕಳವು: ಹೊರ ರಾಜ್ಯಕ್ಕೆ ತಂಡ

ಬೆಂಗಳೂರು: ಬಿಲ್ಡರ್ ಮನೆಯಲ್ಲಿ ₹18 ಕೋಟಿ ಮೌಲ್ಯದ ಚಿನ್ನಾಭರಣ ಕಳ್ಳತನ ಪ್ರಕರಣದ ತನಿಖೆಗೆ ವಿಶೇಷ ತಂಡ ರಚಿಸಲಾಗಿದ್ದು, ಆರೋಪಿಗಳ ಪತ್ತೆಗೆ ಆ ತಂಡಗಳು ಹೊರರಾಜ್ಯಕ್ಕೆ ತೆರಳಿವೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಮಾಹಿತಿ ನೀಡಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲವು ಸುಳಿವು ಸಿಕ್ಕಿದ್ದು ಶೀಘ್ರದಲ್ಲೇ ಆರೋಪಿಗಳನ್ನು ಬಂಧಿಸಲಾಗುವುದು ಎಂದು ಹೇಳಿದರು.

ಮಾರತ್‌ಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಕೆಂಪಾಪುರ ರಸ್ತೆಯ ಯಮಲೂರಿನ ನಿವಾಸಿ, ಬಿಲ್ಡರ್ ಎಂ.ಆರ್. ಶಿವಕುಮಾರ್ ಅವರ ಮನೆಯಲ್ಲಿ ಚಿನ್ನ ಹಾಗೂ ವಜ್ರದ ಆಭರಣಗಳನ್ನು ಕಳ್ಳತನ ಮಾಡಲಾಗಿತ್ತು. ಮನೆಯಲ್ಲಿ ಕೆಲಸಕ್ಕಿದ್ದ ನೇಪಾಳದ ದಿನೇಶ್ (32) ಹಾಗೂ ಕಮಲಾ (25) ಅವರ ವಿರುದ್ಧ ಎಂ.ಆರ್. ಶಿವಕುಮಾರ್ ಅವರ ಪುತ್ರ ಶಿಮಾಂತ್ ಎಸ್. ಅರ್ಜುನ್ ಅವರು ದೂರು ನೀಡಿದ್ದಾರೆ. ತನಿಖೆ ನಡೆಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

₹17.73 ಕೋಟಿಯ 11.5 ಕೆ.ಜಿ ಚಿನ್ನ ಹಾಗೂ ವಜ್ರದ ಆಭರಣ, ₹14.60 ಲಕ್ಷ ಮೌಲ್ಯದ 5 ಕೆ.ಜಿ ಬೆಳ್ಳಿಯ ಸಾಮಗ್ರಿ, ₹11.50 ಲಕ್ಷ ನಗದು ಕಳ್ಳತನ ಮಾಡಲಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ದಿನೇಶ್ ಹಾಗೂ ಕಮಲಾ ಅವರನ್ನು ಮನೆಯ ಕೆಲಸಕ್ಕೆ ನೇಮಿಸಿಕೊಳ್ಳಲಾಗಿತ್ತು. ಅವರೇ ಕೃತ್ಯ ಎಸಗಿ ಪರಾರಿ ಆಗಿದ್ದಾರೆ. ಮನೆಯ ಮೊದಲ ಮಹಡಿಯ ಬೆಡ್ ರೂಂನಲ್ಲಿದ್ದ ಲಾಕರ್ ಅನ್ನು ಸಲಾಕೆಯಿಂದ ಮೀಟಿ ಕಳ್ಳತನ ಮಾಡಲಾಗಿದೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ದಿನೇಶ್ ಹಾಗೂ ಕಮಲಾ ಅವರು 20 ದಿನಗಳ ಹಿಂದೆ ಕೆಲಸಕ್ಕೆ ಸೇರಿಕೊಂಡಿದ್ದರು.

# ದರ್ಶನ್ ನೋಡಲು ಕಾನ್‌ಸ್ಟೆಬಲ್‌ಗೆ ಅವಕಾಶ: ವಾರ್ಡನ್ ಎತ್ತಂಗಡಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಸಿಸಿಟಿವಿ ಕ್ಯಾಮೆರಾಗಳ ಕಣ್ತಪ್ಪಿಸಿ ನಟ ದರ್ಶನ್ ಅವರನ್ನು ನೋಡಲು ಅನುವು ಮಾಡಿಕೊಟ್ಟಿದ್ದ ಪ್ರಕರಣದಲ್ಲಿ ಜೈಲು ವಾರ್ಡನ್ ಪ್ರಭುಶಂಕರ್ ಚೌಹಾಣ್ ಅವರನ್ನು ಚಾಮರಾಜನಗರ ಜಿಲ್ಲಾ ಕಾರಾಗೃಹಕ್ಕೆ ವರ್ಗಾವಣೆ ಮಾಡಿ, ಇಲಾಖಾ ತನಿಖೆಗೆ ಆದೇಶಿಸಲಾಗಿದೆ.

ಯಲಹಂಕ ಪೊಲೀಸ್ ಠಾಣೆಯ ಕಾನ್‌ಸ್ಟೆಬಲ್‌ವೊಬ್ಬರು ಆರೋಪಿಗಳನ್ನು ಜೈಲಿಗೆ ಬಿಡಲು ಇತ್ತೀಚೆಗೆ ಬಂದಿದ್ದರು. ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿ ಇರುವ ದರ್ಶನ್ ಅವರ ಭೇಟಿಗೆ ಅವಕಾಶ ಕಲ್ಪಿಸುವಂತೆ ಚೌಹಾಣ್ ಬಳಿ ಕೇಳಿಕೊಂಡಿದ್ದರು. ಸಿಸಿಟಿವಿ ಕ್ಯಾಮೆರಾ ಕಣ್ತಪ್ಪಿಸಿ, ಕಾನ್‌ಸ್ಟೆಬಲ್‌ಗೆ ದರ್ಶನ್ ಅವರನ್ನು ತೋರಿಸಿದ್ದರು. ಈ ವಿಚಾರ ಕಾರಾಗೃಹ ಇಲಾಖೆಯ ಡಿಜಿಪಿ ಅಲೋಕ್ ಕುಮಾರ್ ಅವರ ಗಮನಕ್ಕೆ ಬಂದಿತ್ತು.

ದರ್ಶನ್ ಅವರ ಬಳಿ ಮಾಹಿತಿ ಪಡೆದಾಗ 'ಯಾರೊ ಖಾಕಿ ಬಟ್ಟೆ ಧರಿಸಿದ್ದವರು ಬಂದು ಹೋಗಿದ್ದರು' ಎಂದು ಹೇಳಿದರು. ಈ ಹೇಳಿಕೆ ಆಧರಿಸಿ ಆಂತರಿಕ ತನಿಖೆ ನಡೆಸಿದಾಗ ವಾರ್ಡನ್ ಪ್ರಭುಶಂಕರ್ ಚೌಹಾಣ್ ಕೃತ್ಯ ಎಸಗಿರುವುದು ಕಂಡು ಬಂದಿತ್ತು ಎಂದು ಮೂಲಗಳು ಹೇಳಿವೆ.

ವಾರ್ಡನ್ ವಿರುದ್ಧ ಇಲಾಖಾ ತನಿಖೆಗೆ ಆದೇಶಿಸಿ, ವರ್ಗಾವಣೆ ಮಾಡಲಾಗಿದೆ. ಜೊತೆಗೆ ಯಲಹಂಕದ ಪೊಲೀಸ್ ಕಾನ್‌ಸ್ಟೆಬಲ್ ವಿರುದ್ಧವೂ ಕ್ರಮಕ್ಕೆ ಸೂಚಿಸಲಾಗಿದೆ ಎಂದು ಮೂಲಗಳು ಹೇಳಿವೆ.

# ಹೊರ ರಾಜ್ಯದಲ್ಲಿ ಕಾರು ಕದ್ದು ನಗರದಲ್ಲಿ ಮಾರಾಟ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನವದೆಹಲಿ, ಮುಂಬೈ ಸೇರಿದಂತೆ ದೇಶದ ಬೇರೆ ಬೇರೆ ಕಡೆಗಳಲ್ಲಿ ದುಬಾರಿ ಬೆಲೆಯ ಕಾರುಗಳನ್ನು ಕಳ್ಳತನ ಮಾಡಿಕೊಂಡು ಬಂದು, ಮಧ್ಯವರ್ತಿಗಳ ಮೂಲಕ ಬೆಂಗಳೂರಿನಲ್ಲಿ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದ ಜಾಲವನ್ನು ಪತ್ತೆಹಚ್ಚಿರುವ ಗೋವಿಂದಪುರ ಠಾಣೆಯ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿ ಆಗಿದ್ದಾರೆ.

ಇಲ್ಲಿನ ಫ್ರೇಜರ್‌ಟೌನ್ ನಿವಾಸಿ ಸೈಯದ್ ನಿಜಾಮ್ (37) ಹಾಗೂ ತೆಲಂಗಾಣದ ಮೊಹಮ್ಮದ್ ಮುಜಾಫರ್ (26) ಬಂಧಿತರು.

ಬಂಧಿತ ರಿಂದ ₹2.31 ಕೋಟಿ ಮೌಲ್ಯದ 9 ಕಾರುಗಳು ಹಾಗೂ ಒಂದು ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಹೇಳಿದರು.



ಜಾಫರ್



ನಿಜಾಮ್

ಡಿ.31ರಂದು ಗೋವಿಂದಪುರ 10ನೇ ಕ್ರಾಸ್ ರಸ್ತೆಯಲ್ಲಿ ನಿಲುಗಡೆ ಮಾಡಿದ್ದ ಸ್ಕೂಟರ್ ಕಳ್ಳತನ ಆಗಿತ್ತು. ಸ್ಕೂಟರ್ ಮಾಲೀಕರು ನೀಡಿದ ದೂರು ಆಧರಿಸಿ, ತನಿಖೆ ನಡೆಸಲಾಯಿತು. ಠಾಣಾ ವ್ಯಾಪ್ತಿಯ ಇಂದಿರಾ ಕ್ಯಾಂಟೀನ್ ಬಳಿ ಸಂಶಯಾಸ್ಪದವಾಗಿ ಓಡಾಡುತ್ತಿದ್ದ ಸೈಯದ್ ನಿಜಾಮ್ ಎಂಬಾತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕದ್ದ ವಾಹನಗಳ ಮಾರಾಟದಲ್ಲಿ ಮಧ್ಯವರ್ತಿಯಾಗಿ ಕೆಲಸ ಮಾಡುತ್ತಿರುವುದಾಗಿ ಒಪ್ಪಿಕೊಂಡಿದ್ದ. ಆತ ನೀಡಿದ ಸುಳಿವು ಆಧರಿಸಿ, ನವದೆಹಲಿಯಲ್ಲಿ ಮೊಹಮ್ಮದ್ ಮುಜಾಫರ್‌ನನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ನವದೆಹಲಿಯ ವ್ಯಕ್ತಿಯೊಬ್ಬ ದುಬಾರಿ ಬೆಲೆಯ ಕಾರುಗಳನ್ನು ಕಳ್ಳತನ ಮಾಡುತ್ತಿದ್ದ. ಕದ್ದ ಕಾರುಗಳ ಮಾರಾಟ ಜಾಲದಲ್ಲಿ ಸೈಯದ್ ನಿಜಾಮ್ ಹಾಗೂ ಮೊಹಮ್ಮದ್ ಮುಜಾಫರ್ ಅವರು ಮಧ್ಯವರ್ತಿಗಳಾಗಿ ಕೆಲಸ ಮಾಡುತ್ತಿದ್ದರು. ನಕಲಿ ದಾಖಲೆಗಳನ್ನು ಸೃಷ್ಟಿಸಿ, ಮಾರಾಟ ಮಾಡುತ್ತಿದ್ದರು. ಆರೋಪಿಗಳ ಬಂಧನದಿಂದ ನವದೆಹಲಿಯ ವಿವಿಧ ಠಾಣೆಗಳಲ್ಲಿ ದಾಖಲಾಗಿದ್ದ ಎಂಟು ಹಾಗೂ ನೊಯ್ಡಾ ಠಾಣೆಯಲ್ಲಿ ದಾಖಲಾಗಿದ್ದ ಒಂದು ಪ್ರಕರಣವು ಪತ್ತೆ ಆಗಿದೆ. ಪ್ರಮುಖ ಆರೋಪಿ ತಲೆಮರೆಸಿಕೊಂಡಿದ್ದು, ಹುಡುಕಾಟ ನಡೆಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

# ಗಮನ ಬೇರೆಡೆ ಸೆಳೆದು ಕಳವು: ದಂಪತಿ ಬಂಧನ

**ಬೆಂಗಳೂರು:** ಜಾತ್ರೆಗಳಲ್ಲಿ ಬೊಂಬೆ ಮಾರಾಟ ಮಾಡುತ್ತಾ ಸಾರ್ವಜನಿಕರ ಗಮನವನ್ನು ಬೇರೆಡೆಗೆ ಸೆಳೆದು ಚಿನ್ನದ ಸರಗಳನ್ನು ಕಳ್ಳತನ ಮಾಡುತ್ತಿದ್ದ ದಂಪತಿಯನ್ನು ಕೆ.ಆರ್. ಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಗಾಯತ್ರಿ ಹಾಗೂ ಶ್ರೀಕಾಂತ್ ಬಂಧಿತರು. ದೇವಸಂದ್ರದ ಬಳಿ ತೆರಳುತ್ತಿದ್ದ ದಂಪತಿಯ ಗಮನವನ್ನು ಬೇರೆಡೆಗೆ ಸೆಳೆದು ಕಳ್ಳತನ ಮಾಡುವಾಗ ಸಾರ್ವಜನಿಕರಿಗೆ ಆರೋಪಿಗಳು ಸಿಕ್ಕಿಬಿದ್ದಿದ್ದರು. ಆರೋಪಿಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದರು. ಬಳಿಕ ವಿಚಾರಣೆ ನಡೆಸಿದಾಗ ಜಾತ್ರೆ, ಸಂತೆ ಹಾಗೂ ಬಸ್‌ಗಳಲ್ಲಿ ಜನರ ಗಮನವನ್ನು ಬೇರೆಡೆಗೆ ಸೆಳೆದು ಆಭರಣ ಕಳ್ಳತನ ಮಾಡುತ್ತಿರುವುದಾಗಿ ಒಪ್ಪಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು.

ಬಂಧಿತರಿಂದ ₹60 ಲಕ್ಷ ಮೌಲ್ಯದ 398 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.



## ನಗರದಲ್ಲಿ ಇಂದು

**54ನೇ ವಾರ್ಷಿಕೋತ್ಸವ: ಅಧ್ಯಕ್ಷತೆ:** ಎನ್.ಆರ್. ಪಂಡಿತ್ ಆರಾಧ್ಯ, ಅತಿಥಿಗಳು: ಡಾ.ಆಂಜನಪ್ಪ ಟಿ.ಎಚ್.,ವೂಡೇ ಪಿ.ಕೃಷ್ಣ, ಆಯೋಜನೆ ಹಾಗೂ ಸ್ಥಳ: ಶೇಷಾದ್ರಿಪುರಂ ಸ್ವಾಯತ್ತ ಪದವಿ ಪೂರ್ವ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 9.30

**ವಿವೇಕದೀಪ್ತಿ ಹಾಗೂ ದಕ್ಷಿಣಾಸ್ಯದರ್ಶಿನೀ ಉದ್ಘಾಟನಾ ಸಮಾರಂಭ:** ಸಾನ್ನಿಧ್ಯ: ಶಂಕರ ಭಾರತಿ ಸ್ವಾಮೀಜಿ, ಬ್ರಹ್ಮಾನಂದ ಭಾರತಿ ಸ್ವಾಮೀಜಿ, ಆಯೋಜನೆ: ವೇದಾಂತ ಭಾರತಿ, ಸ್ಥಳ:ತ್ರಿಪುರ ವಾಸಿನಿ, ಅರಮನೆ ಮೈದಾನ, ಬೆಳಿಗ್ಗೆ 10



ಶಂಕರಭಾರತಿ ಸ್ವಾಮೀಜಿ

**ಸಾಧಕರಿಗೆ 'ಕಲಾ ಸಾಮ್ರಾಟ್ ಸ್ಟಾರ್ ಅವಾರ್ಡ್ ಪ್ರಶಸ್ತಿ' ಪ್ರದಾನ ಸಮಾರಂಭ:** ಸಾನ್ನಿಧ್ಯ: ಸಿದ್ದರಾಜು ಸ್ವಾಮೀಜಿ, ಅಧ್ಯಕ್ಷತೆ: ಗೋಲ್ಡನ್ ಸುರೇಶ್, ಉದ್ಘಾಟನೆ: ಉಮಾಶ್ರೀ, ಆಯೋಜನೆ: ಓಂ ಶ್ರೀ ಸಾಯಿರಾಂ ಸಾಂಸ್ಕೃತಿಕ ಕಲಾ ವೇದಿಕೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 2

**ಗಣರಾಜ್ಯೋತ್ಸವ ಹಾಗೂ ಕೆ.ಸುಭಾಷ್ ಆಳ್ವ ಸ್ಮಾರಕ ದತ್ತಿನಿಧಿ ಸ್ಪರ್ಧೆಗಳು:** ಅಧ್ಯಕ್ಷತೆ: ಮೋಹನ್‌ದೇವ್ ಆಳ್ವ, ಉದ್ಘಾಟನೆ: ಸಿ. ನಾಗರಾಜ್, ಅತಿಥಿ: ಗೊಲ್ಲಹಳ್ಳಿ ಶಿವಪ್ರಸಾದ್, ಆಯೋಜನೆ ಹಾಗೂ ಸ್ಥಳ: ಅಖಿಲ ಕರ್ನಾಟಕ ಮಕ್ಕಳ ಕೂಟ, ಕೋಟೆ, ಮಧ್ಯಾಹ್ನ 3

**17ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಉದ್ಘಾಟನಾ ಸಮಾರಂಭ:** ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಅತಿಥಿಗಳು: ಛಲವಾದಿ ನಾರಾಯಣಸ್ವಾಮಿ, ಆರ್. ಅಶೋಕ, ಸಾಧು ಕೋಕಿಲ, ವಿಶೇಷ ಅತಿಥಿ: ಪ್ರಕಾಶ್ ರಾಜ್, ರುಕ್ಮಿಣಿ ವಸಂತ್, ಉಪಸ್ಥಿತಿ: ನರಸಿಂಹಲು ಎಂ., ಆಯೋಜನೆ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ಚಲನಚಿತ್ರ ಮಂಡಳಿ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ, ಸ್ಥಳ: ವಿಧಾನಸೌಧದ ಮುಂಭಾಗ, ಪೂರ್ವದ್ವಾರದ ಮೆಟ್ಟಿಲು, ಸಂಜೆ 5



ರುಕ್ಮಿಣಿ ವಸಂತ್

**ದಾ ಸ ವಾ ಣಿ :** ಸಹನಾವಾದಿರಾಜ್, ಪಿಟೀಲು: ಎಂ.ಎನ್. ಸತ್ಯ ನಾರಾಯಣ, ಮೃದಂಗ: ಶ್ರೀನಿವಾಸ್ ಅನಂತ ರಾಮಯ್ಯ, ಆಯೋಜನೆ ಹಾಗೂ ಸ್ಥಳ: ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ 5ನೇ ಬಡಾವಣೆ, ಸಂಜೆ 5.15

**ಆರಾಧನಾ ಸಂಗೀತೋತ್ಸವ:** ಗಾಯನ: ರಂಗನಾಥ ಶರ್ಮ, ವಯೋಲಿನ್: ಎಚ್.ಕೆ. ವೆಂಕಟರಾಮ್, ಮೃದಂಗ: ಆನೂರು ಅನಂತಕೃಷ್ಣ ಶರ್ಮ, ಘಟ: ರಂಗನಾಥ ಚಕ್ರವರ್ತಿ, ಆಯೋಜನೆ: ಬಿಟಿಎಂ ಕಲ್ಚರಲ್ ಅಕಾಡೆಮಿ, ಸ್ಥಳ: ಶ್ರೀರಮಣ ಮಹರ್ಷಿ ಅಕಾಡೆಮಿ ಫಾರ್ ದಿ ಬ್ಲೈಂಡ್, ಜೆ.ಪಿ. ನಗರ, ಸಂಜೆ 5.30

**ಪಾವಗಡ ಪ್ರಕಾಶರಾವ್ ಅವರಿಂದ ಕವಿ ಲಕ್ಷ್ಮೀಶರ 'ಜೈಮಿನಿ ಭಾರತ' ಉಪನ್ಯಾಸ ಮಾಲಿಕೆ:** ಅತಿಥಿ: ಭಾಸ್ಕರ್ ರಾವ್, ಆಯೋಜನೆ: ಡಾ.ಪಾವಗಡ ಪ್ರಕಾಶರಾಯರ ಅಮೃತ ಮಹೋತ್ಸವ ಸಮಿತಿ, ಸ್ಥಳ: ಪತ್ತಿ ಸಭಾಂಗಣ, ಶ್ರೀರಾಮಮಂದಿರ, ಎನ್.ಆರ್. ಕಾಲೊನಿ, ಸಂಜೆ 5.45

**61ನೇ ನಾದಜ್ಯೋತಿ ಸಂಗೀತ ಸಂಭ್ರಮ:** ವೀಣಾ–ವೇಣು: ಡಿ. ಬಾಲಕೃಷ್ಣ, ವಿ. ವಂಶೀಧರ್, ಮೃದಂಗ: ಎ.ರೇಣುಕ ಪ್ರಸಾದ್, ಘಟ: ಉತ್ತಮ್ ಎಸ್., ಆಯೋಜನೆ: ನಾದ ಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6

**'ಡರ್ಮಕಾನ್' ಚರ್ಮ ವಿಜ್ಞಾನ ಸಮ್ಮೇಳನ:** ಅತಿಥಿಗಳು: ಶರಣಪ್ರಕಾಶ ಪಾಟೀಲ, ಡಾ. ಭಗವಾನ್ ಬಿ.ಸಿ., ಡಾ. ರಾಜೀವ್ ಶರ್ಮ, ಡಾ. ವಿನಯ್ ಸಿಂಗ್, ಡಾ. ಭೂಮೇಶ್ ಕುಮಾರ್ ಕೆ., ಆಯೋಜನೆ: ಭಾರತೀಯ ಚರ್ಮ, ಲೈಂಗಿಕ ಮತ್ತು ಕುಷ್ಠ ರೋಗ ತಜ್ಞರ ಸಂಘ (ಐಎಡಿವಿಎಲ್), ಸ್ಥಳ: ಓಷನ್ ಹಾಲ್, ಕ್ಲಾರ್ಕ್ಸ್ ಎಕ್ಸೋಟಿಕಾ ಕನ್ವೆನ್ಷನ್ ಆ್ಯಂಡ್ ರೆಸಾರ್ಟ್, ಸಂಜೆ 6

**'ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಕಾಡುವ ಸ್ತ್ರೀ ಪಾತ್ರಗಳು' ಬಗ್ಗೆ ಉಪನ್ಯಾಸ:** ಯಶಸ್ವಿನಿ ಎಸ್., ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ,ಆಯೋಜನೆ ಹಾಗೂ ಸ್ಥಳ: ಕನ್ನಡ ಯುವಜನ ಸಂಘ, ಎಚ್.ಸಿದ್ದಯ್ಯ ರಸ್ತೆ, ಹೊಂಬೇಗೌಡ ನಗರ, ಸಂಜೆ 6.30

**'ದಾಸ ಶ್ರುತಿ' ಗಾಯನ:** ಅರ್ಪಿತಾ ಜಹಗೀರ್ದಾರ್, ಹಾರ್ಮೋನಿಯಂ: ಸುಧನ್ವ, ತಬಲಾ: ಪ್ರಮೋದ್ ಗಬ್ಬೂರು, ಆಯೋಜನೆ ಹಾಗೂ ಸ್ಥಳ: ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಪವಮಾನಪುರ, ಬನಶಂಕರಿ 6ನೆ ಹಂತ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಚಿಟಿಕೆ ಸುದ್ದಿ

## 31ಕ್ಕೆ ಜಿನಸಹಸ್ರಾಷ್ಟ ನಾಮಾರ್ಚನೆ

ಬೆಂಗಳೂರು: ವಿಶ್ವಶಾಂತಿ ಯುವಸೇವಾ ಸಮಿತಿಯು ಸಕಲ ಜೈನ ಸಮಾಜದ ವಿವಿಧ ಸಂಘಗಳ ಸಹಯೋಗದೊಂದಿಗೆ 'ಜಿನಸಹಸ್ರಾಷ್ಟ ನಾಮಾರ್ಚನೆ' ಕಾರ್ಯಕ್ರಮವನ್ನು ಜ.31 ಮತ್ತು ಫೆ.1ರಂದು ರವಿಶಂಕರ ಗುರೂಜಿ ಆಶ್ರಮದ ವೇದ ವಿಜ್ಞಾನ ಮಹಾವಿದ್ಯಾಪೀಠ ಶಾಲೆಯ ಕ್ರೀಡಾಂಗಣದಲ್ಲಿ ಆಯೋಜಿಸಿದೆ.

'ಏಕಕಾಲಕ್ಕೆ ರಾಜ್ಯದ 25 ಕ್ಷೇತ್ರಗಳಲ್ಲಿ ಜಿನಸಹಸ್ರಾಷ್ಟ ನಾಮಾರ್ಚನೆ ಕೈಗೊಳ್ಳುವ ಮೂಲಕ ವಿಶ್ವದಾಖಲೆ ನಿರ್ಮಿಸುವ ಉದ್ದೇಶವಿದೆ. ದಿಗಂಬರ ಜೈನ ಮುನಿ ಪುರಾಣ ಸಾಗರ ಮಹಾರಾಜ್, ಪಂಚಕೂಟ ಬಸದಿಯ ಭಾನುಕೀರ್ತಿ ಭಟ್ಟಾರಕ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ' ಎಂದು ಸಮಿತಿ ಅಧ್ಯಕ್ಷ ನವೀನ್ ಪ್ರಸಾದ್ ಕೆ.ಎಂ. ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ವಿವರಗಳಿಗೆ 7483075724 ಸಂಪರ್ಕಿಸಬಹುದು.

ಸುದ್ದಿಗೋಷ್ಠಿಯಲ್ಲಿ ಸಮಿತಿಯ ಕಾರ್ಯಾಧ್ಯಕ್ಷ ಧೀರಜ್ ಕುಮಾರ್ ಜೈನ್, ಉಪಾಧ್ಯಕ್ಷೆ ಶಶಿರೇಖಾ ಬೆಟ್ಕೆರೆ ಉಪಸ್ಥಿತರಿದ್ದರು.

## ಆರೋಗ್ಯ ಹಕ್ಕಿನ ಜಾಥಾ

ಬೆಂಗಳೂರು: ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಉಚಿತ ಮತ್ತು ಗುಣಮಟ್ಟದ ಔಷಧಗಳನ್ನು ಒದಗಿಸಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ರಾಜ್ಯ ಡ್ರಗ್ಸ್ ಆ್ಯಕ್ಷನ್ ಫೋರಂ ಫೆ.2ರಿಂದ ಹದಿನೈದು ದಿನ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಆರೋಗ್ಯ ಹಕ್ಕಿನ ಜಾಥಾ ಹಮ್ಮಿಕೊಂಡಿದೆ.

ಫೋರಂ ಅಧ್ಯಕ್ಷ ಡಾ. ಗೋಪಾಲ ದಾಬಡೆ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ರಾಜ್ಯದಲ್ಲಿ ಆರೋಗ್ಯದ ಹಕ್ಕು ಕಾನೂನು ಜಾರಿಗೆ ಬರಬೇಕು, ಖಾಸಗಿ ಆಸ್ಪತ್ರೆಗಳಲ್ಲಿ ಶುಲ್ಕ ನಿಯಂತ್ರಿಸಬೇಕು ಮತ್ತು ಸರ್ಕಾರಿ ಆಸ್ಪತ್ರೆಗಳ ಖಾಸಗೀಕರಣ ತಡೆಯಬೇಕು' ಎಂದು ಒತ್ತಾಯಿಸಿದರು.

ಸಾರ್ವತ್ರಿಕ ಆರೋಗ್ಯ ಆಂದೋಲನದ ಪ್ರಸನ್ನ, ಲಿಂಗತ್ವ ಮತ್ತು ಲೈಂಗಿಕ ಬಹುತ್ವಕ್ಕಾಗಿ ಚಳವಳಿಯ ವೈಶಾಲಿ, ಆ್ಯಕ್ಷನ್ ಫಾರ್ ಈಕ್ವಿಟಿ ಸಂಘದ ಸ್ವಾತಿ ಸುದ್ದಿಗೋಷ್ಠಿಯಲ್ಲಿದ್ದರು

## ವಾಕಥಾನ್ ಬೆಂಗಳೂರು 31ಕ್ಕೆ

ಬೆಂಗಳೂರು: ಸಮರ್ಥನಂ ಟ್ರಸ್ಟ್ ಫಾರ್ ದಿ ಡಿಸೇಬಲ್ಡ್ ಮತ್ತು ಓಪನ್‌ಟೆಕ್ಸ್ಟ್ ಸಹಯೋಗದಲ್ಲಿ ಜ.31ಕ್ಕೆ ಜಯನಗರದ ಕಿತ್ತೂರು ರಾಣಿ ಚೆನ್ನಮ್ಮ ಕ್ರೀಡಾಂಗಣದಲ್ಲಿ 19ನೇ ಆವೃತ್ತಿಯ 'ಬೆಂಗಳೂರು ವಾಕಥಾನ್' ಜರುಗಲಿದೆ.

'ವಿಶ್ವ ವಿಶೇಷಚೇತನರ ದಿನಾಚರಣೆ ಅಂಗವಾಗಿ ವಾಕಥಾನ್ ಆಯೋಜಿಸಲಾಗಿದೆ. ಎಲ್ಲರಿಗೂ ಆರೋಗ್ಯ ಎಂಬುದು ಈ ಬಾರಿಯ ಘೋಷವಾಕ್ಯ' ಎಂದು ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಮಹಾಂತೇಶ್ ಜಿ. ಕಿವಡಸಣ್ಣವರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮಾಹಿತಿಗಾಗಿ 9449864689, 9449864774 ಸಂಪರ್ಕಿಸಬಹುದು.

# 'ಲಾಂಛನದಲ್ಲಿ ಕನ್ನಡಕ್ಕೆ 2ನೇ ಸ್ಥಾನ'

## ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಕನ್ನಡ ಅನುಷ್ಠಾನದ ಪರಿಶೀಲನಾ ಸಭೆ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**
- ಕನ್ನಡಕ್ಕೆ ಮೊದಲ ಸ್ಥಾನ ನೀಡುವಂತೆ ಆಡಳಿತ ಮಂಡಳಿಗೆ ಸೂಚನೆ
- ಅಂಕಪಟ್ಟಿಗಳನ್ನು ದ್ವಿಭಾಷೆಯಲ್ಲಿ ವಿತರಿಸಲು ನಿರ್ದೇಶನ

ಬೆಂಗಳೂರು: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವ ವಿದ್ಯಾಲಯದ (ಆರ್‌ಜಿಯುಎಚ್‌ಎಸ್) ಲಾಂಛನದಲ್ಲಿ ಕನ್ನಡಕ್ಕೆ ಎರಡನೇ ಸ್ಥಾನ ನೀಡಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಕೂಡಲೇ ಈ ಬಗ್ಗೆ ಕ್ರಮಕೈಗೊಂಡು ಕನ್ನಡಕ್ಕೆ ಮೊದಲ ಸ್ಥಾನ ಒದಗಿಸಬೇಕು ಎಂದು ವಿ.ವಿ ಆಡಳಿತ ಮಂಡಳಿಗೆ ಸೂಚಿಸಿದ್ದಾರೆ.

ವಿಶ್ವವಿದ್ಯಾಲಯದಲ್ಲಿ ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಯನ್ನು ಬುಧವಾರ ನಡೆಸಿದ ಅವರು, 'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಕಾಯ್ದೆ ಪ್ರಕಾರ ಕನ್ನಡಕ್ಕೆ ಮೊದಲ ಆದ್ಯತೆ ನೀಡಬೇಕು. ಲಾಂಛನದಲ್ಲಿ ಕನ್ನಡಕ್ಕೆ ಮೊದಲ ಸ್ಥಾನ ಒದಗಿಸುವುದಕ್ಕೆ ಸಂಬಂಧಿಸಿದಂತೆ ಕೂಡಲೇ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ, ಕ್ರಮ ಕೈಗೊಳ್ಳಬೇಕು. ಈ ಲಾಂಛನದಲ್ಲಿ ವಿಶ್ವವಿದ್ಯಾಲಯದ ಸ್ಥಾಪನೆ ಕುರಿತ ಮಾಹಿತಿ ಕೇವಲ ಇಂಗ್ಲಿಷ್ ಭಾಷೆಯಲ್ಲಿದ್ದು, ಇದನ್ನು ಸಹ ಸರಿಪಡಿಸಬೇಕು' ಎಂದರು.

'ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ವಿತರಿಸುತ್ತಿರುವ ಅಂಕಪಟ್ಟಿಗಳಲ್ಲಿ ಕೇವಲ ಇಂಗ್ಲಿಷ್ ಮಾತ್ರ ಇದ್ದು, ಇದು ಕನ್ನಡದಲ್ಲಿಯೂ ಇರುವಂತೆ ಪರಿಷ್ಕರಿಸಬೇಕು' ಎಂದು ತಿಳಿಸಿದ ಅವರು, ಪದವಿ ಪ್ರಮಾಣಪತ್ರಗಳನ್ನು ದ್ವಿಭಾಷೆಯಲ್ಲಿ ವಿತರಿಸುತ್ತಿರುವ ಕ್ರಮವನ್ನು ಶ್ಲಾಘಿಸಿದರು.

'ಕನ್ನಡೇತರ ವಿದ್ಯಾರ್ಥಿಗಳಿಗೆ ಕನ್ನಡ ಪಠ್ಯ ನಿಗದಿಪಡಿಸಿದ್ದರೂ, ಅಂಕಗಳಿಕೆಗೆ ಅದನ್ನು ಪರಿಗಣಿಸದ ಕಾರಣ ಕನ್ನಡ ಕಲಿಕೆಯಲ್ಲಿ ಗಂಭೀರತೆ ಇಲ್ಲವಾಗಿದೆ. ಕನ್ನಡೇತರ ವಿದ್ಯಾರ್ಥಿಗಳು ಪಠ್ಯದ ಅನುಸಾರ ಕನ್ನಡ ಕಲಿತು, ಪರೀಕ್ಷೆಯಲ್ಲಿ ತೇರ್ಗಡೆ ಆಗುವುದನ್ನು ಕಡ್ಡಾಯ ಮಾಡಬೇಕಿದೆ. ಈ ನಿಟ್ಟಿನಲ್ಲಿ ವಿಶ್ವವಿದ್ಯಾಲಯ ಕ್ರಮಕೈಗೊಳ್ಳಬೇಕು' ಎಂದರು.

'ವಿಶ್ವವಿದ್ಯಾಲಯದಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಯನ್ನೊಳಗೊಂಡ ಕನ್ನಡ ಘಟಕಗಳನ್ನು ಸ್ಥಾಪಿಸಬೇಕು. ಜಾಲತಾಣದಲ್ಲಿ ಕನ್ನಡ ಭಾಷೆ ತಪ್ಪಾಗದಂತೆ ನೋಡಿಕೊಳ್ಳಬೇಕು' ಎಂದು ಸೂಚಿಸಿದರು.

'ಆರೋಗ್ಯ ಕ್ಷೇತ್ರದಲ್ಲಿ ಜನಸಾಮಾನ್ಯರು ಮತ್ತು ಜ್ಞಾನದ ನಡುವಿನ ಕಂದಕ ತಗ್ಗಿಸಲು ವಿಶ್ವ ವಿದ್ಯಾಲಯವು ಕನ್ನಡದಲ್ಲಿ ವೈದ್ಯಕೀಯ ಸಾಹಿತ್ಯ ಪ್ರಕಟಿಸಬೇಕು. ವೈದ್ಯರು ತಮ್ಮ ವೈದ್ಯಕೀಯ ಅನುಭವ ಹಾಗೂ ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪುಸ್ತಕಗಳನ್ನು ಹೊರತರಬೇಕು' ಎಂದು ಹೇಳಿದರು.

ಸಭೆಯಲ್ಲಿ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವ ವಿದ್ಯಾಲಯದ ಕುಲಪತಿ ಡಾ. ಭಗವಾನ್ ಬಿ.ಸಿ., ಕುಲಸಚಿವ ಸಿ. ಅರ್ಜುನ್ ಒಡೆಯರ್, ಕುಲಸಚಿವ (ಮೌಲ್ಯಮಾಪನ) ಡಾ. ರಿಯಾಜ್ ಬಾಷಾ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ, ಆಪ್ತ ಕಾರ್ಯದರ್ಶಿ ಟಿ.ಎಸ್. ಫಣಿಕುಮಾರ್, ವೈದ್ಯರಾದ ಡಾ.ಸಿ.ಎ ಕಿಶೋರ್ ಉಪಸ್ಥಿತರಿದ್ದರು.



ಸಭೆಯಲ್ಲಿ ಪುರುಷೋತ್ತಮ ಬಿಳಿಮಲೆ ಮಾತನಾಡಿದರು. ಡಾ. ಭಗವಾನ್ ಬಿ.ಸಿ., ಸಿ. ಅರ್ಜುನ್ ಒಡೆಯರ್, ಡಾ. ರಿಯಾಜ್ ಬಾಷಾ, ಸಂತೋಷ ಹಾನಗಲ್ಲ ಉಪಸ್ಥಿತರಿದ್ದರು

## 5 ಆಸ್ಪತ್ರೆಗಳಲ್ಲಿ ವಿಶೇಷ ಪೌಷ್ಟಿಕ ಆಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೋಗಿಗಳಿಗೆ ವಿಶೇಷ ಪೌಷ್ಟಿಕ ಆಹಾರ ವಿತರಿಸುವ ಯೋಜನೆಯನ್ನು ಆರೋಗ್ಯ ಇಲಾಖೆಯು ಐದು ಸರ್ಕಾರಿ ಆಸ್ಪತ್ರೆಗಳಿಗೆ ವಿಸ್ತರಿಸಿದೆ.

ಮಂಗಳೂರಿನ ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಧಾರವಾಡದ ಜಿಲ್ಲಾ ಆಸ್ಪತ್ರೆ, ಬೆಂಗಳೂರಿನ ಯಲಹಂಕ ಸಾರ್ವಜನಿಕ ಆಸ್ಪತ್ರೆ, ಕೆ.ಆರ್.ಪುರ ಸಾರ್ವಜನಿಕ ಆಸ್ಪತ್ರೆ ಹಾಗೂ ಬೆಂಗಳೂರು ಗ್ರಾಮಾಂತರದ ನೆಲಮಂಗಲ ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಗಳಿಗೆ ಪೌಷ್ಟಿಕ ಆಹಾರ ಪರಿಚಯಿಸಲಾಗುತ್ತಿದೆ. ಈ ಆಹಾರವನ್ನು ಇಸ್ಕಾನ್ ಪೂರೈಕೆ ಮಾಡಲಿದೆ. ನಾಲ್ಕು ತಿಂಗಳ ಅವಧಿಗೆ ಈ ಆಹಾರಕ್ಕೆ ₹ 2.83 ಕೋಟಿ ಭರಿಸಲಾಗುತ್ತಿದೆ.

ಕಳೆದ ಸೆಪ್ಟೆಂಬರ್‌ನಲ್ಲಿ ಈ ಯೋಜನೆಗೆ ಚಾಲನೆ ನೀಡಲಾಗಿದ್ದು, ಬೆಂಗಳೂರಿನ ಕೆ.ಸಿ. ಜನರಲ್ ಆಸ್ಪತ್ರೆ, ಜಯನಗರದ ಸಾರ್ವಜನಿಕ ಆಸ್ಪತ್ರೆ ಹಾಗೂ ಸರ್.ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆಯಲ್ಲಿ ಪೌಷ್ಟಿಕ ಆಹಾರ ವಿತರಣೆ ಮಾಡಲಾಗುತ್ತಿದೆ.

# ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗ ಕಲ್ಪಿಸುವ ಒಪ್ಪಂದಕ್ಕೆ ಸಹಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಪ್ರಮುಖ ಏರೋಸ್ಪೇಸ್ ಕಂಪನಿಗಳಲ್ಲಿ ಒಂದಾದ ರ್‍ಯಾಂಗ್‌ಸನ್ಸ್ ಏರೋಸ್ಪೇಸ್ ಮತ್ತು ಪ್ರಮುಖ ಬ್ಯಾಟರಿ ತಯಾರಕರಾದ ಎಕ್ಸೈಡ್ ಎನರ್ಜಿ ಕಂಪನಿಯು ಜಿಟಿಟಿಸಿಯಲ್ಲಿ ತರಬೇತಿ ಪಡೆದಿರುವ 600ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಉದ್ಯೋಗ ನೀಡಲಿದೆ.

ಈ ಕುರಿತು ಕೌಶಲ ಅಭಿವೃದ್ಧಿ, ಜೀವನೋಪಾಯ ಸಚಿವ ಶರಣಪ್ರಕಾಶ ಪಾಟೀಲ ಅವರ ಸಮ್ಮುಖದಲ್ಲಿ ರಾಜಾಜಿನಗರದ ಜಿಟಿಟಿಸಿ ಕ್ಯಾಂಪಸ್‌ನಲ್ಲಿ ಬುಧವಾರ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಟ್ಯೂಬ್‌ಗಳು ಮತ್ತು ನಾಳಗಳು, ಉಪಗ್ರಹ ಸಂವಹನ ವ್ಯವಸ್ಥೆ, ಎಐ-ಚಾಲಿತ ಸಾಫ್ಟ್‌ವೇರ್, ರಕ್ಷಣಾ ಮತ್ತು ಏರೋಸ್ಪೇಸ್‌ಗಾಗಿ ಎಂಬೆಡೆಡ್ ಸಿಸ್ಟಮ್‌ಗಳನ್ನು ತಯಾರಿಸುವ ರ್‍ಯಾಂಗ್‌ಸನ್ಸ್ ಏರೋಸ್ಪೇಸ್, ಈಗ ಜಿಟಿಟಿಸಿ ವಿದ್ಯಾರ್ಥಿಗಳನ್ನು ನೇಮಿಸಿಕೊಳ್ಳುತ್ತಿದೆ ಎಂದು ಮಾನವ ಸಂಪನ್ಮೂಲ ಅಧಿಕಾರಿ ಸಂದೇಶ್ ಪಿ. ಸತೀಶ್ ತಿಳಿಸಿದರು

'ವೆಲ್ಡಿಂಗ್, ಸಿಎನ್‌ಸಿ, ಸೆಟ್ಟಿಂಗ್ ಮತ್ತು ಪ್ರೋಗ್ರಾಮಿಂಗ್, ಲೇಸರ್ ಕಟಿಂಗ್, ಫಿಟ್ಟಿಂಗ್, ಶೀಟ್ ಮೆಟಲ್, ಟೂಲಿಂಗ್ ಮತ್ತು ವಿನ್ಯಾಸ ಎಂಜಿನಿಯರಿಂಗ್, ಗುಣಮಟ್ಟ ನಿಯಂತ್ರಣ ಮತ್ತು ಪರೀಕ್ಷೆ ಸೇರಿದಂತೆ 35 ವಿಭಾಗಗಳಲ್ಲಿ ಸುಮಾರು 200 ವೃತ್ತಿಪರರನ್ನು ನೇಮಿಸಿಕೊಳ್ಳಲಾಗುವುದು ಎಂದು ಮಾಹಿತಿ ನೀಡಿದರು.

ಮೆಕ್ಯಾನಿಕಲ್ ಎಂಜಿನಿಯರಿಂಗ್, ಎಲೆಕ್ಟ್ರಾನಿಕ್ಸ್ ವಿಭಾಗದಲ್ಲಿ ತರಬೇತಿ ಪಡೆದಿರುವವರನ್ನು ನೇಮಿಸಿಕೊಳ್ಳಲಾಗುತ್ತಿದೆ ಎಂದು ಎಕ್ಸೈಡ್ ಎನರ್ಜಿಯ ಉತ್ಪಾದನಾ ವಿಭಾಗದ ಎಂಜಿನಿಯರಿಂಗ್ ಮುಖ್ಯಸ್ಥ ಸುಭಾಷ್ ಶ್ರೀನಿವಾಸ್ ತಿಳಿಸಿದರು.

---

## ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ–562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ/ಫ್ಯಾಕ್ಸ್: 080–27934470/27935412
E-mail: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/58/2025–26 ದಿನಾಂಕ: 27–01–2026

**ಸಾರ್ವಜನಿಕ ಪ್ರಕಟಣೆ**

ವಿಷಯ: **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.**

**ಶ್ರೀ ಎನ್. ರಮೇಶ್ ಬಿನ್ ಬಿ. ನಾರಾಯಣಸ್ವಾಮಿ** ಇವರು ಹೊಸಕೋಟೆ ತಾಲ್ಲೂಕು, ಜಡಿಗೇನಹಳ್ಳಿ ಹೋಬಳಿ, ಮಾಕನಹಳ್ಳಿ ಗ್ರಾಮದ ಸ.ನಂ. 141/4 ರಲ್ಲಿನ 12 ಗುಂಟೆ ವಿಸ್ತೀರ್ಣದ ಜಮೀನನ್ನು **"ಕೃಷಿ ವಲಯದಿಂದ ವಸತಿ ಉದ್ದೇಶಕ್ಕೆ"** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಅರ್ಜಿದಾರರ ಮನವಿಯನ್ನು ಪರಿಶೀಲಿಸಲಾಗಿ, ಪ್ರಶ್ನಿತ ಜಮೀನಿನ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, ಸದರಿ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆ / ವಸತಿ ಸಮುಚ್ಚಯ ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನ / ಮನೆಗಳನ್ನು ಒದಗಿಸಿಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಗೆ ಸಹಕಾರಿಯಾಗುವುದು ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಹಾಗಾಗಿ, ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
**ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.**

ವಾಸಾಸಂಇ/ವಾ.ಪ್ರ/5240/ಅಡ್ವರ್ಟೋ/2025–26

---

## ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ–562123
ಇ–ಮೇಲ್: nelamangala.pa@gmail.com Phone No: 96630 46622

ಸಂಖ್ಯೆ: ನೆಯೋಪ್ರಾ: CLU:109:2025-26 ದಿನಾಂಕ: 23–01–2026

**ಸಾರ್ವಜನಿಕ ಪ್ರಕಟಣೆ**

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ:13–02–2007 ರನ್ವಯ **ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ, ಕುಲುವನಹಳ್ಳಿ** ಗ್ರಾಮವು "ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ" ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01–06–2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ 'ವಸತಿ'** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

| ಕ್ರ. ಸಂ | ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು | ತಾಲ್ಲೂಕು/ ಹೋಬಳಿ/ಗ್ರಾಮ | ಸ.ನಂ | ವಿಸ್ತೀರ್ಣ (ಎ–ಗು) | ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ | ಬದಲಾವಣೆ ಕೋರಿರುವ ಭೂ ಉಪಯೋಗ |
|---|---|---|---|---|---|---|
| 1 | ಶ್ರೀಮತಿ ಬೈಲಮ್ಮ ಕೋಂ ಲೇಟ್ ವೆಂಕಟಯ್ಯ | ನೆಲಮಂಗಲ, ತ್ಯಾಮಗೊಂಡ್ಲು, ಕುಲುವನಹಳ್ಳಿ | 87 | 1–00 | ವ್ಯವಸಾಯ | ವಸತಿ |
| 2 | ಶ್ರೀಮತಿ ಓಬಮ್ಮ ಕೋಂ ಲೇಟ್ ತಿಮ್ಮಯ್ಯ | | | | | |
| 3 | ಶ್ರೀ ಪೂಜಗಯ್ಯ ಬಿನ್ ಲೇಟ್ ಪೂಜವೆಂಕಟಯ್ಯ | | | | | |
| 4 | ಶ್ರೀಮತಿ ಪೂಜವೆಂಕಟಮ್ಮ ಕೋಂ ಲೇಟ್ ವೆಂಕಟರಮಣಯ್ಯ | | | | | |
| 5 | ಶ್ರೀಮತಿ ತಿಮ್ಮಕ್ಕ ಕೋಂ ಲೇಟ್ ಚಂದ್ರಯ್ಯ | | | | | |

**ಷರಾ :–** ಪ್ರಶ್ನಿತ ಜಮೀನುಗಳ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು, ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಅಭಿವೃದ್ಧಿಪಡಿಸುವುದರಿಂದ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸಿಗುತ್ತದೆ. ಹಾಗೂ ಯೋಜನಾ ಬದ್ಧ ಬೆಳವಣಿಗೆಯಾಗುವುದು ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ **ಸದಸ್ಯ–ಕಾರ್ಯದರ್ಶಿ,**
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾ.ಸಾ.ಸಂ.ಇ/ವಾಪ್ರ/5260/ಆಕಾರ್/2025–26

---

## ನಗರಸಭಾ ಕಾರ್ಯಾಲಯ, ಮುಳಬಾಗಿಲು
## CITY MUNICIPAL COUNCIL
## MULBAGAL, KOLAR DISTRICT-563131

Phone No:08159-242044, Email:ka.mulbagilu.cmc@gmail.com, website:www.mulbagalcity.mrc.gov.in

ಸಂಖ್ಯೆ:ನಸಮು/ತಾಂತ್ರಿಕ/ಸಿಆರ್/01/2021–22 ದಿನಾಂಕ: 27.01.2026

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕತೆ ಆಧ್ಯಾದ್ಯೇಶ 2000ರಂತೆ ಹಾಗೂ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ/06/ಪಿಸಿಎಲ್/2006, ಬೆಂಗಳೂರು ರಂತೆ ಇ–ಪ್ರಕ್ಯೂರ್ಮೆಂಟ್ ಪೋರ್ಟಲ್ **https://kppp.karnataka.gov.in.** ನಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಸರಬರಾಜು/ ಗುತ್ತಿಗೆದಾರರರಿಂದ ದರದ ಟೆಂಡರುಗಳನ್ನು(ಬೀದಿ ನಾಯಿ) ಆಹ್ವಾನಿಸಲಾಗಿದೆ. ಇ–ಪ್ರಕ್ಯೂರ್ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸುವುದು, ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

| ಕ್ರ ಸಂ | ಇಂಡೆಂಟ್ ನಂಬರ್ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | DMA/2024-25/SE3271/CALL-6 | 5.00 |
| 2 | DMA/2025-26/OW/WORK_INDENT54515 | 7.50 |

(1) ಇ–ಪ್ರಕ್ಯೂರ್ಮೆಂಟ್ ಮೂಲಕ ಬಿಡ್ ಸಲ್ಲಿಸುವ ಕೊನೆಯ ದಿನಾಂಕವನ್ನು ಇ–ಪ್ರೋಟಲ್‌ನಲ್ಲಿ ನಮೂದಿಸಲಾಗಿರುತ್ತದೆ. (2) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕವನ್ನು ಇ–ಪ್ರೋಟಲ್‌ನಲ್ಲಿ ನಮೂದಿಸಲಾಗಿರುತ್ತದೆ. (3) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕವನ್ನು ಇ–ಪ್ರೋಟಲ್‌ನಲ್ಲಿ ನಮೂದಿಸಲಾಗಿರುತ್ತದೆ.

**ಸಹಿ/– ಪೌರಾಯುಕ್ತರು, ನಗರ ಸಭೆ, ಮುಳಬಾಗಿಲು**

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:466/ಕೆಎಸ್ಎಂಸಿಎ/2025–26

---

ಕರ್ನಾಟಕ ಸರ್ಕಾರ

## ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಜಯನಗರ ವಾಣಿಜ್ಯ ಸಂಕೀರ್ಣ ಮಳಿಗೆ, ಜಯನಗರ, ಬೆಂಗಳೂರು–560011.

ಸಂಖ್ಯೆ: ಕಾಇಂ/ಸನೀ/ಸ.ಇಂ–5/ಟೆಂಡರು ಪ್ರಕಟಣೆ ಸಂ.28/2025–26 ದಿನಾಂಕ: 27.01.2026

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಅರ್ಹ ಗುತ್ತಿಗೆದಾರರರು ಲೆಕ್ಕ ಶೀರ್ಷಿಕೆ ಗಿರಿಜನ ಉಪಯೋಜನೆ ಮತ್ತು ವಿಶೇಷ ಘಟಕ ಮತ್ತು ಡಿಪಿಆರ್ ಕಾಮಗಾರಿಗಳು ಯೋಜನೆಯಡಿ ಅನುಮೋದನೆಗೊಂಡ ಈ ಕೆಳಕಂಡಂತೆ ಕಾಮಗಾರಿಗಳ ಕೆಟಿಪಿಪಿ ಸ್ಟಾಂಡರ್ಡ್ ಬಿಡ್ ಡಾಕ್ಯೂಮೆಂಟ್ KW-1 ಮತ್ತು 2 ರ ಮುಖಾಂತರ ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ, ಪರಿಶಿಷ್ಟ ಪಂಗಡ ಗುತ್ತಿಗೆದಾರರಿಗೆ, ಪ್ರವರ್ಗ 1 ಗುತ್ತಿಗೆದಾರರಿಗೆ, ಪ್ರವರ್ಗ 2(ಎ) ಗುತ್ತಿಗೆದಾರರಿಗೆ & ಸಾಮಾನ್ಯ (ಜನರಲ್) ಗುತ್ತಿಗೆದಾರರಿಗೆ ಟೆಂಡರ್ ಆಹ್ವಾನಿಸಲಾಗಿದೆ. ಈ ಕಾಮಗಾರಿಗಳಿಗೆ ಕೆಪಿಪಿಪಿ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಹಾಗೂ ಮೇಲಿನ ವೆಬ್ ಸೈಟ್‌ನಲ್ಲಿ ಮಾಹಿತಿ ಪಡೆಯಬಹುದು.

**ಕಾಮಗಾರಿಯ ಹೆಸರು :–** ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ, ಮಾಗಡಿ ತಾಲ್ಲೂಕು, ಹಾರೋಹಳ್ಳಿ ತಾಲ್ಲೂಕು, ರಾಮನಗರ ತಾಲ್ಲೂಕು, ಚನ್ನಪಟ್ಟಣ ತಾಲ್ಲೂಕು, ಕನಕಪುರ ತಾಲ್ಲೂಕುಗಳಲ್ಲಿ ಕೊಳವೆ ಬಾವಿ ಕೊರೆದು ನೀರಾವರಿ ಸೌಲಭ್ಯ ಕಲ್ಪಿಸುವ ಕಾಮಗಾರಿ, ಹಳ್ಳಕ್ಕೆ ಅಡ್ಡಲಾಗಿ ಚೆಕ್ ಡ್ಯಾಂ ಕಮ್ ಬ್ರಿಡ್ಜ್ ಕಾಮಗಾರಿಯ ಡಿ.ಪಿ.ಆರ್ ತಯಾರಿಸುವ ಜಾಬ್‌ವರ್ಕ್ ಕಾಮಗಾರಿಗಳು ಒಳಗೊಂಡಂತೆ **ಒಟ್ಟು 21 ಕಾಮಗಾರಿಗಳನ್ನು ಆಹ್ವಾನಿಸಲಾಗಿದೆ.**

ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : **ರೂ.1.58 (ಕನಿಷ್ಠ) & ರೂ.24.25 (ಗರಿಷ್ಠ)** ಇಎಂಡಿ (ರೂಗಳಲ್ಲಿ): **ರೂ.4,000/– (ಕನಿಷ್ಠ) & ರೂ.48,500/– (ಗರಿಷ್ಠ).**

**ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ: 02 ತಿಂಗಳು** ಮಳೆಗಾಲ ಸೇರಿದಂತೆ.

(ಟೆಂಡರ್‌ಗಿಟ್ಟ ಮೊತ್ತ, ಇಎಂಡಿ, ಕಾಮಗಾರಿಯ ಅವದಿ ಆಯಾ ಕಾಮಗಾರಿಗಳಿಗೆ ಅನುಗುಣವಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಇದ್ದಂತೆ)

(1) ಟೆಂಡರ್ ದಾಸ್ತಾ ವೇಜುಗಳನ್ನು ವೆಬ್‌ಸೈಟ್ ಪ್ರಕಟಿಸುವ ದಿನಾಂಕ: **28.01.2026 ಸಂಜೆ 16.30** ಗಂಟೆಯ ನಂತರ, (2) ವಿವರಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾದ ದಿನಾಂಕ ಮತ್ತು ವೇಳೆ: **04.02.2026 ಸಂಜೆ 15.00** ಗಂಟೆಯವರೆಗೆ. (3) ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **04.02.2026 ಸಂಜೆ 16.30** ಗಂಟೆಯವರೆಗೆ. (4) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: **06.02.2026 ಬೆಳಿಗ್ಗೆ 11.30** ಗಂಟೆಗೆ. (5) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ**

**ಷರತ್ತುಗಳು:** 1) ಹೆಚ್ಚಿನ ವಿವರಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ವೆಬ್‌ಸೈಟ್ ವಿಳಾಸ: **https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ. ಬದಲಾವಣೆ ಇದ್ದಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು. 2) ಗುತ್ತಿಗೆ ಪಡೆಯಲು ಕನಿಷ್ಠ ಅರ್ಹತೆಗಳಿಗಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಐ ಟಿ ಟಿ ನಿಬಂಧನೆ– 1 ಮತ್ತು 2 ರಲ್ಲಿ ನಮೂದಿಸಿದ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. 3) ಗುತ್ತಿಗೆದಾರರು ಜಿಎಸ್‌ಟಿ ಹೊರತುಪಡಿಸಿ ದರಗಳನ್ನು ನಮೂದಿಸಬೇಕು. 4) ಎಲ್ಲಾ ಟೆಂಡರ್‌ನ್ನು ಅಥವಾ ಯಾವುದಾದರೂ ಟೆಂಡರ್‌ನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

**ಸಹಿ/– ಕಾರ್ಯಪಾಲಕ ಇಂಜಿನಿಯರ್**
**ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ**

ವಾಸಾಸಂಇ/ವಾ.ಪ್ರ/5232/ಎಸ್‌ಎಸ್‌ಸಿ/2025–26

---

ರಕ್ಷಣಾ ವಿದ್ಯುನ್ಮಾನ ಮತ್ತು ಅದಕ್ಕೂ ಮೀರಿದ



'ಹರ್ ಏಕ್ ಕಾಮ್ ದೇಶ್ ಕೆ ನಾಮ್'

ಭಾರತ್ ಎಲೆಕ್ಟ್ರಾನಿಕ್ಸ್
भारत इलेक्ट्रॉनिक्स
BHARAT ELECTRONICS

QUALITY, TECHNOLOGY, INNOVATION

## ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

(ರಕ್ಷಣಾ ಸಚಿವಾಲಯದಡಿಯ ಭಾರತ ಸರ್ಕಾರದ ಒಂದು ಉದ್ಯಮ)
CIN: L32309KA1954GOI000787
ನೋಂದಾಯಿತ ಮತ್ತು ಪ್ರಧಾನ ಕಛೇರಿ: ಹೊರವರ್ತುಲ ರಸ್ತೆ, ನಾಗವಾರ, ಬೆಂಗಳೂರು – 560 045.
ಇ-ಮೇಲ್: secretary@bel.co.in ವೆಬ್‌ಸೈಟ್: www.bel-india.in ಫೋನ್: 080-25039300

**31ನೇ ಡಿಸೆಂಬರ್ 2025ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಹಾಗೂ ಒಂಬತ್ತು ತಿಂಗಳ ಸ್ಟ್ಯಾಂಡ್‌ಅಲೋನ್ ಹಾಗೂ ಕ್ರೋಢೀಕರಿಸಿದ ಲೆಕ್ಕ ಪರಿಶೋಧಿತವಲ್ಲದ ಹಣಕಾಸು ಫಲಿತಾಂಶಗಳ ಸಾರಾಂಶ**

(₹ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ವಿವರಗಳು | ಸ್ಟ್ಯಾಂಡ್‌ಅಲೋನ್ | | | | | | ಕ್ರೋಢೀಕೃತ | | | | | |
|---|---|---|---|---|---|---|---|---|---|---|---|---|---|
| | | ತ್ರೈಮಾಸಿಕ ಅಂತ್ಯಗೊಂಡ | | | ಒಂಬತ್ತು ತಿಂಗಳಿಗೆ ಅಂತ್ಯಗೊಂಡ | | ವರ್ಷಾಂತ್ಯಕ್ಕೆ | ತ್ರೈಮಾಸಿಕ ಅಂತ್ಯಗೊಂಡ | | | ಒಂಬತ್ತು ತಿಂಗಳಿಗೆ ಅಂತ್ಯಗೊಂಡ | | ವರ್ಷಾಂತ್ಯಕ್ಕೆ |
| | | 31.12.2025 | 30.09.2025 | 31.12.2024 | 31.12.2025 | 31.12.2024 | 31.03.2025 | 31.12.2025 | 30.09.2025 | 31.12.2024 | 31.12.2025 | 31.12.2024 | 31.03.2025 |
| | | (ಲೆಕ್ಕ ಪರಿಶೋಧಿತ ವಲ್ಲದ) | | | (ಲೆಕ್ಕ ಪರಿಶೋಧಿತ ವಲ್ಲದ) | | (ಲೆಕ್ಕ ಪರಿಶೋಧಿತ) | (ಲೆಕ್ಕ ಪರಿಶೋಧಿತ ವಲ್ಲದ) | | | (ಲೆಕ್ಕ ಪರಿಶೋಧಿತ ವಲ್ಲದ) | | (ಲೆಕ್ಕ ಪರಿಶೋಧಿತ) |
| 1. | ಕಾರ್ಯಾಚರಣೆಗಳಿಂದ ಒಟ್ಟು ಆದಾಯ | 7,12,198 | 5,76,365 | 5,75,612 | 17,30,246 | 14,53,830 | 23,65,801 | 7,15,385 | 5,79,209 | 5,77,069 | 17,38,568 | 14,61,916 | 23,76,875 |
| 2. | ತೆರಿಗೆ ಮತ್ತು ಅಸಾಧಾರಣ ವಸ್ತುಗಳ ಮುಂಚಿನ ಅವಧಿಯ ನಿವ್ವಳ ಲಾಭ | 2,14,768 | 1,73,430 | 1,75,415 | 5,17,122 | 4,24,237 | 7,08,999 | 2,12,831 | 1,72,795 | 1,74,362 | 5,13,562 | 4,23,174 | 7,09,900 |
| 3. | ತೆರಿಗೆ ಮುಂಚಿನ ಮತ್ತು ಅಸಾಧಾರಣ ವಸ್ತುಗಳ ನಂತರದ ಅವಧಿಯ ನಿವ್ವಳ ಲಾಭ | 2,14,768 | 1,73,430 | 1,75,415 | 5,17,122 | 4,24,237 | 7,08,999 | 2,12,831 | 1,72,795 | 1,74,362 | 5,13,562 | 4,23,174 | 7,09,900 |
| 4. | ತೆರಿಗೆ ಮತ್ತು ಅಸಾಧಾರಣ ವಸ್ತುಗಳ ನಂತರದ ಅವಧಿಯ ನಿವ್ವಳ ಲಾಭ | 1,59,006 | 1,28,613 | 1,31,606 | 3,84,532 | 3,18,347 | 5,28,825 | 1,57,970 | 1,28,716 | 1,31,160 | 3,83,591 | 3,19,566 | 5,32,268 |
| 5. | ಒಟ್ಟು ಸಮಗ್ರ ಅವಧಿಯ ಆದಾಯ [ಅವಧಿಯ ಲಾಭ ಸಹಿತ (ತೆರಿಗೆ ನಂತರ) ಮತ್ತು ಇತರ ಸಮಗ್ರ ಆದಾಯ (ತೆರಿಗೆ ನಂತರ)] | 1,64,249 | 1,26,094 | 1,36,166 | 3,89,091 | 3,26,427 | 5,29,653 | 1,62,936 | 1,26,200 | 1,35,714 | 3,87,874 | 3,27,641 | 5,32,990 |
| 6. | ಪಾವತಿಸಿದ ಇಕ್ವಿಟಿ ಷೇರು ಬಂಡವಾಳ | 73,098 | 73,098 | 73,098 | 73,098 | 73,098 | 73,098 | 73,098 | 73,098 | 73,098 | 73,098 | 73,098 | 73,098 |
| 7. | ಪ್ರತಿ ಷೇರಿನ ಗಳಿಕೆ (₹1/- ರಂತೆ ವಾರ್ಷಿಕರಣಗೊಳ್ಳದ್ದು) (ಮುಂದುವರಿಸಿದ ಮತ್ತು ಸ್ಥಗಿತ ಕಾರ್ಯಾಚರಣೆಗಳಿಗೆ) ಮೂಲ ಮತ್ತು ಪರಿವರ್ತಿತ (₹ನಲ್ಲಿ) | 2.17 | 1.76 | 1.81 | 5.26 | 4.36 | 7.23 | 2.16 | 1.76 | 1.79 | 5.25 | 4.37 | 7.28 |

ಟಿಪ್ಪಣಿಗಳು:
1. ಈ ಮೇಲಿನವುಗಳು ಸೆಬಿಯ ನಿಯಂತ್ರಣ ನಿಬಂಧನೆ 33 (ಬಾಧ್ಯತೆಗಳ ಪಟ್ಟಿ ಮಾಡುವಿಕೆ ಮತ್ತು ಅಗತ್ಯತೆಗಳ ಪ್ರಕಟಗೊಳಿಸುವಿಕೆ), 2015 ರ ಅಡಿಯಲ್ಲಿ, ತಿದ್ದುಪಡಿಯಾದಂತೆ, ಷೇರು ವಿನಿಮಯ ಕೇಂದ್ರದಲ್ಲಿ ಸಲ್ಲಿಸಲ್ಪಟ್ಟ ತ್ರೈಮಾಸಿಕ / ವಾರ್ಷಿಕ ಹಣಕಾಸಿನ ವಿಸ್ತೃತ ರೂಪವಾಗಿದೆ. ತ್ರೈಮಾಸಿಕ / ವಾರ್ಷಿಕ ಹಣಕಾಸು ಫಲಿತಾಂಶಗಳ ಪೂರ್ಣ ರೂಪವು ಷೇರು ವಿನಿಮಯ ಕೇಂದ್ರದ ವೆಬ್‌ಸೈಟ್‌ನಲ್ಲಿ ಲಭ್ಯವಿದೆ (www.bseindia.com ಮತ್ತು www.nseindia.com) ಮತ್ತು ಕಂಪೆನಿಯ ವೆಬ್‌ಸೈಟ್ (www.bel-india.in) ನಲ್ಲಿಯೂ ಲಭ್ಯವಿದೆ.
2. ಹಣಕಾಸು ಫಲಿತಾಂಶಗಳ ಈ ಮೇಲಿನ ವಿವರಣೆಯನ್ನು ಲೆಕ್ಕ ಪರಿಶೋಧನಾ ಸಮಿತಿಯು ಪರಿಶೀಲಿಸಿದೆ ಮತ್ತು ದಿನಾಂಕ 28 ಜನವರಿ, 2026 ರಂದು ನಡೆದ ಸಭೆಯಲ್ಲಿ ನಿರ್ದೇಶಕರ ಮಂಡಳಿಯಿಂದ ಅನುಮೋದಿಸಲಾಗಿದೆ.

ಸ್ಥಳ: ಬೆಂಗಳೂರು
ದಿನಾಂಕ: 28 ಜನವರಿ, 2026

ನಿರ್ದೇಶಕರ ಮಂಡಳಿಯ ಪರವಾಗಿ
ಸಹಿ/-
ಮನೋಜ್ ಜೈನ್
ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು

---

## TENDER NOTICE

Hilton Bangalore Embassy Golflinks | Hilton Bengaluru Embassy Manyata Business Park | Hilton Garden Inn Bengaluru Embassy Manyata Business Park | Hilton Bengaluru Embassy Tech Village | Hilton Garden Inn Bengaluru Embassy Tech Village

Hilton Bangalore Embassy Golflinks, Hilton & Hilton Garden Inn Bengaluru Embassy Manyata Business Park, Hilton & Hilton Garden Inn Bengaluru Embassy Tech Village. Invites sealed tender bids from reliable and established vendors in Bengaluru on a rate contract basis for **12 Months** commencing from **1st April 2026 to 31st March 2027** to supply/provide services for the following categories:

**Food & Beverage Supplies**
1. Local Groceries, Whole Spices & Dry Fruits / Nuts
2. Imported Groceries, Bakery Products
3. Fresh Local Vegetables, Exotic Vegetables, Peeled Garlic, Bean Sprouts Micro greens, Peeled Shallots / Onions, Mushrooms and Grated Coconut
4. Frozen Vegetables (Green Peas, Sweet Corns & Frozen Cut Vegetables)
5. Fresh Fruits (Local and Imported)
6. Fresh Milk, Dairy Products and Local /Imported Cheeses
7. Fresh Noodles & Wonton sheet
8. Ice Cream & Kulfis
9. Sona Masoori & Basmati Rice
10. Catering Food Supplies (Chats & Savories), Indian Sweets & Snacks
11. Frozen Ready to Eat & Cook Products
12. Bread & Chapati
13. Local Lamb / Lamb Products & Fresh Tenderloin
14. Imported Meats & Seafood Products
15. Poultry (Chicken & Egg)
16. Fresh Fish & Seafood
17. Cold Cuts Local & Imported (Chicken & Pork)

**Non-Food Supplies / Services**
1. Printing & Office Stationery
2. Housekeeping, Laundry & Cleaning Supplies
3. LPG, Gel Fuel, T-Light Candles
4. Charcoal
5. Water Tanker
6. Fresh Flowers and Flower Designs
7. Hiring of AV Equipment, Banquet CCG/ Furniture, Kitchen Equipment / Utensil for ODC
8. Courier Services
9. Guest Supplies
10. Employee Transportation & Goods Transport Vehicle Providers
11. Facade, Glass Cleaning & Marble Polishing
12. Engineering Supplies (Electrical, Hardware, Plumbing, Painting & Rock Salt)
13. Wet & Dry Garbage Disposal
14. Outsourced Manpower / ODC Casuals (F&B Service, Culinary & Kitchen Stewarding)
15. Analytical Lab Test Service
16. Carpet Cleaning and Shampooing
17. Gas Burner & Hood Cleaning Service
18. Uniform
19. First Aid Medical Supplies

Tender forms and other particulars can be obtained on payment of Rs. 1500 (Rupees One Thousand Five Hundred Only) incash/online (Non-Refundable) for each category and the same will be available with the **Cluster Purchase Manager at Hilton & Hilton Garden Inn Bengaluru Embassy Manyata Business Park, Nagawara, Hebbal Outer Ring Road, Bangalore - 560045 between 10.00 am to 5.00 pm from 29th January to 10th February 2026 The last date for submitting tenders is 13th February 2026.**

**The tenders are subject to following: 1.** The rates finalized for the twelve months will not change under any circumstances. **2.** The rates must be inclusive of delivery charges until receiving Bay of the Hotel; tax should be shown separately on the invoices if applicable. 3. The Hotel reserves the right to reject any or all tenders without any reasons whatsoever and no representation shall be entertained on this account.

**Sealed tenders must be addressed to the attention of: Cluster Purchase Manager, Hilton & Hilton Garden Inn Bengaluru Embassy Manyata Business Park, Nagawara, Hebbal Outer Ring Road, Bangalore - 560 045, T: +91 80 6901 2345**

# ಸಮಾನ ವೇತನಕ್ಕೆ ವಿಶೇಷ ಶಿಕ್ಷಕರ ಪಟ್ಟು

## ವಿಶೇಷ ಶಾಲೆಗಳಿಗೆ ಸೌಲಭ್ಯ, ಅನುದಾನಕ್ಕೆ ಆಗ್ರಹ; ರಾಜ್ಯ ವಿಶೇಷ ಶಿಕ್ಷಕರು ಹಾಗೂ ಶಿಕ್ಷಕೇತರರ ಸಂಘದ ವತಿಯಿಂದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿಶೇಷ ಶಾಲೆಗಳ ಮಕ್ಕಳ ಶಿಕ್ಷಣಕ್ಕೆ ಅಗತ್ಯ ಮೂಲಸೌಲಭ್ಯ ಹಾಗೂ ಅನುದಾನ, ಆ ಶಾಲೆಗಳ ಶಿಕ್ಷಕರಿಗೆ ಸಮಾನ ವೇತನ ನೀಡುವಂತೆ ಆಗ್ರಹಿಸಿ, ರಾಜ್ಯ ವಿಶೇಷ ಶಿಕ್ಷಕರು ಹಾಗೂ ಶಿಕ್ಷಕೇತರರ ಸಂಘದ ವತಿಯಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಯಿತು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ವಿಶೇಷ ಶಿಕ್ಷಕರು, ಶಿಕ್ಷಕೇತರ ಸಿಬ್ಬಂದಿ, ಮಕ್ಕಳು ಹಾಗೂ ಪೋಷಕರು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಹಲವು ದಶಕಗಳಿಂದ ಬಾಕಿ ಇರುವ ಬೇಡಿಕೆಗಳನ್ನು ಈಡೇರಿಸುವಂತೆ ಘೋಷಣೆ ಕೂಗಿ, ಸರ್ಕಾರದ ಗಮನ ಸೆಳೆದರು. ಸಂಘದ ಕಾರ್ಯದರ್ಶಿ ವಸಂತಕುಮಾರ್ ಶೆಟ್ಟಿ ಮಾತನಾಡಿ, 'ಸರ್ಕಾರೇತರ ಸಂಸ್ಥೆಗಳು ನಡೆಸುವ ವಿಶೇಷ ಶಾಲೆಗಳಿಗೆ ಪ್ರತಿ ವಿದ್ಯಾರ್ಥಿಗೆ ತಿಂಗಳಿಗೆ ₹9 ಸಾವಿರ ಅನುದಾನ ನೀಡಲಾಗುತ್ತಿದೆ. ವರ್ಷಕ್ಕೆ 10 ತಿಂಗಳು ಮಾತ್ರ ಅನುದಾನ ನೀಡಲಾಗುತ್ತಿದೆ. ಜೀವನ ವೆಚ್ಚ ದಿನೇ ದಿನೇ ಹೆಚ್ಚುತ್ತಿರುವ ಸಂದರ್ಭದಲ್ಲಿ ಈ ಅನುದಾನ ಸಾಲುತ್ತಿಲ್ಲ' ಎಂದು ಹೇಳಿದರು.

ಸರ್ಕಾರದ ಅನುದಾನಕ್ಕೆ ಒಳಪಟ್ಟ ವಿಶೇಷ ಶಾಲೆಗಳ ಶಿಕ್ಷಕರು ತಿಂಗಳಿಗೆ ₹60 ಸಾವಿರದಿಂದ ₹80 ಸಾವಿರದವರೆಗೆ ವೇತನ ಪಡೆಯುತ್ತಿದ್ದಾರೆ. ಎನ್‌ಜಿಒ ಮೂಲಕ ನಡೆಸಲಾಗುವ ವಿಶೇಷ ಶಾಲೆಗಳ ಶಿಕ್ಷಕರಿಗೆ ಕೇವಲ ₹20,250 ಗೌರವಧನ ಲಭಿಸುತ್ತಿದೆ. ಈ ತಾರತಮ್ಯ ಹೋಗಲಾಡಿಸಿ ಸಮಾನ ವೇತನ ನೀಡುವ ವ್ಯವಸ್ಥೆ ಆಗಬೇಕು ಎಂದು ಕೋರಿದರು.

ಸದ್ಭಾವನಾ ಪ್ರತಿಷ್ಠಾನದ ವಿಶೇಷ ಶಾಲೆಯ ಪ್ರತಿನಿಧಿ ಸಂಜಯ್ ಸಬರದ್ ಮಾತನಾಡಿ, '2016–17ರಲ್ಲಿ ನಡೆದ ಸಮೀಕ್ಷೆಯಲ್ಲಿ ಎನ್‌ಜಿಒಗಳು ನಡೆಸುವ ವಿಶೇಷ ಶಾಲೆಗಳು ಸರ್ಕಾರದ ಅನುದಾನಿತ ಶಾಲೆಗಳಿಗಿಂತ ಉತ್ತಮ ಗುಣಮಟ್ಟದ ಸೇವೆ ನೀಡುತ್ತಿವೆ ಎಂಬುದು ದೃಢಪಟ್ಟಿದೆ. ಆದರೂ ಶಿಕ್ಷಕರಿಗೆ ಸಮಾನ ವೇತನ ನೀಡಲು ಸರ್ಕಾರ ಮುಂದಾಗುತ್ತಿಲ್ಲ. ಎನ್‌ಜಿಒಗಳು ನಡೆಸುವ ವಿಶೇಷ ಶಾಲೆಗಳ ಶಿಕ್ಷಕರಿಗೂ ಸರ್ಕಾರದ ಅನುದಾನಿತ ಶಾಲೆಗಳ ಶಿಕ್ಷಕರಿಗೆ ನೀಡುವಂತೆ ಸಮಾನ ವೇತನ ನೀಡಬೇಕು ಎಂಬುದು ನಮ್ಮ ಪ್ರಮುಖ ಬೇಡಿಕೆಯಾಗಿದೆ' ಎಂದರು.

ಶಿಕ್ಷಕರ ಸಂಘದ ಅಧ್ಯಕ್ಷರಾದ ಕಾಂತಿ ಹರೀಶ್, ಒಕ್ಕೂಟದ ಅಧ್ಯಕ್ಷ ಸೋಮನಾಥ್ ಮಹಾಜನ್ ಶೆಟ್ಟರ್, ಅಪ್ಪುರಾವ್ ಎಂ.ಎಸ್. ಪಾಲ್ಗೊಂಡಿದ್ದರು.

### 'ಆತಂಕಕಾರಿ'

ರಾಜ್ಯದಲ್ಲಿ ಸುಮಾರು 250 ವಿಶೇಷ ಶಾಲೆಗಳಿದ್ದು, ಅವುಗಳಲ್ಲಿ 180 ಶಾಲೆಗಳು ಮಾತ್ರ ಸರ್ಕಾರದ ಅನುದಾನ ಪಡೆಯುತ್ತಿವೆ. ಉಳಿದ ಸುಮಾರು 70 ವಿಶೇಷ ಶಾಲೆಗಳು ಯಾವುದೇ ಸರ್ಕಾರಿ ನೆರವಿಲ್ಲದೇ ಕಾರ್ಯನಿರ್ವಹಿಸುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದು ಪ್ರತಿಭಟನಕಾರರು ಹೇಳಿದರು.




ವಿಶೇಷ ಮಕ್ಕಳ ಶಾಲೆಗಳಲ್ಲಿನ ಸಿಬ್ಬಂದಿಯ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ 'ಕರ್ನಾಟಕ ರಾಜ್ಯ ವಿಶೇಷ ಶಿಕ್ಷಕರು ಮತ್ತು ಶಿಕ್ಷಕೇತರರ ಸಂಘ'ದ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

## ಸುದ್ದಿ 2 ನಿಮಿಷ

### 'ಮಲಯಾಳ ಮಸೂದೆ ಬಗೆಗಿನ ಕಳವಳ ಆಧಾರರಹಿತ'

ತಿರುವನಂತಪುರ: 'ಕೇರಳ ಸರ್ಕಾರದ ಮಲಯಾಳ ಭಾಷಾ ಮಸೂದೆಗೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರ ವ್ಯಕ್ತಪಡಿಸುತ್ತಿರುವ ಕಳವಳವು ಆಧಾರ ರಹಿತವಾಗಿದೆ. ಅಲ್ಲದೇ, ಮಸೂದೆಯು ಕೇರಳದಲ್ಲಿರುವ ಭಾಷಾ ಅಲ್ಪಸಂಖ್ಯಾತರ ಮೇಲೆ ಮಲಯಾಳ ಹೇರಿಕೆಗೆ ಎಡೆಮಾಡುವುದಿಲ್ಲ' ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಿಳಿಸಿದ್ದಾರೆ.

ಮಸೂದೆಗೆ ಸಂಬಂಧಿಸಿದಂತೆ ಕಳವಳ ವ್ಯಕ್ತಪಡಿಸಿ ಸಿದ್ದರಾಮಯ್ಯ ಅವರು ಇತ್ತೀಚೆಗೆ ಬರೆದಿದ್ದ ಪತ್ರಕ್ಕೆ ಪಿಣರಾಯಿ ಬುಧವಾರ ಪ್ರತ್ಯುತ್ತರ ನೀಡಿದ್ದಾರೆ. 'ಕೇರಳದ ಶಾಲೆಗಳಲ್ಲಿ ಭಾಷಾ ಅಲ್ಪಸಂಖ್ಯಾತರು ಮಲಯಾಳವನ್ನೇ ಪ್ರಥಮ ಭಾಷೆಯಾಗಿ ಕಡ್ಡಾಯವಾಗಿ ಕಲಿಯಬೇಕು ಎಂಬ ಹೇರಿಕೆ ಮಸೂದೆಯಲ್ಲಿಲ್ಲ. ಬದಲಿಗೆ ಭಾಷಾ ಅಲ್ಪಸಂಖ್ಯಾತರು ತಮ್ಮ ಮಾತೃ ಭಾಷೆಯೊಂದಿಗೆ ಕೇರಳದ ಶಾಲೆಗಳಲ್ಲಿ ಮಲಯಾಳ ಭಾಷೆಯನ್ನೂ ಅಧ್ಯಯನ ಮಾಡುವಂತಹ ಆಯ್ಕೆಯನ್ನಷ್ಟೇ ನೀಡಲಾಗುತ್ತಿದೆ' ಎಂದು ಅವರು ತಿಳಿಸಿದ್ದಾರೆ.



### ನೌಕರರಿಗೆ ಖಾದಿ ವಸ್ತ್ರ ಸಂಹಿತೆ

**ಬೆಂಗಳೂರು:** ರಾಜ್ಯದ ಎಲ್ಲ ಸರ್ಕಾರಿ ಅಧಿಕಾರಿಗಳು, ನೌಕರರು ತಿಂಗಳ ಮೊದಲ ಶುಕ್ರವಾರ ಖಾದಿ ಉಡುಪು ಧರಿಸಿ ಕಚೇರಿಗೆ ಬರುವ ಸಂಬಂಧ ವಸ್ತ್ರ ಸಂಹಿತೆ ಜಾರಿಗೊಳಿಸಲು ಸರ್ಕಾರ ಮುಂದಾಗಿದೆ.

ಅಲ್ಲದೆ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ ಸೇರಿದಂತೆ ಅಧಿಕೃತ ಸರ್ಕಾರಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅಧಿಕಾರಿಗಳು ಹಾಗೂ ಸಿಬ್ಬಂದಿ ಖಾದಿ ಉಡುಪು ಧರಿಸುವುದಕ್ಕೆ ಒತ್ತು ನೀಡಲಾಗುತ್ತಿದೆ. ಈ ಕುರಿತು ಚರ್ಚಿಸಲು ಗುರುವಾರ (ಜ.29) ಮಧ್ಯಾಹ್ನ 12ಕ್ಕೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ಅಧ್ಯಕ್ಷತೆಯಲ್ಲಿ ವಿಧಾನಸೌಧದಲ್ಲಿ ಸಭೆ ನಡೆಯಲಿದೆ. ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಸೇರಿದಂತೆ ಪ್ರಮುಖರನ್ನು ಈ ಸಭೆಗೆ ಆಹ್ವಾನಿಸಲಾಗಿದೆ.

# ಮುಡಾ: ಸಿದ್ದರಾಮಯ್ಯ ಸದ್ಯ ನಿರಾಳ

**ಒಂದನೇ ಪುಟದಿಂದ...**

ತನಿಖಾಧಿಕಾರಿ ಉದೇಶ್ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕ್ರಿಯೆ ಆರಂಭಿಸಲು ಕೋರಿ ಸ್ನೇಹಮಯಿ ಕೃಷ್ಣ ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಲಾಗಿದೆ. ಬಾಧಿತ ವ್ಯಕ್ತಿಯಾಗಿ, ಜಾರಿ ನಿರ್ದೇಶನಾಲಯ (ಇ.ಡಿ) ಮಧ್ಯ ಪ್ರವೇಶಿಸುವ ಅಧಿಕಾರವನ್ನು ಸೀಮಿತ ವ್ಯಾಪ್ತಿಗೆ ಒಳಪಡಿಸಲಾಗಿದೆ' ಎಂದು ಆದೇಶದಲ್ಲಿ ವಿವರಿಸಲಾಗಿದೆ.

'ಮುಚ್ಚಿದ ಲಕೋಟೆಯಲ್ಲಿ ಇರಿಸಲಾದ ತನಿಖಾ ವರದಿ ಮತ್ತು ದಾಖಲೆಗಳನ್ನು ತನಿಖಾಧಿಕಾರಿಗೆ ಒಪ್ಪಿಸಲು ನಿರ್ದೇಶಿಸಿದ ನ್ಯಾಯಾಧೀಶರು ವಿಚಾರಣೆಯನ್ನು ಫೆಬ್ರುವರಿ 9ಕ್ಕೆ ಮುಂದೂಡಿದರು. ದೂರುದಾರ ಸ್ನೇಹಮಯಿ ಕೃಷ್ಣ, ಲೋಕಾಯುಕ್ತ ಪರ ವೆಂಕಟೇಶ ಅರಬಟ್ಟಿ ಮತ್ತು ಸಿದ್ದರಾಮಯ್ಯ ಪರ ಹೈಕೋರ್ಟ್ ವಕೀಲ ಶತಭಿಷ ಶಿವಣ್ಣ ಹಾಜರಿದ್ದರು.

**ಪ್ರಕರಣದ ಬೆಳವಣಿಗೆ:** ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಸಿದ್ದರಾಮಯ್ಯ ಮತ್ತು ಇತರರ ವಿರುದ್ಧ ಎಫ್‌ಐಆರ್ ದಾಖಲಿಸಲು ಆದೇಶಿಸಿತ್ತು. ಇದರನ್ವಯ 2024ರ ಸೆಪ್ಟೆಂಬರ್ 27ರಂದು ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ತನಿಖೆ ನಡೆಸಿದ್ದ ಲೋಕಾಯುಕ್ತ ಪೊಲೀಸರು, 'ಸಿದ್ದರಾಮಯ್ಯ, ಬಿ.ಎಂ. ಪಾರ್ವತಿ, ಮಲ್ಲಿಕಾರ್ಜುನ ಹಾಗೂ ಜೆ.ದೇವರಾಜು ವಿರುದ್ಧ ಅಪರಾಧ ಸಾಬೀತುಪಡಿಸುವ ಯಾವುದೇ ಅಂಶಗಳಿಲ್ಲ' ಎಂದು 2025ರ ಫೆಬ್ರುವರಿ 20ರಂದು ನ್ಯಾಯಾಲಯಕ್ಕೆ 'ಬಿ' ರಿಪೋರ್ಟ್ ಸಲ್ಲಿಸಿದ್ದರು.

ಇದನ್ನು ಪ್ರಶ್ನಿಸಿ 2025ರ ಮಾರ್ಚ್ 18ರಂದು ಸ್ನೇಹಮಯಿ ಕೃಷ್ಣ ಪ್ರತಿಭಟನಾ ಅರ್ಜಿ ಸಲ್ಲಿಸಿದ್ದರು. 2025ರ ಏಪ್ರಿಲ್ 2ರಂದು ಜಾರಿ ನಿರ್ದೇಶನಾಲಯವೂ ಪ್ರತಿಭಟನಾ ಅರ್ಜಿ ಸಲ್ಲಿಸಿತ್ತು.

'ಸಿದ್ದರಾಮಯ್ಯ ಮತ್ತು ಬಿ.ಎಂ. ಪಾರ್ವತಿ ಅವರು ಮುಡಾದಲ್ಲಿ ಅಕ್ರಮವಾಗಿ 14 ನಿವೇಶನಗಳನ್ನು ಪಡೆದಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಸೇರಿದಂತೆ ಐವರು ಆರೋಪಿಗಳ ವಿರುದ್ಧ ಎಸ್‌ಐಟಿ (ವಿಶೇಷ ತನಿಖಾ ದಳ) ಅಥವಾ ಬೇರಾವುದೇ ಸ್ವತಂತ್ರ ತನಿಖಾ ಸಂಸ್ಥೆಯಿಂದ ತನಿಖೆಗೆ ಆದೇಶಿಸಬೇಕು' ಎಂದು ಕೋರಿ ಸ್ನೇಹಮಯಿ ಕೃಷ್ಣ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ 2024ರ ಆಗಸ್ಟ್ 8ರಂದು ಖಾಸಗಿ ದೂರು ದಾಖಲಿಸಿದ್ದರು.

ಇದರ ಬೆನ್ನಲ್ಲೇ, ರಾಜ್ಯಪಾಲರು ಸಿದ್ದರಾಮಯ್ಯ ಮತ್ತು ಇತರೆ ಆರೋಪಿಗಳ ವಿರುದ್ಧ ತನಿಖೆಗೆ ಅನುಮತಿ ನೀಡಿದ್ದರು. ಸಿದ್ದರಾಮಯ್ಯ ಇದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ರಾಜ್ಯಪಾಲರ ನಿರ್ಣಯವನ್ನು ಹೈಕೋರ್ಟ್ ಎತ್ತಿ ಹಿಡಿದಿತ್ತು. ರಾಜ್ಯಪಾಲರ ನಿರ್ಣಯ ಎತ್ತಿ ಹಿಡಿದಿರುವ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಸಿದ್ದರಾಮಯ್ಯ ಮತ್ತು ಇತರರು ವಿಭಾಗೀಯ ಪೀಠದಲ್ಲಿ ಮೇಲ್ಮನವಿ ಮೂಲಕ ಪ್ರಶ್ನಿಸಿದ್ದಾರೆ. ಈ ಅರ್ಜಿ ವಿಚಾರಣಾ ಹಂತದಲ್ಲಿದೆ. ಏತನ್ಮಧ್ಯೆ, ಬಿ.ಎಂ.ಪಾರ್ವತಿ ಅವರು ತಮಗೆ ಹಂಚಿಕೆ ಮಾಡಲಾಗಿದ್ದ 14 ನಿವೇಶನಗಳನ್ನು ಮುಡಾಕ್ಕೆ ಹಿಂದಿರುಗಿಸಿದ್ದರು. ಮುಡಾ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಲು ಹೈಕೋರ್ಟ್ ನಿರಾಕರಿಸಿತ್ತು.

# ಒಬಿಸಿಗೆ ಅನ್ಯಾಯ: ಸಿಜೆಗೆ ಪತ್ರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಹೈಕೋರ್ಟ್ ನ್ಯಾಯಮೂರ್ತಿಗಳ ಹುದ್ದೆಗೆ ನೇಮಕ ಮಾಡಲು ಕರ್ನಾಟಕ ಹೈಕೋರ್ಟ್ ಕೊಲಿಜಿಯಂನಿಂದ ಶಿಫಾರಸುಗೊಂಡಿರುವ 10 ಜನ ವಕೀಲರ ಪಟ್ಟಿಯಲ್ಲಿ ಇತರೆ ಹಿಂದುಳಿದ ವರ್ಗಗಳ (ಒಬಿಸಿ) ಸಮುದಾಯದವರನ್ನು ಕಡೆಗಣಿಸಲಾಗಿದೆ' ಎಂದು 'ಬೆಂಗಳೂರು ವಕೀಲರ ಸಂಘ' ಅಸಮಾಧಾನ ವ್ಯಕ್ತಪಡಿಸಿದೆ.

ಈ ಕುರಿತಂತೆ ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ, ಉಪಾಧ್ಯಕ್ಷ ಸಿ.ಎಸ್. ಗಿರೀಶ್ ಕುಮಾರ್, ಪ್ರಧಾನ ಕಾರ್ಯದರ್ಶಿ ಎಚ್.ವಿ.ಪ್ರವೀಣ್ ಗೌಡ ಮತ್ತು ಖಜಾಂಚಿ ಶ್ವೇತಾ ರವಿಶಂಕರ್, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆ) ವಿಭು ಬಖ್ರು ಅವರಿಗೆ ಬುಧವಾರ ಮೂರು ಪುಟಗಳ ಪತ್ರ ಬರೆದಿದ್ದಾರೆ.

'ವಕೀಲ ವೃಂದದಿಂದ ನೇಮಕಗೊಳ್ಳುವ 10 ಜನರ ಶಿಫಾರಸು ಪಟ್ಟಿಯನ್ನು, ಕರ್ನಾಟಕ ಹೈಕೋರ್ಟ್ ಕೊಲಿಜಿಯಂ ಕಳೆದ ವಾರ ಸುಪ್ರೀಂ ಕೋರ್ಟ್‌ಗೆ ಕಳುಹಿಸಿದೆ. ಈ ಪ್ರಸ್ತಾವಿತ ಪಟ್ಟಿಯಲ್ಲಿ ಒಬ್ಬರೇ ಒಬ್ಬರೂ ಒಬಿಸಿ ಸಮುದಾಯದವರಿಲ್ಲ' ಎಂದು ಅತೃಪ್ತಿ ವ್ಯಕ್ತಪಡಿಸಲಾಗಿದೆ.

'ಇದರಿಂದ ರಾಜ್ಯದಲ್ಲಿ ಶೇಕಡ 25ರಷ್ಟು ಜನಸಂಖ್ಯೆಯನ್ನು ಪ್ರತಿನಿಧಿಸುವ ಒಬಿಸಿ ಸಮುದಾಯಕ್ಕೆ ಅನ್ಯಾಯ ಎಸಗಲಾಗಿದೆ. ಭಾರತದ ಸಂವಿಧಾನದ ಅಡಿಯಲ್ಲಿ ಕೊಡಮಾಡಿರುವ 15 ಮತ್ತು 16ನೇ ವಿಧಿಗಳ ಪ್ರಯೋಜನವನ್ನು ಉಪೇಕ್ಷಿಸಿದಂತಾಗಿದೆ. ಕರ್ನಾಟಕ ಹೈಕೋರ್ಟ್ ಕೊಲಿಜಿಯಂ, ಸಾರ್ವಜನಿಕ ಕಾಳಜಿಯ ಮನೋಭಾವ ಹೊಂದಿದ ನ್ಯಾಯಮೂರ್ತಿಗಳನ್ನು ಹೊಂದಿದೆ. ಇಂತಹ ಕೊಲಿಜಿಯಂ, ಒಬಿಸಿಯಂತಹ ಸಮುದಾಯದಿಂದ ಸ್ಪರ್ಧಾತ್ಮಕ ಅಭ್ಯರ್ಥಿಗಳನ್ನು ಪಡೆಯಲು ಯಾಕೆ ಪ್ರಯತ್ನ ಮಾಡಿಲ್ಲ' ಎಂದು ಪ್ರಶ್ನಿಸಲಾಗಿದೆ.

### ಎಲ್ಲಿದೆ ಸಮಾನ ಪ್ರಾತಿನಿಧ್ಯ?

'ಎಲ್ಲರಿಗೂ ಸಮಾನ ಪ್ರಾತಿನಿಧ್ಯ ನೀಡಬೇಕೆಂಬುದು ಇತ್ತೀಚಿನ ಸೂತ್ರವಲ್ಲ. ಈ ಮಾದರಿಯನ್ನು ದಶಕಗಳಿಂದಲೂ ಪಾಲಿಸಲಾಗುತ್ತಿದ್ದು ಇದು ಅವಕಾಶ ವಂಚಿತ ಸಮುದಾಯಗಳಿಗೆ ಸಂವಿಧಾನ ನೀಡಿರುವ ಖಾತರಿಯಾಗಿದೆ. ರಾಜ್ಯ ಮತ್ತು ಕೇಂದ್ರದ ಎಲ್ಲಾ ಸಂಸ್ಥೆಗಳೂ ಈ ವಿಷಯದಲ್ಲಿ ರಾಜಿ ಮಾಡಿಕೊಳ್ಳದಂತೆ ನೋಡಿಕೊಂಡು ಬರಲಾಗುತ್ತಿದೆ. ನ್ಯಾಯಾಂಗ ಮತ್ತು ಇತರ ಹುದ್ದೆಗಳ ನೇಮಕಾತಿಗಳಲ್ಲಿ ಸಮಾಜದ ಎಲ್ಲಾ ವರ್ಗಗಳಿಗೆ ಪ್ರಾತಿನಿಧ್ಯ ನೀಡುತ್ತಾ ಬಂದಿರುವುದು ಒಂದು ಮೂಲಭೂತ ಸದ್ಗುಣ. ಇದನ್ನು ಜಾರಿಗೊಳಿಸಲು ನ್ಯಾಯಾಂಗವೇ ತನ್ನ ಅನೇಕ ಐತಿಹಾಸಿಕ ತೀರ್ಪುಗಳಲ್ಲಿ ವಿಶದಪಡಿಸಿದೆ. ಆದರೆ, ಇಂತಹುದೊಂದು ಪದ್ಧತಿಯನ್ನು ಈ ಸನ್ನಿವೇಶದಲ್ಲಿ ಸ್ವತಃ ನ್ಯಾಯಾಂಗವೇ ಜಾರಿಗೊಳಿಸದೇ ಹೋಗಿರುವುದು ಸಖೇದಾಶ್ಚರ್ಯ' ಎಂದು ಪತ್ರದಲ್ಲಿ ವಿವರಿಸಲಾಗಿದೆ.

# ಕಲಾಪದಲ್ಲಿ ಭಾರಿ ಗದ್ದಲ


**ಒಂದನೇ ಪುಟದಿಂದ...**

ಆಗ ಮಧ್ಯಪ್ರವೇಶಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ರಾಜ್ಯಪಾಲರು ರಾಷ್ಟ್ರಗೀತೆಗೆ ನಿಲ್ಲಲಿಲ್ಲ. ಅವರು ಸಂವಿಧಾನದ ಪ್ರಕಾರ ನಡೆದುಕೊಳ್ಳಲಿಲ್ಲ. ಇಷ್ಟಾದರೂ ನಾವು ರಾಜ್ಯಪಾಲರನ್ನು ನಗುತ್ತಲೇ ಬೀಳ್ಕೊಟ್ಟು, ಧನ್ಯವಾದ ಹೇಳಿದ್ದೇವೆ' ಎಂದರು. 'ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯದ ಬದಲಿಗೆ ಖಂಡನಾ ನಿರ್ಣಯದ ಮೂಲಕ ರಾಜ್ಯಪಾಲರಿಗೆ ಅಗೌರವ ತೋರಿಸಿದ್ದಾರೆ. ಆದ್ದರಿಂದ ಈ ಕುರಿತು ಸರ್ಕಾರ ಕ್ಷಮ ಯಾಚಿಸಬೇಕು. ರಾಜ್ಯಪಾಲರನ್ನು ಅಡ್ಡಗಟ್ಟಿದ ಬಿ.ಕೆ.ಹರಿಪ್ರಸಾದ್, ಶರತ್ ಬಚ್ಚೇಗೌಡ, ಎಸ್.ರವಿ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದು ಅಶೋಕ ಪಟ್ಟು ಹಿಡಿದರು. ಆ ವೇಳೆ, ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಅಶೋಕ ಅವರನ್ನು ಬೆಂಬಲಿಸಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

# ಎಚ್‌.ವಿ. ಅನಂತ ಸುಬ್ಬರಾವ್ ನಿಧನ

**ಬೆಂಗಳೂರು:** ಕೆಎಸ್‌ಆರ್‌ಟಿಸಿ ಸ್ಟಾಫ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷ, ಕಾರ್ಮಿಕ ಮುಖಂಡ ಎಚ್.ವಿ. ಅನಂತ ಸುಬ್ಬರಾವ್ (85) ಬುಧವಾರ ಹೃದಯಾಘಾತದಿಂದ ನಿಧನರಾದರು.

ವಿಜಯನಗರದಲ್ಲಿರುವ ತಮ್ಮ ಮನೆಯಲ್ಲಿ ಬುಧವಾರ ಸಂಜೆ ಸುಮಾರು 6 ಗಂಟೆಯ ಹೊತ್ತಿಗೆ ಸ್ನಾನ ಮಾಡಿ ಬಂದವರಿಗೆ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿದೆ. ಕಾರ್ಮಿಕ ನಾಯಕ ವಿಜಯಭಾಸ್ಕರ್ ಮತ್ತು ಅನಂತ ಸುಬ್ಬರಾವ್ ಅವರ ಮೊಮ್ಮಗಳು ವೈದ್ಯರಿಗೆ ಕರೆ ಮಾಡಿದ್ದರು. ಕೂಡಲೇ ಆಸ್ಪತ್ರೆಗೆ ದಾಖಲಿಸುವಂತೆ ವೈದ್ಯರು ಸೂಚನೆ ನೀಡಿದ್ದರು. ಆಂಬುಲೆನ್ಸ್ ತರಿಸಿ ಆಸ್ಪತ್ರೆಗೆ ಒಯ್ಯುತ್ತಿದ್ದಾಗ ಸಂಜೆ ಸುಮಾರು 6.25ರ ಹೊತ್ತಿಗೆ ದಾರಿ ಮಧ್ಯೆ ಕೊನೆಯುಸಿರೆಳೆದರು. ಹೃದಯಾಘಾತದಿಂದ ಮೃತಪಟ್ಟಿರುವುದಾಗಿ ವೈದ್ಯರು ಘೋಷಿಸಿದರು.



ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯ ಮುಖಂಡರೂ ಆಗಿದ್ದ ಅವರು ನೌಕರರ ಬೇಡಿಕೆಗಳ ಈಡೇರಿಕೆಗಾಗಿ ಜ.29ರಂದು 'ಬೆಂಗಳೂರು ಚಲೊ'ಗೆ ಕರೆ ನೀಡಿದ್ದರು. ಬುಧವಾರವೂ ಕಾರ್ಮಿಕ ನಾಯಕರೊಂದಿಗೆ ಚರ್ಚಿಸಿದ್ದರು. ಸಂಜೆ ಮತ್ತೊಂದು ಸುತ್ತಿನ ಚರ್ಚೆ ನಡೆಸಲು ನಿರ್ಧರಿಸಿದ್ದರು. ಸಭೆಗೆ ತೆರಳುವ ಮುನ್ನವೇ ಹೃದಯಾಘಾತ ಉಂಟಾಗಿತ್ತು.

1960ರ ದಶಕದಲ್ಲಿ ಚಿಕ್ಕ ವಯಸ್ಸಿನಲ್ಲಿಯೇ ಕಾರ್ಮಿಕ ಸಂಘಕ್ಕೆ ಬಂದರು. ಅವರು ಎಲ್‌ಐಸಿ ನೌಕರರ ಸಂಘವನ್ನು ಉದ್ಯೋಗಿ ನಾಯಕರಾಗಿ ಮುನ್ನಡೆಸಿದರು. ಅವರು, ಸಿಪಿಐ ಮೂಲಕ ವಿಧಾನಸಭಾ ಚುನಾವಣೆಗಳಲ್ಲಿ ಸ್ಪರ್ಧಿಸಿದ್ದರು. ಅವರು ಕರ್ನಾಟಕದಲ್ಲಿ ದೀರ್ಘಕಾಲ ಎಐಟಿಯುಸಿ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಸಾರಿಗೆ ಕಾರ್ಮಿಕ ಸಂಘಟನೆಯಲ್ಲಿ ಐದು ದಶಕ ಕೆಲಸ ಮಾಡಿದ್ದರು. ಸಾರಿಗೆ ಕಾರ್ಮಿಕರ ಪರ ಮುಷ್ಕರಕ್ಕಾಗಿ, ಹಲವು ಬಾರಿ ಜೈಲುವಾಸ ಅನುಭವಿಸಿದ್ದರು. ಅವರಿಗೆ ಇಬ್ಬರು ಹೆಣ್ಣುಮಕ್ಕಳು. ಜ್ಯೋತಿ ಕಾರ್ಮಿಕ ಹೋರಾಟಗಾರ್ತಿಯಾಗಿದ್ದರೆ, ಇನ್ನೊಬ್ಬ ಮಗಳು ರೇಖಾ ಅಮೆರಿಕದಲ್ಲಿದ್ದಾರೆ.

### ದೇಹದಾನ

ಎಚ್.ವಿ. ಅನಂತ ಸುಬ್ಬರಾವ್ ಅವರು ದೇಹವನ್ನು ಸರ್ಕಾರಿ ವೈದ್ಯಕೀಯ ಕಾಲೇಜಿಗೆ ದಾನ ಮಾಡುವಂತೆ ವಿಲ್ ಬರೆದಿದ್ದು, ಅದರಂತೆ ನಿಮ್ಹಾನ್ಸ್‌ಗೆ ದೇಹವನ್ನು ನೀಡಲು ಕುಟುಂಬದವರು ನಿರ್ಧರಿಸಿದ್ದಾರೆ.

ಸುಬ್ಬರಾವ್ ಅವರ ಪಾರ್ಥೀವ ಶರೀರವನ್ನು ಸೋಮವಾರ ಬೆಳಿಗ್ಗೆ 11ರಿಂದ ಸಂಜೆ 4 ರವರೆಗೆ ಬೆಂಗಳೂರಿನ ವೈಯಾಲಿಕಾವಲ್‌ನಲ್ಲಿರುವ ಸಿಪಿಐ ರಾಜ್ಯ ಕಚೇರಿ ಘಾಟೆ ಭವನದಲ್ಲಿ ಇರಿಸಲಾಗುವುದು ಎಂದು ಮೂಲಗಳು ಹೇಳಿವೆ.

### 'ಬೆಂಗಳೂರು ಚಲೊ' ಮುಂದೂಡಿಕೆ

ಕೆಎಸ್‌ಆರ್‌ಟಿಸಿ ಸೇರಿದಂತೆ ನಾಲ್ಕು ನಿಗಮಗಳ ನೌಕರರ ಬೇಡಿಕೆ ಈಡೇರಿಸದೇ ಇರುವುದನ್ನು ಖಂಡಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ನೇತೃತ್ವದಲ್ಲಿ ಜ.29ರಂದು ಹಮ್ಮಿಕೊಳ್ಳಲಾಗಿದ್ದ ಬೆಂಗಳೂರು ಚಲೊವನ್ನು ಮುಂದೂಡಲಾಗಿದೆ. ಮುಂದಿನ ದಿನಾಂಕವನ್ನು ತಿಳಿಸಲಾಗುವುದು ಎಂದು ಸಾರಿಗೆ ನಿಗಮ ನೌಕರರ ಮುಖಂಡ ವಿಜಯಭಾಸ್ಕರ್ ಡಿ.ಎ. ತಿಳಿಸಿದ್ದಾರೆ.

# ದಣಿವರಿಯದ ಕಾರ್ಮಿಕ ನಾಯಕ

• ಸನತ್ ಕುಮಾರ ಬೆಳಗಲಿ

**ನುಡಿ ನಮನ**

ಕರ್ನಾಟಕ ಕಂಡ ಅಪರೂಪದ ಕಮ್ಯುನಿಸ್ಟ್ ಸಂಗಾತಿ, ದುಡಿಯುವ ಜನರ ಮೆಚ್ಚಿನ ಕಾರ್ಮಿಕ ನಾಯಕ, ಕಾಮ್ರೇಡ್ ಎಚ್.ವಿ. ಅನಂತ ಸುಬ್ಬರಾವ್ ನಿರ್ಗಮನ ಅಕ್ಷರಶಃ ಸಾರ್ವಜನಿಕ ಜೀವನಕ್ಕೆ ತುಂಬಲಾಗದ ನಷ್ಟ. ಅವರನ್ನು ತುಂಬಾ ಹತ್ತಿರದಿಂದ ನೋಡಿದ ನನ್ನಂಥವರಿಗೆ ಈ ಅಗಲಿಕೆಯನ್ನು ಅರಗಿಸಿಕೊಳ್ಳಲು ಆಗುತ್ತಿಲ್ಲ. ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಒಂದೂವರೆ ಲಕ್ಷಕ್ಕೂ ಹೆಚ್ಚು ಕಾರ್ಮಿಕರ ಅಚ್ಚುಮೆಚ್ಚಿನ ನಾಯಕರಾಗಿದ್ದ ಅನಂತ ಸುಬ್ಬರಾವ್ ಅವರಂಥವರು ನಮ್ಮ ಸಾರ್ವಜನಿಕ ಜೀವನಕ್ಕೆ ಒಂದು ಘನತೆಯನ್ನು ತಂದು ಕೊಟ್ಟವರು. ಅವರದು ಸರಳ, ಸಜ್ಜನಿಕೆಯ ವ್ಯಕ್ತಿತ್ವ. ಅವರ ಬದುಕು ಪಾರದರ್ಶಕವಾಗಿತ್ತು. ನಂಬಿದ ಸಿದ್ಧಾಂತ ಮತ್ತು ಶ್ರಮಜೀವಿಗಳ ಹೋರಾಟದಲ್ಲಿ ಎಂದೂ ರಾಜಿ ಮಾಡಿಕೊಳ್ಳದ ಅನಂತ ಸುಬ್ಬರಾವ್ ತಮ್ಮನ್ನು ತಾವು ಮೇಣದ ಬತ್ತಿಯಂತೆ ಸುಟ್ಟುಕೊಂಡು ಚಳವಳಿ ಕಟ್ಟಿದವರು. ಅವರ ಮಾತು ಮತ್ತು ಕೃತಿಯಲ್ಲಿ ಒಂದಿಂಚು ವ್ಯತ್ಯಾಸವೂ ಇರಲಿಲ್ಲ.

ಹಾಸನ ಜಿಲ್ಲೆಯ ಅರಕಲಗೂಡಿನಲ್ಲಿ ಜನಿಸಿದ ಅನಂತ ಸುಬ್ಬರಾವ್ ಒಂದೊಂದು ಹೆಜ್ಜೆ ಇಡುತ್ತ ಬಹು ಎತ್ತರಕ್ಕೆ ಬೆಳೆದು ನಿಂತವರು. ಜೀವ ವಿಮಾ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿ ಬೆಂಗಳೂರಿಗೆ ಬಂದ ಅವರು ವಿಮಾ ನೌಕರರ ಸಂಘಟನೆಯಲ್ಲಿ ಮಾರ್ಕ್ಸ್‌ವಾದದ ಸೈದ್ಧಾಂತಿಕ ದೀಕ್ಷೆಯನ್ನು ಪಡೆದವರು. ಬರೀ ಸಿದ್ಧಾಂತವನ್ನು ಅರಿತುಕೊಂಡು ಅವರು ಸುಮ್ಮನಿರಲಿಲ್ಲ. ಸುಲಿಗೆ, ಶೋಷಣೆಯಿಲ್ಲದ ಹೊಸ ಸಮಾಜವನ್ನು ನಿರ್ಮಿಸುವ ಕನಸನ್ನು ನನಸಾಗಿಸಲು ತನ್ನ ಇಡೀ ಬದುಕನ್ನೇ ಸಮರ್ಪಿಸಿಕೊಂಡರು. ಸಾರಿಗೆ ಸಂಸ್ಥೆಯ ಕಾರ್ಮಿಕರನ್ನು ಸಂಘಟಿಸುವುದು ಸುಲಭದ ಸಂಗತಿಯಲ್ಲ. ಅದಕ್ಕಾಗಿ ಇಡೀ ಕರ್ನಾಟಕವನ್ನು ನೂರಾರು ಸಲ ಸುತ್ತಿದರು. ಪ್ರತಿ ಜಿಲ್ಲೆ–ತಾಲ್ಲೂಕು–ಡಿಪೊಗೆ ಹೋಗಿ ಕಾರ್ಮಿಕರ ಕಷ್ಟಗಳನ್ನು ಆಲಿಸಿದರು. ಸಮಸ್ಯೆ ಅರಿತುಕೊಂಡು ಸರ್ಕಾರಕ್ಕೆ ಮನದಟ್ಟು ಮಾಡುವ ಚಾಕಚಕ್ಯತೆ ಅವರಿಗಿತ್ತು. ಅವರ ಮತ್ತು ನನ್ನ ಐದು ದಶಕಗಳ ಪರಿಚಯ ಮತ್ತು ಒಡನಾಟದಲ್ಲಿ ನಾನು ಕಂಡಂತೆ ಅವರಿಗೆ ಸ್ವಂತದ ಬದುಕಿಗಿಂತ ಲಕ್ಷಾಂತರ ಸಾರಿಗೆ ನೌಕರರ, ಕಾರ್ಮಿಕರ ಬದುಕು ಮುಖ್ಯವಾಗಿತ್ತು. ಮಧುಮೇಹ, ನೂರೆಂಟು ಆರೋಗ್ಯದ ಸಮಸ್ಯೆಗಳಿದ್ದರೂ ಅನಂತ ಸುಬ್ಬರಾಯರ ಹೋರಾಟ, ಚಳವಳಿಗಳೆದುರು ಅವೆಲ್ಲವೂ ನಗಣ್ಯವಾಗಿದ್ದವು. ಅವರು ಕೇವಲ ವೇದಿಕೆಯ ಮೇಲೆ ನಿಂತು ಭಾಷಣ ಮಾಡಿ ಹೋಗುವ ನಾಯಕರಾಗಿರಲಿಲ್ಲ. ಪ್ರತಿಯೊಬ್ಬ ಕಾರ್ಮಿಕನ ಮನೆಗೆ ಹೋಗಿ ಕಷ್ಟ ಸುಖ ಕೇಳುತ್ತಿದ್ದರು. ಆರೋಗ್ಯ ಸಮಸ್ಯೆ ಇದ್ದರೆ ಅದರ ಬಗ್ಗೆ ಸರಿಯಾಗಿ ತಿಳಿದುಕೊಂಡು ಸಕಲ ನೆರವನ್ನೂ ನೀಡುತ್ತಿದ್ದರು. ಆಸ್ಪತ್ರೆಗೆ ಸೇರಿದ್ದರೆ ಅಲ್ಲಿ ಹೋಗಿ ವಿಚಾರಿಸುತ್ತಿದ್ದರು. ಅಂತಲೇ ಕಾರ್ಮಿಕರ ಪಾಲಿಗೆ ಅವರು ಕೇವಲ ನೇತಾರರಾಗಿರಲ್ಲಿ ಹಿರಿಯಣ್ಣನಂತೆ ಇದ್ದರು. ಅನಂತ ಸುಬ್ಬರಾಯರು ಬೆಂಗಳೂರಿನಿಂದ ಒಂದು ಕರೆ ಕೊಟ್ಟರೆ ಸಾಕು ಇಡೀ ರಾಜ್ಯದ ಬಸ್ ಸಂಚಾರ ಸ್ಥಗಿತಗೊಳ್ಳುತ್ತಿತ್ತು. ವೈದ್ಯರು ನೀಡಿದ ಎಚ್ಚರಿಕೆಯನ್ನು ನಿರ್ಲಕ್ಷಿಸಿ ಇಡೀ ನಾಡನ್ನು ಸುತ್ತುವ ಇನ್ನೊಬ್ಬ ನಾಯಕನನ್ನು ನಾನು ನೋಡಿಲ್ಲ.




ಬೀದರ್‌ನಲ್ಲಿ ಸಂಘಟನೆಯ ಕಾರ್ಯಕ್ರಮದಲ್ಲಿ ಎಚ್.ವಿ. ಅನಂತ ಸುಬ್ಬರಾವ್ ಮಾತನಾಡಿದ್ದರು (ಸಂಗ್ರಹ ಚಿತ್ರ)

ಸಾರ್ವಜನಿಕ ಒಡೆತನದ ರಾಜ್ಯ ಸಾರಿಗೆ ಸಂಸ್ಥೆಯನ್ನು ಖಾಸಗೀಕರಣ ಮಾಡಲು ಮಸಲತ್ತು ನಡೆದಾಗಲೆಲ್ಲ ಅದನ್ನು ತಡೆಯಲು ಅವಿಶ್ರಾಂತ ಹೋರಾಟ ಮಾಡಿದವರು ಅವರು. ಸಾರಿಗೆ ಸಂಸ್ಥೆಗೆ ಸಂಬಂಧಿಸಿದ ಅಂಕಿ ಸಂಖ್ಯೆಗಳು ಸದಾ ಅವರ ನಾಲಿಗೆ ಮೇಲೆ ಇರುತ್ತಿದ್ದವು.

ತಿಂಗಳು, ಎರಡು ತಿಂಗಳಿಗೊಮ್ಮೆ ಕರ್ನಾಟಕ ಸುತ್ತಿ ಶ್ರಮಿಕರ ಕಷ್ಟ–ಸುಖಗಳನ್ನು ಆಲಿಸದಿದ್ದರೆ ಅವರಿಗೆ ಸಮಾಧಾನವಿರುತ್ತಿರಲಿಲ್ಲ. ಬೆಂಗಳೂರಿನಲ್ಲಿ ಇದ್ದಾಗ ಅವರು ಇಡೀ ದಿನ ಎಐಟಿಯುಸಿ ಕಚೇರಿಯಲ್ಲೇ ಇರುತ್ತಿದ್ದರು. ಇಷ್ಟು ಮಾತ್ರವಲ್ಲ ರಾತ್ರಿ ಕಚೇರಿಯಲ್ಲೇ ಉಳಿಯುತ್ತಿದ್ದರು. ಚಾಪೆ, ಪೇಪರ್‌ಗಳನ್ನು ಹಾಸಿಕೊಂಡು ಮಲಗುತ್ತಿದ್ದರು.

ಅನಂತ ಸುಬ್ಬರಾವ್ ಅವರ ಮನೆಯಲ್ಲಿ ಜಾತಿ ಎಂಬುದು ಯಾರಿಗೂ ಗೊತ್ತಿರಲಿಲ್ಲ. ಯಾರೇ ಬರಲಿ ಅವರ ಜೊತೆಗೆ ಕುಳಿತು ಊಟ ಮಾಡಬೇಕೆಂದು ಅವರು ಬಯಸುತ್ತಿದ್ದರು. ತಮ್ಮ ತಟ್ಟೆಯನ್ನು ತಾವೇ ತೊಳೆಯುತ್ತಿದ್ದ ಅವರು, ಬಹುತೇಕ ಸಲ ಮನೆಯಲ್ಲಿ ಊಟ ಮಾಡಿದ ಎಲ್ಲರ ಪಾತ್ರೆಗಳನ್ನು ತೊಳೆಯುವುದಕ್ಕೆ ಹಿಂಜರಿಯುತ್ತಿರಲಿಲ್ಲ. ಮಗಳು ಅಂತರ್ಜಾತಿ ಮದುವೆಗೆ ಮುಂದಾದಾಗ ಅನಂತ ಸುಬ್ಬರಾಯರು ತಾವೇ ಮುಂದೆ ನಿಂತು ಮದುವೆ ಮಾಡಿದರು. ಸಮಾಜವಾದಿ ನಾಯಕ ಶಾಂತವೇರಿ ಗೋಪಾಲಗೌಡರ ಒಡನಾಟವನ್ನೂ ಹೊಂದಿದ್ದ ಅನಂತ ಸುಬ್ಬರಾಯರಂಥ ಅಪರೂಪದ ನಾಯಕನನ್ನು ಕಳೆದುಕೊಂಡು ರಾಜ್ಯದ ಕಾರ್ಮಿಕ ಚಳವಳಿ, ಕಮ್ಯುನಿಸ್ಟ್ ಪಕ್ಷ ಮಾತ್ರವಲ್ಲ ಸಾರ್ವಜನಿಕ ಜೀವನದಲ್ಲಿ ಬಹುದೊಡ್ಡ ಶೂನ್ಯ ಆವರಿಸಿದೆ. ಚಳವಳಿಗಳು ಇರುವವರೆಗೆ ಅನಂತಸುಬ್ಬರಾವ್ ಇದ್ದೇ ಇರುತ್ತಾರೆ ಅಂದರೆ ಅತಿಶಯೋಕ್ತಿಯಲ್ಲ.



## ಪಾಂಡವಪುರದ 'ಪುಸ್ತಕ ಮನೆ' ಗ್ರಂಥಾಲಯದಲ್ಲಿ ಜಾಗದ ಕೊರತೆ

# ಸೂರಿಗಾಗಿ ಕಾಯುತ್ತಿವೆ 10 ಲಕ್ಷ ಪುಸ್ತಕಗಳು

• ಸಿದ್ದು ಆರ್.ಜಿ.ಹಳ್ಳಿ

**ಮಂಡ್ಯ:** ಪ್ರಸಕ್ತ ಸಾಲಿನಲ್ಲಿ 'ಪದ್ಮಶ್ರೀ' ಪ್ರಶಸ್ತಿ ಪುರಸ್ಕೃತರಾಗಿರುವ ಎಂ.ಅಂಕೇಗೌಡರ 'ಪುಸ್ತಕ ಮನೆ'ಯ 10 ಲಕ್ಷಕ್ಕೂ ಹೆಚ್ಚು ಪುಸ್ತಕಗಳು ವ್ಯವಸ್ಥಿತ ಸೂರಿಗಾಗಿ ಕಾಯುತ್ತಿವೆ.

ಜಿಲ್ಲೆಯ ಪಾಂಡವಪುರದಲ್ಲಿರುವ 'ಅಂಕೇಗೌಡ ಜ್ಞಾನ ಪ್ರತಿಷ್ಠಾನ'ದ ಗ್ರಂಥಾಲಯದಲ್ಲಿ ಬರೋಬ್ಬರಿ 20 ಲಕ್ಷ ಪುಸ್ತಕಗಳಿವೆ. ಹೆಚ್ಚುವರಿ ಕೊಠಡಿ ಮತ್ತು ಕಪಾಟುಗಳಿಲ್ಲದೆ ಕೋಟ್ಯಂತರ ರೂಪಾಯಿ ಮೌಲ್ಯದ ಗ್ರಂಥಗಳು, ಕೈಪಿಡಿಗಳು, ಶಬ್ದಕೋಶಗಳು ನೆಲದಲ್ಲಿ ಅಸ್ತವ್ಯಸ್ತವಾಗಿ ಬಿದ್ದು ದೂಳು ತಿನ್ನುತ್ತಿವೆ.

ದೇಶದ ಅತಿದೊಡ್ಡ 'ಪರ್ಸನಲ್ ಲೈಬ್ರರಿ' ಎಂದು ಹೆಸರಾದ ಇಲ್ಲಿ ಸುಮಾರು 200 ಅಲ್ಮೆರಾಗಳಲ್ಲಿ ಜೋಡಿಸಿರುವ ಪುಸ್ತಕಗಳನ್ನು ಹೊರತುಪಡಿಸಿದರೆ, ಸೂಕ್ತ ನಿರ್ವಹಣೆ ಸಾಧ್ಯವಾಗದೆ ಸಾವಿರಾರು ಪುಸ್ತಕಗಳು ಮಳೆ ನೀರಿನಲ್ಲಿ ತೋಯ್ದಿವೆ, ಗೆದ್ದಲು ಸಮಸ್ಯೆಯಿಂದಾಗಿ ಹಾಳಾಗುತ್ತಿವೆ.

'ಒಬ್ಬರೇ ವ್ಯಕ್ತಿ ಇಷ್ಟೊಂದು ಪುಸ್ತಕಗಳನ್ನು ವ್ಯವಸ್ಥಿತವಾಗಿ ನಿರ್ವಹಣೆ ಮಾಡುವುದೂ ಸವಾಲು. ಸಿಬ್ಬಂದಿ ಇಲ್ಲದೆ ಅಂಕೇಗೌಡರ ಕುಟುಂಬಸ್ಥರೇ ಪುಸ್ತಕಗಳನ್ನು ಜೋಡಿಸಿಡಲು, ಹಾಳಾಗದಂತೆ ಕಾಪಾಡಲು ಹರಸಾಹಸ ಪಡುತ್ತಿದ್ದಾರೆ' ಎಂದು ಮಕ್ಕಳ ಸಾಹಿತ್ಯ ಪರಿಷತ್‌ನ ತಾಲ್ಲೂಕು ಘಟಕದ ಅಧ್ಯಕ್ಷ ಧನ್ಯಕುಮಾರ್ ಹೇಳಿದರು.

**ವರ್ಗೀಕರಣ ಅಗತ್ಯ:** 'ನೆಲದ ಮೇಲೆ ರಾಶಿ ಪುಸ್ತಕಗಳ ವರ್ಗೀಕರಣ ಆಗಬೇಕು. ಬೇಕಾದ ಪುಸ್ತಕ ಹುಡುಕುವುದೇ ಸವಾಲಾಗಿದೆ. ಓದುವುದಂತೂ ದೂರವೇ ಉಳಿಯುತ್ತದೆ' ಎಂದು ಅಲ್ಲಿಗೆ ಭೇಟಿ ನೀಡಿದ್ದ ಓದುಗರು ಬೇಸರ ವ್ಯಕ್ತಪಡಿಸಿದರು.

**ಅನುದಾನ, ನೆರವು:** 20 ವರ್ಷಗಳ ಹಿಂದೆ ಉದ್ಯಮಿ ಹರಿಖೋಡೆ ಅವರು ₹12 ಲಕ್ಷ ಮೊತ್ತದಲ್ಲಿ ಅರ್ಧ ಎಕರೆ ಜಮೀನು ಖರೀದಿಸಿ, ₹80 ಲಕ್ಷ ವೆಚ್ಚದಲ್ಲಿ ಗ್ರಂಥಾಲಯ ಕಟ್ಟಡ ಕಟ್ಟಿಸಿಕೊಟ್ಟಿದ್ದರು. ಡಿ.ವಿ. ಸದಾನಂದಗೌಡ ಅವರು ಸಿ.ಎಂ ಆಗಿದ್ದಾಗ ₹50 ಲಕ್ಷ, ಎಚ್.ಡಿ.ಕುಮಾರಸ್ವಾಮಿ ಅವರು ಸಿ.ಎಂ ಆಗಿದ್ದಾಗ ₹1 ಕೋಟಿ ನೆರವು ದೊರೆತಿತ್ತು. ಅಲ್ಲದೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಟ್ಟಡ, ಕಪಾಟುಗಳ ಸೌಲಭ್ಯ ಒದಗಿಸಿದೆ.

### ಮುಖ್ಯಾಂಶಗಳು

- 5 ಸಾವಿರ ಶಬ್ದಕೋಶ, 20 ಭಾಷೆಗಳ ಕೃತಿಗಳು
- ಗಾಂಧೀಜಿ ಕುರಿತ 2,500 ಶೀರ್ಷಿಕೆಗಳ ಪುಸ್ತಕಗಳು
- ಭಗವದ್ಗೀತೆ, ಕುರ್ ಆನ್ ಸೇರಿ ಸರ್ವಧರ್ಮಗಳ ಗ್ರಂಥಗಳು



'ಪುಸ್ತಕ ಮನೆ'ಯಲ್ಲಿ ನೆಲದ ಮೇಲೆ ಪುಸ್ತಕಗಳ ರಾಶಿ
ಚಿತ್ರ: ಸಂತೋಷ ಚಂದ್ರಮೂರ್ತಿ

### ನೆರವಿಗೆ ಮನವಿ

'ಜೀವಮಾನವಿಡೀ ದುಡಿದ ಹಣ ಹಾಕಿ 30 ವರ್ಷಗಳಿಂದ ಪುಸ್ತಕ ಮನೆಯನ್ನು ನಿರ್ವಹಿಸುತ್ತಿದ್ದೇನೆ. ನೆಲದ ಮೇಲೆ ಬಿದ್ದಿರುವ 10 ಲಕ್ಷ ಪುಸ್ತಕಗಳಿಗೆ ಗ್ರಂಥಾಲಯ ಕಟ್ಟಲು 10 ಎಕರೆ ಜಮೀನು ಮತ್ತು ಆರ್ಥಿಕ ನೆರವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರ ಒದಗಿಸಬೇಕು' ಎಂದು ವ್ಯವಸ್ಥಾಪಕ ಟ್ರಸ್ಟಿ ಎಂ.ಅಂಕೇಗೌಡ ಮನವಿ ಮಾಡಿದರು.



ಅಂಕೇಗೌಡ

'ಪ್ರಜಾವಾಣಿ'ಯೊಂದಿಗೆ ಮಾತನಾಡಿದ ಅವರು, 'ಈ ಪುಸ್ತಕಗಳ ಉಪಯೋಗವನ್ನು ಬಡ ಮತ್ತು ಗ್ರಾಮೀಣ ಮಕ್ಕಳು ಪಡೆದುಕೊಳ್ಳುವಂತಾಗಬೇಕು' ಎಂದು ಅಭಿಪ್ರಾಯಪಟ್ಟರು.

# ‘ಅಕ್ರಮ ವಿದೇಶಿಯರನ್ನು ಹೊರದಬ್ಬಿ’

## ಮಾದಕ ದ್ರವ್ಯಗಳ ಮಾರಾಟ ಆರೋಪ • ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಆದೇಶ



ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**
- ಆರೋಪಿ ಘಾನಾ ದೇಶದ ಮಹಿಳೆ
- ಎಂಡಿಎಂಎ ಮತ್ತು ಕೊಕೇನ್ ವಶ

**ಬೆಂಗಳೂರು:** ‘ಪಾಸ್‌ಪೋರ್ಟ್ ಅವಧಿ ಮುಕ್ತಾಯಗೊಂಡ ಮತ್ತು ಮಾದಕ ದ್ರವ್ಯ ಮಾರಾಟದಲ್ಲಿ ಭಾಗಿಯಾಗಿರುವ ವಿದೇಶಿಯರನ್ನು ಕೂಡಲೇ ಅವರವರ ದೇಶಕ್ಕೆ ಗಡಿಪಾರು ಮಾಡಬೇಕು’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಕಟ್ಟುನಿಟ್ಟಿನ ಆದೇಶ ಮಾಡಿದೆ.

‘ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಮ್ಯಾಜಿಸ್ಟ್ರೇಟ್ ಹೊರಡಿಸಿರುವ ಆದೇಶ ರದ್ದುಪಡಿಸಬೇಕು’ ಎಂದು ಕೋರಿ ಪಶ್ಚಿಮ ಆಫ್ರಿಕಾದ ಘಾನಾ ದೇಶದ ಮಹಿಳೆ ಯೆಬೊಹಾ ಬೆನೆಡಿಕ್ಟಾ ಸಲ್ಲಿಸಿರುವ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ವೇಳೆ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಹೆಚ್ಚುವರಿ ರಾಜ್ಯ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, ‘ಆರೋಪಿಯಿಂದ 400 ಗ್ರಾಂ ಎಂಡಿಎಂಎ ಮತ್ತು ಕೊಕೇನ್ ವಶಪಡಿಸಿಕೊಳ್ಳಲಾಗಿದೆ’ ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದಕ್ಕೆ ಪ್ರತಿಯಾಗಿ ಆರೋಪಿ ಪರ ವಕೀಲರು, ‘ಪೊಲೀಸರು ಅರ್ಜಿದಾರರ ಬಂಧನಕ್ಕೆ ಕಾರಣಗಳನ್ನು ಒದಗಿಸಿಲ್ಲ ಹಾಗೂ ಬಂಧನದ ಕಾರಣಗಳನ್ನು ಇಂಗ್ಲಿಷ್ ಭಾಷೆಯಲ್ಲಿ ನೀಡಿಲ್ಲ. ಹಾಗಾಗಿ, ಅರ್ಜಿದಾರರನ್ನು ಬಿಡುಗಡೆಗೊಳಿಸಲು ಮಧ್ಯಂತರ ಆದೇಶ ನೀಡಬೇಕು’ ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಈ ಮನವಿಗೆ ಕೆರಳಿದ ನ್ಯಾಯಮೂರ್ತಿ ನಾಗಪ್ರಸನ್ನ ಅವರು, ‘ಏಕೆ ಬಂಧಿಸಲಾಗಿದೆ ಎಂಬುದು ಆರೋಪಿಗೆ ಗೊತ್ತಿದೆಯಲ್ಲವೇ? ಅದಕ್ಕೆ ಕಾರಣವನ್ನು ಬಿಡಿಸಿ ಬೇರೆ ಹೇಳಬೇಕೆ? ಬಂಧನಕ್ಕೆ ಕಾರಣ ನೀಡಿಲ್ಲ ಎಂಬ ಆಧಾರದಲ್ಲಿ ಆರೋಪಿಯ ಬಿಡುಗಡೆಗೆ ಆದೇಶಿಸುವಂತೆ ಕೋರಬೇಡಿ. ನಾನು ಇಂತಹ ಮನವಿಯನ್ನು ಒಪ್ಪಿ ಆದೇಶ ಮಾಡುವುದಿಲ್ಲ. ಬಿಡುಗಡೆ ಆದೇಶ ಬೇಕಿದ್ದರೆ ಪ್ರತ್ಯೇಕ ಜಾಮೀನು ಅರ್ಜಿ ಸಲ್ಲಿಸಿ ಪರಿಹಾರ ಪಡೆಯಿರಿ’ ಎಂದು ಕಟುವಾಗಿ ನುಡಿದರು.

**ಪ್ರಕರಣವೇನು?:** ಅರ್ಜಿದಾರರು ಸಂಜಯನಗರದ ಸಪ್ತಗಿರಿ ಬಡಾವಣೆಯಲ್ಲಿ ಬಾಡಿಗೆ ಮನೆಯಲ್ಲಿ ನೆಲಸಿದ್ದರು. ಸಂಜಯನಗರ ಪೊಲೀಸ್ ಠಾಣೆಯ ಪಿಎಸ್‌ಐ ಎ.ರವಿ ನೀಡಿದ್ದ ಮಾಹಿತಿ ಆಧರಿಸಿ ಯಲಹಂಕ ನ್ಯೂ ಟೌನ್ ಠಾಣಾ ಪೊಲೀಸರು ಅರ್ಜಿದಾರರ ಮನೆಯ ಮೇಲೆ ದಾಳಿ ನಡೆಸಿದ್ದರು.

ಈ ವೇಳೆ ಅರ್ಜಿದಾರ ಮಹಿಳೆ ಹಾಗೂ ಮತ್ತೊಬ್ಬ ಆರೋಪಿಯಿಂದ 700 ಗ್ರಾಂ ಎಂಡಿಎಂಎ ವಶಪಡಿಸಿಕೊಳ್ಳಲಾಗಿತ್ತು. ಈ ಕುರಿತಂತೆ ಅವರ ಸ್ವಇಚ್ಛಾ ಹೇಳಿಕೆ ದಾಖಲಿಸಿಕೊಂಡಿದ್ದ ಪೊಲೀಸರು ಆರೋಪಿಗಳನ್ನು 2025ರ ಸೆಪ್ಟೆಂಬರ್ 3ರಂದು ಬಂಧಿಸಿ, ಮ್ಯಾಜಿಸ್ಟ್ರೇಟ್ ಕೋರ್ಟ್ ಮುಂದೆ ಹಾಜರುಪಡಿಸಿದ್ದರು. ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಮಹಿಳೆಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶಿಸಿತ್ತು.



ಈ ಪ್ರಕರಣದಲ್ಲಿ ಆರೋಪಿಯ ಮನೆಯಿಂದ 400 ಗ್ರಾಂ ಎಂಡಿಎಂಎ ಮತ್ತು ಕೊಕೇನ್ ಮಾದಕ ದ್ರವ್ಯ ವಶಪಡಿಸಿ ಕೊಳ್ಳಲಾಗಿದೆ. 400 ಗ್ರಾಂ ಎಂಡಿಎಂಎ ಅಂದರೆ ಸುಮಾರು 4 ಸಾವಿರ ವಿದ್ಯಾರ್ಥಿಗಳನ್ನು ಹಾಳು ಮಾಡಬಲ್ಲದು

**ಎಂ.ನಾಗಪ್ರಸನ್ನ,** ನ್ಯಾಯಮೂರ್ತಿ

ನ್ಯಾ. ಎಂ.ನಾಗಪ್ರಸನ್ನ

### ಜೈಲಿನಲ್ಲಿ ಏಕೆ ಇಟ್ಟುಕೊಂಡಿದ್ದೀರಿ?

‘ಇಂತಹ ಆರೋಪಿಗಳನ್ನು ಜೈಲಿನಲ್ಲಿ ಏಕೆ ಇಟ್ಟುಕೊಂಡಿದ್ದೀರಾ? ಕೂಡಲೇ ಅವರನ್ನು ಸ್ವದೇಶಕ್ಕೆ ಗಡಿಪಾರು ಮಾಡಬೇಕಲ್ಲವೇ? ಎಂದು ನ್ಯಾಯಮೂರ್ತಿಗಳು ಪ್ರಾಸಿಕ್ಯೂಷನ್ ಅನ್ನು ಕಟುವಾಗಿ ಪ್ರಶ್ನಿಸಿದರು.

‘ಪಾಸ್‌ಪೋರ್ಟ್ ಅವಧಿ ಮುಗಿದ ವಿದೇಶಿಯರನ್ನು ಪತ್ತೆ ಹಚ್ಚಿ ಕೂಡಲೇ ಅವರ ದೇಶಕ್ಕೆ ಗಡಿಪಾರು ಮಾಡಬೇಕು. ಇಲ್ಲವಾದರೆ ಇಂಥವರೆಲ್ಲಾ ಮಾದಕ ದ್ರವ್ಯ ಸಂಗ್ರಹಣೆ ಅಥವಾ ಮಾರಾಟ ಚಟುವಟಿಕೆಗಳಲ್ಲಿ ಭಾಗಿಯಾಗುವುದು ಹೆಚ್ಚಲಿದೆ’ ಎಂದು ಆತಂಕ ವ್ಯಕ್ತಪಡಿಸಿದರು.

ಈ ಅಂಶಗಳ ಕುರಿತಂತೆ ವಿಶದ ಆದೇಶ ನೀಡುವುದಾಗಿ ಪ್ರಕಟಿಸಿದ ನ್ಯಾಯಮೂರ್ತಿಗಳು ಪ್ರಕರಣದಲ್ಲಿ ಕೇಂದ್ರ ಸರ್ಕಾರವನ್ನೂ ಪ್ರತಿವಾದಿಯನ್ನಾಗಿ ಸೇರ್ಪಡೆ ಮಾಡುವಂತೆ ಸೂಚಿಸಿ ವಿಚಾರಣೆ ಮುಂದೂಡಿದರು.

## ಸಾಂಸ್ಕೃತಿಕ ಮುನ್ನೋಟ

### ಅಹೋರಾತ್ರಿ ಸಂಗೀತ



ವೆಂಕಟೇಶ್ ಕುಮಾರ್

**ಬೆಂಗಳೂರು:** ರೇಣುಕಾ ಸಂಗೀತ ಸಭಾವು ಪಂಡಿತ್ ಅರ್ಜುನಸಾ ನಾಕೋಡ ಅವರ ಸ್ಮರಣಾರ್ಥ ಇದೇ 31ರಂದು ರಾತ್ರಿ 9.30ರಿಂದ ‘ಸ್ಮೃತಿ’ ಅಹೋರಾತ್ರಿ ಸಂಗೀತ ಕಾರ್ಯಕ್ರಮವನ್ನು ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದೆ.

ಕಲಾವಿದರಾದ ವೆಂಕಟೇಶ್ ಕುಮಾರ್, ಯೋಗೇಶ್ ಸಂಶಿ, ಪತ್ರಿ ಸತೀಶ್ ಕುಮಾರ, ಗಿರಿಧರ ಉಡುಪ, ಪ್ರಣಮಿತಾ ರಾಯ್, ಅನಿರುದ್ಧ ಐತಾಳ್, ಷಡ್ಜ ಗೋಡ್ಖಿಂಡಿ, ಸುಮಂತ ಮಂಜುನಾಥ, ಅಂಕುಶ ಎನ್. ನಾಯಕ, ರಘುನಾಥ ನಾಕೋಡ, ವಿಶ್ವನಾಥ ನಾಕೋಡ, ರಾಜೇಂದ್ರ ನಾಕೋಡ, ರವಿಕಿರಣ ನಾಕೋಡ, ವ್ಯಾಸಮೂರ್ತಿ ಕಟ್ಟಿ, ನರೇಂದ್ರ ನಾಯಕ್, ಅರ್ಜುನ್ ಕುಮಾರ್ ಭಾಗವಹಿಸಲಿದ್ದಾರೆ.

ಗಾಯನದ ಜತೆಗೆ, ಸಂಗೀತ ವಾದ್ಯಗಳ ಜುಗಲ್‌ಬಂದಿ ನಡೆಯಲಿದೆ. ಪ್ರವೇಶ ಉಚಿತ ಇರಲಿದೆ.

### ಪಟ್ಲ ಯಕ್ಷೋತ್ಸವ

**ಬೆಂಗಳೂರು:** ಯಕ್ಷ ಧ್ರುವ ಪಟ್ಲ ಫೌಂಡೇಷನ್ ಬೆಂಗಳೂರು ಘಟಕದ ವತಿಯಿಂದ ಫೆ.1ರಂದು ಬೆಳಿಗ್ಗೆ 8.30ರಿಂದ ರಾತ್ರಿ 9 ಗಂಟೆವರೆಗೆ ವಿಜಯನಗರದ ಬಂಟರ ಸಂಘದಲ್ಲಿ ‘ಬೆಂಗಳೂರು ಪಟ್ಲ ಯಕ್ಷೋತ್ಸವ’ ಹಮ್ಮಿಕೊಳ್ಳಲಾಗಿದೆ.


ಗುರು ಸಂಜೀವ ಸುವರ್ಣ ಅವರ ನಿರ್ದೇಶನದಲ್ಲಿ ಯಕ್ಷ ಬ್ಯಾಲೆ, ‘ಹೆಜ್ಜೆ–ಗೆಜ್ಜೆ’ ಶೀರ್ಷಿಕೆಯಡಿ ಮಕ್ಕಳ ಯಕ್ಷಗಾನ ಸ್ಪರ್ಧೆ, ಮಕ್ಕಳಿಗೆ ‘ಯಕ್ಷ ಚಿತ್ರಸಂತೆ’, ‘ಕಾಳಿಂಗ–ಕಾಳಿಂಗ’ ಶೀರ್ಷಿಕೆಯಡಿ ಪಿ. ಕಾಳಿಂಗ ರಾವ್–ಕಾಳಿಂಗ ನಾವಡರ ಪದ ಪದ್ಯಗಳ ಅನುರಣನ, ತೆಂಕು ಬಡಗಿನ ದಿಗ್ಗಜರಿಂದ ‘ಕಟೀಲು ಕ್ಷೇತ್ರ ಮಹಾತ್ಮೆ’ ಯಕ್ಷಗಾನ ಪ್ರಸಂಗ ಹಾಗೂ ಸಭಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

### ಸಂಗೀತ ಸಂವಾದ

**ಬೆಂಗಳೂರು:** ಪಂಚಮ್ ನಿಷಾದ್ ಸಂಸ್ಥೆಯು ‘ತುಕಾರಾಮ್ ಹೇಳೆ ಕಬೀರ’ ಶೀರ್ಷಿಕೆಯಡಿ ಫೆ.1ರಂದು ಸಂಜೆ 5.30ಕ್ಕೆ ಚೌಡಯ್ಯ ಸ್ಮಾರಕ ಭವನದಲ್ಲಿ ಸಂಗೀತ ಸಂವಾದ ಹಮ್ಮಿಕೊಂಡಿದೆ.

ಜಯತೀರ್ಥ ಮೇವುಂಡಿ ಅವರು ಸಂತ ತುಕಾರಾಮ ಅವರ ಆತ್ಮಸ್ಪರ್ಶಿ ಅಭಂಗವಾಣಿ ಹಾಡಲಿದ್ದಾರೆ. ಭುವನೇಶ್ ಕೋಮಕಲಿ ಅವರು ಕಬೀರವಾಣಿಯನ್ನು ಪ್ರಸ್ತುತಪಡಿಸಲಿದ್ದಾರೆ. ಧನಶ್ರೀ ಲೇಲೆ ಅವರು ವಿಷಯ ನಿರೂಪಿಸಲಿದ್ದಾರೆ.

ಕಲಾವಿದರಾದ ಮಂದಾರ್ ಪುರಾಣಿಕ್, ಜ್ಞಾನೇಶ್ವರ ಸೋನವಾಣೆ, ಸುಖದ್ ಮುಂಡೆ, ಸುನಿಲ್ ಕುಮಾರ್, ಸೂರ್ಯಕಾಂತ್ ಸರ್ವೆ ಅವರು ಸಹ ಕಲಾವಿದರಾಗಿ ಸಂಗೀತ ಕಾರ್ಯಕ್ರಮಕ್ಕೆ ಸಾಥ್ ನೀಡಲಿದ್ದಾರೆ. ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯ.



ಜಯತೀರ್ಥ ಮೇವುಂಡಿ

### ಶಾಸ್ತ್ರೀಯ ಸಂಗೀತ ಉತ್ಸವ

**ಬೆಂಗಳೂರು:** ಭಾರತೀಯ ಸಾಮಗಾನ ಸಭಾ ಫೆ.5ರಿಂದ ಫೆ.8ರವರೆಗೆ ‘ಪುರಾಣ ಗೀತಂ’ ಶೀರ್ಷಿಕೆಯಡಿ 17ನೇ ಭಾರತೀಯ ಶಾಸ್ತ್ರೀಯ ಸಂಗೀತ ಉತ್ಸವವನ್ನು ಚೌಡಯ್ಯ ಸ್ಮಾರಕ ಭವನದಲ್ಲಿ ಹಮ್ಮಿಕೊಂಡಿದೆ.


ಪ್ರತಿನಿತ್ಯ ಸಂಜೆ 5 ಗಂಟೆಯಿಂದ ಕಾರ್ಯಕ್ರಮ ನಡೆಯಲಿದೆ. ಧನ್ಯ ದಿನೇಶ್ ರುದ್ರಪಟ್ಟಣಂ, ಶಿವಶ್ರೀ ಸ್ಕಂದಪ್ರಸಾದ್, ಅರ್ಚನಾ ಸಮನ್ವಿ, ಸಂದೀಪ್ ನಾರಾಯಣ್, ಹರಿಶಂಕರ್ ಕೆ.ಎಸ್., ಅಪೂರ್ವ ಕೃಷ್ಣ ತಂಡ, ರಂಜನಿ ಗಾಯತ್ರಿ ಭಾಗವಹಿಸಲಿದ್ದಾರೆ.



### ದಾಸ ನಿರಂತರ ಸಂಗೀತೋತ್ಸವ

**ಬೆಂಗಳೂರು:** ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಷನ್ ಟ್ರಸ್ಟ್ ಫೆ.1ರಂದು ಬೆಳಿಗ್ಗೆ 9.30ರಿಂದ ಜಯನಗರದಲ್ಲಿರುವ ಜೆಎಸ್‌ಎಸ್ ಸಭಾಂಗಣದಲ್ಲಿ ‘ದಾಸ ನಿರಂತರ’ ಸಂಗೀತೋತ್ಸವ ಹಮ್ಮಿಕೊಂಡಿದೆ.

ಸತತ 12 ಗಂಟೆಗಳ ಸಂಗೀತೋತ್ಸವ ಇದಾಗಿದೆ. ಚಲನಚಿತ್ರ ನಟ ಶ್ರೀನಿವಾಸ ಪ್ರಭು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸಂಗೀತೋತ್ಸವದಲ್ಲಿ ವಾಗೀಶ್ ಭಟ್, ಅನಂತ್ ಭಾಗ್ವತ್, ಮಹಾದೇವಿ ಭಾಗ್ವತ್, ಅಶ್ವಿನ್ ಬಾಳಿಗ, ಪ್ರಸನ್ನ ಕೊರ್ತಿ, ಅನನ್ಯ ಭಾರ್ಗವ್, ನಾಗೇಂದ್ರ ರಾಣಾಪೂರ್, ಉಮಾ ಕುಲಕರ್ಣಿ, ಅಂಜನಾ ಶೆಣೈ, ನಾಗಶಯನ, ಶಿವಕುಮಾರ್ ಮಹಾಂತ್, ಶ್ರೀನಿವಾಸ ಭಾಗ್ವತ್, ರಶ್ಮಿ ರಾವ್, ಸುಮನ್ ಕಡೇಕಾರ್, ವಿನೀತ್ ರಾಣಾಪೂರ್ ಸೇರಿ ಹಲವು ಕಲಾವಿದರು ಭಾಗವಹಿಸಲಿದ್ದಾರೆ.



ಪ್ರತಿ ಗುರುವಾರ ಪ್ರಕಟವಾಗುವ ‘ಸಾಂಸ್ಕೃತಿಕ ಮುನ್ನೋಟ’ ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ–ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

## ಚಿಟಿಕೆ ಸುದ್ದಿ

### ಚಿನ್ನ ಲೇಪಿತ ಪದಕ ನೀಡುವ ಸಂಪ್ರದಾಯಕ್ಕೆ ಕೊಕ್

**ನವದೆಹಲಿ (ಪಿಟಿಐ):** ನಿವೃತ್ತ ಅಧಿಕಾರಿಗಳಿಗೆ ಚಿನ್ನ ಲೇಪಿತ ಬೆಳ್ಳಿ ಪದಕ ನೀಡುವ ಸಂಪ್ರದಾಯವನ್ನು ರೈಲ್ವೆ ಸಚಿವಾಲಯವು ಬುಧವಾರದಿಂದ ಕೈಬಿಟ್ಟಿದೆ.

‘ಈಗಾಗಲೇ ಸಂಗ್ರಹಿಸಿರುವ/ಲಭ್ಯವಿರುವ ಬೆಳ್ಳಿಯ ಪದಕಗಳನ್ನು ಇತರೆ ಚಟುವಟಿಕೆಗಳಿಗೆ ಬಳಸಿಕೊಳ್ಳಬಹುದು’ ಎಂದು ಸಚಿವಾಲಯವು ರೈಲ್ವೆಯ ವಲಯ ಮುಖ್ಯಸ್ಥರು ಮತ್ತು ಉತ್ಪಾದನಾ ಘಟಕಗಳ ಮುಖ್ಯಸ್ಥರಿಗೆ ಕಳುಹಿಸಿರುವ ಸುತ್ತೋಲೆಯಲ್ಲಿ ತಿಳಿಸಿದೆ. ಆದರೆ ಬೆಳ್ಳಿ ಪದಕ ನೀಡುವ ಸಂಪ್ರದಾಯವನ್ನು ಕೈಬಿಟ್ಟಿರುವುದಕ್ಕೆ ಕಾರಣವನ್ನು ನೀಡಿಲ್ಲ.

ಆದರೆ, ಹೊರಗುತ್ತಿಗೆ ಮಾರಾಟಗಾರರು ಪೂರೈಕೆ ಮಾಡುವ ಪದಕಗಳ ಗುಣಮಟ್ಟ ಕಳಪೆಯಾಗಿರುತ್ತಿತ್ತು. ಬೆಳ್ಳಿ ಬೆಲೆ ಹೆಚ್ಚಾಗಿರುವ ಕಾರಣ ಇತರೆ ವೆಚ್ಚ ಕಡಿತ ಮಾಡಲಾಗುತ್ತಿತ್ತು. ಈ ಬಗ್ಗೆ ಅಧಿಕಾರಿಗಳು ಕಳವಳ ವ್ಯಕ್ತಪಡಿಸಿದ್ದರು.

ಪದಕವು ಶೇಕಡ 99.9ರಷ್ಟು ಪರಿಶುದ್ಧತೆಯ 20 ಗ್ರಾಂ ಬೆಳ್ಳಿಯನ್ನು ಒಳಗೊಂಡಿರುತ್ತಿತ್ತು.

‘ಕೆಲವು ಪ್ರಕರಣಗಳಲ್ಲಿ ಮಾರಾಟಗಾರರು ಪೂರೈಸಿದ್ದ ಪದಕಗಳು ಕಳಪೆ ಗುಣಮಟ್ಟದ್ದಾಗಿದ್ದವು ಅಥವಾ ನಕಲಿ ಆಗಿದ್ದವು’ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

### ಹಾಸ್ಟೆಲ್‌ನಲ್ಲಿ ಮದ್ಯಪಾನ : ಅಡುಗೆ ಸಿಬ್ಬಂದಿ ಅಮಾನತು

**ಚೇಳೂರು:** ತಾಲ್ಲೂಕಿನ ಚಾಕವೇಲು ಡಾ. ಬಿ.ಆರ್.ಅಂಬೇಡ್ಕರ್ ಮೆಟ್ರಿಕ್ ಪೂರ್ವ ಬಾಲಕಿಯರ ಸರ್ಕಾರಿ ವಿದ್ಯಾರ್ಥಿ ನಿಲಯದಲ್ಲಿ ಮದ್ಯಪಾನ ಮಾಡಿ ಹಾಡು ಹಾಕಿ ನೃತ್ಯ ಮಾಡಿದ ಅಡುಗೆ ಸಿಬ್ಬಂದಿ ಸರೋಜಮ್ಮ ಅವರನ್ನು ಕೆಲಸದಿಂದ ಅಮಾನತುಗೊಳಿಸಲಾಗಿದೆ.

ಅಡುಗೆ ಸಿಬ್ಬಂದಿ ಸರೋಜಮ್ಮ ವಸತಿ ನಿಲಯದೊಳಗೆ ಮದ್ಯಪಾನ ಮಾಡಿ, ನೃತ್ಯ ಮಾಡಿದ ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದವು.

ಶಿಸ್ತು ಉಲ್ಲಂಘಿಸಿದ್ದಕ್ಕಾಗಿ ಅವರನ್ನು ಅಧಿಕಾರಿಗಳು ಅಮಾನತುಗೊಳಿಸಿದ್ದಾರೆ.

## ಕಲಾ ಗ್ರಾಮದಲ್ಲಿ 6 ದಿನ ಪ್ರಮುಖ ನಾಟಕಗಳ ಪ್ರದರ್ಶನ, ಸಂವಾದ

# ಫೆ.1ರಿಂದ ನಾಟಕೋತ್ಸವ, ರಂಗ ಪರಿಷೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕ ನಾಟಕ ಅಕಾಡೆಮಿ, ದೆಹಲಿ ರಾಷ್ಟ್ರೀಯ ನಾಟಕ ಶಾಲೆ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ಭಾರತ ರಂಗ ಮಹೋತ್ಸವದ ಭಾಗವಾಗಿ ಅಂತರರಾಷ್ಟ್ರೀಯ ನಾಟಕೋತ್ಸವ ಹಾಗೂ ರಂಗ ಪರಿಷೆಯನ್ನು ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ಫೆ.1ರಿಂದ ಆರು ದಿನ ಹಮ್ಮಿಕೊಳ್ಳಲಾಗಿದೆ.

‘ಐದು ವಿವಿಧ ವೇದಿಕೆಗಳಲ್ಲಿ 70 ತಂಡಗಳಿಂದ ನಾಟಕ ಪ್ರದರ್ಶನ ಇರಲಿದೆ. ಬ್ರೆಜಿಲ್, ಪೋಲೆಂಡ್, ದೆಹಲಿ ರಾಷ್ಟ್ರೀಯ ನಾಟಕ ಶಾಲೆ ತಂಡ, ಕೋಲ್ಕತ್ತದ ಭಗ್ವತಿ ನೃತ್ಯ ಮಂದಿರ, ಚೆನ್ನೈನ ಸಾಧಿರ್ ಮೇಳಂ, ಮೈಸೂರಿನ ರಂಗಾಯಣದ ತಂಡಗಳು ಉತ್ಸವದಲ್ಲಿ ನಾಟಕ ಪ್ರದರ್ಶಿಸಲಿವೆ’ ಎಂದು ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಹಾಗೂ ರಂಗ ಉತ್ಸವದ ನಿರ್ದೇಶಕ ಬಿ.ಸುರೇಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಫೆ.1ರ ಮಧ್ಯಾಹ್ನ 3.30ಕ್ಕೆ ನೀತಿ ಹಾಗೂ ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ್ ರಂಗಪರಿಷೆ ಉದ್ಘಾಟಿಸುವರು. ಸಾಣೇಹಳ್ಳಿ ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಉತ್ಸವ ಗೌರವ ಸ್ವೀಕರಿಸುವರು. ಸಂಜೆ 5.30ಕ್ಕೆ ಸಾಹಿತಿ ಬರಗೂರು ರಾಮಚಂದ್ರಪ್ಪ ಉತ್ಸವಕ್ಕೆ ಚಾಲನೆ ನೀಡುವರು. ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ ಉತ್ಸವ ಗೌರವ ಸ್ವೀಕರಿಸುವರು. ಗೊ.ರು. ಚನ್ನಬಸಪ್ಪ ಅವರು ರಂಗಪರಿಷೆ ವಿಶೇಷ ಸಂಚಿಕೆ ಜನಾರ್ಪಣೆಗೊಳಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ. ಗಾಯಿತ್ರಿ, ಬೆಂಗಳೂರು ವಿಶ್ವವಿದ್ಯಾಲಯ ಕುಲಸಚಿವೆ ಕೆ.ಟಿ.ಶಾಂತಲಾ ಭಾಗಿಯಾಗುವರು ಎಂದರು.

**ಪ್ರತಿ ನಿತ್ಯ ನಾಟಕ, ಸಂವಾದ:** ಕಲಾಗ್ರಾಮ ಬಯಲು ರಂಗ ಮಂದಿರದ ಗುಬ್ಬಿ ವೀರಣ್ಣ ವೇದಿಕೆಯಲ್ಲಿ ಪ್ರಮುಖ ತಂಡಗಳ ನಾಟಕ ಪ್ರದರ್ಶನ ಇರಲಿದೆ. ಸಿದ್ದಲಿಂಗಯ್ಯ ವೇದಿಕೆಯಲ್ಲಿ ಯುವ ರಂಗ ನಾಟಕೋತ್ಸವ ಇರಲಿದ್ದು, ವಿವಿಧ ಕಾಲೇಜುಗಳ ತಂಡಗಳ ನಾಟಕಗಳು ಪ್ರದರ್ಶನಗೊಳ್ಳಲಿವೆ. ಬೆಂಗಳೂರು ವಿಶ್ವವಿದ್ಯಾಲಯ ಪ್ರದರ್ಶನ ಕಲಾ ವಿಭಾಗದಲ್ಲಿ ಬೆಳಿಗ್ಗೆ 10.30ರಿಂದ ರಂಗ ಸಂವಾದ ಇರಲಿದೆ ಎಂದು ಹೇಳಿದರು.

ಮಳವಳ್ಳಿ ಸುಂದರಮ್ಮ ವೇದಿಕೆಯಲ್ಲಿ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಅವರ ಶತಮಾನೋತ್ಸವ ಸಂಭ್ರಮ ಕವಿಗೋಷ್ಠಿಯನ್ನು ಪ್ರತಿ ದಿನ ಸಂಜೆ 4ರಿಂದ ಆಯೋಜಿಸಲಾಗಿದೆ. ಯುವಕವಿಗಳು ಸೇರಿ ನಾಡಿನ ಹೆಸರಾಂತ ಕವಿಗಳು ಭಾಗವಹಿಸುವರು ಎಂದು ತಿಳಿಸಿದರು.

**ರಂಗಗೀತೆ, ಬೀದಿ ನಾಟಕ:** ಶ್ರೀರಂಗ ವೇದಿಕೆಯಲ್ಲಿ ಪ್ರತಿ ದಿನ ಸಂಜೆ 4ರಿಂದ 6.30ರವರೆಗೆ ರಂಗತಂಡಗಳಿಂದ ರಂಗ ಗೀತೆಗಳ ಗಾಯನ, ಬೀದಿ ನಾಟಕ, ಕಿರುನಾಟಕ, ಪ್ರದರ್ಶನಗೊಳ್ಳಲಿವೆ. 40 ವರ್ಷ ಕಾಲ ರಂಗ ಚಟುವಟಿಕೆಯಲ್ಲಿ ನಿರತವಾದ 12 ರಂಗತಂಡಗಳಿಗೆ ರಂಗಗೌರವವನ್ನು ನೀಡಲಾಗುತ್ತದೆ ಎಂದರು.

ಉತ್ಸವದ ಭಾಗವಾಗಿ ನಡೆಯುವ ರಂಗ ಪರಿಷೆಯಲ್ಲಿ ನಾಟಕದ ಪರಿಕರಗಳು, ರಂಗ ಸಜ್ಜಿಕೆ, ವೇಷ ಭೂಷಣಗಳು, ರಂಗದಿಗ್ಗಜರ ಛಾಯಾಚಿತ್ರ, ನಾಟಕಗಳ ದೃಶ್ಯಾವಳಿ ಪ್ರದರ್ಶನಗೊಳ್ಳಲಿವೆ. ಪುಸ್ತಕ ಮಳಿಗೆ, ಆಹಾರ ಮಳಿಗೆಗಳೂ ಇರಲಿವೆ ಎಂದು ರಂಗ ಪರಿಷೆ ಸಂಯೋಜಕ ಶಶಿಧರ ಬಾರಿಘಾಟ್ ತಿಳಿಸಿದರು.

ರಾಷ್ಟ್ರೀಯ ನಾಟಕ ಶಾಲೆ (ಬೆಂಗಳೂರು) ನಿರ್ದೇಶಕಿ ವೀಣಾ ಶರ್ಮ ಭೂಸನೂರಮಠ, ಅಕಾಡೆಮಿ ಸದಸ್ಯರಾದ ರವೀಂದ್ರನಾಥ ಸಿರಿವಾರ, ಟಿ.ಎಚ್.ಲವಕುಮಾರ್, ರಿಜಿಸ್ಟ್ರಾರ್ ಬಿ.ನೀಲಮ್ಮ ಹಾಜರಿದ್ದರು.



ಮಲ್ಲತ್ತಹಳ್ಳಿ ಕಲಾಗ್ರಾಮದಲ್ಲಿ ಆಯೋಜಿಸಲಾಗಿರುವ ಭಾರತ ರಂಗ ಮಹೋತ್ಸವದಲ್ಲಿ ಫೆ.6ರಂದು ಪ್ರದರ್ಶನಗೊಳ್ಳಲಿರುವ ಅಂಬೇಡ್ಕರ್ ಕೊಲಾಜ್ ನಾಟಕ

### ಪ್ರವೇಶ ಉಚಿತ, ಪಾಸ್ ಉಂಟು

‘ಎಲ್ಲಾ ವೇದಿಕೆಗಳಲ್ಲಿ ನಾಟಕ ವೀಕ್ಷಣೆಗೆ ಪ್ರವೇಶ ಉಚಿತ. ಆದರೆ ಆಯಾ ದಿನದ ನಾಟಕಗಳಿಗೆ ಮಧ್ಯಾಹ್ನ 3.30ಕ್ಕೆ ಕಲಾಗ್ರಾಮದಲ್ಲಿಯೇ ಪಾಸ್‌ಗಳನ್ನು ವಿತರಣೆ ಮಾಡಲಾಗುತ್ತದೆ’ ಎಂದು ಬಿ.ಸುರೇಶ್ ತಿಳಿಸಿದರು.



**ಉತ್ಸವಕ್ಕೆ ₹1 ಕೋಟಿ ಬೇಕು. ಅಕಾಡೆಮಿಯಲ್ಲಿ ₹20 ಲಕ್ಷ ಲಭ್ಯವಿದೆ. ಉತ್ಸವಕ್ಕೆ ನೆರವು ನೀಡುವಂತೆ ಮನವಿ ಸಲ್ಲಿಸಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉತ್ತರಕ್ಕೆ ಕಾಯುತ್ತಿದ್ದೇವೆ.**

**ಕೆ.ವಿ.ನಾಗರಾಜಮೂರ್ತಿ,** ಅಧ್ಯಕ್ಷ, ಕರ್ನಾಟಕ ನಾಟಕ ಅಕಾಡೆಮಿ

# ವಿಮಾನ ನಿಲ್ದಾಣದಲ್ಲಿ ಒಂದೇ ಕಡೆ ಹಲವು ಸೇವೆ

ಪ್ರಜಾವಾಣಿ ವಾರ್ತೆ

**ದೇವನಹಳ್ಳಿ:** ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರಿಗಾಗಿ ‘ಕೇರ್ ಬೈ ಬಿಎಲ್‌ಆರ್’ ಎಂಬ ಹೊಸ ಸೇವೆ ಆರಂಭಿಸಲಾಗಿದೆ.

ಪ್ರಯಾಣಿಕರಿಗೆ ವಿಮಾನ ನಿಲ್ದಾಣದೊಳಗೆ ಸುಲಭವಾಗಿ ಸಂಚರಿಸಲು ಹಾಗೂ ಅಗತ್ಯವಿರುವ ಎಲ್ಲಾ ಸಹಾಯವನ್ನು ಒಂದೇ ಕಡೆ ಒದಗಿಸುವುದು ಇದರ ಉದ್ದೇಶ.

ವಿಮಾನ ನಿಲ್ದಾಣಗಳು ಕೇವಲ ವಿಮಾನಯಾನಕ್ಕೆ ಮಾತ್ರ ಸೀಮಿತವಲ್ಲ. ಇಲ್ಲಿ ಲಕ್ಷಾಂತರ ಮಂದಿ ಭೇಟಿ ನೀಡುತ್ತಾರೆ. ವಿಶ್ರಾಂತಿ ಪಡೆಯುತ್ತಾರೆ ಮತ್ತು ಖರೀದಿ ಕೂಡ ಮಾಡುತ್ತಾರೆ. ಇದನ್ನು ಗಮನದಲ್ಲಿಟ್ಟುಕೊಂಡು ಬಿಎಲ್‌ಆರ್ ಪ್ರಯಾಣವನ್ನು ಇನ್ನಷ್ಟು ಆರಾಮದಾಯಕ ಮತ್ತು ನೆನಪಿನಲ್ಲಿ ಇಡುವಂತೆ ಮಾಡಲು ಈ ಹೊಸ ಸೇವೆ ಆರಂಭಿಸಿದೆ.

‘ಕೇರ್ ಬೈ ಬಿಎಲ್‌ಆರ್’ ಅಡಿ ಮೀಟ್ ಅಂಡ್ ಗೇಟ್ ಅಸಿಸ್ಟ್ (ಭೇಟಿ ನೀಡಿ ಮತ್ತು ನೆರವು ಪಡೆಯಿರಿ) ಸೇವೆಯಲ್ಲಿ ಲಗೇಜ್ ಹೊರುವ ಪೋರ್ಟರ್ ಸೇವೆ, ವ್ಯಾಲೆಟ್ ಪಾರ್ಕಿಂಗ್, ಐಷಾರಾಮಿ ಲಿಮೋಸಿನ್ ವಾಹನ ಸೇವೆ, ಆಗಮನ ಲಾಂಜ್ ಪ್ರವೇಶ ಮತ್ತು ಹೂಗುಚ್ಛ ಸೇವೆ, ಸೌಲಭ್ಯ ಲಭ್ಯ ಇರುತ್ತವೆ. ಪ್ರಯಾಣಿಕರು ಹೊರಡುವಾಗ, ಆಗಮಿಸುವಾಗ ಅಥವಾ ಟ್ರಾನ್ಸಿಟ್ ಸಮಯದಲ್ಲೂ ಈ ಸೇವೆ ಪಡೆಯಬಹುದು. ಈ ಸೇವೆಗಳು ಟರ್ಮಿನಲ್–1 ಮತ್ತು ಟರ್ಮಿನಲ್–2 ಎರಡರಲ್ಲೂ ಲಭ್ಯ.



ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ‘ಕೇರ್ ಬೈ ಬಿಎಲ್‌ಆರ್’ ಸೇವೆಯನ್ನು ಆರಂಭಿಸಲಾಗಿದೆ

# ಸಂವಿಧಾನ ನಡಿಗೆ ಕಾರ್ಯಕ್ರಮ ನಾಳೆ

**ಬೆಂಗಳೂರು:** ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ವತಿಯಿಂದ ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಸಚಿವಾಲಯದ ಸಹಯೋಗ, ಬೆಂಗಳೂರು ವಿಶ್ವವಿದ್ಯಾಲಯದ ಸಹಕಾರದೊಂದಿಗೆ ಜ.30ರಂದು ಬೆಳಿಗ್ಗೆ 7ಕ್ಕೆ ‘ಸಂವಿಧಾನವೇ ಬೆಳಕು– ಹೆಜ್ಜೆಯಿಡು ಬೆಂಗಳೂರು’ ಸಂವಿಧಾನ ನಡಿಗೆ ಕಾರ್ಯಕ್ರಮವನ್ನು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿಯ ವೆಂಕಟಗಿರಿ ಗೌಡ ಆಡಿಟೋರಿಯಂನಲ್ಲಿ ಹಮ್ಮಿಕೊಳ್ಳಲಾಗಿದೆ.

ಪ್ರಜಾಪ್ರಭುತ್ವದ ಆಶಯಗಳನ್ನು ಎತ್ತಿ ಹಿಡಿಯುವು ಜತೆಗೆ ಮೌಲ್ಯ, ಹಕ್ಕು, ಮತ್ತು ಕರ್ತವ್ಯ ಗಳನ್ನು ಗೌರವಿಸುವ, ಅರಿವು ಮೂಡಿಸುವ ಉದ್ದೇಶದಿಂದ ಸಂವಿಧಾನ ನಡಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಂವಿಧಾನದ ಬಗ್ಗೆ ಜಾಗೃತಿ ಮೂಡಿಸುವ ವಿಶೇಷ ವಿಚಾರ ಸಂಕಿರಣದೊಂದಿಗೆ ಕಾರ್ಯಕ್ರಮ ಆರಂಭಗೊಳ್ಳಲಿದೆ. ನಂತರ, ನಡಿಗೆಗೆ ಚಾಲನೆ ನೀಡಲಾಗುತ್ತದೆ. ಪ್ರವೇಶ ಉಚಿತವಾಗಿದ್ದು, ನೋಂದಣಿ ಕಡ್ಡಾಯವಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯ ದೊಂದಿಗೆ ಸಂಯೋಜಿತವಾಗಿರುವ ಎಲ್ಲ ಕಾಲೇಜುಗಳ ಪದವಿ ವಿದ್ಯಾರ್ಥಿಗಳು ಭಾಗವಹಿಸಲು ಮುಕ್ತ ಅವಕಾಶ ಇದೆ. ನೋಂದಣಿ ಮಾಡಿಕೊಂಡವರಿಗೆ ಟಿ-ಶರ್ಟ್ ಮತ್ತು ಕ್ಯಾಪ್ ನೀಡಲಾಗುವುದು ಎಂದು ಸಂಘಟಕರು ತಿಳಿಸಿದ್ದಾರೆ. ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ನೋಂದಣಿ ಮಾಡಿಕೊಳ್ಳಬಹುದು. ಮಾಹಿತಿಗೆ 9901918805 ಸಂಪರ್ಕಿಸಬಹುದು.

ಸಂವಿಧಾನವೇ ಬೆಳಕು

# ‘ಮಠದ ಆಸ್ತಿ ಕಬಳಿಸುವ ಹುನ್ನಾರ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಚಿಕ್ಕಬಳ್ಳಾಪುರ ತಾಲ್ಲೂಕು ಕಸಬಾ ಹೋಬಳಿ ಸ್ಕಂದಗಿರಿ ತಪ್ಪಲಿನಲ್ಲಿರುವ ಓಂಕಾರ ಜ್ಯೋತಿ ಮಠ ಟ್ರಸ್ಟ್‌ನ ಆಸ್ತಿ ಕಬಳಿಸಲು ಪಾಲಿಕೆ ಮಾಜಿ ಸದಸ್ಯ ಲಕ್ಷ್ಮೀನಾರಾಯಣ ಷಡ್ಯಂತ್ರ ನಡೆಸಿ, ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ’ ಎಂದು ಮಠದ ಅಧ್ಯಕ್ಷ ಉಮಾ ಮಹೇಶ್ವರ ಸ್ವಾಮೀಜಿ ಆರೋಪಿಸಿದರು.

ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮಠದ ಆಸ್ತಿಯನ್ನು ಬಲವಂತವಾಗಿ ಪಡೆಯಲು ಲಕ್ಷ್ಮೀನಾರಾಯಣ ಹಾಗೂ ಇತರರು ಜ. 10ರಂದು ಏಕಾಏಕಿ ಮಠಕ್ಕೆ ನುಗ್ಗಿ, ಕೊಠಡಿಯಲ್ಲಿ ಕೂಡಿಹಾಕಿ, ಮಠದಿಂದ ಒಕ್ಕಲೆಬ್ಬಿಸುವ ಪ್ರಯತ್ನ ನಡೆಸಿದ್ದಾರೆ. ಈ ಘಟನೆಗೆ ಸಂಬಂಧಿಸಿದಂತೆ ಪೊಲೀಸರಿಗೆ ದೂರು ನೀಡಲಾಗಿದೆ. ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ.ದೌರ್ಜನ್ಯ ಎಸಗಿದ ಹಾಗೂ ಕರ್ತವ್ಯ ನಿರ್ಲಕ್ಷಿಸಿದ ಪೊಲೀಸರ ವಿರುದ್ಧ ಕ್ರಮಜರುಗಿಸಿ’ ಎಂದು ಒತ್ತಾಯಿಸಿದರು

# ಎಂ.ಜಿ ರಸ್ತೆಯ ಬೊಲೆವಾರ್ಡ್ ಬಳಿ ಹಾಕಿದ್ದ ತ್ಯಾಜ್ಯಕ್ಕೆ ಬೆಂಕಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಹಾತ್ಮ ಗಾಂಧಿ ರಸ್ತೆಯ ಮೆಟ್ರೊ ನಿಲ್ದಾಣದ ಬೊಲೆವಾರ್ಡ್ ಬಳಿ ಸುರಿಯಲಾಗಿದ್ದ ತ್ಯಾಜ್ಯಕ್ಕೆ ಬುಧವಾರ ಮಧ್ಯಾಹ್ನ ಬೆಂಕಿ ಬಿದ್ದು ಕೆಲಕಾಲ ಆತಂಕಕ್ಕೆ ಕಾರಣವಾಗಿತ್ತು.

ಬೆಂಕಿ ಬಿದ್ದಿರುವ ಮಾಹಿತಿ ತಿಳಿದ ಕೂಡಲೇ ಎಚ್ಚೆತ್ತ ಮೆಟ್ರೊ ಸಿಬ್ಬಂದಿ, ಅಗ್ನಿಶಾಮಕ ಹಾಗೂ ತುರ್ತು ಸೇವಾ ದಳದ ಸಿಬ್ಬಂದಿಗೆ ಮಾಹಿತಿ ನೀಡಿದ್ದರು. ಅಶೋಕನಗರದಲ್ಲಿರುವ ಅಗ್ನಿಶಾಮಕ ಹಾಗೂ ತುರ್ತು ಸೇವಾ ದಳದ ಘಟಕದಿಂದ ವಾಹನದಲ್ಲಿ ಸ್ಥಳಕ್ಕೆ ಬಂದ ಸಿಬ್ಬಂದಿ, ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು. ಮೆಟ್ರೊ ಸಿಬ್ಬಂದಿಯೂ ಬೆಂಕಿ ನಂದಿಸುವ ಕಾರ್ಯಾಚರಣೆಗೆ ಕೈಜೋಡಿಸಿದರು.

ಫೀಲ್ಡ್ ಮಾರ್ಷಲ್ ಮಾಣೆಕ್‌ಷಾ ಪರೇಡ್ ಮೈದಾನದಲ್ಲಿ ಗಣರಾಜ್ಯೋತ್ಸವ ಕಾರ್ಯಕ್ರಮ ನಡೆದ ವೇಳೆ ಬಿದ್ದಿದ್ದ ತ್ಯಾಜ್ಯವನ್ನು ಮಾಣೆಕ್ ಷಾ ಸ್ಮಾರಕ ಉದ್ಯಾನದ ಸುತ್ತಲಿನ ಕಾಂಪೌಂಡ್ ಬಳಿ ಹಾಕಲಾಗಿತ್ತು. ಕಾಗದ, ಪ್ಲಾಸ್ಟಿಕ್ ತ್ಯಾಜ್ಯದ ಜೊತೆಗೆ, ಉದುರಿದ ಎಲೆಗಳೂ ಸೇರಿದ್ದು, ಅದಕ್ಕೆ ಬೆಂಕಿ ತಗುಲಿದೆ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದರು. ಮಹಾತ್ಮ ಗಾಂಧಿ ರಸ್ತೆಯ ಸುತ್ತಮುತ್ತ ದಟ್ಟ ಹೊಗೆ ಆವರಿಸಿತ್ತು.

‘ಮಧ್ಯಾಹ್ನ 3 ಗಂಟೆಯ ಹೊತ್ತಿಗೆ ಬೆಂಕಿ ಜೋರಾಗಿ ಉರಿಯುತ್ತಿರುವುದನ್ನು ಗಮನಿಸಿದ್ದೆವು. ಬಳಿಕ ನಾವೇ ಬೆಂಕಿ ನಂದಿಸಲು ಪ್ರಯತ್ನಿಸಿದ್ದೆವು. ಜೋರಾಗಿ ಗಾಳಿ ಬೀಸುತ್ತಿದ್ದರಿಂದ ಬೆಂಕಿ ವ್ಯಾಪಿಸುತ್ತಲೇ ಸಾಗಿತು. ನಂತರ, ಅಗ್ನಿ ಶಾಮಕ ದಳದವರು ಬಂದು ಬೆಂಕಿ ನಂದಿಸಿದರು’ ಎಂದು ‘ನಮ್ಮ ಮೆಟ್ರೊ’ ನಿಗಮದ ನಿರ್ವಹಣಾ ಸಿಬ್ಬಂದಿ ಹೇಳಿದರು.

ಬೆಂಕಿ ಬಿದ್ದ ಸ್ಥಳದ ಪಕ್ಕದಲ್ಲಿಯೇ ಮೆಟ್ರೊ ನಿಲ್ದಾಣ ಇದೆ. ಮೆಟ್ರೊ ಹಳಿಯೂ ಹಾದು ಹೋಗಿದೆ. ಎಂ.ಜಿ. ರಸ್ತೆಯೂ ಜನನಿಬಿಡ ತಾಣವಾಗಿರುವುದರಿಂದ ಈ ಘಟನೆ ಆತಂಕಕ್ಕೆ ಕಾರಣವಾಯಿತು.

ಮುಂದಿನ ದಿನಗಳಲ್ಲಿ ರೀತಿಯ ಘಟನೆ ಆಗದಂತೆ ಎಚ್ಚರ ವಹಿಸಬೇಕು. ಮೈದಾನದಲ್ಲಿ ಯಾವುದೇ ಕಾರ್ಯಕ್ರಮ ನಡೆದರೂ ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡಬೇಕು ಎಂದು ಪ್ರಯಾಣಿಕರ ರಮೇಶ್ ಆಗ್ರಹಿಸಿದರು.

‘ಬೊಲೆವಾರ್ಡ್‌ನಲ್ಲಿ ತೆರಳುತ್ತಿದ್ದವರು ಅಥವಾ ಉದ್ಯಾನದಲ್ಲಿ ಇದ್ದವರು ಸಿಗರೇಟ್ ಸೇದಿ ಅದರ ತುಂಡನ್ನು ಎಸೆದಿರುವ ಸಾಧ್ಯತೆಯಿದೆ. ಅದರಿಂದ ಬೆಂಕಿ ಕಾಣಿಸಿಕೊಂಡಿರಬಹುದು. ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ಅಗ್ನಿಶಾಮಕ ಹಾಗೂ ತುರ್ತುಸೇವಾ ದಳದ ಸಿಬ್ಬಂದಿ ಹೇಳಿದರು.



ನಗರದ ಮಹಾತ್ಮ ಗಾಂಧಿ ರಸ್ತೆಯಲ್ಲಿನ ಜನರಲ್ ಕಾರ್ಯಪ್ಪ ಸ್ಮಾರಕ ಉದ್ಯಾನದ ಬಳಿ ಬುಧವಾರ ಮಧ್ಯಾಹ್ನ ಕಾಣಿಸಿಕೊಂಡಿದ್ದ ಬೆಂಕಿಯನ್ನು ಅಗ್ನಿಶಾಮಕ ಹಾಗೂ ತುರ್ತು ಸೇವಾ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ನಂದಿಸಿದರು

## ಉತ್ತಮ ಸೌಕರ್ಯ ಒದಗಿಸದ ಮಾಲೀಕರು, ನಿವಾಸಿಗಳ ಬೇಸರ

# ಪಿ.ಜಿಗಳಲ್ಲಿ ಕಳಪೆ ಆಹಾರ, ನೈರ್ಮಲ್ಯ ಕೊರತೆ

• ರಂಗನಾಥ ಮಲ್ಲಯ್ಯ

**ಬೆಂಗಳೂರು:** ನಗರದಲ್ಲಿನ ಪೇಯಿಂಗ್ ಗೆಸ್ಟ್‌ಗಳು (ಪಿ.ಜಿ) ಸಮಸ್ಯೆಗಳ ಆಗರವಾಗಿವೆ. ಅಲ್ಲಿ ತಂಗಿರುವ ನಿವಾಸಿಗಳಿಗೆ ಗುಣಮಟ್ಟದ ಆಹಾರ ನೀಡುತ್ತಿಲ್ಲ. ಅಡುಗೆಮನೆ ಮತ್ತು ಊಟದ ಕೋಣೆಯಲ್ಲಿ ಸ್ವಚ್ಛತೆ ಇಲ್ಲ, ಕಳಪೆ ಆಹಾರ ಸೇವನೆಯಿಂದ ನಿವಾಸಿಗಳ ಆರೋಗ್ಯ ಹದಗೆಡುತ್ತಿದೆ ಎಂಬ ಆರೋಪಗಳು ಕೇಳಿಬಂದಿವೆ.

ನಗರದಲ್ಲಿ ಸುಮಾರು 20 ಸಾವಿರ ಪಿ.ಜಿಗಳು ಕಾರ್ಯನಿರ್ವಹಿಸುತ್ತಿದ್ದು, ಶಿಕ್ಷಣ, ಉದ್ಯೋಗ ಸೇರಿದಂತೆ ನಾನಾ ಕಾರಣಗಳಿಂದ ರಾಜಧಾನಿಗೆ ವಲಸೆ ಬಂದಿರುವ ಲಕ್ಷಾಂತರ ಮಂದಿ ಪಿ.ಜಿಗಳಲ್ಲಿ ವಾಸ ಮಾಡುತ್ತಿದ್ದಾರೆ. ಆದರೆ, ಬಹುತೇಕ ಪಿ.ಜಿಗಳಲ್ಲಿ ಮಾಲೀಕರು ಉತ್ತಮ ಸೌಕರ್ಯಗಳನ್ನು ನೀಡುತ್ತಿಲ್ಲ ಎಂದು ನಿವಾಸಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ನಿಖರವಾಗಿ ಎಷ್ಟು ಪಿ.ಜಿಗಳಿವೆ ಎಂಬ ಅಂಕಿ ಅಂಶಗಳು ಸರ್ಕಾರದ ಬಳಿ ಲಭ್ಯವಿಲ್ಲ. ಈ ಬಗ್ಗೆ ಸಮಗ್ರ ಸಮೀಕ್ಷೆಯೂ ನಡೆದಿಲ್ಲ. ಲಭ್ಯ ಮಾಹಿತಿ ಪ್ರಕಾರ 2025ರ ಏಪ್ರಿಲ್‌ವರೆಗೆ ಜಿಬಿಎ ಅಡಿ 2,193 ಪಿ.ಜಿಗಳು ಅಧಿಕೃತವಾಗಿ ನೋಂದಣಿಯಾಗಿವೆ.

ಪಿ.ಜಿ ನಿವಾಸಿಗಳ ಆರೋಗ್ಯ ಮತ್ತು ಸುರಕ್ಷತೆಗಾಗಿ ‘ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ 2024’ರ ಅನ್ವಯ ನಿಯಮಗಳನ್ನು ರೂಪಿಸಲಾಗಿದೆ. ಅಡುಗೆಮನೆಯ ಸ್ವಚ್ಛತೆ ಮತ್ತು ಆಹಾರ ಗುಣಮಟ್ಟಕ್ಕೆ ಸಂಬಂಧಿಸಿದ ಮಾರ್ಗಸೂಚಿಗಳು ಇವೆ. ಆದರೆ, ಇವುಗಳ ಪಾಲನೆ ಆಗುತ್ತಿಲ್ಲ ಎಂದು ಪಿ.ಜಿ ನಿವಾಸಿಗಳು ಆರೋಪಿಸಿದ್ದಾರೆ.

ಅಡುಗೆ ಮನೆಯಲ್ಲಿ ‘ಆಹಾರ ಸುರಕ್ಷತಾ ಪ್ರದರ್ಶನ ಫಲಕ’ (ಎಫ್‌ಎಸ್‌ಡಿಬಿ), ಪರವಾನಗಿ ಸಂಖ್ಯೆ, ಸ್ವಚ್ಛತೆಯ ನಿಯಮಗಳು ಮತ್ತು ನಿವಾಸಿಗಳು ದೂರು ನೀಡಲು ಸಹಾಯವಾಣಿ ಸಂಖ್ಯೆ, ಎಫ್‌ಎಸ್‌ಎಸ್‌ಎಐ ಪರವಾನಗಿ, ವಾರದ ಆಹಾರ ವೇಳಾಪಟ್ಟಿ, ಕುಡಿಯುವ ನೀರಿನ ಗುಣಮಟ್ಟದ ಲ್ಯಾಬ್ ವರದಿ, ಅಡುಗೆ ಮಾಡುವವರ ಹೆಸರು ಮತ್ತು ಆರೋಗ್ಯ ತಪಾಸಣಾ ವರದಿಗಳನ್ನು ಪ್ರದರ್ಶಿಸಬೇಕು. ನಿಯಮಿತವಾಗಿ ನವೀಕರಿಸಬೇಕು. ಆದರೆ, ಬಹುತೇಕ ಪಿ.ಜಿಗಳಲ್ಲಿ ಈ ನಿಯಮ ಪಾಲನೆ ಆಗುತ್ತಿಲ್ಲ.

‘ನಾನು ಕೆಂಗೇರಿಯಲ್ಲಿ ಇದ್ದ ಪಿ.ಜಿಯಲ್ಲಿ ಗುಣಮಟ್ಟದ ಆಹಾರ ನೀಡುತ್ತಿರಲಿಲ್ಲ. ಅಡುಗೆಮನೆ ಸ್ವಚ್ಛವಾಗಿ ಇರಲಿಲ್ಲ’ ಎಂದು ಸಾಫ್ಟ್‌ವೇರ್ ಕಂಪನಿಯೊಂದರ ಉದ್ಯೋಗಿ ದರ್ಶನ್ ಎಸ್. ಅನುಭವ ಹಂಚಿಕೊಂಡರು.

**ಮುಖ್ಯಾಂಶಗಳು**
- ಅಡುಗೆ ಕೋಣೆಯಲ್ಲಿ ಜಿರಳೆಗಳ ಓಡಾಟ
- ನಿತ್ಯ ಒಂದೇ ರೀತಿಯ ಆಹಾರ
- ಪಾಲನೆಯಾಗದ ಜಿಬಿಎ ನಿಯಮ

**ನಿರಂತರ ತಪಾಸಣೆ ನಡೆಸಲಾಗುತ್ತಿದ್ದು, ನಿಯಮ ಉಲ್ಲಂಘಿಸುವ ಪಿ.ಜಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು**

**ಮನೋಹರ ಹೆಗ್ಡೆ,** ಆರೋಗ್ಯಅಧಿಕಾರಿ, ಪಶ್ಚಿಮ ನಗರಪಾಲಿಕೆ



ವಸಂತ ನಗರದ ಪಿ.ಜಿ ಒಂದರ ಅಡುಗೆಮನೆಯಲ್ಲಿಯೇ ಕೆಲಸದವರ ಬಟ್ಟೆ, ಹಾಸಿಗೆ ಇತ್ಯಾದಿ ವಸ್ತುಗಳು ಇರುವುದು

### ನಿವಾಸಿಗಳು ಏನಂತಾರೆ?

ನಾನಿರುವ ಪಿ.ಜಿಯಲ್ಲಿ ಯಾವುದೇ ಕಡ್ಡಾಯ ದಾಖಲೆ ಪ್ರಮಾಣಪತ್ರಗಳನ್ನು ಪ್ರದರ್ಶಿಸಿಲ್ಲ. ನಿಲಯಪಾಲಕರಾಗಲಿ, ಮಾಲೀಕರಾಗಲಿ ಕಾಣುವುದಿಲ್ಲ. ಹಿಂದಿ ಮಾತನಾಡುವ ಸೇವಾಕರ್ತನೇ ಅವರ ಸಂಪರ್ಕಾಧಿಕಾರಿ. ಯಾರನ್ನು ಪ್ರಶ್ನಿಸೋದು? ಜಿಬಿಎ ಸಹಾಯವಾಣಿಗೆ ಕರೆ ಮಾಡಿದರೂ ಸ್ಪಂದಿಸುತ್ತಿಲ್ಲ.

**ಯುವರಾಜ್,** ಅಕೌಂಟೆಂಟ್

150ಕ್ಕೂ ಹೆಚ್ಚಿನ ನಿವಾಸಿಗಳಿರುವ ಪಿ.ಜಿಯಲ್ಲಿ ವಾಸವಿದ್ದೇನೆ. ತರಕಾರಿ, ಕಾಳು, ಅಕ್ಕಿ ಇತ್ಯಾದಿಗಳನ್ನು ತೊಳೆಯದೆ ಅಡುಗೆ ಮಾಡುತ್ತಾರೆ. ಅಡುಗೆ ಮನೆಯಲ್ಲಿ ಜಿರಳೆ ಮತ್ತು ಇಲಿಗಳು ಓಡಾಡುತ್ತವೆ. ಆರೋಗ್ಯ ಕೆಡಿಸಿಕೊಳ್ಳಲು ಹಣ ವ್ಯಯಿಸುವಂತಾಗಿದೆ.

**ರುಚಿತಾ,** ಕಾಲೇಜು ವಿದ್ಯಾರ್ಥಿನಿ

### ಪರವಾನಗಿ ರದ್ದು

ನಿಯಮ ಉಲ್ಲಂಘನೆಯನ್ನು ‘ಸೇವಾ ನ್ಯೂನತೆ’ ಎಂದು ಪರಿಗಣಿಸಿ ಪಿ.ಜಿಗಳಿಗೆ ಬೀಗಮುದ್ರೆ ಹಾಕುವ, ದಂಡ ವಿಧಿಸುವ ಮತ್ತು ಪರವಾನಗಿ ರದ್ದುಪಡಿಸುವ ಅಧಿಕಾರ ಜಿಬಿಎಗಿದೆ.

ಅದರಂತೆ 2025ರ ಏಪ್ರಿಲ್‌ನಲ್ಲಿ ಅಧಿಕಾರಿಗಳು ತಪಾಸಣೆ ನಡೆಸಿ, ನಿಯಮ ಪಾಲಿಸದ 187 ಪಿ.ಜಿಗಳ ಪರವಾನಗಿ ರದ್ದುಪಡಿಸಿದ್ದರು. ಅಕ್ಟೋಬರ್‌ನಲ್ಲಿ ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ತಪಾಸಣೆ ನಡೆಸಿ 14 ಪಿಜಿಗಳ ಪರವಾನಗಿ ರದ್ದು ಮಾಡಿದ್ದರು. ಕೇಂದ್ರ ನಗರ ಪಾಲಿಕೆ ಅಧಿಕಾರಿಗಳು ವಾರದ ಹಿಂದೆ ತಪಾಸಣೆ ನಡೆಸಿದ್ದರು. ನಿಯಮ ಪಾಲಿಸದ 6 ಪಿ.ಜಿಗಳಿಗೆ ಬೀಗಮುದ್ರೆ ಹಾಕಿದ್ದು, ₹ 1.96 ಲಕ್ಷ ದಂಡ ವಿಧಿಸಿದ್ದರು.



ನಿಮ್ಮ ಭಾವನೆಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲು ಆಗದಿದ್ದರೆ, ಹಣದ ಮೇಲೆ ನಿಯಂತ್ರಣ ಹೊಂದಲೂ ಆಗುವುದಿಲ್ಲ
**ವಾರೆನ್ ಬಫೆಟ್,** ಹೂಡಿಕೆ ತಜ್ಞ

ದುಡ್ಡಿನಂಥಾ ಮಾತು




# ಒಂದು ಇಟಿಎಫ್, 500 ಕಂಪನಿಗಳು




• ಚಿಂತನ್ ಹಾರಿಯಾ

ಜಗತ್ತಿನಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವ ಹಾಗೂ ಮುಂದುವರಿದಿರುವ ಹಲವು ದೇಶಗಳ ಷೇರುಪೇಟೆಗಳಲ್ಲಿ ಕಳೆದ ಒಂದು ವರ್ಷದಲ್ಲಿ ದೊಡ್ಡ ಮಟ್ಟದ ಏರಿಕೆ ಕಂಡುಬಂದಿದೆ. ಆದರೆ ಭಾರತದ ಷೇರುಪೇಟೆಗಳು ಮಾತ್ರ ಅವುಗಳಿಗೆ ಹೋಲಿಸಿದರೆ ಕಡಿಮೆ ಸಾಧನೆ ತೋರಿವೆ. ಈಚಿನ ಕೆಲವು ತಿಂಗಳುಗಳಲ್ಲಿ ಲಾರ್ಜ್‌ಕ್ಯಾಪ್ ವರ್ಗದ ಷೇರುಗಳ ಮೌಲ್ಯವು ಮತ್ತೆ ಏರಿಕೆ ದಾಖಲಿಸಿದ್ದರೂ ಒಟ್ಟಾರೆಯಾಗಿ ಬಂಡವಾಳ ಮಾರುಕಟ್ಟೆಯು ಅಸ್ಥಿರತೆಯಿಂದ ಕೂಡಿದೆ. ಕಳೆದ ಸರಿಸುಮಾರು 15 ತಿಂಗಳುಗಳಿಂದ ಷೇರುಪೇಟೆಯಲ್ಲಿ ಅಸ್ಥಿರತೆ ಮುಂದುವರಿದಿದೆ.

ಒಟ್ಟಾರೆಯಾಗಿ ಷೇರುಗಳ ಮೌಲ್ಯವು ದುಬಾರಿಯೂ ಆಗಿಲ್ಲ, ಅಗ್ಗವೂ ಆಗಿಲ್ಲ ಎಂಬ ಹಂತದಲ್ಲಿದೆ. ಮಿಡ್‌ಕ್ಯಾಪ್ ಹಾಗೂ ಸ್ಮಾಲ್‌ಕ್ಯಾಪ್ ವರ್ಗದ ಷೇರುಗಳಲ್ಲಿ ಕೆಲವು ಅಗ್ಗವಾಗಿವೆ. ಹೀಗಾಗಿ ಮುಂದಿನ ದಿನಗಳಲ್ಲಿ ಮಾರುಕಟ್ಟೆಯ ಎಲ್ಲ ವರ್ಗಗಳ ಷೇರುಗಳ ಬೆಲೆಯಲ್ಲಿ ಆಗಬಹುದಾದ ಜಿಗಿತದ ಲಾಭವನ್ನು ಪಡೆದುಕೊಳ್ಳಲು ಹೆಚ್ಚಿನ ಕಂಪನಿಗಳ ಷೇರುಗಳಲ್ಲಿ ಹಣ ತೊಡಗಿಸಲು ಇದು ಸರಿಯಾದ ಸಮಯ ಆಗಿರಬಹುದು.

ಸಣ್ಣ ಹೂಡಿಕೆದಾರರ ಪಾಲಿಗೆ ಪ್ಯಾಸಿವ್ ಮಾರ್ಗದಲ್ಲಿ ಹಣ ತೊಡಗಿಸಲು 'ಬಿಎಸ್‌ಇ 500 ಸೂಚ್ಯಂಕ'ವು ಒಂದು ಉತ್ತಮ ಅವಕಾಶ ಒದಗಿಸುತ್ತಿದೆ.

ಬಿಎಸ್‌ಇ 500 ಸೂಚ್ಯಂಕದಲ್ಲಿ ಈಗ 501 ಕಂಪನಿಗಳ ಷೇರುಗಳು ಇವೆ. ತಾಂತ್ರಿಕ ಕಾರಣಕ್ಕಾಗಿ ಈ ಸೂಚ್ಯಂಕದಲ್ಲಿನ ಷೇರುಗಳ ಸಂಖ್ಯೆ 500ಕ್ಕಿಂತ ಹೆಚ್ಚಿದೆ. ಈ ಸೂಚ್ಯಂಕವನ್ನು ಬಿಎಸ್‌ಇ ಆಲ್‌ಕ್ಯಾಪ್ ಸೂಚ್ಯಂಕದಿಂದ ಸೃಷ್ಟಿಸಲಾಗಿದೆ. ದಿನದ ಸರಾಸರಿ ಮಾರುಕಟ್ಟೆ ಬಂಡವಾಳ ಮೌಲ್ಯ, ವಾರ್ಷಿಕ ವಹಿವಾಟಿನ ಮೌಲ್ಯ ಮತ್ತು ವಹಿವಾಟಿನ ಆವರ್ತನೆಯನ್ನು ಪ್ರಮುಖವಾಗಿ ಪರಿಗಣಿಸಿ ಈ ಸೂಚ್ಯಂಕಕ್ಕೆ ಕಂಪನಿಗಳ ಷೇರುಗಳನ್ನು ಸೇರಿಸಲಾಗುತ್ತದೆ.

ಬಿಎಸ್‌ಇ 500 ಸೂಚ್ಯಂಕದ ಮಾರುಕಟ್ಟೆ ಬಂಡವಾಳ ಮೌಲ್ಯವು ಅಂದಾಜು ₹415 ಲಕ್ಷ ಕೋಟಿ. ಖರೀದಿ ಮತ್ತು ಮಾರಾಟಕ್ಕೆ ಲಭ್ಯವಿರುವ ಷೇರುಗಳನ್ನು ಮಾತ್ರ ಪರಿಗಣಿಸಿದಲ್ಲಿ ಈ ಸೂಚ್ಯಂಕದಲ್ಲಿನ ಕಂಪನಿಗಳ ಒಟ್ಟು ಮಾರುಕಟ್ಟೆ ಬಂಡವಾಳ ಮೌಲ್ಯವು ಸರಿಸುಮಾರು ₹198 ಲಕ್ಷ ಕೋಟಿ ಆಗುತ್ತದೆ. ಅಂದಾಜು 12 ವಲಯಗಳು ಈ ಸೂಚ್ಯಂಕದಲ್ಲಿ ಪ್ರಾತಿನಿಧ್ಯ ಹೊಂದಿವೆ. ಪ್ರತಿ ವರ್ಷದ ಜೂನ್ ಮತ್ತು ಡಿಸೆಂಬರ್‌ನಲ್ಲಿ ಈ ಸೂಚ್ಯಂಕಕ್ಕೆ ಹೊಸದಾಗಿ ಷೇರುಗಳನ್ನು ಸೇರ್ಪಡೆ ಮಾಡುವ, ಕೆಲವು ಷೇರುಗಳನ್ನು ತೆಗೆಯುವ ಕೆಲಸ ಆಗುತ್ತದೆ.

ಒಂದು ಅರ್ಥದಲ್ಲಿ ಹೇಳುವುದಾದರೆ, ಬಿಎಸ್‌ಇ 500 ಸೂಚ್ಯಂಕವು ಇಡೀ ಷೇರುಪೇಟೆಯನ್ನು ಪ್ರತಿನಿಧಿಸುತ್ತದೆ. ಅಥವಾ ಅದು ಇಡೀ ಷೇರುಪೇಟೆಯ ಬಹುದೊಡ್ಡ ಭಾಗವೊಂದನ್ನು ಪ್ರತಿನಿಧಿಸುವುದಂತೂ ಸತ್ಯ. ಮುಂಬೈ ಷೇರುಪೇಟೆಯಲ್ಲಿ ನೋಂದಾಯಿತ ಆಗಿರುವ ಎಲ್ಲ ಕಂಪನಿಗಳ ಒಟ್ಟು ಮಾರುಕಟ್ಟೆ ಬಂಡವಾಳ ಮೌಲ್ಯವು ₹474 ಲಕ್ಷ ಕೋಟಿ. ಇದನ್ನು ಬಿಎಸ್‌ಇ 500 ಸೂಚ್ಯಂಕದ ಮಾರುಕಟ್ಟೆ ಬಂಡವಾಳ ಮೌಲ್ಯದ ಜೊತೆ ಹೋಲಿಸಿ. ಬಿಎಸ್‌ಇ 500 ಸೂಚ್ಯಂಕದ ಮಾರುಕಟ್ಟೆ ಬಂಡವಾಳ ಮೌಲ್ಯವು ಮುಂಬೈ ಷೇರುಪೇಟೆಯ ಒಟ್ಟು ಮಾರುಕಟ್ಟೆ ಬಂಡವಾಳ ಮೌಲ್ಯದ ಸರಿಸುಮಾರು ಶೇ 88ರಷ್ಟು ಆಗುತ್ತದೆ. ಅಂದರೆ ಒಂದು ಸೂಚ್ಯಂಕದಲ್ಲಿ ಹೂಡಿಕೆ ಮಾಡಿದಾಗ ಹೂಡಿಕೆದಾರರಿಗೆ ಇಡೀ ಮಾರುಕಟ್ಟೆಯ ಅಥವಾ ಮಾರುಕಟ್ಟೆಯ ಬಹುದೊಡ್ಡ ಭಾಗದ ದಿಕ್ಕು, ಹರಿವು ಕೈಗೆಟಕುತ್ತದೆ.

ಈ ಸೂಚ್ಯಂಕದಲ್ಲಿ 501 ಕಂಪನಿಗಳು ಈಗ ಇರುವ ಕಾರಣದಿಂದಾಗಿ ಈ ಸೂಚ್ಯಂಕದಲ್ಲಿ ಹೂಡಿಕೆ ಮಾಡುವವರಿಗೆ ಲಾರ್ಜ್‌ಕ್ಯಾಪ್ ವಲಯದ 100 ಕಂಪನಿಗಳ, ಮಿಡ್‌ಕ್ಯಾಪ್ ವಲಯದ 150 ಕಂಪನಿಗಳ ಹಾಗೂ ಸ್ಮಾಲ್‌ಕ್ಯಾಪ್ ವಲಯದ 250 ಕಂಪನಿಗಳ ಷೇರುಗಳ ಮೇಲೆ ಒಂದೇ ಬಾರಿಗೆ ಹಣ ತೊಡಗಿಸಲು ಸಾಧ್ಯವಾಗುತ್ತದೆ. ಈ ಮೂರೂ ವರ್ಗಗಳ ಕಂಪನಿಗಳ ಷೇರುಗಳ ಪಾಲು ಸೂಚ್ಯಂಕದಲ್ಲಿ ಒಂದೇ ಆಗಿಲ್ಲ. ಇದರಿಂದಾಗಿ ಹೂಡಿಕೆದಾರರಿಗೆ ಒಂದೇ ಸೂಚ್ಯಂಕದ ಮೂಲಕ, ಒಂದೇ ಹೂಡಿಕೆ ಉತ್ಪನ್ನದ ಮೂಲಕ ಬಹುವಿಧದ ಮಾರುಕಟ್ಟೆ ಬಂಡವಾಳದ ಕಂಪನಿಗಳ ಪೋರ್ಟ್‌ಫೋಲಿಯೊ ಸಿಕ್ಕಂತಾಗುತ್ತದೆ.

> ಇಟಿಎಫ್ ಮೂಲಕ 'ಬಿಎಸ್‌ಇ 500'ರಲ್ಲಿ ಹೂಡಿಕೆ ಮಾಡುವುದು ಹೆಚ್ಚು ಸೂಕ್ತ

ಉತ್ತಮ ಪ್ರಮಾಣದಲ್ಲಿ ನಗದು ಹರಿವು ಇರುವ, ಹಣಕಾಸಿನ ಸ್ಥಿತಿಯು ಚೆನ್ನಾಗಿ ಇರುವ ಬ್ಲ್ಯೂಚಿಪ್ ಕಂಪನಿಗಳು; ಪ್ರವರ್ಧಮಾನಕ್ಕೆ ಬರುತ್ತಿರುವ (ಫಿನ್‌ಟೆಕ್, ಎ.ಐ, ದತ್ತಾಂಶ ಕೇಂದ್ರಗಳು, ಇ–ವಾಣಿಜ್ಯ ಮತ್ತು ಕ್ವಿಕ್–ಕಾಮರ್ಸ್ ಇತ್ಯಾದಿ) ಹಾಗೂ ಸಾಂಪ್ರದಾಯಿಕ ವಲಯಗಳ ಮಿಡ್‌ಕ್ಯಾಪ್ ಹಾಗೂ ಸ್ಮಾಲ್‌ಕ್ಯಾಪ್ ವರ್ಗದ ಕಂಪನಿಗಳಲ್ಲಿ ಹಣ ತೊಡಗಿಸಲು ಈ ಸೂಚ್ಯಂಕ ಅನುವು ಮಾಡಿಕೊಡುತ್ತದೆ. ಹೀಗಾಗಿ, ಹೂಡಿಕೆದಾರರಿಗೆ ಬಹಳ ಉತ್ತಮ ಪೋರ್ಟ್‌ಫೋಲಿಯೊ ಹೊಂದಲು ಆಗುತ್ತದೆ.

ಇಲ್ಲಿ ಇನ್ನೊಂದು ಅಂಶವನ್ನು ಉಲ್ಲೇಖಿಸಬೇಕು. 500 ಕಂಪನಿಗಳ ಷೇರುಗಳು ಇರುವ ಒಂದು ಪೋರ್ಟ್‌ಫೋಲಿಯೊ (ಸೂಚ್ಯಂಕದಲ್ಲಿ ಇಷ್ಟು ಕಂಪನಿಗಳು ಇವೆ) ಬಹಳ ವೈವಿಧ್ಯಮಯವಾದ ಪೋರ್ಟ್‌ಫೋಲಿಯೊ ಎಂಬುದನ್ನು ಮರೆಯುವಂತಿಲ್ಲ. 12 ವಿಭಿನ್ನ ವಲಯಗಳ ಕಂಪನಿಗಳು ಇದರಲ್ಲಿ ಪ್ರಾತಿನಿಧ್ಯ ಪಡೆದಿವೆ. ಪ್ರತಿ ವಲಯದಲ್ಲಿಯೂ ಹಲವು ಉಪ ವಲಯಗಳು ಇವೆ. ಹೀಗಾಗಿ ಈ ಪೋರ್ಟ್‌ಫೋಲಿಯೊ ಬಹಳ ಸಮತೋಲನ ಹೊಂದಿರುವ ಪೋರ್ಟ್‌ಫೋಲಿಯೊ ಕೂಡ ಹೌದು.

ಹಣಕಾಸು ಸೇವೆಗಳು, ಗ್ರಾಹಕ ಬಳಕೆ ಉತ್ಪನ್ನಗಳು, ಕೈಗಾರಿಕೆಗಳು, ಐ.ಟಿ. ಮತ್ತು ಇಂಧನ ಬಿಎಸ್‌ಇ 500 ಸೂಚ್ಯಂಕದಲ್ಲಿ ಇರುವ ಮೊದಲ ಐದು ಪ್ರಮುಖ ವಲಯಗಳು. ಈ ವಲಯಗಳ ಪಾಲು ಸೂಚ್ಯಂಕದಲ್ಲಿ ಕ್ರಮವಾಗಿ ಶೇ 30.8, ಶೇ 15, ಶೇ 8.7, ಶೇ 8.5 ಮತ್ತು ಶೇ 8ರಷ್ಟು ಇವೆ.

ಈ ವಲಯಗಳು ಹಾಗೂ ವಲಯಗಳ ಕಂಪನಿಗಳು ದೇಶದ ಅರ್ಥ ವ್ಯವಸ್ಥೆಯನ್ನು ಪ್ರತಿನಿಧಿಸುತ್ತವೆ. ಹೀಗಾಗಿ ಬೇರೆ ಬೇರೆ ಸಂದರ್ಭಗಳಲ್ಲಿ ಉತ್ತಮ ಪ್ರಮಾಣದ ಲಾಭ ತಂದುಕೊಡುವ ವಿಭಿನ್ನ ಕಂಪನಿಗಳ ಷೇರುಗಳು ಹೂಡಿಕೆದಾರರಿಗೆ ಈ ಸೂಚ್ಯಂಕದ ಮೂಲಕ ಲಭ್ಯವಾಗುತ್ತವೆ. ಒಂದು ವಲಯದ ಷೇರುಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಲಾಭ ಸಿಗದೆ ಇದ್ದ ಸಂದರ್ಭದಲ್ಲಿ ಬೇರೊಂದು ವಲಯದ ಷೇರುಗಳು ಹೆಚ್ಚು ಉತ್ತಮವಾಗಿ ಲಾಭ ನೀಡುತ್ತಿರುತ್ತವೆ. ಇದರಿಂದಾಗಿ ಹೂಡಿಕೆದಾರರಿಗೆ ತಮ್ಮ ಪೋರ್ಟ್‌ಫೋಲಿಯೊದಲ್ಲಿ ಸಮತೋಲನ ಕಾಪಾಡಿಕೊಳ್ಳಲು ಆಗುತ್ತದೆ.

ಸಣ್ಣ ಹೂಡಿಕೆದಾರರು ಎಕ್ಸ್‌ಚೇಂಜ್ ಟ್ರೇಡೆಡ್ ಫಂಡ್ (ಇಟಿಎಫ್) ಮೂಲಕ ಬಿಎಸ್‌ಇ 500 ಸೂಚ್ಯಂಕದಲ್ಲಿ ಹೂಡಿಕೆ ಮಾಡುವುದು ಹೆಚ್ಚು ಸೂಕ್ತವಾದ ಮಾರ್ಗ. ಏಕೆಂದರೆ, ಇಟಿಎಫ್‌ಗಳಲ್ಲಿ ಶುಲ್ಕವು ಕಡಿಮೆ ಇರುತ್ತದೆಯಾದ ಕಾರಣಕ್ಕೆ ಒಂದೇ ಹೂಡಿಕೆ ಉತ್ಪನ್ನದ ಮೂಲಕ ಕಡಿಮೆ ವೆಚ್ಚಕ್ಕೆ 500 ಕಂಪನಿಗಳ ಷೇರುಗಳು ಲಭ್ಯವಾಗುತ್ತವೆ. ಇಟಿಎಫ್‌ಗಳು ಷೇರುಪೇಟೆಗಳಲ್ಲಿ ಖರೀದಿಗೆ, ಮಾರಾಟಕ್ಕೆ ಲಭ್ಯವಿರುವ ಕಾರಣಕ್ಕೆ ಅವುಗಳನ್ನು ಮಾರುಕಟ್ಟೆ ಸಮಯದಲ್ಲಿ ಖರೀದಿಸುವುದು ಹಾಗೂ ಮಾರಾಟ ಮಾಡುವುದು ಸುಲಭವಾಗಿ ಆಗುತ್ತದೆ. ದೇಶದ ಟಾಪ್–500 ಕಂಪನಿಗಳು ಈ ಸೂಚ್ಯಂಕದಲ್ಲಿ ಸ್ಥಾನ ಪಡೆಯಬೇಕು ಎಂಬ ಉದ್ದೇಶದಿಂದ ಸೂಚ್ಯಂಕವನ್ನು ಕಾಲಕಾಲಕ್ಕೆ ಮರುಹೊಂದಾಣಿಕೆ ಮಾಡಲಾಗುತ್ತದೆ.

ಬಿಎಸ್‌ಇ 500 ಸೂಚ್ಯಂಕದಲ್ಲಿನ ಹೂಡಿಕೆಯು ದೀರ್ಘಾವಧಿಯಲ್ಲಿ ಉತ್ತಮ ಗಳಿಕೆ ತಂದುಕೊಟ್ಟಿದೆ. ಅದರಲ್ಲೂ ಮುಖ್ಯವಾಗಿ ಐದು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ಇಲ್ಲಿ ಹೂಡಿಕೆ ಮಾಡಿದಾಗ ಉತ್ತಮ ಲಾಭ ಸಿಕ್ಕಿದೆ. ಕೆಲವು ಸಂದರ್ಭಗಳಲ್ಲಿ ಮಧ್ಯಮ ಅವಧಿಯ ಹೂಡಿಕೆಗೂ ಉತ್ತಮ ಫಲ ದೊರೆತಿದೆ. ಐದು ವರ್ಷಗಳ ಅವಧಿಯಲ್ಲಿ ಈ ಸೂಚ್ಯಂಕವು ಹೂಡಿಕೆದಾರರಿಗೆ ಶೇಕಡ 17.1ರಷ್ಟು ವಾರ್ಷಿಕ ಸಂಯುಕ್ತ ಬೆಳವಣಿಗೆ ದರದ (ಸಿಎಜಿಆರ್) ಗಳಿಕೆ ತಂದುಕೊಟ್ಟಿದೆ. 10 ವರ್ಷಗಳ ಅವಧಿಯನ್ನು ಪರಿಗಣಿಸಿದರೆ ಈ ಸೂಚ್ಯಂಕವು ವಾರ್ಷಿಕ ಶೇ 14.9ರಷ್ಟು ಲಾಭವನ್ನು ತಂದುಕೊಟ್ಟಿದೆ.

ಒಂದೇ ಬಾರಿಗೆ ಹೂಡಿಕೆ ಮಾಡುವ ಮೂಲಕ ಅಥವಾ ಹಂತ ಹಂತವಾಗಿ ಹೂಡಿಕೆ ಮಾಡುವ ಮೂಲಕ ಈ ಸೂಚ್ಯಂಕದಲ್ಲಿ ಹಣ ತೊಡಗಿಸಬೇಕು ಎಂದು ಬಯಸುವವರಿಗೆ ಬಿಎಸ್‌ಇ 500 ಇಟಿಎಫ್ ಸೂಕ್ತವಾದ ಆಯ್ಕೆಯಾಗುತ್ತದೆ. ಇದರ ಮೂಲಕ ಶಿಸ್ತುಬದ್ಧವಾಗಿ, ದೀರ್ಘಾವಧಿಗೆ ಹಣ ಹೂಡಿಕೆ ಮಾಡಬಹುದು. ಇಲ್ಲಿ ಹಣ ತೊಡಗಿಸುವುದರಿಂದ ವಿಭಿನ್ನ ಉದ್ಯಮ ವಲಯಗಳು ಹಾಗೂ ವಿವಿಧ ಬಂಡವಾಳ ಮಾರುಕಟ್ಟೆ ವರ್ಗದ ಕಂಪನಿಗಳ ಷೇರುಗಳು ಲಭ್ಯವಾಗುತ್ತವೆ. ಹೀಗಾಗಿ, ಹೂಡಿಕೆದಾರರಿಗೆ ಭಾರತದ ದೀರ್ಘಾವಧಿಯ ಬೆಳವಣಿಗೆ ಪಯಣದಲ್ಲಿ ಭಾಗಿಯಾಗುವುದಕ್ಕೂ ಸಾಧ್ಯವಾಗುತ್ತದೆ.

(ಲೇಖನದಲ್ಲಿನ ದತ್ತಾಂಶಗಳು ಡಿಸೆಂಬರ್ 26ರವರೆಗಿನವು)

ಲೇಖಕ ಐಸಿಐಸಿಐ ಪ್ರುಡೆನ್ಶಿಯಲ್ ಆಸ್ತಿ ನಿರ್ವಹಣಾ ಕಂಪನಿಯ ಹೂಡಿಕೆ ಕಾರ್ಯತಂತ್ರ ವಿಭಾಗದ ಮುಖ್ಯಸ್ಥ




# ಕ್ರೆಡಿಟ್ ಕಾರ್ಡ್ ಬಳಕೆ ಅರಿತರೆ ಆರ್ಥಿಕ ಭದ್ರತೆ

ಮಾಹಿತಿ ಕಣಜ

ಹಣಕಾಸು ಸಂಸ್ಥೆಗಳು ನೀಡುವ ಕ್ರೆಡಿಟ್ ಕಾರ್ಡ್‌ಗಳು ಬಳಕೆದಾರರಿಗೆ ಆರ್ಥಿಕ ಅನುಕೂಲ ಕಲ್ಪಿಸುವುದಲ್ಲದೆ, ಅಗತ್ಯ ಸಂದರ್ಭಗಳಲ್ಲಿ ಹಣಕಾಸಿನ ಭದ್ರತೆ ನೀಡುತ್ತವೆ. ಜೊತೆಗೆ ಕ್ರೆಡಿಟ್ ಸ್ಕೋರ್ ಹೆಚ್ಚಿಸಿಕೊಳ್ಳಲು ನೆರವಾಗುತ್ತವೆ. ರಿವಾರ್ಡ್ ಪಾಯಿಂಟ್‌ಗಳು, ಕ್ಯಾಶ್‌ಬ್ಯಾಕ್, ಪ್ರಯಾಣದ ಪ್ರಯೋಜನಗಳ ಜೊತೆಗೆ ಅನಿರೀಕ್ಷಿತ ವೆಚ್ಚಗಳನ್ನು ನಿರ್ವಹಿಸಲು ಬಳಕೆದಾರರಿಗೆ ಸಹಾಯ ಮಾಡುತ್ತವೆ.

2024–25ರ ಆರ್ಥಿಕ ವರ್ಷದಲ್ಲಿ ಕ್ರೆಡಿಟ್ ಕಾರ್ಡ್ ಬಳಕೆಗೆ ಸಂಬಂಧಿಸಿದಂತೆ 50,811 ದೂರುಗಳು ದಾಖಲಾಗಿವೆ. 2023–24ಕ್ಕೆ ಹೋಲಿಸಿದರೆ ದೂರುಗಳ ಸಂಖ್ಯೆಯಲ್ಲಿ ಶೇ 20ರಷ್ಟು ಹೆಚ್ಚಳವಾಗಿದೆ. ಈ ಪೈಕಿ ಖಾಸಗಿ ಬ್ಯಾಂಕ್‌ಗಳು ನೀಡಿದ ಕ್ರೆಡಿಟ್ ಕಾರ್ಡ್‌ಗೆ ಸಂಬಂಧಿಸಿದ ದೂರುಗಳು ಅಧಿಕ ಎಂದು ಆರ್‌ಬಿಐ ಒಂಬುಡ್ಸ್‌ಮನ್ ವರದಿ ತಿಳಿಸಿದೆ.

ಒಬ್ಬ ವ್ಯಕ್ತಿ ಎಷ್ಟು ಬೇಕಾದರೂ ಕ್ರೆಡಿಟ್ ಕಾರ್ಡ್ ಹೊಂದಬಹುದು. ಕ್ರೆಡಿಟ್ ಕಾರ್ಡ್‌ಗಳಿಂದ ಅನುಕೂಲ ಇರುವಷ್ಟೇ, ಆ ಕಾರ್ಡ್ ಸರಿಯಾಗಿ ಬಳಕೆ ಮಾಡಿಕೊಳ್ಳದಿದ್ದರೆ ಅಷ್ಟೇ ಸಮಸ್ಯೆ ಇದೆ. ಕ್ರೆಡಿಟ್ ಕಾರ್ಡ್ ಸೂಕ್ತ ಬಳಕೆಯಿಂದ ಆಗುವ ಪ್ರಯೋಜನ ಮತ್ತು ಅದನ್ನು ಅತಿಯಾಗಿ ಬಳಸುವುದರಿಂದ ಆಗುವ ಸಮಸ್ಯೆಗಳ ಬಗ್ಗೆ ತಿಳಿಯುವುದು ಅಗತ್ಯ.

## ಕ್ರೆಡಿಟ್ ಕಾರ್ಡ್ ಅನುಕೂಲ

- ಕ್ರೆಡಿಟ್ ಕಾರ್ಡ್ ವ್ಯಕ್ತಿಯ ಖರ್ಚು ಮಾಡುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ
- ಕೈಯಲ್ಲಿ ಹಣವಿಲ್ಲದಿದ್ದರೂ, ಕಾರ್ಡ್ ಬಳಸಿ ಹಣ ಪಡೆದುಕೊಳ್ಳಬಹುದು
- ಕ್ರೆಡಿಟ್ ಕಾರ್ಡ್‌ನ ಸರಿಯಾದ ಬಳಕೆಯು ಕ್ರೆಡಿಟ್ ಅಂಕವನ್ನು ಸುಧಾರಿಸುತ್ತದೆ
- ಕ್ರೆಡಿಟ್ ಕಾರ್ಡ್ ಬಳಸಿ ಖರೀದಿ ಮಾಡಿದಾಗ ರಿವಾರ್ಡ್ ಪಾಯಿಂಟ್‌ಗಳು ಲಭಿಸುತ್ತವೆ. ಮತ್ತೊಮ್ಮೆ ಕಾರ್ಡ್ ಬಳಸುವಾಗ ಈ ಪಾಯಿಂಟ್ಸ್ ಬಳಸಿ, ಹಣ ಉಳಿಸಬಹುದು
- ಕ್ರೆಡಿಟ್ ಕಾರ್ಡ್ ಬಳಸಿ ಯಾವುದಾದರೂ ವಸ್ತು ಖರೀದಿಸಿದರೆ, ಖರೀದಿಸಿದ ದಿನದಿಂದ ಬಿಲ್ ಪಾವತಿ ಮಾಡಲು 45 ದಿನದವರೆಗೆ ಅವಕಾಶ ಸಿಗುತ್ತದೆ

## ಬಳಸುವಾಗ ಎಚ್ಚರಿಕೆ

- ಸೂಕ್ತವಾಗಿ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸದಿದ್ದರೆ ಸಾಲದ ಕೂಪಕ್ಕೆ ಸಿಲುಕಬಹುದು
- ಕಾರ್ಡ್‌ಗಳು ವಿಧಿಸುವ ವಾರ್ಷಿಕ ಶುಲ್ಕ, ಬಡ್ಡಿ, ದಂಡ ಪಾವತಿ ಹೆಚ್ಚಿರುತ್ತದೆ
- ಸಮಯಕ್ಕೆ ಸರಿಯಾಗಿ ಬಿಲ್ ಮೊತ್ತ ಪಾವತಿಸದಿದ್ದರೆ ಹೆಚ್ಚಿನ ಸಾಲದ ಹೊರೆ ಬೀಳುತ್ತದೆ
- ಕ್ರೆಡಿಟ್ ಕಾರ್ಡ್ ಬಳಸಿ ನಗದು ಹಣ ಪಡೆಯುವುದು ಹೆಚ್ಚು ವೆಚ್ಚದಾಯಕ
- ಕ್ರೆಡಿಟ್ ಕಾರ್ಡ್‌ಗಳ ಅಧಿಕ ಬಳಕೆಯಿಂದ ಕ್ರೆಡಿಟ್ ಸ್ಕೋರ್ ಮೇಲೆ ಕೆಟ್ಟ ಪರಿಣಾಮ

ಆಧಾರ: ಎಕ್ಸಿಸ್ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್, ಗೋಕ್ವಿಕ್, ಟ್ರೇಡ್ ಬ್ರೈನ್ಸ್ ವೆಬ್‌ಸೈಟ್‌ಗಳು, ಆರ್‌ಬಿಐ ಒಂಬುಡ್ಸ್‌ಮನ್

## ಅಲ್ಟ್ರಾಟೆಕ್ ಸಿಮೆಂಟ್ ಲಿಮಿಟೆಡ್

UltraTech CEMENT The Engineer's Choice

ಸಿಮೆಂಟ್ ತಯಾರಿಕಾ ಕಂಪನಿ ಅಲ್ಟ್ರಾ ಟೆಕ್ ಸಿಮೆಂಟ್‌ನ ಷೇರು ಬೆಲೆ ₹14,200ಕ್ಕೆ ತಲುಪಲಿದೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಹೇಳಿದೆ. ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ಇಬಿಐಟಿಡಿಎ ಶೇ 35ರಷ್ಟು ಹೆಚ್ಚಳವಾಗಿದ್ದು, ₹3,920 ಕೋಟಿಯಷ್ಟಾಗಿದೆ. ತೆರಿಗೆ ನಂತರದ ಲಾಭದಲ್ಲಿ (ಪಿಎಟಿ) ಶೇ 32ರಷ್ಟು ಏರಿಕೆಯಾಗಿದ್ದು, ₹1,729 ಕೋಟಿ ಆಗಿದೆ. 2025–26ರಿಂದ 2027–28ರ ಆರ್ಥಿಕ ವರ್ಷದಲ್ಲಿ ಕಂಪನಿಯ ತೆರಿಗೆ, ಬಡ್ಡಿ, ಸಾಲ ತೀರುವಳಿಯ (ಇಬಿಐಟಿಡಿಎ) ವಾರ್ಷಿಕ ಸಂಯುಕ್ತ ಬೆಳವಣಿಗೆ ದರವು (ಸಿಎಜಿಆರ್) ಶೇ 18ರಷ್ಟು ಮತ್ತು ತೆರಿಗೆ ನಂತರದ ಲಾಭವು ಶೇ 22ರಷ್ಟು ಹೆಚ್ಚಳವಾಗುವ ನಿರೀಕ್ಷೆಯಿದೆ ಎಂದು ತಿಳಿಸಿದೆ. ಬುಧವಾರದ ವಹಿವಾಟಿನ ಅಂತ್ಯದ ವೇಳೆಗೆ ಅಲ್ಟ್ರಾ ಟೆಕ್ ಸಿಮೆಂಟ್ ಕಂಪನಿಯ ಷೇರಿನ ಬೆಲೆ ₹12,773.10 ಆಗಿತ್ತು.

ಬ್ರೋಕರೇಜ್ ಮಾತು

## ರ್‍ಯಾಡಿಕೊ ಖೇತಾನ್

8ಪಿಎಂ ವಿಸ್ಕಿ, ಕಾಂಟೆಸ್ಸಾ ರಮ್‌ನಂತಹ ಜನಪ್ರಿಯ ಮದ್ಯದ ಪೇಯಗಳ ಉತ್ಪಾದನಾ ಕಂಪನಿ 'ರ್‍ಯಾಡಿಕೊ ಖೇತಾನ್' 2025–26ನೇ ಹಣಕಾಸು ವರ್ಷದ ಮೂರನೆಯ ತ್ರೈಮಾಸಿಕದ ಫಲಿತಾಂಶವನ್ನು ಪ್ರಕಟಿಸಿದೆ. ಕಂಪನಿಯ ಪ್ರೀಮಿಯಂ ಗುಣಮಟ್ಟದ ಮದ್ಯದ ಮಾರಾಟವು ಶೇ 29ರಷ್ಟು ಹೆಚ್ಚಳ ಕಂಡಿದೆ ಎಂದು ಜೆಎಂ ಫೈನಾನ್ಶಿಯಲ್ ಸರ್ವಿಸಸ್ ಹೇಳಿದೆ. ಕಂಪನಿಯ ಷೇರು ಮೌಲ್ಯವು ₹3,790ಕ್ಕೆ ತಲುಪಬಹುದು ಎಂದು ಅದು ಅಂದಾಜಿಸಿದೆ.



ಪ್ರೀಮಿಯಂ ವರ್ಗದ ಮದ್ಯದ ಪೇಯಗಳಿಗೆ ಬೇಡಿಕೆಯು ಚೆನ್ನಾಗಿದೆ. ಹೆಚ್ಚು ವೇಗದ ಬೆಳವಣಿಗೆ ಕಾಣುತ್ತಿರುವ ಉತ್ತರ ಪ್ರದೇಶ ಮತ್ತು ಆಂಧ್ರಪ್ರದೇಶದ ಮಾರುಕಟ್ಟೆಗಳಿಗೆ ಹೆಚ್ಚಿನ ಆದ್ಯತೆಯನ್ನು ಕಂಪನಿ ನೀಡುತ್ತಿದೆ. ಸರ್ಕಾರದ ನಿಯಂತ್ರಣ ಕ್ರಮಗಳು ಜಾಸ್ತಿ ಇರುವ ಮಹಾರಾಷ್ಟ್ರದಲ್ಲಿ ಕಂಪನಿಯ ವಹಿವಾಟು ಕಡಿಮೆ ಇದೆ. ಹೀಗಾಗಿ ರ್‍ಯಾಡಿಕೊ ಖೇತಾನ್ ಕಂಪನಿಯ ವರಮಾನವು ಪ್ರತಿಸ್ಪರ್ಧಿ ಕಂಪನಿಗಳಿಗಿಂತ ಹೆಚ್ಚಿನ ಮಟ್ಟದಲ್ಲಿಯೇ ಉಳಿಯಲಿದೆ ಎಂದು ಜೆಎಂ ಫೈನಾನ್ಶಿಯಲ್ ಹೇಳಿದೆ.

ಕಂಪನಿಯ ಲಾಭದಾಯಕತೆ ಸುಧಾರಿಸುತ್ತಿದೆ, ಸಾಲದ ಪ್ರಮಾಣ ಕಡಿಮೆ ಆಗುತ್ತಿದೆ (ಕಂಪನಿಯು 2026–27ನೇ ಹಣಕಾಸು ವರ್ಷದ ವೇಳೆಗೆ ಸಾಲಮುಕ್ತವಾಗುವ ಗುರಿ ಹೊಂದಿದೆ) ಮತ್ತು ಬಂಡವಾಳ ವೆಚ್ಚದ ತೀವ್ರತೆ ಕಡಿಮೆ ಇರುವುದರಿಂದ ಕಂಪನಿಯ ಬಂಡವಾಳದ ಮೇಲಿನ ವರಮಾನವು ಹೆಚ್ಚಾಗುತ್ತದೆ ಎಂದು ಬ್ರೋಕರೇಜ್ ಸಂಸ್ಥೆ ಹೇಳಿದೆ. ಬುಧವಾರದ ವಹಿವಾಟಿನ ಅಂತ್ಯಕ್ಕೆ ರ್‍ಯಾಡಿಕೊ ಖೇತಾನ್ ಷೇರು ಬೆಲೆಯು ₹2,768 ಆಗಿತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಜ್ಞಾನಭಾ ರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

# ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

# ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ದ್ವಿತೀಯ ಭಾಷೆ ಇಂಗ್ಲಿಷ್ ವ್ಯಾಕರಣ ಮಾದರಿ ಪ್ರಶ್ನೋತ್ತರಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಶಂಕರನಾರಾಯಣ್‌ರಾವ್, ನಿವೃತ್ತ ಇಂಗ್ಲಿಷ್ ಅಧ್ಯಾಪಕ

## ಇಂಗ್ಲಿಷ್

### ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

***Read the following extracts and answer the questions that follow:***

**30. 'Friend', he said, 'I do not like to have you speak to me in that manner'.**
**a. Who is the speaker?**
**Ans:-** Don Anselmo is the speaker.
**b. Who did he address as friend?**
**Ans:-** He addressed the author (mediator) as a friend.
**c. Why didn't he like the manner of speaking?**
**Ans:-** The authors way by talking and the proposal made by him was not liked because Don Anselmo was a man of principles. He didn't agree to take more money. The author's offer made him insult.

**31. 'I've-I've……… always wanted to hear him and see him …….'**
**a. Who is 'I' here?**
**Ans:-** Here 'I' refer to sick boy Anant.
**b. Who does 'him' refer to**
**Ans:-** 'him' refers to Pandit Ravishankar.
**c. Why did he want to hear him and see him?**
**Ans:-** He wanted to hear Pandit Ravishankar's sitar playing and see him in the musical concert.

**32. 'They are simple men and must have their relaxation.'**
**a. Who is the speaker here?**
**Ans:-** Here the speaker was Don Pedro.
**b. Who are 'simple men' according to the speaker?**
**Ans:-** According to the speaker the Sailers (seamen) are simple men.
**c. Why did the speaker say so?**
**Ans:-** When Columbus told to Don Pedro the seamen were drink too much, so they were singing, that singing irritated him. So the speaker wanted to balance the situation on both the side the said he above words.

**33. 'So we shuddered there in silence, -For the stoutest held his breath,'**
**a. Who does 'we' refer to?**
**Ans:-** We refer to all the Sailors in the wrecked ship.
**b. What does 'stoutest' mean in the context?**
**Ans:-** In this context the stoutest means the strongest brave sailor.
**c. Why did he hold his breath?**
**Ans:-** He hold his breath out of fear because the sea was roaring like a hungry lion.

***Given below is a profile, write a paragraph using the clues given below:***

**34. Sarojini Naidu :** Date of Birth: 13th February 1879, Hyderabad.
**Parents:** Barada Sundari Devi, Aghornath, Chattopadhyaya.
**Education:** University of Madras; King's college, London.
**Notable works:** In the Bazaars of Hyderabad, The Golden Threshold.
**Associations:** Indian National Congress.

**Ans:-** Sarojini Naidu was born on 13th February 1879 in Hyderabad. Her Parents were Varada Sundari Devi and Aghornath Chattopadhyaya. She studied in University of Madras (now Chennai) and later in Kings College in London. She was a well known Poetress. Her notable works are "In the Bazaars of Hyderabad and The Golden Threshold''. She was a patriotic woman worked under Indian National Congress.

***Develop the story using the clues given below:***

**35. Three friends - two geese, a tortoise - decide to migrate - food, water - geese fly - tortoise can't - devise a way - carry tortoise - hold stick with their beaks - tortoise not to speak - hold the middle of the stick - children. Clap - tortoise angry - bursts out - fell - moral.**

**The geese and a tortoise**

Once upon a time the three friends were live in the forest. They were two geese and a tortoise. Because of the shortage of Rain, it was very difficult to find food and water in their place. They thought and decided to migrate to the place. The geese were ready to fly but tortoise cannot fly. So they make a plan. They brought a strong stick and the two geese hold that stick two ends and the tortoise was hold the stick in the middle with its mouth. The geese were instructed to tortoise during their flying. It should not talk. The tortoise agreed. They started their journey, middle of the journey, the laughing Children seeing the rare view of their flying, they clapped loudly. Their clap made the tortoise insult and it became angry. So it starts to scold them. Whenever it opens its mouth, it fell down and died.

**Moral:** We should not anger on others. It will harm us and Think twice before you talk.

**(36)**
(1) Combine the word in **Column-A** with its collocative word in **Column-B** :

| 'A' | 'B' |
|---|---|
| Swimming | [ light, cloth, pool, care ] |

**Ans:-** Swimming pool

***(37) Fill in the blank using the correct article :***
India is ……………….. rich country.
***Ans.*** : a

***(38) Fill in the blank using suitable linker :***
Nandan scored more marks in the exam……… he had studied well.
***Ans*** : because

***(39) Fill in the blank with appropriate preposition :***
You should take care ……………… your health.
***Ans.*** : of

***(40) Fill in the blank with appropriate tense form of the verb given in brackets :***
Jayanth ………….. ( narrate ) the story in the class yesterday.
***Ans.*** : narrated

***(41) Identify the part of speech of the underlined word :*** We are watching an important match.
***Ans.*** : Adjective

**(Contd…..)**

## Biology

### REVISION : MODEL QUESTIONS


**14) How do baculoviruses help in integrated pest management?**
**Ans;-** Baculoviruses bring many benefits and allow reduced use of synthetic insecticides when included in integrated pest management (IPM). They are specific to their target pest and thus do not have any negative effects on plants, mammals, and non-target insects including natural enemies and pollinators

**15) Ecological pyramids have limitations. Justify the statement with two reasons**
**Ans**:- The decomposers which are a major part of the food chain, are not given any place in any trophic level. The organisms from the same species may be present in one or more trophic level but are considered in the same level.

**16) What is Placenta?**
**Ans**:- Placenta is an organic connection between the developing featus and the uterine wall of the mother for purposes of physiological exchange. The whole structure of the placenta is in the form of a large disc, hence it is called metadiscoidal. The embryo is attached to the placenta through a tube called umbilical cord.


**17) Draw a neat diagram of the female reproductive system and label the parts associated with the following –**
(a) Production of gametes,
(b) Site of fertilization
(c) Site of implantation,
(d) Birth canal

**Ans:-**




**18. Briefly explain any three prevention and control measures of drug/ alcohol abuse.**
**Ans:-** 1) Avoid undue peer pressure.
2) Educating and counselling problems and stresses to avoid disappointments and failure in life.
3) Seeking professional and medical help whenever required.
4) seeking help from parents and friends.

**19. Draw an ideal pyramid of energy and mention the units.**
**Ans:-**





The sequential, gradual and predicable changes in the species composition in an area are called succession or ecological succession, they are two type primary succession and Secondary succession.

**20). a) Distinguish between primary productivity and secondary productivity of an ecosystem.**
**Ans:-**

| *Primary Productivity* | *Secondary Productivity* |
|---|---|
| It is the rate at which organic matter is built up by producers. | It is the rate at which organic matter is built up by consumers. |
| It is the result of synthesis of fresh organic matter from inorganic materials. | It is the result of synthesis of organic matter from organic matter. |

**b) Define food web?**
**Ans:-** Many organisms occupy positions in different food chains and several food chains become interconnected to form a food web.

**21) Give the structure of HIV.**
**Ans:-** *Structure of HIV*




It is a rounded enveloped retrovirus with a core having two single strands of genomic RNA, two molecules of enzyme reverse transcriptase, an inner covering or capsid (of P-24) and an outer covering or capsid (of P-18). The number of genes present in HIV- I is eight. It is nine in HIV- II (common in Africa). Core is covered by an envelope derived from host. The envelope has spikes with glycoprotein (gp 120) capable of recognizing CD-4 or T-4 antigen receptor found on helper T-cells, macrophages and nerve cells.

# ‘ಜೈವಿಕ ಇಂಧನ ನೀತಿ ಜಾರಿ ಶೀಘ್ರ’

ಪ್ರಜಾವಾಣಿ ವಾರ್ತೆ

ಕಾರವಾರ: ‘ಮಾರ್ಚ್ ಅಂತ್ಯದೊಳಗೆ ರಾಜ್ಯದಲ್ಲಿ ಜೈವಿಕ ಇಂಧನ ನೀತಿ ಜಾರಿಗೊಳಿಸಲಾಗುವುದು’ ಎಂದು ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್.ಈ. ಸುಧೀಂದ್ರ ಹೇಳಿದರು.

ಬುಧವಾರ ಇಲ್ಲಿನ ಜೈವಿಕ ಇಂಧನ ಉತ್ಪಾದನಾ ಘಟಕ ಪರಿಶೀಲಿಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಜೈವಿಕ ಡೀಸೆಲ್, 2ಜಿ ಎಥೆನಾಲ್ ಸೇರಿ ನೈಸರ್ಗಿಕ ಕಚ್ಚಾವಸ್ತು ಬಳಸಿ ಸಿದ್ಧಪಡಿಸುವ ಜೈವಿಕ ಇಂಧನ ಉತ್ಪಾದನೆ ಹೆಚ್ಚಳ ಮಾಡಲು ಯೋಜನೆ ರೂಪಿಸಲಾಗುತ್ತಿದೆ’ ಎಂದರು.



ಎಸ್. ಈ. ಸುಧೀಂದ್ರ

‘ರಾಜ್ಯದ 34 ಜೈವಿಕ ಉತ್ಪಾದನಾ ಘಟಕಗಳನ್ನು ಮೇಲ್ದರ್ಜೆಗೆ ಏರಿಸಲಾಗುವುದು. ಜೈವಿಕ ಇಂಧನ ತಯಾರಿಕೆಗೆ ಹೊಂಗೆ ಬೀಜದಂತಹ ಕಿರುಅರಣ್ಯ ಉತ್ಪನ್ನ ನೀಡುವ ರೈತರಿಗೆ ಸಹಾಯಧನ ಒದಗಿಸಲಾಗುವುದು’ ಎಂದರು.

‘ಜೈವಿಕ ಇಂಧನ ಉತ್ಪಾದನೆ ಕ್ಷೇತ್ರ ₹33 ಸಾವಿರ ಕೋಟಿ ಬಂಡವಾಳ ತರಬಲ್ಲದು. ಇದಕ್ಕಾಗಿಯೇ ಪ್ರತ್ಯೇಕ ಇಲಾಖೆ ರೂಪಿಸುವ ಬಗ್ಗೆಯೂ ಉನ್ನತಮಟ್ಟದಲ್ಲಿ ಚಿಂತನೆ ನಡೆದಿದೆ’ ಎಂದರು.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

## ಸಂಕ್ಷಿಪ್ತ ಸುದ್ದಿ

### ಮನೋಹರ ಪೈ, ತಾರಿಣಿಗೆ ಪ್ರಶಸ್ತಿ’



ತಾರಿಣಿ ಶುಭದಾಯಿನಿ



ಮನೋಹರ ಪೈ

ಬೆಂಗಳೂರು: ‘ಈ ಹೊತ್ತಿಗೆ ಟ್ರಸ್ಟ್’ ನೀಡುವ 2026ನೇ ಸಾಲಿನ ‘ಈ ಹೊತ್ತಿಗೆ ಕಾವ್ಯ ಪ್ರಶಸ್ತಿ’ಗೆ ವಿಮರ್ಶಕಿ ತಾರಿಣಿ ಶುಭದಾಯಿನಿ ಅವರ ‘ಪೆನಲೊಪಿ’ ಅಪ್ರಕಟಿತ ಕವನ ಸಂಕಲನ, ‘ಈ ಹೊತ್ತಿಗೆ ಕಥಾ ಪ್ರಶಸ್ತಿ’ಗೆ ಕಥೆಗಾರ ಎಂ. ಮನೋಹರ ಪೈ ಅವರ ‘ಲಾಧಾಕ್ಲಿಷ್ಣ ಮತ್ತು ಇಂದಿಲಾ ಕ್ಯಾಂಟೀನು’ ಅಪ್ರಕಟಿತ ಕಥಾಸಂಕಲನ ಆಯ್ಕೆಯಾಗಿವೆ.

ಪ್ರಶಸ್ತಿಗಳು ತಲಾ ₹10 ಸಾವಿರ ನಗದು ಒಳಗೊಂಡಿವೆ. ಕಾವ್ಯ ವಿಭಾಗದಲ್ಲಿ ಕವಿ ಆನಂದ ಝುಂಜರವಾಡ ಮತ್ತು ಕಥಾ ವಿಭಾಗದಲ್ಲಿ ಲೇಖಕಿ ಜಯಶ್ರೀ ದೇಶಪಾಂಡೆ ತೀರ್ಪುಗಾರರಾಗಿದ್ದರು.

ಚಿತ್ರದುರ್ಗದ ತಾರಿಣಿ ಶುಭದಾಯಿನಿ ಅವರ ಹಲವು ಕವನ ಸಂಕಲನ, ವಿಮರ್ಶಾ ಸಂಕಲನಗಳು ಪ್ರಕಟವಾಗಿವೆ. ಕಾರ್ಕಳದ ಮನೋಹರ ಪೈ ಅವರ ಕಥಾ ಸಂಕಲನ ಮತ್ತು ಕಾದಂಬರಿಗಳು ಪ್ರಕಟವಾಗಿವೆ.

ಮಾರ್ಚ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಟ್ರಸ್ಟ್‌ನ ಅಧ್ಯಕ್ಷೆ ಜಯಲಕ್ಷ್ಮಿ ಪಾಟೀಲ ತಿಳಿಸಿದ್ದಾರೆ.

### ಕಥಾಸಂಕಲನ ಆಹ್ವಾನ

ಮೈಸೂರು: ಇಲ್ಲಿನ ಸಮತಾ ಅಧ್ಯಯನ ಕೇಂದ್ರವು ಸಂಸ್ಥಾಪಕ ಅಧ್ಯಕ್ಷೆ ವಿಜಯಾ ದಬ್ಬೆ ಅವರ ಹೆಸರಿನಲ್ಲಿ ಸ್ಥಾಪಿಸಿರುವ ‘ವಿಜಯಾ ದಬ್ಬೆ ಸಾಹಿತ್ಯ ಪ್ರಶಸ್ತಿ’ಗೆ ಲೇಖಕಿಯರಿಂದ ಕಥಾಸಂಕಲನಗಳನ್ನು ಆಹ್ವಾನಿಸಿದೆ.

2022–2025ರ ಅವಧಿಯಲ್ಲಿ ಪ್ರಥಮ ಮುದ್ರಣ ಕಂಡ ಸಂಕಲನಗಳನ್ನು ಪರಿಗಣಿಸಲಾಗುವುದು. ಪ್ರಶಸ್ತಿಯು ₹ 25 ಸಾವಿರ, ಫಲಕ ಒಳಗೊಂಡಿದ್ದು, ಜೂನ್ 1ರಂದು ಮೈಸೂರಿನಲ್ಲಿ ಪ್ರದಾನ ಮಾಡಲಾಗುವುದು.

ಸಂಕಲನದ 4 ಪ್ರತಿಗಳನ್ನು ಕಳುಹಿಸಲು ಫೆ.28 ಕಡೆಯ ದಿನ. ವಿಳಾಸ: ಎಂ.ಎಸ್.ವೇದಾ, ಅಲಂಪು, 1257, ಪಡುವಣ ರಸ್ತೆ, 4ನೇ ತಿರುವು, ಟಿ.ಕೆ.ಬಡಾವಣೆ, 4ನೇ ಹಂತ, ಕುವೆಂಪುನಗರ, ಮೈಸೂರು-570023. ಮಾಹಿತಿಗೆ ಮೊ.ಸಂ. 9481814836 ಸಂಪರ್ಕಿಸಲು ಅಧ್ಯಕ್ಷೆ ಸಬಿಹಾ ಭೂಮಿಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಪ್ರಿಯತಮೆ ಜೊತೆ ನದಿಗೆ ಹಾರಿ ವಿವಾಹಿತ ಆತ್ಮಹತ್ಯೆ

ರಾಮದುರ್ಗ: ವಿವಾಹಿತನೊಬ್ಬ ಪ್ರಿಯತಮೆ ಜೊತೆ ಮಲಪ್ರಭಾ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಬುಧವಾರ ಬೆಳಿಗ್ಗೆ ರಾಮದುರ್ಗ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

‘ತಾಲ್ಲೂಕಿನ ಮಲ್ಲಾಪುರ ಗ್ರಾಮದ ಜಗದೀಶ ಯಲ್ಲಪ್ಪ ಕವಳೇಕರ (27), ಗಂಗಮ್ಮ ಪವಾಡೆಪ್ಪ ತ್ಯಾಪಿ (26) ಮೃತರು. ಇಬ್ಬರೂ ಸೊಂಟಕ್ಕೆ ದುಪ್ಪಟ್ಟಾವನ್ನು (ವೇಲ್) ಕಟ್ಟಿಕೊಂಡು ನದಿಗೆ ಹಾರಿ, ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಜಗದೀಶ ಅವರ ಪತ್ನಿ ಹೆರಿಗೆಗಾಗಿ ತವರು ಮನೆಗೆ ಹೋಗಿದ್ದರು. ಆಕೆ ಬಂದ ಬಳಿಕ ಮನೆಯವರಿಂದ ಆಕ್ಷೇಪ ವ್ಯಕ್ತವಾಗಿದೆ. ಸೋಮವಾರ ಇಬ್ಬರೂ ಮನೆ ತೊರೆದಿದ್ದರು. ಬುಧವಾರ ಬೆಳಿಗ್ಗೆ ಮಲಪ್ರಭಾ ನದಿಯಲ್ಲಿ ಶವಗಳು ಪತ್ತೆಯಾಗಿವೆ’ ಎಂದು ತಿಳಿಸಿದ್ದಾರೆ.

### ‘₹400 ಕೋಟಿ ದರೋಡೆ: ದೂರು ನೀಡಲು ಸಿದ್ಧ’

ಬೆಳಗಾವಿ: ‘₹400 ಕೋಟಿ ದರೋಡೆ ಬಗ್ಗೆ ಬೆಳಗಾವಿ ಪೊಲೀಸರು ತನಿಖೆ ಮಾಡುವ ಭರವಸೆ ನೀಡಿದರೆ, ನಾನು ಖುದ್ದಾಗಿ ದೂರು ದಾಖಲಿಸುತ್ತೇನೆ’ ಎಂದು ಪ್ರಕರಣದಲ್ಲಿ ಅಪಹರಣವಾಗಿ ಬಿಡುಗಡೆಯಾಗಿರುವ ಸಂದೀಪ್ ಪಾಟೀಲ ಬುಧವಾರ ನಾಸಿಕ್‌ನಲ್ಲಿ ತಿಳಿಸಿದ್ದಾರೆ.

ಸಾಮಾಜಿಕ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿರುವ ಸಂದೀಪ್, ‘ಗೋವಾದಿಂದ ಹೊರಟಿದ್ದ ಕಂಟೇನರ್‌ಗಳನ್ನು ಕರ್ನಾಟಕ ಗಡಿಯಲ್ಲೇ ದರೋಡೆ ಮಾಡಿದ್ದಾರೆ ಎಂಬ ಮಾಹಿತಿಯನ್ನು ನನಗೆ ಜಯೇಶ ಕದಮ್ ಹೇಳಿದ್ದಾನೆ. ಇದನ್ನು ಆಧರಿಸಿಯೇ ಮಹಾರಾಷ್ಟ್ರದ ಎಸ್‌ಐಟಿಗೂ ಹೇಳಿಕೆ ನೀಡಿದ್ದೇನೆ’ ಎಂದಿದ್ದಾರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–01 editpage@prajavani.co.in

# ಅಭಿಮತ



## ಸುಭಾಷಿತ

ಊದುಗೊಳವೆಗೆ ರಂಧ್ರಗಳನ್ನು ಕೊರೆದರೆ ಅದು ಕೊಳಲಾಗಿಬಿಡುವುದೆ?

–ಕೆ.ಎಸ್. ನಿಸಾರ್ ಅಹಮದ್

## ಸಂಪಾದಕೀಯ

# ಐರೋಪ್ಯ ಒಕ್ಕೂಟದೊಂದಿಗೆ ವ್ಯಾಪಾರ ಬಿಕ್ಕಟ್ಟಿನಲ್ಲಿ ಅಂತಿಮಗೊಂಡ ಒಪ್ಪಂದ

**ಭಾರತ** ಮತ್ತು ಐರೋಪ್ಯ ಒಕ್ಕೂಟದ (ಇಯು) ನಡುವಣ ಬಹುನಿರೀಕ್ಷಿತ 'ಮುಕ್ತ ವ್ಯಾಪಾರ ಒಪ್ಪಂದ' (ಎಫ್‌ಟಿಎ) ಅಂತಿಮಗೊಂಡಿದೆ. ಇದರಿಂದಾಗಿ, ವಿಶ್ವದ ಎರಡು ಬಹುದೊಡ್ಡ ಆರ್ಥಿಕ ಶಕ್ತಿಗಳು ಒಟ್ಟುಗೂಡಲು ಸಾಧ್ಯವಾಗಿದೆ. ನವದೆಹಲಿಯಲ್ಲಿ ನಡೆದ ಭಾರತ–ಇಯು ಶೃಂಗಸಭೆಯಲ್ಲಿ ಎಫ್‌ಟಿಎಗೆ ಸಂಬಂಧಿಸಿದ ಮಾತುಕತೆ ಮಂಗಳವಾರ ಪೂರ್ಣಗೊಂಡಿತು. ಈ ಚಾರಿತ್ರಿಕ ಒಪ್ಪಂದದ ಮೂಲಕ, 'ಇನ್ನೂರು ಕೋಟಿ ಜನರನ್ನು ಒಳಗೊಂಡಿರುವ ವಾಣಿಜ್ಯ ವಲಯಗಳ ನಡುವೆ ಮುಕ್ತ ವ್ಯಾಪಾರಕ್ಕೆ ಬಹುದೊಡ್ಡ ಅವಕಾಶವೊಂದು ರೂಪುಗೊಂಡಿದೆ'. ಅಮೆರಿಕದೊಂದಿಗೆ ಭಾರತ ಮತ್ತು ಇಯು ಹೊಂದಿರುವ ವಾಣಿಜ್ಯ ವ್ಯಾಪಾರ ಸಂಬಂಧಕ್ಕೆ, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸಾರಿರುವ ಸುಂಕ ಸಮರವು ಧಕ್ಕೆ ತಂದಿದೆ. ಈ ಹಿನ್ನೆಲೆಯಲ್ಲಿ ಸೃಷ್ಟಿಯಾಗಿರುವ ಬಿಕ್ಕಟ್ಟು, ಸುಮಾರು ಎರಡು ದಶಕಗಳ ಹಿಂದೆಯೇ ಆರಂಭಗೊಂಡಿದ್ದ ಎಫ್‌ಟಿಎ ಒಪ್ಪಂದ ಅಂತಿಮಗೊಳ್ಳಲು ವೇಗವರ್ಧಕವಾಗಿ ಕೆಲಸ ಮಾಡಿರುವಂತಿದೆ. ಅಮೆರಿಕದೊಂದಿಗಿನ ವ್ಯಾಪಾರ ಒಪ್ಪಂದದ ಮಾತುಕತೆ ನಡೆಯುತ್ತಿರುವ ಸಂದರ್ಭದಲ್ಲಿ ಟ್ರಂಪ್ ಅವರಿಗೆ ಸಂದೇಶ ರವಾನಿಸುವ ಸಂಕೇತದ ರೂಪದಲ್ಲಿಯೂ ಪ್ರಸಕ್ತ ಒಪ್ಪಂದವನ್ನು ನೋಡಬಹುದಾಗಿದೆ. ಯುರೋಪಿಯನ್ ಆಯೋಗದ ಅಧ್ಯಕ್ಷೆ ಉರ್ಸುಲಾ ಫಾನ್ ಡೆರ್ ಲೇಯನ್ ಅವರು, ವಿಶ್ವದಲ್ಲಿ ವ್ಯಾಪಾರವನ್ನು ಆಯುಧವನ್ನಾಗಿ ಬಳಸುವ ಪ್ರವೃತ್ತಿ ಹೆಚ್ಚಾಗುತ್ತಿದೆ ಎಂದು ಹೇಳಿರುವುದನ್ನು ಟ್ರಂಪ್ ಅವರ ವ್ಯಾಪಾರ ನೀತಿಯಿಂದ ಉಂಟಾದ ಅಸ್ಥಿರ ಪರಿಸ್ಥಿತಿಗೆ ಪ್ರತಿಕ್ರಿಯೆ ಎಂದು ವಿಶ್ಲೇಷಿಸಲಾಗುತ್ತಿದೆ. ಪ್ರಸಕ್ತ ಒಪ್ಪಂದವು ಉಭಯತ್ರರಿಗೂ ಲಾಭದಾಯಕವಾಗಿದೆ. ಎರಡೂ ಬಣಗಳು ನಷ್ಟವನ್ನು ಕನಿಷ್ಠಗೊಳಿಸಿ ಲಾಭವನ್ನು ಗರಿಷ್ಠಗೊಳಿಸುವ ತಂತ್ರ ಅನುಸರಿಸಿವೆ.



ಭಾರತ–'ಇಯು' ಮುಕ್ತ ವ್ಯಾಪಾರ ಒಪ್ಪಂದಕ್ಕೆ ಚಾರಿತ್ರಿಕ ಮಹತ್ವವಿದೆ. ಉಭಯ ಬಣಗಳಿಗೆ ಲಾಭದಾಯಕ ಆಗಿರುವ ಈ ಒಪ್ಪಂದ, ಅಮೆರಿಕಕ್ಕೆ ರಾಜತಾಂತ್ರಿಕ ಸಂದೇಶವೂ ಆಗಿರುವಂತಿದೆ.

ಮುಕ್ತ ವ್ಯಾಪಾರ ಒಪ್ಪಂದದಿಂದಾಗಿ ಇಯುನಿಂದ ಭಾರತಕ್ಕೆ ರಫ್ತಾಗುವ ಸರಕುಗಳ ಒಟ್ಟು ಮೌಲ್ಯ ದ್ವಿಗುಣಗೊಳ್ಳುವ ನಿರೀಕ್ಷೆಯಿದೆ. ಭಾರತದಿಂದ ಇಯುಗೆ ಆಗುತ್ತಿರುವ ರಫ್ತು ವಹಿವಾಟಿನ ಪ್ರಮಾಣ 3ರಿಂದ 4 ಶತಕೋಟಿ ಡಾಲರ್‌ಗಳಷ್ಟು ಹೆಚ್ಚಾಗಲಿದೆ. 2024–25ರಲ್ಲಿ 137 ಶತಕೋಟಿ ಡಾಲರ್‌ಗಳ ದ್ವಿಪಕ್ಷೀಯ ವ್ಯಾಪಾರ ನಡೆದಿದೆ. ಭಾರತ 75.85 ಶತಕೋಟಿ ಡಾಲರ್ ಮೌಲ್ಯದ ಸರಕುಗಳನ್ನು ರಫ್ತು ಮಾಡಿದ್ದು, 60.68 ಶತಕೋಟಿ ಡಾಲರ್ ಮೌಲ್ಯದ ಉತ್ಪನ್ನಗಳನ್ನು ಆಮದು ಮಾಡಿಕೊಂಡಿದೆ. ಎರಡೂ ಬಣಗಳು ಬೃಹತ್ ಆರ್ಥಿಕತೆಯನ್ನು ಹೊಂದಿದ್ದು, ವಿಶ್ವದ ಒಟ್ಟು ಜಿಡಿಪಿಯಲ್ಲಿ ಶೇ 25ರಷ್ಟು ಪಾಲು ಹೊಂದಿವೆ; ಇದು ಒಟ್ಟು ಜಾಗತಿಕ ವ್ಯಾಪಾರದ ಮೂರನೇ ಒಂದು ಭಾಗವಾಗಿದೆ. ಭಾರತದಿಂದ ರಫ್ತಾಗುವ ಸರಕುಗಳ ಮೇಲೆ ಇಯು ಶೇ 99.5ರಷ್ಟು ಸುಂಕ ತಗ್ಗಿಸಲಿದೆ ಹಾಗೂ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲಿನ ತೆರಿಗೆಯನ್ನು ಭಾರತ ಶೇ 92ರಷ್ಟು ಕಡಿಮೆ ಮಾಡಲಿದೆ. ಮೌಲ್ಯದ ಆಧಾರದ ಮೇಲೆ ಶೇ 30ರಷ್ಟು ವ್ಯಾಪಾರದ ಸುಂಕವನ್ನು ಸೊನ್ನೆಗಿಳಿಸಲು ಭಾರತ ಸಮ್ಮತಿಸಿದೆ. ಯಂತ್ರೋಪಕರಣಗಳು, ರಾಸಾಯನಿಕಗಳು ಮತ್ತು ಔಷಧಗಳ ಮೇಲಿನ ಭಾರತದ ಬಹುಹೆಚ್ಚಿನ ತೆರಿಗೆಗಳು ರದ್ದಾಗಲಿವೆ. ಯುರೋಪಿಯನ್ ಕಾರುಗಳು, ವೈನ್, ವೈದ್ಯಕೀಯ ಸಲಕರಣೆ ಮತ್ತು ಯಂತ್ರೋಪಕರಣಗಳು ಭಾರತದಲ್ಲಿ ಅಗ್ಗವಾಗಲಿವೆ. ಭಾರತದ ಸಿದ್ಧಉಡುಪುಗಳ ರಫ್ತಿಗೆ ಉತ್ತೇಜನ ದೊರೆಯಲಿದೆ. ಹೈನು ಉತ್ಪನ್ನಗಳು ಮತ್ತು ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಯಾವುದೇ ರಿಯಾಯಿತಿ ನೀಡದಿರುವ ಎಚ್ಚರವನ್ನು ಭಾರತ ಪ್ರದರ್ಶಿಸಿದೆ. ಉಭಯ ಬಣಗಳಿಗೆ ಸಂಬಂಧಿಸಿದಂತೆ ಅಗತ್ಯವಿರುವ ಶಾಸನಾತ್ಮಕ ಪ್ರಕ್ರಿಯೆಗಳು ಪೂರ್ಣಗೊಂಡ ಬಳಿಕ, ಸುಮಾರು ಒಂದು ವರ್ಷದೊಳಗೆ ಈ ಒಪ್ಪಂದ ಜಾರಿಗೆ ಬರಲಿದೆ.

ಭಾರತ–ಇಯು ಶೃಂಗಸಭೆಯ ಫಲಶ್ರುತಿಯಾಗಿ ಮುಕ್ತ ವ್ಯಾಪಾರ ಒಪ್ಪಂದ ಹೊರಹೊಮ್ಮಿದ್ದರೂ, ಈ ಶೃಂಗಸಭೆಗೆ ಮತ್ತೂ ಹೆಚ್ಚಿನ ಮಹತ್ವವಿದೆ. ರಕ್ಷಣೆ ಮತ್ತು ಭದ್ರತೆಗೆ ಸಂಬಂಧಿಸಿದ ಸಹಕಾರವನ್ನು ಬಲಪಡಿಸುವ ರಚನಾತ್ಮಕ ಸಹಭಾಗಿತ್ವಕ್ಕೆ ಸಂಬಂಧಿಸಿದಂತೆಯೂ ಒಪ್ಪಂದ ನಡೆದಿದೆ. ರಕ್ಷಣೆ, ಸಾಗರ ಭದ್ರತೆ, ಶುದ್ಧ ಇಂಧನ, ಡಿಜಿಟಲ್ ತಂತ್ರಜ್ಞಾನ, ಬಾಹ್ಯಾಕಾಶ ಹಾಗೂ ಹವಾಮಾನಕ್ಕೆ ಸಂಬಂಧಿಸಿದ ಹೊಣೆಗಾರಿಕೆ ಸೇರಿದಂತೆ ಬೇರೆ ಬೇರೆ ಕ್ಷೇತ್ರಗಳಲ್ಲಿ ಈಗಾಗಲೇ ಇರುವ ಸಹಕಾರದ ಮೇಲೆಯೂ ಒಪ್ಪಂದಗಳು ರೂಪುಗೊಂಡಿವೆ. ವ್ಯಾಪಾರ, ಭದ್ರತೆ ಮತ್ತು ತಂತ್ರಜ್ಞಾನ ಕ್ಷೇತ್ರಗಳು ಪರಸ್ಪರ ಗಾಢ ಸಂಬಂಧ ಹೊಂದಿರುವ ಸಂದೇಶವನ್ನೂ ಈ ಒಪ್ಪಂದ ಸ್ಪಷ್ಟವಾಗಿ ಸಾರುತ್ತಿದೆ.

### ನ್ಯಾಯಯುತ ಪಾಲು



ದೆಹಲಿಮಟ್ಟದಲ್ಲಿ ರಾಜಕಾರಣ ಮಾಡುತ್ತಿರುವ ಕರ್ನಾಟಕದ ರಾಜಕಾರಣಿಗಳೇ, ನೀವು ರಾಜ್ಯಕ್ಕೆ ಮರಳುವಿರೋ ಇಲ್ಲವೋ ಅದು ನಿಮ್ಮಿಷ್ಟ. ಆದರೆ, ನಾವು ಪ್ರತಿವರ್ಷ ಕಟ್ಟುವ ತೆರಿಗೆಯಲ್ಲಿ ನಮಗೆ ಸಿಗಬೇಕಾದ ನ್ಯಾಯಯುತ ಪಾಲು ರಾಜ್ಯಕ್ಕೆ ಮರಳಿ ಸಿಗುವಂತೆ ಮಾಡಿದರೆ ಸಾಕು.

**ಗಿರೀಶ್ ಕಾರ್ಗದ್ದೆ,** 'ಎಕ್ಸ್'ನಿಂದ

### ಕಿಡಿನುಡಿ



ಗಾಂಧಿ ದೇಹಕ್ಕೆ ಗುಂಡು ಹೊಡೆದಿದ್ದು ಗೋಡ್ಸೆ; ಗಾಂಧಿತತ್ತ್ವಕ್ಕೆ ಗುಂಡು ಹೊಡೆದಿದ್ದು ಕಾಂಗ್ರೆಸ್. ಗಾಂಧಿತತ್ತ್ವದ ಅನುಸಾರ ಮದ್ಯಪಾನ ನಿಷೇಧ ಆಗಬೇಕು. ಆದರೆ, ರಾಜ್ಯ ಸರ್ಕಾರವು ಕಿರಾಣಿ ಅಂಗಡಿಗಳಲ್ಲೆಲ್ಲ ಅಕ್ರಮ ಮದ್ಯ ಸಿಗುವಂತೆ ಮಾಡಿದೆ.

**ಸಿ.ಟಿ. ರವಿ,** ವಿಧಾನ ಪರಿಷತ್ ಸದಸ್ಯ

### 25 ವರ್ಷಗಳ ಹಿಂದೆ

ಸೋಮವಾರ, 29-1-2001

**• ಭೂಕಂಪ: ಸಾವಿನ ಸಂಖ್ಯೆ 30,000 ಮುಟ್ಟುವ ಶಂಕೆ**

ಅಹ್ಮದಾಬಾದ್, ಜ. 28 (ಯುಎನ್‌ಐ)– ಗುಜರಾತಿನಲ್ಲಿ ಶುಕ್ರವಾರ ಸಂಭವಿಸಿದ ಭೀಕರ ಭೂಕಂಪದಿಂದ ಸತ್ತವರ ಸಂಖ್ಯೆ ಸತತವಾಗಿ ಏರುತ್ತಿದ್ದು, ಅದು 30,000 ತಲಪುವ ಸಾಧ್ಯತೆ ಇದೆ. ಅವಶೇಷಗಳ ಅಡಿಯಲ್ಲಿ ಇನ್ನೂ ಒಂದು ಲಕ್ಷ ಮಂದಿ ಸಿಕ್ಕಿಹಾಕಿಕೊಂಡಿರಬೇಕೆಂದು ಶಂಕಿಸಲಾಗಿದೆ.

ಪರಿಹಾರ ಕಾರ್ಯಗಳು ಸಮರೋಪಾದಿಯಲ್ಲಿ ನಡೆದಿರುವಂತೆಯೇ ಇಂದು ಬೆಳಗ್ಗೆ ಕಛ್‌ನ ರಣ್, ಅಹ್ಮದಾಬಾದ್, ರಾಜ್‌ಕೋಟ್ ಮುಂತಾದ ಕಡೆ ಎರಡು ಭಾರಿ ಭೂಮಿ ಕಂಪಿಸಿತು.

ಬೆಳಗ್ಗೆ ಆರು ಗಂಟೆ 45 ನಿಮಿಷಕ್ಕೆ ಸಂಭವಿಸಿದ ಮೊದಲ ಕಂಪನದ ತೀವ್ರತೆ ರಿಕ್ಟರ್ ಮಾಪಕದಲ್ಲಿ 5.9ರಷ್ಟಿತ್ತು. ಅದರ ಬೆನ್ನಲ್ಲೇ 4.7ರಷ್ಟಿರುವ ಇನ್ನೊಂದು ಕಂಪನ ಸಂಭವಿಸಿತು.

**• ಕಾರ್ಮಿಕರ ಮೇಲೆ ಲಾಠಿ ಪ್ರಹಾರ**

ಕಲ್ಬುರ್ಗಿ, ಜ. 28– ಕಲ್ಲುತೂರಾಟದಲ್ಲಿ ತೊಡಗಿದ್ದ ಶಹಾಬಾದಿನ ಎಚ್‌ಎಂಪಿ ಸಿಮೆಂಟ್ ಕಾರ್ಖಾನೆಯ ಮುಷ್ಕರ ನಿರತ ಉದ್ರಿಕ್ತ ಕಾರ್ಮಿಕರ ಮೇಲೆ ಪೊಲೀಸರು ಲಘು ಲಾಠಿ ಪ್ರಹಾರ ಮಾಡಿದರಲ್ಲದೆ, ಕಲ್ಲುತೂರಾಟದಲ್ಲಿ ಒಟ್ಟು 9 ಮಂದಿ ಪೊಲೀಸರು ಗಾಯಗೊಂಡ ಘಟನೆ ಶನಿವಾರ ಸಂಭವಿಸಿದೆ.

ಶನಿವಾರ ಕಾರ್ಖಾನೆಯ ಸುಮಾರು 150 ಮಂದಿ ಕಾರ್ಮಿಕರು ಕಾರ್ಖಾನೆಯಲ್ಲಿ ತಮಗೆ ಕೆಲಸ ಕೊಡುವ ಸಂಬಂಧ ಕಾರ್ಖಾನೆ ಗೇಟಿನ ಬಳಿ ಧರಣಿ ಸತ್ಯಾಗ್ರಹ ನಡೆಸುತ್ತಿದ್ದರು.

### 75 ವರ್ಷಗಳ ಹಿಂದೆ


ಸೋಮವಾರ, 29-1-1951

**• ಹಿಂದೂ ಕೋಡ್ ಮಸೂದೆಯ ಬದಲಾವಣೆ ಅತ್ಯಗತ್ಯ: ಸೆನ್**

ಬೆಂಗಳೂರು, ಜ.29– 'ಭಾರತೀಯ ಮಹಿಳಾ ಪ್ರಪಂಚಕ್ಕೆ ಪ್ರಸ್ತುತ ಕಾನೂನು ಕಟ್ಟಲೆಗಳು ಸರಿಸಮನಾದ ನ್ಯಾಯ ದೊರಕಿಸಿ ಕೊಡುತ್ತಿಲ್ಲ. ಆ ಕಾರಣ, ಸರ್ಕಾರ ಹಿಂದೂ ಕಾನೂನು ಮತ್ತು ಹಿಂದೂ ಕೋಡ್ ಮಸೂದೆಯನ್ನು ಪರಿಶೀಲನೆಗಾಗಿ ಒಂದು ಅಡ್‌ಹಾಕ್ ಸಮಿತಿಗೆ ಒಪ್ಪಿಸಿತು. ಆದರೆ, ಮಹಿಳೆಯರ ಹಿತದೃಷ್ಟಿಯಿಂದ ನೋಡಿದರೆ ಹಿಂದೂ ಕೋಡ್ ಮಸೂದೆಯು ತೃಪ್ತಿಕರವಾಗಿಲ್ಲ. ಏಕೆಂದರೆ ಈ ಮಸೂದೆಯು ಎಲ್ಲಾ ದೃಷ್ಟಿಯಿಂದ ಮಹಿಳೆಯರಿಗೆ ಸರ್ವ ಸಮಾನತೆ ಬೇಕೆಂಬ ತತ್ವವನ್ನು ಎತ್ತಿ ಹಿಡಿಯುತ್ತಿಲ್ಲ' ಎಂಬುವುದಾಗಿ ಅಖಿಲಭಾರತ ಮಹಿಳಾ ಸಮ್ಮೇಳನದ ಅಧ್ಯಕ್ಷಿಣಿಯಾದ ಶ್ರೀಮತಿ ಹನ್ನಾ ಸೆನ್‌ರು ಅಧ್ಯಕ್ಷ ಭಾಷಣ ಮಾಡುತ್ತಾ ತಿಳಿಸಿದರು.

ಅಖಿಲ ಭಾರತ ಮಹಿಳಾ ಸಮ್ಮೇಳನದ 22ನೇ ಅಧಿವೇಶನ ಭಾನುವಾರ ಸಂಜೆ 4 ಗಂಟೆಗೆ ಸರ್. ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ಸಮಾವೇಶಗೊಂಡಿತು.

# ಜೆಡಿಎಸ್‌ಗೆ 'ಎಸ್' ಎಂದಾರೆ ಜನ?



ಅನುಸಂಧಾನ

ರವೀಂದ್ರ ಭಟ್ಟ

**2028**ಕ್ಕೆ ಜಾತ್ಯತೀತ ಜನತಾ ದಳವನ್ನು ರಾಜ್ಯದಲ್ಲಿ ಅಧಿಕಾರಕ್ಕೆ ತರುವುದಾಗಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡರು ಹೇಳಿದ್ದಾರೆ. 93 ವಯಸ್ಸಿನ ತಾವು ಕಿಡ್ನಿ ವಿಫಲವಾಗಿದ್ದರೂ, ಡಯಾಲಿಸಿಸ್ ನಡೆಯುತ್ತಿದ್ದರೂ, ರಾಜ್ಯದಾದ್ಯಂತ ಓಡಾಡಿ ಪಕ್ಷವನ್ನು ಅಧಿಕಾರಕ್ಕೆ ತಂದು ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡುವುದಾಗಿ ಶಪಥ ಮಾಡಿದ್ದಾರೆ. 2018ರ ವಿಧಾನಸಭಾ ಚುನಾವಣೆಗೆ ಮೊದಲೂ ದೇವೇಗೌಡರು ಇಂತಹದೇ ಘೋಷಣೆ ಮಾಡಿದ್ದರು. ಆಗ ಪಕ್ಷ ಅಧಿಕಾರಕ್ಕೆ ಬರಲಿಲ್ಲ. ವಿಧಾನಸಭೆಯಲ್ಲಿ 40 ಸದಸ್ಯತ್ವ ಹೊಂದಿದ್ದ ಪಕ್ಷ 37ಕ್ಕೆ ಇಳಿಯಿತು. ಆದರೂ ಕುಮಾರಸ್ವಾಮಿ ಮುಖ್ಯಮಂತ್ರಿಯಾದರು. 2028ರಲ್ಲಿಯೂ ಅಂತಹದೇ ಮ್ಯಾಜಿಕ್ ನಡೆಯಬಹುದು ಎಂದು ವಯೋವೃದ್ಧರಾದ ದೇವೇಗೌಡರು ನಿರೀಕ್ಷಿಸಿರಬಹುದು. ಮಗನ ಮತ್ತು ಮೊಮ್ಮಗನ ವಿಷಯದಲ್ಲಿ ಅಂತಹ ಕನಸೊಂದನ್ನು ಅಜ್ಜನೊಬ್ಬ ಕಾಣಬಾರದು ಎಂದರೆ ಹೇಗೆ? ಅದೂ ಜೆಡಿಎಸ್ ಪಕ್ಷದ ರಜತ ಮಹೋತ್ಸವ ಸಂದರ್ಭದಲ್ಲಿ ಇಂತಹ ಭಾಷಣ ಭೂಷಣವೂ ಹೌದು.

ಜಾತ್ಯತೀತ ಜನತಾ ದಳ ಕರ್ನಾಟಕದಲ್ಲಿ ಹುಟ್ಟಿಕೊಂಡ ಪ್ರಾದೇಶಿಕ ಪಕ್ಷಗಳಲ್ಲಿಯೇ ಅತ್ಯಂತ ಪ್ರಬಲವಾದ ಪಕ್ಷವಾಗಿತ್ತು. ಪ್ರಧಾನಿ ಹುದ್ದೆಗೆ ಏರಿದ, ರಾಜಕೀಯದ ಎಲ್ಲ ಪಟ್ಟುಗಳನ್ನು ಕರಗತ ಮಾಡಿಕೊಂಡ ದೇವೇಗೌಡರ ನೇತೃತ್ವ ಆ ಪಕ್ಷಕ್ಕೆ ಇತ್ತು. ಎರಡು ಬಾರಿ ಮುಖ್ಯಮಂತ್ರಿಯಾದ ಎಚ್.ಡಿ. ಕುಮಾರಸ್ವಾಮಿ ಅವರೂ ಜೊತೆಗಿದ್ದರು. ದೇವೇಗೌಡರು ಧೃತರಾಷ್ಟ್ರ ಪ್ರೇಮವನ್ನು ಬಿಟ್ಟಿದ್ದರೆ, ಎಲ್ಲ ಜಾತಿ, ಧರ್ಮದವರನ್ನೂ ಒಟ್ಟಾಗಿ ತೆಗೆದುಕೊಂಡು ಹೋಗಿದ್ದರೆ ಅದು ಕನ್ನಡಿಗರ ಪಕ್ಷವೂ ಆಗುತ್ತಿತ್ತು. ಈಗಲೂ ಕಾಲ ಮಿಂಚಿಲ್ಲ. ಕರ್ನಾಟಕಕ್ಕೆ ಒಂದು ಪ್ರಬಲವಾದ ಪ್ರಾದೇಶಿಕ ಪಕ್ಷದ ಅನಿವಾರ್ಯತೆಯಂತೂ ಇದ್ದೇ ಇದೆ. ಅದಕ್ಕೆ ಬೇಕಾದ ನೆಲವೂ ಹದವಾಗಿದೆ. ಪ್ರಾದೇಶಿಕ ಪಕ್ಷವಾಗಿ ಬೆಳೆಯಲು ಬೇಕಾದ ಎಲ್ಲ ಸಾಧ್ಯತೆಗಳೂ ಜೆಡಿಎಸ್ ಪಕ್ಷಕ್ಕೆ ಇವೆ. ಜಾತಿಯ ಚೌಕಟ್ಟನ್ನು ಬಿಟ್ಟು, ಕುಟುಂಬದ ಭಾರವನ್ನು ಬದಿಗಿಟ್ಟು ಗೌಡರ ಕುಟುಂಬ ಕೊಂಚ ವಿಶಾಲದೃಷ್ಟಿಯಿಂದ ನಡೆದುಕೊಂಡರೆ ಅದೆಲ್ಲವೂ ಸಾಧ್ಯ.

ಎಲ್ಲ ಜಾತಿ, ಜನಾಂಗ, ಧರ್ಮದವರನ್ನು ಒಂದುಗೂಡಿಸಿ ಮುನ್ನಡೆದಾಗಲೇ ದೇವೇಗೌಡರು ಈ ರಾಜ್ಯದ ಮುಖ್ಯಮಂತ್ರಿ ಆಗಿದ್ದರು. ದೇಶದ ಪ್ರಧಾನಿಯೂ ಆಗಿದ್ದರು. ಇದನ್ನು ಅವರು ಮತ್ತು ಅವರ ಮಕ್ಕಳು ನೆನಪಿಸಿಕೊಂಡು ಮತ್ತೆ ಅಂತಹುದೇ ಪ್ರಯತ್ನವನ್ನು ಮುಂದುವರಿಸಿದರೆ, ರಾಜ್ಯದಲ್ಲಿ ಪಕ್ಷಕ್ಕೆ ಭವಿಷ್ಯದ ಬೆಳ್ಳಿರೇಖೆ ಮೂಡೀತು. ಕೇವಲ ತಮ್ಮ ಮಗನನ್ನು ಮುಖ್ಯಮಂತ್ರಿ ಮಾಡುವುದಷ್ಟೇ ಅಜೆಂಡಾ ಆದರೆ ಮಗನಿಗೆ ಮುಖ್ಯಮಂತ್ರಿ ಪದವಿ ಸಿಕ್ಕೀತು. ಆದರೆ ಪಕ್ಷ ಉಳಿಯುವುದು ಕಷ್ಟ. 2004ರಲ್ಲಿ ಜೆಡಿಎಸ್ ಪಕ್ಷ ಕರ್ನಾಟಕ ವಿಧಾನಸಭೆಯಲ್ಲಿ 58 ಸ್ಥಾನ ಹೊಂದಿತ್ತು. ಇದೇ ಅವಧಿಯಲ್ಲಿಯೇ ಕುಮಾರಸ್ವಾಮಿ ಅವರು ಮೊದಲ ಬಾರಿಗೆ ಮುಖ್ಯಮಂತ್ರಿಯಾದರು. ಆದರೆ 2008ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಗಳಿಸಿದ್ದು ಕೇವಲ 28 ಸ್ಥಾನ. 2013ರಲ್ಲಿ ಪಕ್ಷದ ಸದಸ್ಯರ ಸಂಖ್ಯೆ 40ಕ್ಕೆ ಏರಿಕೆಯಾದರೂ 2018ರಲ್ಲಿ ಅದು 37ಕ್ಕೆ ಕುಸಿಯಿತು. ಆದರೂ ಕುಮಾರಸ್ವಾಮಿ ಮತ್ತೆ ಮುಖ್ಯಮಂತ್ರಿಯಾದರು. ನಂತರ 2023ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಸದಸ್ಯರ ಸಂಖ್ಯೆ 19ಕ್ಕೆ ಇಳಿಯಿತು. ಈಗ ಕೇಂದ್ರ ಸಚಿವರಾಗಿರುವ ಕುಮಾರಸ್ವಾಮಿ ಅವರು ರಾಜ್ಯ ರಾಜಕೀಯಕ್ಕೆ ಬರುವ ಮಾತನಾಡುತ್ತಿದ್ದಾರೆ. ದೇವೇಗೌಡರು ಮಗನನ್ನು ಮತ್ತೆ ಮುಖ್ಯಮಂತ್ರಿ ಮಾಡುವ ಕನಸಿನಲ್ಲಿದ್ದಾರೆ.

ರಾಜ್ಯದಲ್ಲಿ ಈವರೆಗೂ ರಾಷ್ಟ್ರೀಯ ಪಕ್ಷಗಳ ಹಾವು ಏಣಿಯಾಟವೇ ನಡೆಯುತ್ತಿದೆ. ರಾಜ್ಯಕ್ಕೆ ಸಾಕಷ್ಟು ಅನ್ಯಾಯವಾಗುತ್ತಿದ್ದರೂ ಕನ್ನಡಿಗರನ್ನು ಪ್ರತಿನಿಧಿಸುವ ಪಕ್ಷವೊಂದು ಇನ್ನೂ ಇಲ್ಲಿ ಬೆಳೆದಿಲ್ಲ. ಪ್ರಾದೇಶಿಕ ಪಕ್ಷ ಹುಟ್ಟು ಹಾಕುವ ಪ್ರಯತ್ನಗಳು

> ಜಾತ್ಯತೀತ ಜನತಾ ದಳ ಬೆಳ್ಳಿಹಬ್ಬದ ಸಂಭ್ರಮದಲ್ಲಿದೆ. ಪ್ರಾದೇಶಿಕ ಪಕ್ಷವೊಂದರ ಈ ಸಂಭ್ರಮ ನಾಡಿನಲ್ಲಿ ದೊಡ್ಡದಾಗಿ ಕಾಣಿಸಿಕೊಳ್ಳಬೇಕಿತ್ತು. ರಾಜ್ಯ ರಾಜಕಾರಣದಲ್ಲಿ ಉತ್ಸಾಹ ಹುಟ್ಟಿಸಬೇಕಾಗಿತ್ತು. ಯಾಕೆ ಹಾಗಾಗಿಲ್ಲ? ಈ ಪ್ರಶ್ನೆಗೆ ಉತ್ತರವಾಗಿ, ರಾಜ್ಯದಲ್ಲಿನ ಪ್ರಾದೇಶಿಕ ಪಕ್ಷಗಳ ಪರಂಪರೆ ಗಮನಿಸಬೇಕು.

ಬಹಳ ಹಿಂದಿನಿಂದ ನಡೆದಿದ್ದರೂ ಅಧಿಕಾರದ ಗದ್ದುಗೆ ಏರುವ ಮಟ್ಟಕ್ಕೆ ಯಾವುದೂ ಬೆಳೆಯಲಿಲ್ಲ. ಕರ್ನಾಟಕದ ಮತದಾರರು ಪ್ರಾದೇಶಿಕ ಪಕ್ಷಗಳನ್ನು ಬೆಂಬಲಿಸುವುದಿಲ್ಲ ಎಂದೇ ವಿಶ್ಲೇಷಿಸಲಾಗುತ್ತದೆ. ಆದರೆ, ಅದು ನಿಜವಲ್ಲ. ಕರ್ನಾಟಕದಲ್ಲಿ ಹುಟ್ಟಿದ ಬಹುತೇಕ ಪ್ರಾದೇಶಿಕ ಪಕ್ಷಗಳು ಅವಸರದ ಕೂಸುಗಳೇ ವಿನಾ ರಾಜ್ಯದ ಮತದಾರರ ಶ್ರೇಯೋಭಿವೃದ್ಧಿ ಇಟ್ಟುಕೊಂಡು ಸರಿಯಾದ ಸಿದ್ಧಾಂತದಲ್ಲಿ ರೂಪುಗೊಂಡ ಪಕ್ಷಗಳಲ್ಲ. ತಮ್ಮ ರಾಜಕೀಯ ಅಭಿವೃದ್ಧಿಗೆ ಹುಟ್ಟಿಕೊಂಡ ಪಕ್ಷಗಳನ್ನು ಮತದಾರರು ಬೆಂಬಲಿಸಲಿಲ್ಲ ಅಷ್ಟೆ. ದಿನಬೆಳಗಾದರೆ ಹುಟ್ಟಿಕೊಳ್ಳುವ ಪ್ರಾದೇಶಿಕ ಪಕ್ಷಗಳ ಪರಾಕ್ರಮಕ್ಕೆ ಕನ್ನಡಿಗರು ಮರುಳಾಗಲಿಲ್ಲ. 1948ರಲ್ಲಿಯೇ ಸ್ಥಾಪನೆಯಾದ, 1967ರ ವೇಳೆಗೆ ತಮಿಳುನಾಡಲ್ಲಿ ಅಧಿಕಾರ ಸೂತ್ರ ಹಿಡಿದ ಡಿಎಂಕೆ ಪಕ್ಷದಂತಾಗಲಿ, ಅದರಿಂದ ಹುಟ್ಟಿಕೊಂಡ ಎಐಎಡಿಎಂಕೆಯಂತಾಗಲಿ, ಪಕ್ಕದ ಆಂಧ್ರಪ್ರದೇಶದ ಟಿಡಿಪಿಯಂತಾಗಲಿ, ತೆಲಂಗಾಣದ ಭಾರತ ರಾಷ್ಟ್ರ ಸಮಿತಿಯಂತಾಗಲಿ ಯಶಸ್ವಿ ರಾಜಕೀಯ ಪಕ್ಷವನ್ನು ಹುಟ್ಟು ಹಾಕುವುದು ಇಲ್ಲಿಯವರೆಗೂ ಕರ್ನಾಟಕದಲ್ಲಿ ಸಾಧ್ಯವಾಗಲಿಲ್ಲ.

ಕರ್ನಾಟಕದ ಜನತೆಯ ಆಶೋತ್ತರಗಳಿಗೆ ಪೂರಕವಾಗಿ ಸ್ಪಂದಿಸುವ ಪ್ರಾದೇಶಿಕ ರಾಜಕೀಯ ಪರ್ಯಾಯ ರೂಪುಗೊಳ್ಳಲೇ ಇಲ್ಲ ಎಂದೇನಿಲ್ಲ. 1960ರ ದಶಕದ ಆರಂಭದಲ್ಲಿ ಹೈದರಾಬಾದ್ ಕರ್ನಾಟಕದಲ್ಲಿ ಇಂತಹ ಪ್ರಯತ್ನವೊಂದು ನಡೆಯಿತು. ಸ್ವಾತಂತ್ರ್ಯ ಹೋರಾಟ ಮತ್ತು ಕರ್ನಾಟಕ ಏಕೀಕರಣದಲ್ಲಿ ದುಡಿದಿದ್ದ ಮತ್ತು ಮಹಾತ್ಮ ಗಾಂಧೀಜಿ ಅವರ ನಿಕಟವರ್ತಿಯೂ ಆಗಿದ್ದ ಶಿವಮೂರ್ತಿ ಸ್ವಾಮಿ ಅಳವಂಡಿ ಅವರು ಇಂತಹ ಪ್ರಯತ್ನಕ್ಕೆ ಮುಂದಾಗಿದ್ದರು. ಸ್ವಾತಂತ್ರ್ಯ ದೊರಕಿದ ತಕ್ಷಣ ಕಾಂಗ್ರೆಸ್ ಪಕ್ಷವನ್ನು ವಿಸರ್ಜಿಸಬೇಕು ಎಂಬ ಗಾಂಧೀಜಿ ಕರೆಗೆ ಸ್ಪಂದಿಸಿದ ಶಿವಮೂರ್ತಿ ಸ್ವಾಮಿ ಅವರು 1962ರಲ್ಲಿ 'ಲೋಕ ಸೇವಕ ಸಂಘ' ಎಂಬ ರಾಜಕೀಯ ಪಕ್ಷವನ್ನು ಹುಟ್ಟು ಹಾಕಿದ್ದರು. ಈ ಪಕ್ಷದಿಂದಲೇ ಶಿವಮೂರ್ತಿ ಸ್ವಾಮಿ ಅವರು ಕೊಪ್ಪಳದ ಲೋಕಸಭಾ ಸದಸ್ಯರೂ ಆಗಿದ್ದರು. ಮೈಸೂರು ವಿಧಾನಸಭೆಗೆ ಈ ಪಕ್ಷದಿಂದ ಐವರು ಸದಸ್ಯರು ಆಯ್ಕೆಯಾಗಿದ್ದರು. ಆದರೆ ನಂತರದ ದಿನಗಳಲ್ಲಿ ಪಕ್ಷ ಅಸ್ತಿತ್ವದಲ್ಲಿ ಉಳಿಯಲಿಲ್ಲ. ಆ ಪಕ್ಷದಿಂದ ಗೆದ್ದವರು ಕಾಂಗ್ರೆಸ್‌ನಲ್ಲಿ ಬೆರೆತು ಹೋದರು.

ಅರವತ್ತರ ದಶಕದಲ್ಲಿಯೇ ದಕ್ಷಿಣ ಕರ್ನಾಟಕದಲ್ಲಿಯೂ ಇಂತಹ ಪ್ರಯತ್ನವೊಂದು ನಡೆದಿತ್ತು. ಸ್ವಾತಂತ್ರ್ಯಾ ನಂತರದ ಕಾಂಗ್ರೆಸ್ ನಾಯಕರಲ್ಲಿ ಪ್ರಮುಖರಾಗಿದ್ದ ಸಾಹುಕಾರ್ ಚೆನ್ನಯ್ಯ ಆಗಿನ ಮುಖ್ಯಮಂತ್ರಿ ನಿಜಲಿಂಗಪ್ಪ ವಿರುದ್ಧ ಸಡ್ಡು ಹೊಡೆದು, 1967ರಲ್ಲಿ 'ಜನತಾ ಪಕ್ಷ' ಎಂಬ ಪ್ರಾದೇಶಿಕ ಪಕ್ಷ ಸ್ಥಾಪಿಸಿದ್ದರು. ಆ ಪಕ್ಷದಿಂದ ಆಯ್ಕೆಯಾದ 30ಕ್ಕೂ ಹೆಚ್ಚು ಶಾಸಕರು ವಿಧಾನಸಭೆ ಪ್ರವೇಶಿಸಿದ್ದರು. ಆದರೆ, 1969ರಲ್ಲಿ ಕಾಂಗ್ರೆಸ್ ವಿಭಜನೆಯಾದಾಗ ಜನತಾ ಪಕ್ಷದ ಎಲ್ಲ ಶಾಸಕರೂ ಇಂದಿರಾಗಾಂಧಿ ನೇತೃತ್ವದ ಕಾಂಗ್ರೆಸ್ ಪಕ್ಷ ಸೇರುವುದರೊಂದಿಗೆ ಜನತಾ ಪಕ್ಷವೂ ನಾಮಾವಶೇಷವಾಯಿತು.

ಹಿಂದುಳಿದ ವರ್ಗಗಳ ಅಭಿವೃದ್ಧಿಯ ಹರಿಕಾರ ಎಂದೇ ಕರೆಸಿಕೊಳ್ಳುವ ಕರ್ನಾಟಕದ ರಾಜಕೀಯ ಇತಿಹಾಸಕ್ಕೆ ಹೊಸ ಭಾಷ್ಯ ಬರೆದ ದೇವರಾಜ ಅರಸು ಅವರೂ ಪ್ರಾದೇಶಿಕ ಪಕ್ಷ ಸ್ಥಾಪನೆ ಮಾಡಿದ್ದರು. ಮೊದಲು ಅವರು ಸ್ಥಾಪಿಸಿದ್ದು ಕಾಂಗ್ರೆಸ್ (ಯು) ಎಂಬ ಪಕ್ಷ. ನಂತರ ಅವರು 'ಕ್ರಾಂತಿರಂಗ' ಸ್ಥಾಪಿಸಿದರು. ಕ್ರಾಂತಿರಂಗಕ್ಕೆ ಸೈದ್ಧಾಂತಿಕ ಸ್ಪಷ್ಟತೆ ಇತ್ತು. ಸಾಮಾಜಿಕ ನ್ಯಾಯದ ಪರಿಕಲ್ಪನೆ ಇತ್ತು. ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು, ರೈತರು, ಕಾರ್ಮಿಕರ ಕಲ್ಯಾಣದ ಗುರಿ ಇತ್ತು. ಆದರೆ, ಈ ಪಕ್ಷ ಜನರ ಹೃದಯದಲ್ಲಿ ಬೇರು ಬಿಡುವುದಕ್ಕೆ ಮೊದಲೇ ದೇವರಾಜ ಅರಸು ನಿಧನರಾದರು.

ದೇವರಾಜ ಅರಸರ ನಿಧನದ ನಂತರ ಎಸ್. ಬಂಗಾರಪ್ಪ ಅವರು ಕ್ರಾಂತಿರಂಗವನ್ನು ಮುನ್ನಡೆಸಿದರು. 1983ರ ಚುನಾವಣೆಯಲ್ಲಿ ಕ್ರಾಂತಿರಂಗ 34 ಸ್ಥಾನ ಗಳಿಸಿತು. ಒಂದು ಪ್ರಾದೇಶಿಕ ಪಕ್ಷವಾಗಿ ಬೆಳೆಯುವ ಎಲ್ಲ ಲಕ್ಷಣಗಳೂ ಇದ್ದ ಕ್ರಾಂತಿರಂಗ ಕೂಡಾ ನಂತರದ ದಿನಗಳಲ್ಲಿ ಹೋಳಾಯಿತು. ಹಾಳಾಯಿತು. ಕ್ರಾಂತಿರಂಗದ ನೇತೃತ್ವ ವಹಿಸಿದ್ದ ಬಂಗಾರಪ್ಪ ಅವರೂ ಮುಂದಿನ ದಿನಗಳಲ್ಲಿ ಕರ್ನಾಟಕ ಕ್ರಾಂತಿಕಾರಿ ಪಕ್ಷ, ಕರ್ನಾಟಕ ವಿಕಾಸ ಪಕ್ಷ, ಕರ್ನಾಟಕ ಕಾಂಗ್ರೆಸ್ ಪಕ್ಷ ಎಂಬ ಪ್ರಾದೇಶಿಕ ಪಕ್ಷಗಳನ್ನು ಸ್ಥಾಪಿಸಿದ್ದರೂ ಯಾವುದೂ ಯಶಸ್ವಿಯಾಗಲಿಲ್ಲ.

ಕೆಂಗಲ್ ಹನುಮಂತಯ್ಯ 'ಸ್ವರಾಜ್ ಪಕ್ಷ', ಎ.ಕೆ. ಸುಬ್ಬಯ್ಯ 'ಕನ್ನಡ ನಾಡು', ಪ್ರೊ. ಎಂ.ಡಿ. ನಂಜುಂಡಸ್ವಾಮಿ 'ಕನ್ನಡ ದೇಶ', ಪಿ. ಲಂಕೇಶ್ 'ಪ್ರಗತಿ ರಂಗ', ದೇವನೂರ ಮಹಾದೇವ 'ಸರ್ವೋದಯ ಕರ್ನಾಟಕ', ಶ್ರೀರಾಮುಲು 'ಬಿಎಸ್‌ಆರ್ ಕಾಂಗ್ರೆಸ್', ಬಿ.ಎಸ್. ಯಡಿಯೂರಪ್ಪ ಅವರ 'ಕರ್ನಾಟಕ ಜನತಾ ಪಕ್ಷ' ಎಲ್ಲವೂ ಮತದಾರರ ಮನದಾಳದಲ್ಲಿ ಇಳಿಯಲು ವಿಫಲವಾದವು.

ಕರ್ನಾಟಕದ ನಿಜವಾದ ಪ್ರಾದೇಶಿಕ ಪಕ್ಷ ಎಂದು ದೇವೇಗೌಡರು ಹೇಳಿಕೊಳ್ಳುವ ಜಾತ್ಯತೀತ ಜನತಾ ದಳ ಈಗಲೂ ಜೀವಂತವಾಗಿದೆ. ದೇವೇಗೌಡ ಮತ್ತು ಕುಮಾರಸ್ವಾಮಿ ಅವರನ್ನು ಬಿಟ್ಟರೆ ರಾಜ್ಯವ್ಯಾಪಿ ಗುರುತಿಸುವ ನಾಯಕರು ಇಲ್ಲ. ಸಿದ್ಧಾಂತದ ಸ್ಪಷ್ಟತೆಯ ಕೊರತೆ, ಅಗತ್ಯಕ್ಕೆ ತಕ್ಕಂತೆ ದಿಢೀರ್ ತೆಗೆದುಕೊಳ್ಳುವ ರಾಜಕೀಯ ತೀರ್ಮಾನಗಳು, ವಿಪರೀತ ಜಾತಿ ಪ್ರೇಮ ಎಲ್ಲವೂ ಆ ಪಕ್ಷಕ್ಕೆ ಹೊರೆಯಾಗಿವೆ. ಇವೆಲ್ಲವನ್ನೂ ಕಳಚಿಕೊಂಡು ನಿರ್ದಿಷ್ಟ ಸೈದ್ಧಾಂತಿಕ ಸ್ಪಷ್ಟತೆ ಕಂಡುಕೊಂಡು ಎಲ್ಲರನ್ನೂ ಒಂದುಗೂಡಿಸಿಕೊಂಡು ಹೋಗುವ ಮನಸ್ಸು ಮಾಡಿದರೆ ಜೆಡಿಎಸ್‌ಗೆ ಜನರೂ 'ಎಸ್' ಎಂದಾರು. ಇಲ್ಲವಾದರೆ 'ನೋ, ಥ್ಯಾಂಕ್ಸ್' ಎನ್ನಬಹುದು.



ಎಐ ಚಿತ್ರ

## ವಾಚಕರ ವಾಣಿ

### ಅನುದಾನಕ್ಕಾಗಿ ಕಾದು ಕುಳಿತ ರಸ್ತೆಗಳು

**ಇತ್ತೀಚೆಗೆ** ಕೇರಳ ಮತ್ತು ತಮಿಳುನಾಡು ಪ್ರವಾಸಕ್ಕೆ ತೆರಳಿದ್ದೆ. ಪ್ರವಾಸ ಮುಗಿಸಿ ಚಾಮರಾಜನಗರದ ಗರಿಕೆಕಂಡಿ ಮಾರ್ಗವಾಗಿ ರಾಜ್ಯವನ್ನು ಪ್ರವೇಶಿಸಿದೆ. ರಾಜ್ಯದ ರಸ್ತೆಗಳು ಯಮರೂಪಿಯಂತೆ ಬಾಯಿತೆರೆದು ಕುಳಿತಿರುವುದು ಗಾಬರಿ ಹುಟ್ಟಿಸಿತು. ನೆರೆಯ ರಾಜ್ಯಗಳಲ್ಲಿ ಅಲ್ಲಿನ ಸರ್ಕಾರಗಳು ಸುಸಜ್ಜಿತ ರಸ್ತೆಗಳ ನಿರ್ಮಾಣದಲ್ಲಿ ಪೈಪೋಟಿಗೆ ಬಿದ್ದಂತೆ ಕೆಲಸ ಮಾಡುತ್ತಿವೆ. ಕರ್ನಾಟಕ ಸರ್ಕಾರದ ಧೋರಣೆಯು ಇದಕ್ಕೆ ತದ್ವಿರುದ್ಧ. ರಸ್ತೆಗಳ ದಯನೀಯ ಸ್ಥಿತಿ ಸರ್ಕಾರದ ಕಣ್ಣಿಗೆ ಕಾಣುತ್ತಿಲ್ಲ. ಸಮರ್ಪಕ ರಸ್ತೆ ವ್ಯವಸ್ಥೆ ಇದ್ದಾಗಷ್ಟೆ ವಾಣಿಜ್ಯ ಚಟುವಟಿಕೆಗಳು ಗರಿಗೆದರುತ್ತವೆ. ಹಾಗಾಗಿ, ಸರ್ಕಾರವು 'ರಸ್ತೆ ಗ್ಯಾರಂಟಿ'ಯನ್ನೂ ಘೋಷಿಸಬೇಕಿದೆ.

**ಅಭಿಷೇಕ್,** ಹನೂರು

### ಗೌರವ ಡಾಕ್ಟರೇಟ್‌ಗೆ ನಿಯಂತ್ರಣ ಬೇಕು

**ಗೌರವ** ಡಾಕ್ಟರೇಟ್ ಪದವಿಗೆ ಸಂಬಂಧಿಸಿದಂತೆ ನಿಯಮಾವಳಿ ರೂಪಿಸಬೇಕೆಂಬ ಕೂಗು ವಿಧಾನ ಪರಿಷತ್‌ನಲ್ಲಿ ಕೇಳಿಬಂದಿದೆ. ಗಂಭೀರವಾಗಿ ಚರ್ಚೆಗೆ ಒಳಪಡಬೇಕಾದ ವಿಷಯವೂ ಇದಾಗಿದೆ. ವಿಶ್ವವಿದ್ಯಾಲಯಗಳು ತಮಗೆ ಬೇಕಾದವರಿಗೆ ಗೌರವ ಡಾಕ್ಟರೇಟ್ ನೀಡುತ್ತಿರುವುದು ಸಂತೆಯಲ್ಲಿ ಸೊಪ್ಪು ಮಾರಿದಷ್ಟೇ ಈಗ ಸುಲಭವಾಗಿದೆ. ಜೊತೆಗೆ, ಇಂದಿನ ಡಿಜಿಟಲ್ ಯುಗದಲ್ಲಿ ಯುಜಿಸಿ ನಿಯಮಾವಳಿಗೆ ಒಳಪಡುವ ವಿಶ್ವವಿದ್ಯಾಲಯಗಳಷ್ಟೇ ಅಲ್ಲದೇ ಕೆಲವು ಸಂಘ–ಸಂಸ್ಥೆಗಳು, ನಕಲಿ ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್‌ಗೆ ಅರ್ಜಿ ಆಹ್ವಾನಿಸುತ್ತವೆ. ಯಾವುದೇ, ವಿಶೇಷ ಸಾಧನೆ ಮಾಡದೆ ಕೇವಲ ಅರ್ಜಿ ಸಲ್ಲಿಸಿ ನಿಗದಿತ ಶುಲ್ಕ ಪಾವತಿ ಮಾಡಿದವರಿಗೆಲ್ಲಾ ಈ ನಕಲಿ ಸಂಸ್ಥೆಗಳು ಗೌರವ ಡಾಕ್ಟರೇಟ್ ನೀಡುತ್ತಿರುವುದು ಅಕ್ಷಮ್ಯ. ಯುಜಿಸಿ ಈ ಬಗ್ಗೆ ಎಚ್ಚೆತ್ತುಕೊಳ್ಳಬೇಕಿದೆ.

**ದಿವಾಕರ್ ಡಿ.,** ಮದ್ದೂರು

### ಹಳ್ಳಿಗಳಿಗೆ ಬಲ ತುಂಬುವ ಕೆಲಸವಾಗಲಿ

**ಪ್ರತಿಯೊಂದು** ಗ್ರಾಮವೂ ಸ್ವತಂತ್ರವಾದ ಒಂದು ಗಣರಾಜ್ಯದಂತೆ ಇರಬೇಕು; ಪ್ರತಿ ಹಳ್ಳಿಯೂ ಜೀವನಕ್ಕೆ ಅಗತ್ಯವಿರುವ ವಸ್ತುಗಳನ್ನು ಉತ್ಪಾದಿಸಿಕೊಂಡು ಸ್ವಾವಲಂಬಿಯಾಗಬೇಕು ಎನ್ನುವುದು ಮಹಾತ್ಮ ಗಾಂಧೀಜಿ ಅವರ ಕನಸಾಗಿತ್ತು. ಆ ಧ್ಯೇಯದಂತೆ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಮಹಾತ್ಮ ಗಾಂಧೀಜಿಯ ಹೆಸರಿಡುವ ಸರ್ಕಾರದ ಚಿಂತನೆ ಸ್ವಾಗತಾರ್ಹ. ಗ್ರಾಮಕ್ಕೆ ಸಂಬಂಧಿಸಿದಂತೆ ಇದೊಂದು ಭಿನ್ನ ಕಲ್ಪನೆ. ಆದರೆ, ಕೇವಲ ಹೆಸರಿಟ್ಟರೆ ಸಾಲದು. ಗ್ರಾಮಗಳು ರಾಷ್ಟ್ರಪಿತ ಕನಸು ಕಂಡಂತೆ ಅಭಿವೃದ್ಧಿ ಕಾಣಬೇಕು. ಗಾಂಧಿ ನಾಮಕರಣದ ಯೋಚನೆ ರಾಜಕೀಯಪ್ರೇರಿತವಾಗಿ ಸ್ವಹಿತಾಸಕ್ತಿಯಿಂದ ಗ್ರಾಮಗಳ ಬಲಿಗೆ ಹೇತುವಾಗದಿರಲಿ.

**ಆಮಿರ್ ಅಶ್‌ಅರೀ,** ಬನ್ನೂರು

### ಪುಸ್ತಕಗಳ ಸಖ್ಯ; ಎಳೆಯರಿಗೆ ಅತಿಮುಖ್ಯ

'ರೀಲ್ಸ್ ಕಾಲದಲ್ಲಿ ಮಕ್ಕಳ ಪುಸ್ತಕ' ಲೇಖನವು (ಲೇ: ಯೋಗೇಂದ್ರ ಯಾದವ್, ಪ್ರ.ವಾ., ಜ. 28) ಸಮಯೋಚಿತವಾಗಿದೆ ಮತ್ತು ಓದುಗರಲ್ಲಿ ಜಾಗೃತಿ ಪ್ರಜ್ಞೆ ಮೂಡಿಸುತ್ತದೆ. ಮಕ್ಕಳಲ್ಲಿ ಓದುವ ಅಭಿರುಚಿ ಬೆಳೆಸಲು ಉತ್ತಮ ಸಲಹೆ ನೀಡಲಾಗಿದೆ. ಹೊಸ ತಲೆಮಾರಿನ ಮಕ್ಕಳಲ್ಲಿ ಮೊಬೈಲ್ ಫೋನ್ ಮತ್ತು ರೀಲ್ಸ್ ವ್ಯಸನಗಳು ಅನಿಯಂತ್ರಿತವಾಗಿ ಸ್ಥಾನ ಪಡೆದಿವೆ. ಹಾಗಾಗಿ, ಅವರಲ್ಲಿ ಓದಿನ ಅಭಿರುಚಿ ಬೆಳೆಸಲು ಪೋಷಕರು ಆದ್ಯತೆ ನೀಡುವ ತುರ್ತಿದೆ. ಮಕ್ಕಳಿಗೆ ಬಾಲ್ಯದಿಂದಲೇ ಓದಿನ ತುಡಿತ ಬೆಳೆಸಬೇಕು. ಅವರ ವಯೋಮಾನಕ್ಕೆ ಅನುಗುಣವಾಗಿ ಪುಸ್ತಕಗಳನ್ನು ಓದಿಸಬೇಕು. ನಿಯಮಿತವಾಗಿ ಗ್ರಂಥಾಲಯಗಳಿಗೆ ಕರೆದೊಯ್ಯಬೇಕು. ಇದು ಅವರು ಸೃಜನಾತ್ಮಕವಾಗಿ ಬೆಳೆಯಲು ಸಹಕಾರಿಯಾಗಲಿದೆ.

**ಗಜೇಂದ್ರ ಪ್ರಸಾದ್ ಜಿ.,** ಬೆಂಗಳೂರು

### ಸರ್ವಜ್ಞ: ಊರಿನ ಗೊಂದಲ ಬಗೆಹರಿಯಲಿ

**ರಾಜಕೀಯ** ಪಕ್ಷಗಳ ತಾಕಲಾಟದಿಂದಾಗಿ ಮಹಾಕವಿ ಸರ್ವಜ್ಞನ ಜನ್ಮಸ್ಥಳದ ವಿವಾದ ಕಗ್ಗಂಟಾಗಿದೆ. ಈ ಹಿಂದೆ ಹಾವೇರಿ ಜಿಲ್ಲೆಯ ಮಾಸೂರು ಮತ್ತು ಅಬಲೂರು ಗ್ರಾಮಗಳ ನಡುವೆ ಸರ್ವಜ್ಞ ಕವಿಯ ಜನ್ಮಸ್ಥಳ ಕುರಿತಂತೆ ವಿವಾದ ಉಂಟಾಯಿತು. ಅದು ರಾಜಕೀಯ ತಿರುವು ಪಡೆದು ಕವಿಯ ಜನ್ಮಜಾತಕವನ್ನೇ ಜಾಲಾಡಿದ ಪ್ರಸಂಗವೂ ನಡೆಯಿತು. ಸರ್ವಜ್ಞನ ಸಮಾಧಿ ಕುಮದ್ವತಿ ನದಿ ತೀರದ ಮಾಸೂರಿನಲ್ಲಿದೆ. ಅಲ್ಲಿನ ಗ್ರಾಮ ಪಂಚಾಯಿತಿ ಆಡಳಿತವು ಈ ಬಗ್ಗೆ ಹೋರಾಟ ನಡೆಸಿದರೂ, ರಾಜಕೀಯ ಪಕ್ಷಗಳು ಗೊಂದಲ ಉಂಟು ಮಾಡಿವೆ. ಮಾಸೂರೇ ಜನ್ಮಸ್ಥಳವೆಂದು ಆತನ ತ್ರಿಪದಿಗಳ ಮೂಲಕ ಸಾಬೀತುಪಡಿಸಲು ಮುಂದಾದರೂ ಯಾವುದೇ ಪ್ರಯೋಜನವಾಗಿಲ್ಲ. ರಾಜ್ಯ ಸರ್ಕಾರ ರಚಿಸಿದ ಸರ್ವಜ್ಞ ಪ್ರಾಧಿಕಾರ ಸ್ಮಾರಕದಂತೆ ಉಳಿದಿದೆ. ಈ ವಿಷಯದ ಬಗ್ಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಥವಾ ಸಾಹಿತ್ಯ ಪರಿಷತ್ತಾದರೂ ಗಮನಹರಿಸಿ, ಸರ್ವಜ್ಞ ಕವಿಯ ಜನ್ಮಸ್ಥಳದ ಗೊಂದಲ ಬಗೆಹರಿಸಲಿ.

**ಕೃಷ್ಣಮೂರ್ತಿ ಕುಲಕರ್ಣಿ,** ಹುಬ್ಬಳ್ಳಿ

### ಪುಸ್ತಕ ಖರೀದಿ ಆದಷ್ಟು ಬೇಗ ಆಗಲಿ

**ಪ್ರಜ್ಞಾವಂತರು,** ಶಿಕ್ಷಣ ಪಡೆದವರು, ಸಾಹಿತಿಗಳು ಓದು, ಪುಸ್ತಕ ಮತ್ತು ಗ್ರಂಥಾಲಯ ಕುರಿತು ಮಾತನಾಡುತ್ತಾರೆ. ಆದರೆ, ಲೇಖಕರು ಬರೆದ ಕೃತಿಗಳ ಸಗಟು ಖರೀದಿಗೆ ಸರ್ಕಾರ ಮುಂದಾಗುತ್ತಿಲ್ಲ. ಪರಿಸ್ಥಿತಿ ಹೀಗಿರುವಾಗ ರಾಜ್ಯದಲ್ಲಿ ಓದುವ ಸಂಸ್ಕೃತಿ ಬೆಳೆಯುವುದಾದರೂ ಹೇಗೆ? ಈ ಹಿಂದೆ ಸದನದ ವಾಕ್ಪಟುಗಳೆಲ್ಲ ಓದುವ ಅಭಿರುಚಿ ಹೊಂದಿದ್ದರು. ಹಾಗಾಗಿ, ಅಧಿವೇಶನದಲ್ಲಿ ಗಂಭೀರ ಚರ್ಚೆ ನಡೆಯುತ್ತಿತ್ತು. ನಾಡಿನ ಸಾಹಿತಿಗಳ ಉಕ್ತಿಗಳ ಉಲ್ಲೇಖವೂ ಇರುತ್ತಿತ್ತು. ಈಗಿನ ಜನಪ್ರತಿನಿಧಿಗಳು ಪರಸ್ಪರ ನಿಂದನೆಯಲ್ಲಿಯೇ ಮುಳುಗಿದ್ದಾರೆ. ಅವರಿಗೆ ಓದುವ ಅಭಿರುಚಿ ಇಲ್ಲ. ಹಾಗಾಗಿ, ಗ್ರಂಥಾಲಯಗಳಿಗೆ ಪುಸ್ತಕ ಖರೀದಿಯಲ್ಲಿ ಆಗಿರುವ ವಿಳಂಬ ಕುರಿತು ಚರ್ಚೆಯನ್ನೂ ಮಾಡುತ್ತಿಲ್ಲ.

**ರಾಜು ಎಸ್. ಕೊಪ್ಪಾ,** ಬಂಥನಾಳ

## ಚುರುಮುರಿ



### ಪೊಲಿಟಿಷಿಯನ್ ಪೆಂಗ್ವಿನ್!

• ಗುರು ಪಿ.ಎಸ್.

'ಜೇನಿನ ಗೂಡು ನಾವೆಲ್ಲ, ಬೇರೆಯಾದರೆ ಜೇನಿಲ್ಲ...' ರಾಗವಾಗಿ ಹಾಡುತ್ತಾ ಹೊರಟಿತ್ತು ಪೆಂಗ್ವಿನ್‌ಗಳ ಹಿಂಡು. ಎಲ್ಲವೂ ದಕ್ಷಿಣದ ಪೆಂಗ್ವಿನ್‌ಗಳು. ರಾಜಕಾರಣವೇ ವಂಶವೃತ್ತಿ.

'ಏನೇ ಹೇಳಿ, ನಮ್ಮ ಒಗ್ಗಟ್ಟು ಮುರಿಯೋಕೆ ಯಾರಿಂದಲೂ ಸಾಧ್ಯ ಇಲ್ಲ. ನಾವೆಲ್ಲರೂ ಬೇರೆ ಬೇರೆ ಪಾರ್ಟಿಯಲ್ಲಿದ್ದರೂ ನಮ್ ನಮ್ ಫ್ಯಾಮಿಲಿಯವರೆಲ್ಲ ಗೆದ್ದೇ ಗೆಲ್ತೀವಿ. ಒಗ್ಗಟ್ಟು ಅಂದ್ರೆ ನಾವು, ನಾವು ಅಂದ್ರೆ ಒಗ್ಗಟ್ಟು' ವಯಸ್ಸಾಗಿರುವ ಪೆಂಗ್ವಿನ್ ಒಂದು ಆಲ್ ಪಾರ್ಟಿ ಮೀಟಿಂಗ್‌ನಲ್ಲಿ ಹೆಮ್ಮೆಯಿಂದ ಹೇಳಿತು.

'ಗೆಲ್ಲೋದಷ್ಟೇ ಮುಖ್ಯ ಅಲ್ಲ. ಅಧಿಕಾರದಲ್ಲಿರೋದು ಮುಖ್ಯ. ಅಧಿಕಾರದಲ್ಲಿರೋದರ ಜೊತೆಗೆ ಯಾವ ಹುದ್ದೆಯಲ್ಲಿದೀವಿ, ಯಾವ ಹುದ್ದೆಯಲ್ಲಿರಬೇಕು ಅನ್ನೋದೂ ಮುಖ್ಯ' ಸ್ಯಾಡ್ ಧ್ವನಿಯಲ್ಲಿ ಹೇಳಿತು 'ಬಂಡೆ' ಪೆಂಗ್ವಿನ್.

'ಕರೆಕ್ಟ್, ಕರೆಕ್ಟ್' ಮೋಟಿವೇಷನಲ್ ಸ್ಪೀಚ್ ಕೇಳಿ ಚಪ್ಪಾಳೆ ತಟ್ಟಿತು ವರುಣಾದ ಹಿರಿ ಪೆಂಗ್ವಿನ್‌ನ ಮರಿ ಪೆಂಗ್ವಿನ್.

ಎಲ್ಲವೂ ಚೆನ್ನಾಗಿ ನಡೆಯುತ್ತಿದೆ ಎನ್ನುವಾಗಲೇ, ಕನಕಪುರದ ಬಂಡೆ ಪೆಂಗ್ವಿನ್, ಏಕಾಂಗಿಯಾಗಿ ಉತ್ತರದತ್ತ ಹೆಜ್ಜೆ ಹಾಕತೊಡಗಿತು. ಮೀಡಿಯಾದಲ್ಲಿ, ಸೋಷಿಯಲ್ ಮೀಡಿಯಾದಲ್ಲಿ ಚರ್ಚೆ ಶುರುವಾಯಿತು.

'ಹಿಂಡನ್ನು ಬಿಟ್ಟು, ಅದೊಂದೇ ಪೆಂಗ್ವಿನ್ ದೂರ ಹೋಗುತ್ತಿರುವುದೇಕೆ?' ಫೇಸ್‌ಬುಕ್‌ನಲ್ಲಿ ಪ್ರಶ್ನೆಗಳ ಸುರಿಮಳೆ.

'ಇರುವುದೆಲ್ಲವ ಬಿಟ್ಟು, ಇರದುದರೆಡೆಗೆ ತುಡಿವುದೇ ಜೀವನ...' ಇನ್‌ಸ್ಟಾದಲ್ಲಿ ಇನ್‌ಸ್ಟಂಟ್ ಸಾಂಗ್ ಪ್ಲೇಯಾಗತೊಡಗಿತು.

'ಉತ್ತರಕ್ಕಾಗಿ ಉತ್ತರದತ್ತ ಹೋಗುತ್ತಿರಬಹುದು' 'ಎಕ್ಸ್'ನಲ್ಲಿ ಅಂತೆ–ಕಂತೆಗಳ ಕಥೆ ಪ್ರಾರಂಭವಾಯಿತು.

'ಕೊಟ್ಟ ಮಾತನು ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು...' ಕನಕಪುರದ ಬಂಡೆ ಪೆಂಗ್ವಿನ್ ಪರ ಯೂಟ್ಯೂಬ್‌ನಲ್ಲಿ ಎಮೋಷನಲ್ ಸಾಂಗ್ ಕೇಳಿಬರತೊಡಗಿತು.

'ನೋಡಿ, ಹೀಗೆ ಉತ್ತರಕ್ಕಾಗಿ ಪದೇ ಪದೇ ಉತ್ತರದತ್ತ ಬಂದರೆ, ಉತ್ತರವಲ್ಲ, ಪ್ರಶ್ನೆ ಕೇಳಲೂ ಅವಕಾಶವಿರದು' ಕಡ್ಡಿಮುರಿದಂತೆ ಹೇಳಿತು ಹೈಕಮಾಂಡ್ ಪೆಂಗ್ವಿನ್.

'ಇಲ್ಲ, ಇಲ್ಲ, ಬೇಕು ಅಂತ ಬಂದದ್ದಲ್ಲ. ದಾರಿ ತಪ್ಪಿ ಬಂದದ್ದು, ಹೋಗಲು ಮನಸುಂಟು, ಹೋಗುತ್ತೇನೆ' ಎಂದು ದಕ್ಷಿಣದತ್ತ ಹೆಜ್ಜೆ ಹಾಕಿತು ಬಂಡೆ ಪೆಂಗ್ವಿನ್.

## ಸಂಗತ

# ಪದ್ಮ ಪ್ರಶಸ್ತಿ: ಆರ್ಥಿಕ ಭದ್ರತೆಯೂ ಬೇಕಲ್ಲವೆ?

ನಾಗರಿಕ ಪ್ರಶಸ್ತಿಗಳ ಮೌಲ್ಯಕ್ಕೆ ಹಣ ಮಾನದಂಡವಲ್ಲ. ಆದರೆ, ರಾಷ್ಟ್ರೀಯ ಮನ್ನಣೆ ನಂತರವೂ ಬದುಕು ಅಸುರಕ್ಷಿತ ಆಗಿರುವುದರಿಂದ ದೇಶದ ಘನತೆ ಹೆಚ್ಚುವುದಿಲ್ಲ.

• ಡಿ.ಸಿ. ನಂಜುಂಡ

**ಭಾರತ** ಸರ್ಕಾರ ನೀಡುವ ಪದ್ಮಶ್ರೀ, ಪದ್ಮಭೂಷಣ ಮತ್ತು ಪದ್ಮವಿಭೂಷಣ ಪ್ರಶಸ್ತಿಗಳು ದೇಶದ ಅತ್ಯುನ್ನತ ನಾಗರಿಕ ಗೌರವಗಳು. ರಾಷ್ಟ್ರಪತಿ ಭವನದ ವೈಭವ, ಮಾಧ್ಯಮಗಳ ಹೊಗಳಿಕೆ, ಸಾಮಾಜಿಕ ಜಾಲತಾಣಗಳ ಅಭಿನಂದನೆ, ಮುಂತಾದವು ಪದ್ಮ ಪ್ರಶಸ್ತಿ ಪುರಸ್ಕೃತರಿಗೆ ಕೆಲವು ಕ್ಷಣಗಳ ರಾಷ್ಟ್ರೀಯ ಸಂಭ್ರಮವನ್ನು ಸೃಷ್ಟಿಸುತ್ತದೆ. ಆ ಸಡಗರ ಮುಗಿದ ನಂತರ, ಪುರಸ್ಕಾರಕ್ಕೆ ಪಾತ್ರರಾದ ಕೆಲವರ ಬದುಕು ಹೇಗಿರುತ್ತದೆ?

ಪದ್ಮ ಪ್ರಶಸ್ತಿಗಳನ್ನು ಪಡೆದ ಹೆಚ್ಚಿನವರು ತಮ್ಮ ಜೀವನದ ಸಂಧ್ಯಾಕಾಲದಲ್ಲಿ ಆರ್ಥಿಕ ಅಸ್ಥಿರತೆ, ಅನಾರೋಗ್ಯ ಮತ್ತು ವ್ಯವಸ್ಥಾತ್ಮಕ ನಿರ್ಲಕ್ಷ್ಯವನ್ನು ಎದುರಿಸುತ್ತಿದ್ದಾರೆ. ಕೆಲವು ಪದ್ಮ ಪ್ರಶಸ್ತಿ ಪುರಸ್ಕೃತರು ಖ್ಯಾತ ವೈದ್ಯರು, ವಿಜ್ಞಾನಿಗಳು, ಉದ್ಯಮಿಗಳು ಅಥವಾ ಕಲಾವಿದರು ಆಗಿರುವುದರಿಂದ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುತ್ತಾರೆ. ಆದರೆ ಸಮಾಜ ಸೇವೆ, ಜಾನಪದ, ಸಾಹಿತ್ಯ, ಮುಂತಾದ ಕ್ಷೇತ್ರಗಳಲ್ಲಿನ ಹಲವು ಸಾಧಕರು ಸೀಮಿತ ಆದಾಯದೊಂದಿಗೆ ಜೀವನ ನಡೆಸುತ್ತಿರುವ ಉದಾಹರಣೆಗಳಿವೆ.

ಪದ್ಮ ಪ್ರಶಸ್ತಿಗಳೊಂದಿಗೆ ಯಾವುದೇ ನಗದು ಬಹುಮಾನ ಅಥವಾ ಹಣಕಾಸು ಅನುದಾನ ನೀಡಲಾಗುವುದಿಲ್ಲ. ಈ ಪ್ರಶಸ್ತಿ ಒಂದು ಪದಕ (ಮೆಡಲ್) ಹಾಗೂ ಭಾರತದ ರಾಷ್ಟ್ರಪತಿ ಅವರ ಸಹಿ ಇರುವ ಪ್ರಮಾಣಪತ್ರ ಒಳಗೊಂಡಿರುತ್ತದೆ. ಪದ್ಮ ಪ್ರಶಸ್ತಿ ಪುರಸ್ಕೃತರಿಗೆ ಪಿಂಚಣಿ ಅಥವಾ ಗೌರವಧನ ನೀಡುವ ವ್ಯವಸ್ಥೆ ಕೇಂದ್ರ ಸರ್ಕಾರದ ಮಟ್ಟದಲ್ಲಿ ಇಲ್ಲ. ಈ ಕುರಿತ ನಿರ್ಧಾರವನ್ನು ರಾಜ್ಯ ಸರ್ಕಾರಗಳೇ ತೆಗೆದುಕೊಳ್ಳಬೇಕಾಗುತ್ತದೆ. ಕೆಲವು ರಾಜ್ಯ ಸರ್ಕಾರಗಳು ಪುರಸ್ಕೃತರಿಗೆ ಆರ್ಥಿಕ ಅನುಕೂಲ ಕಲ್ಪಿಸುವ ಕೆಲಸ ಮಾಡಿವೆ. ಒಡಿಶಾ ರಾಜ್ಯ ಸರ್ಕಾರವು ತನ್ನ ಪದ್ಮ ಪ್ರಶಸ್ತಿ ಪುರಸ್ಕೃತರಿಗೆ ಮಾಸಿಕ ₹30 ಸಾವಿರ ಗೌರವಧನ ನೀಡುತ್ತಿದೆ. ತೆಲಂಗಾಣ ಸರ್ಕಾರ ಪದ್ಮಭೂಷಣ ಮತ್ತು ಪದ್ಮವಿಭೂಷಣ ಪುರಸ್ಕೃತರಿಗೆ ಮಾಸಿಕ ₹25 ಸಾವಿರ ಪಿಂಚಣಿ ನೀಡುತ್ತಿದೆ. ಪದ್ಮಶ್ರೀ ಪ್ರಶಸ್ತಿ ವಿಜೇತರಿಗೆ ಒಮ್ಮೆ ಮಾತ್ರ ₹25 ಲಕ್ಷ ನಗದು ಬಹುಮಾನ ನೀಡಲಾಗುತ್ತದೆ. ಹರಿಯಾಣ ರಾಜ್ಯವು ಪದ್ಮ ಪುರಸ್ಕೃತರಿಗೆ ಮಾಸಿಕ ₹10 ಸಾವಿರ ಪಿಂಚಣಿ ನೀಡುತ್ತಿದೆ. ಉತ್ತರ ಪ್ರದೇಶದಲ್ಲಿ ₹50 ಸಾವಿರ ಪಿಂಚಣಿ ಇದೆ. ಉಳಿದ ರಾಜ್ಯಗಳಲ್ಲಿ ಇಂಥ ಅನುಕೂಲಗಳಿಲ್ಲ.



ತಮ್ಮ ಬದುಕನ್ನು ಸಂಪೂರ್ಣವಾಗಿ ಸಮಾಜ ಸೇವೆಗೆ ಅರ್ಪಿಸಿದವರು, ರಾಷ್ಟ್ರದ ಅತ್ಯುನ್ನತ ಗೌರವಕ್ಕೆ ಪಾತ್ರರಾದ ಮೇಲೂ ವೃದ್ಧಾಪ್ಯದಲ್ಲಿ ಮೂಲ ಸೌಲಭ್ಯಗಳಿಗಾಗಿ ಹೋರಾಡಬೇಕಾದ ಅಸಹಾಯಕ ಪರಿಸ್ಥಿತಿ ಇದೆ. ಒಡಿಶಾದ ಪದ್ಮಶ್ರೀ ಪುರಸ್ಕೃತ ನೃತ್ಯ ಕಲಾವಿದರೊಬ್ಬರು ಗಂಭೀರ ಅನಾರೋಗ್ಯಕ್ಕೆ ಒಳಗಾಗಿ ಚಿಕಿತ್ಸೆಗೆ ಹಣ ಹೊಂದಿಸಲಾಗದೆ ಒದ್ದಾಡಿದ್ದರು. ರಾಜಸ್ಥಾನದಲ್ಲಿ ಪದ್ಮಶ್ರೀ ಪ್ರಶಸ್ತಿ ಪಡೆದ ಜಾನಪದ ಗಾಯಕರೊಬ್ಬರು ತಮ್ಮ ಅಂತಿಮ ದಿನಗಳಲ್ಲಿ ಸೂಕ್ತ ಆರೋಗ್ಯ ಸೌಲಭ್ಯಗಳಿಲ್ಲದೆ ಸಂಕಷ್ಟ ಅನುಭವಿಸಿದ್ದರು. ಒಡಿಶಾದ ಕವಿಯೊಬ್ಬರು ಪದ್ಮಶ್ರೀ ಪ್ರಶಸ್ತಿ ಸ್ವೀಕರಿಸಲು ದೆಹಲಿಗೆ ಬರಲು ಹಣ ಇಲ್ಲದಿರುವುದರಿಂದ, ಅಂಚೆಯಲ್ಲಿ ಪ್ರಶಸ್ತಿ ಕಳುಹಿಸುವಂತೆ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದರು. ಹೀಗೆ ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ಪದ್ಮ ಪ್ರಶಸ್ತಿ ಪುರಸ್ಕೃತರು ಅನೇಕ ರಾಜ್ಯಗಳಲ್ಲಿದ್ದಾರೆ. 2018ರಲ್ಲಿ, ಪದ್ಮ ಪ್ರಶಸ್ತಿ ಪಡೆದ ಕೆಲವರು ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ತಮಗೆ ಪಿಂಚಣಿ ಯೋಜನೆ ಸ್ಥಾಪಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿದ್ದರು. ಕರ್ನಾಟಕದಲ್ಲೂ ಪದ್ಮ ಪ್ರಶಸ್ತಿ ಪುರಸ್ಕೃತ ಕಲಾವಿದರು ಹಾಗೂ ಸಮಾಜಸೇವಕರಲ್ಲಿ ಕೆಲವರು ಆರ್ಥಿಕವಾಗಿ ಸಂಕಷ್ಟದ ಸ್ಥಿತಿಯಲ್ಲಿಯೇ ಇದ್ದಾರೆ.

ಪದ್ಮ ಪ್ರಶಸ್ತಿ ಪುರಸ್ಕೃತರಿಗೆ ಆರ್ಥಿಕ ಭದ್ರತೆ ಒದಗಿಸುವ ಮೂಲಕ ಸರ್ಕಾರ ಸಾಧಕರಿಗೆ ಸಹಾಯ ಮಾಡುತ್ತಿದೆ ಎಂದು ಭಾವಿಸಬೇಕಾಗಿಲ್ಲ. ನಾಡಿನ ಘನತೆಯನ್ನು ಎತ್ತಿಹಿಡಿದ ಸಾಧಕರನ್ನು ಗೌರವಿಸಬೇಕಾದುದು ಹಾಗೂ ಅವರ ಹಿತಾಸಕ್ತಿ ರಕ್ಷಿಸಬೇಕಾದುದು ಸರ್ಕಾರದ ಹೊಣೆಗಾರಿಕೆ. ಅದು ರಾಷ್ಟ್ರದ ನೈತಿಕ ಹೊಣೆಗಾರಿಕೆಯೂ ಹೌದು.

ದೇಶ ನಿರ್ಮಾಣದಲ್ಲಿ ಮಹತ್ತರ ಪಾತ್ರ ವಹಿಸಿರುವ ಕಾರಣದಿಂದಾಗಿ ಸಾಧಕರಿಗೆ ಪದ್ಮ ಪುರಸ್ಕಾರ ನೀಡಲಾಗಿರುತ್ತದೆ. ಆ ಗೌರವ ಸಾಂಕೇತಿಕವಾಗಿಯಷ್ಟೇ ಉಳಿಯದೆ, ಅಗತ್ಯ ಇರುವವರಿಗೆ ಆರ್ಥಿಕ ಭದ್ರತೆಯಾಗಿ ಪರಿಣಮಿಸಬೇಕು. ಬರೀ ಗೌರವ ಹೊಟ್ಟೆ ತುಂಬಿಸುವುದಿಲ್ಲ ಎನ್ನುವುದು ಕಟು ವಾಸ್ತವ.

ಕೇಂದ್ರ ಸರ್ಕಾರವು ಪದ್ಮ ಪ್ರಶಸ್ತಿಗಳಿಗೆ ಭಾಜನರಾದ ಸಾಧಕರಿಗೆ ಕಲ್ಯಾಣನೀತಿಯೊಂದನ್ನು ರೂಪಿಸಬೇಕು. ಅವರಿಗಾಗಿ ಜೀವನಪೂರ್ತಿ ಪಿಂಚಣಿ, ಉಚಿತ ಆರೋಗ್ಯ ಯೋಜನೆ, ತುರ್ತು ನೆರವು ನಿಧಿ ಮತ್ತು ರಾಜ್ಯ ಸರ್ಕಾರಗಳಿಂದ ಹೆಚ್ಚುವರಿ ಬೆಂಬಲ ನೀಡುವಂತಹ ನೀತಿಗಳನ್ನು ರೂಪಿಸುವುದು ಇಂದಿನ ತುರ್ತು ಅಗತ್ಯ.


ಯಾವುದೇ ರಾಷ್ಟ್ರ ತನ್ನ ಮಹಾನ್ ವ್ಯಕ್ತಿಗಳನ್ನು ಅವರು ಜೀವಂತವಾಗಿರುವಾಗಲೇ ಕಾಳಜಿ ಮಾಡಬೇಕು; ಸಾವಿನ ನಂತರ ಶೋಕಾಚರಣೆ ಮಾಡುವುದರಿಂದ ಉಪಯೋಗ ಇಲ್ಲ. ಪದ್ಮ ಪ್ರಶಸ್ತಿ ಪುರಸ್ಕೃತರು ನಮ್ಮ ಸಮಾಜದ ಮೌನಶಿಲ್ಪಿಗಳು. ಅವರ ಬದುಕಿಗೆ ಆರ್ಥಿಕ ಭದ್ರತೆ ಕಲ್ಪಿಸುವುದು ಹಾಗೂ ಸಂಧ್ಯಾ ಕಾಲವನ್ನು ನೆಮ್ಮದಿಯಿಂದ ಕಳೆಯುವಂತೆ ನೋಡಿಕೊಳ್ಳುವುದು ಅವರ ಸೇವೆಗೆ ಸರ್ಕಾರ ಹಾಗೂ ಸಮಾಜ ನೀಡಬಹುದಾದ ಅರ್ಥಪೂರ್ಣ ಗೌರವ.

ನಾಗರಿಕ ಪ್ರಶಸ್ತಿಗಳ ಮೌಲ್ಯವನ್ನು ಹಣದಿಂದ ಅಳೆಯಬಾರದು ಎನ್ನುವುದು ನಿಜ. ಆದರೆ, ಅತ್ಯುನ್ನತ ನಾಗರಿಕ ಗೌರವಕ್ಕೆ ಪಾತ್ರರಾದ ನಂತರವೂ ಬದುಕು ಸಂಕಷ್ಟದಿಂದ ಕೂಡಿರಬಹುದು ಎನ್ನುವುದನ್ನು 'ನಾಗರಿಕ ಸಮಾಜ'ವೊಂದು ಒಪ್ಪುವುದು ಸಾಧ್ಯವಿಲ್ಲ. ಅಂತಹ ಪರಿಸ್ಥಿತಿ ದೇಶಕ್ಕೆ ಶೋಭೆ ತರುವಂತದ್ದಲ್ಲ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಅಜಿತ್ ಪವಾರ್ ಹಾಗೂ ಇತರ ನಾಲ್ವರು ಬಾರಾಮತಿಯಲ್ಲಿ ಸಂಭವಿಸಿದ ವಿಮಾನ ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಕಳೆದ ವರ್ಷದ ಜೂನ್‌ನಲ್ಲಿ ಅಹಮದಾಬಾದ್‌ನಲ್ಲಿ ಸಂಭವಿಸಿದ ಏರ್ ಇಂಡಿಯಾ ವಿಮಾನ ದುರಂತದಲ್ಲಿ ಗುಜರಾತ್‌ನ ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾಣಿ ಅವರು ಮೃತಪಟ್ಟಿದ್ದರು. ಬುಧವಾರದ ಅಪಘಾತವು ಆ ದುರ್ಘಟನೆಯನ್ನು ಮತ್ತೆ ನೆನಪಿಸಿದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ವಿಮಾನ ಅಥವಾ ಹೆಲಿಕಾಪ್ಟರ್ ಅಪಘಾತದಲ್ಲಿ ಹಲವರು ರಾಜಕೀಯ ನಾಯಕರು ಹಾಗೂ ಗಣ್ಯ ವ್ಯಕ್ತಿಗಳು ಮೃತಪಟ್ಟಿದ್ದಾರೆ. ಅವರಲ್ಲಿ ಪ್ರಮುಖರ ವಿವರಗಳನ್ನು ಇಲ್ಲಿ ನೀಡಲಾಗಿದೆ

# ಉಸಿರು ಕಸಿದ ವೈಮಾನಿಕ ದುರಂತ



## ಹೋಮಿ ಭಾಭಾ (1966)

ದೇಶದ ಖ್ಯಾತ ಪರಮಾಣು ವಿಜ್ಞಾನಿ ಹೋಮಿ ಜಹಾಂಗೀರ್ ಭಾಭಾ ಅವರು 1966ರ ಜನವರಿ 24ರಂದು ಏರ್ ಇಂಡಿಯಾ ವಿಮಾನ ದುರಂತದಲ್ಲಿ ಮೃತಪಟ್ಟಿದ್ದರು. ಜಿನೀವಾದಲ್ಲಿರುವ ವಾಯು ಸಂಚಾರ ನಿಯಂತ್ರಣ ಕೇಂದ್ರದೊಂದಿಗಿನ (ಎಟಿಸಿ) ಸಂವಹನದಲ್ಲಿ ಆದ ತಪ್ಪಿನಿಂದಾಗಿ ಯುರೋಪ್‌ನ ಆಲ್ಪ್ಸ್ ಪರ್ವತ ಶ್ರೇಣಿಯ ಮೌಂಟ್ ಬ್ಲಾಂಕ್ ಶಿಖರದಲ್ಲಿ ವಿಮಾನ ಅಪಘಾತಕ್ಕೀಡಾಗಿತ್ತು.

## ಗುರುನಾಮ್ ಸಿಂಗ್ ಮತ್ತು ಮೋಹನ್ ಕುಮಾರಮಂಗಲಂ (1973)

ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಗುರುನಾಮ್ ಸಿಂಗ್ ಮತ್ತು ಕೇಂದ್ರದ ಉಕ್ಕು ಮತ್ತು ಗಣಿ ಸಚಿವರಾಗಿದ್ದ ಮೋಹನ್ ಕುಮಾರಮಂಗಲಂ ಅವರು 1973ರ ಮೇ 31ರಂದು ದೆಹಲಿಯಲ್ಲಿ ಸಂಭವಿಸಿದ ಇಂಡಿಯನ್ ಏರ್‌ಲೈನ್ಸ್ ವಿಮಾನ ಅಪಘಾತದಲ್ಲಿ ಕೊನೆಯುಸಿರೆಳೆದಿದ್ದರು. ಬೋಯಿಂಗ್ 737 ವಿಮಾನವು ಚೆನ್ನೈನಿಂದ ದೆಹಲಿಗೆ ತೆರಳುತ್ತಿತ್ತು. ದೆಹಲಿಯ ಪಾಲಂ ವಿಮಾನ ನಿಲ್ದಾಣದಲ್ಲಿ ಇಳಿಯುವುದಕ್ಕೂ ಮೊದಲು ಪತನಗೊಂಡಿತ್ತು.



## ಸಂಜಯ್ ಗಾಂಧಿ (1980)

ಕಾಂಗ್ರೆಸ್‌ನ ಪ್ರಭಾವಿ ನಾಯಕರಾಗಿದ್ದ, ಆಗಿನ ಪ್ರಧಾನಿ ಇಂದಿರಾ ಗಾಂಧಿ ಅವರ ಮಗ ಸಂಜಯ್ ಗಾಂಧಿ ಅವರು 1980ರ ಜೂನ್ 23ರಂದು ವಿಮಾನ ಅಪಘಾತದಲ್ಲಿ ಮೃತಪಟ್ಟಿದ್ದರು. ದೆಹಲಿ ಫ್ಲೈಯಿಂಗ್ ಕ್ಲಬ್‌ನ ವಿಮಾನವನ್ನು ಸ್ವತಃ ಚಲಾಯಿಸುತ್ತಿದ್ದ ಅವರು ಸಫ್ದರ್‌ಜಂಗ್ ವಿಮಾನ ನಿಲ್ದಾಣದ ಬಳಿ ಸಾಹಸ ಪ್ರದರ್ಶನ ನೀಡುತ್ತಿದ್ದಾಗ ನಿಯಂತ್ರಣ ಕಳೆದುಕೊಂಡು ಪತನಗೊಂಡಿತ್ತು.



## ಡೆರಾ ನಾಟುಂಗ್ (2001)

ಕಾಂಗ್ರೆಸ್ ನಾಯಕ ಮತ್ತು ಅರುಣಾಚಲ ಪ್ರದೇಶದ ಶಿಕ್ಷಣ ಸಚಿವರಾಗಿದ್ದ ಡೆರಾ ನಾಟುಂಗ್ ಅವರು 2001ರ ಮೇ 8ರಂದು ಪವನ್ ಹನ್ಸ್ ಹೆಲಿಕಾಪ್ಟರ್‌ನಲ್ಲಿ ಇಟಾನಗರದಿಂದ ಪಶ್ಚಿಮ ಕಾಮೆಂಗ್‌ಗೆ ತೆರಳುತ್ತಿದ್ದಾಗ, ಪ್ರಕ್ಷುಬ್ಧ ವಾತಾವರಣದ ಕಾರಣದಿಂದ ಹೆಲಿಕಾಪ್ಟರ್ ಅಪಘಾತಕ್ಕೀಡಾಗಿ ಕೊನೆಯುಸಿರೆಳೆದಿದ್ದರು.



## ಮಾಧವರಾವ್ ಸಿಂಧಿಯಾ (2001)

2001ರ ಸೆಪ್ಟೆಂಬರ್ 30ರಂದು ಕಾನ್ಪುರದಲ್ಲಿ ಆಯೋಜಿಸಲಾಗಿದ್ದ ರಾಜಕೀಯ ರ‍್ಯಾಲಿಯಲ್ಲಿ ಭಾಗವಹಿಸುವುದಕ್ಕಾಗಿ ಕಾಂಗ್ರೆಸ್ ಹಿರಿಯ ಮುಖಂಡ ಮಾಧವರಾವ್ ಸಿಂಧಿಯಾ ಅವರು ಖಾಸಗಿ ವಿಮಾನದಲ್ಲಿ ಪ್ರಯಾಣ ಹೊರಟಿದ್ದರು. ಪ್ರತಿಕೂಲ ಹವಾಮಾನದ ಕಾರಣದಿಂದಾಗಿ ಅವರಿದ್ದ 10 ಆಸನ ಸಾಮರ್ಥ್ಯದ ವಿಮಾನ ಅಪಘಾತಕ್ಕೀಡಾಗಿತ್ತು



## ಬಾಲಯೋಗಿ (2002)

ತೆಲುಗುದೇಶಂ ಪಕ್ಷದ ನಾಯಕ ಮತ್ತು ಲೋಕಸಭಾ ಸ್ಪೀಕರ್ ಆಗಿದ್ದ ಜಿ.ಎಂ.ಸಿ. ಬಾಲಯೋಗಿ ಅವರು 2002 ಮಾರ್ಚ್ 3ರಂದು ಹೆಲಿಕಾಪ್ಟರ್ ಅಪಘಾತದಲ್ಲಿ ಅಸುನೀಗಿದ್ದರು. ಅವರು ಪ್ರಯಾಣಿಸುತ್ತಿದ್ದ ಖಾಸಗಿ ಹೆಲಿಕಾಪ್ಟರ್ ಆಂಧ್ರಪ್ರದೇಶದ ಕೃಷ್ಣಾ ಜಿಲ್ಲೆಯ ಕೈಕಲೂರು ಬಳಿಯ ಕೆರೆಯಲ್ಲಿ ಪತನಗೊಂಡಿತ್ತು.

## ಸಿಪ್ರಿಯನ್ ಸಂಗ್ಮಾ (2004)

ಮೇಘಾಲಯದ ಗ್ರಾಮೀಣಾಭಿವೃದ್ಧಿ ಸಚಿವ ಸಿಪ್ರಿಯನ್ ಸಂಗ್ಮಾ ಹಾಗೂ ಇತರ ಒಂಬತ್ತು ಮಂದಿ ಪವನ್ ಹನ್ಸ್ ಹೆಲಿಕಾಪ್ಟರ್‌ನಲ್ಲಿ 2004ರ ಸೆಪ್ಟೆಂಬರ್ 22ರಂದು ಗುವಾಹಟಿಯಿಂದ ಶಿಲ್ಲಾಂಗ್‌ಗೆ ಪ್ರಯಾಣಿಸುತ್ತಿದ್ದಾಗ ಬಾರಾಪಾನೀ ಸರೋವರದ ಬಳಿ ಹೆಲಿಕಾಪ್ಟರ್ ಪತನಗೊಂಡಿತ್ತು




## ಸೌಂದರ್ಯ (2004)

ಬಹುಭಾಷಾ ನಟಿ ಮತ್ತು ಬಿಜೆಪಿ ನಾಯಕಿ, ಸೌಂದರ್ಯ ಎಂದೇ ಖ್ಯಾತರಾಗಿದ್ದ ಕೆ.ಎಸ್. ಸೌಮ್ಯ ಅವರು 2004ರ ಏಪ್ರಿಲ್ 17ರಂದು ಸಂಭವಿಸಿದ್ದ ಹೆಲಿಕಾಪ್ಟರ್ ಅಪಘಾತದಲ್ಲಿ ಜೀವ ಕಳೆದುಕೊಂಡಿದ್ದರು. ತಮ್ಮ ಸಹೋದರನೊಂದಿಗೆ ಬೆಂಗಳೂರಿನಿಂದ ಕರೀಂನಗರಕ್ಕೆ ಅವರು ಹೊರಟಿದ್ದಾಗ, ಹೆಲಿಕಾಪ್ಟರ್ ಅಪಘಾತಕ್ಕೀಡಾಗಿತ್ತು.

## ಒ.ಪಿ.ಜಿಂದಾಲ್, ಸುರೇಂದರ್ ಸಿಂಗ್ (2005)

ಜಿಂದಾಲ್ ಸಮೂಹದ ಸಂಸ್ಥಾಪಕ ಮತ್ತು ಹರಿಯಾಣದ ಸಚಿವರಾಗಿದ್ದ ಒ.ಪಿ. ಜಿಂದಾಲ್ ಹಾಗೂ ಕೃಷಿ ಸಚಿವರಾಗಿದ್ದ ಸುರೇಂದರ್ ಸಿಂಗ್ ಅವರು 2005ರ ಮಾರ್ಚ್ 31ರಂದು ದೆಹಲಿಯಿಂದ ಚಂಡೀಗಢಕ್ಕೆ ಪ್ರಯಾಣಿಸುತ್ತಿದ್ದಾಗ, ಅವರಿದ್ದ ಹೆಲಿಕಾಪ್ಟರ್ ಉತ್ತರಪ್ರದೇಶದ ಸಹಾರನ್‌ಪುರದಲ್ಲಿ ಅಪಘಾತಕ್ಕೀಡಾಗಿ ಮೃತಪಟ್ಟಿದ್ದರು.




## ವೈಎಸ್‌ಆರ್ ರೆಡ್ಡಿ (2009)

2009ರ ಸೆ. 2ರಂದು ಕಾಂಗ್ರೆಸ್ ನಾಯಕ ಮತ್ತು ಆಂಧ್ರಪ್ರದೇಶದ ಸಿಎಂ ವೈ.ಎಸ್.ರಾಜಶೇಖರ ರೆಡ್ಡಿ ಅವರು ಪ್ರಯಾಣಿಸುತ್ತಿದ್ದ ಬೆಲ್ 430 ಹೆಲಿಕಾಪ್ಟರ್ ಪ್ರತಿಕೂಲ ಹವಾಮಾನದ ಕಾರಣದಿಂದ ನಲ್ಲಮಲ ಅರಣ್ಯದಲ್ಲಿ ಪತನಗೊಂಡಿತ್ತು.




## ದೋರ್ಜಿ ಖಂಡು (2011)

ಅರುಣಾಚಲ ಪ್ರದೇಶದ ಮುಖ್ಯಮಂತ್ರಿಯಾಗಿದ್ದ ದೋರ್ಜಿ ಖಂಡು ಮತ್ತು ಇತರ ನಾಲ್ವರು 2011ರ ಏಪ್ರಿಲ್ 30ರಂದು ಸಂಭವಿಸಿದ್ದ ಹೆಲಿಕಾಪ್ಟರ್ ಅಪಘಾತದಲ್ಲಿ ಮೃತಪಟ್ಟಿದ್ದರು. ಖಂಡು ಹಾಗೂ ಇತರರು ತವಾಂಗ್‌ನಿಂದ ಇಟಾನಗರಕ್ಕೆ ತೆರಳುತ್ತಿದ್ದಾಗ ಹೆಲಿಕಾಪ್ಟರ್ ಪಶ್ಚಿಮ ಕಾಮೆಂಗ್ ಜಿಲ್ಲೆಯಲ್ಲಿ ಪತನವಾಗಿತ್ತು.



## ಬಿಪಿನ್ ರಾವತ್ (2021)

ಭಾರತದ ಸೇನಾಪಡೆಗಳ ಮುಖ್ಯಸ್ಥರಾಗಿದ್ದ (ಸಿಡಿಎಸ್) ಜನರಲ್ ಬಿಪಿನ್ ರಾವತ್ ಅವರು 2021ರ ಡಿಸೆಂಬರ್ 8 ರಂದು ತಮಿಳುನಾಡಿನ ಕೂನೂರು ಬಳಿ ಸಂಭವಿಸಿದ ಹೆಲಿಕಾಪ್ಟರ್ ಅಪಘಾತದಲ್ಲಿ ಕೊನೆಯುಸಿರೆಳೆದಿದ್ದರು. ಅವರು ಪತ್ನಿ ಮತ್ತು ಇತರ 11 ಜನರೊಂದಿಗೆ ಸೇನಾ ಹೆಲಿಕಾಪ್ಟರ್‌ನಲ್ಲಿ ಸೂಲೂರು ವಾಯುನೆಲೆಯಿಂದ ತಮಿಳುನಾಡಿನ ವೆಲ್ಲಿಂಗ್ಟನ್‌ನಲ್ಲಿರುವ ಸೇನಾ ಕಾಲೇಜಿಗೆ ಪ್ರಯಾಣಿಸುತ್ತಿದ್ದಾಗ, ಪ್ರತಿಕೂಲ ಹವಮಾನದ ಕಾರಣದಿಂದ ಅಪಘಾತ ಸಂಭವಿಸಿತ್ತು.



## ವಿಜಯ್ ರೂಪಾಣಿ (2025)

ಗುಜರಾತ್‌ನ ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾಣಿ ಅವರು ಜೂನ್ 2025ರ ಜೂನ್ 12ರಂದು ಅಹಮದಾಬಾದ್‌ನಲ್ಲಿ ಸಂಭವಿಸಿದ್ದ ಏರ್ ಇಂಡಿಯಾ ವಿಮಾನ ಅಪಘಾತದಲ್ಲಿ ಕೊನೆಯುಸಿರೆಳೆದಿದ್ದರು. ಲಂಡನ್‌ಗೆ ತೆರಳುತ್ತಿದ್ದ ಬೋಯಿಂಗ್ 787-8 ಡ್ರೀಮ್‌ಲೈನರ್ ಮಾನವು ಟೇಕ್ ಆಫ್ ಆದ ಕೆಲವೇ ಕ್ಷಣಗಳಲ್ಲಿ ನೂಕು ಬಲದ ಕೊರತೆಯಿಂದಾಗಿ ರನ್‌ವೇನಿಂದ ಕೂಗಳತೆ ದೂರದಲ್ಲಿದ್ದ ಕಟ್ಟಡಕ್ಕೆ ಅಪ್ಪಳಿಸಿತ್ತು.

# ಅಜಿತ್ ಪವಾರ್ ದುರ್ಮರಣ

ಒಂದನೇ ಪುಟದಿಂದ...

ವಿಮಾನ ಅಪಘಾತ ಕುರಿತು ಡಿಜಿಸಿಎ ತನಿಖೆಗೆ ಆದೇಶಿಸಿದ್ದು, ವಿಮಾನ ಅಪಘಾತ ತನಿಖಾ ಬ್ಯೂರೊ (ಎಎಐಬಿ) ಮತ್ತು ಮಹಾರಾಷ್ಟ್ರ ವಿಧಿ ವಿಜ್ಞಾನ ಪ್ರಯೋಗಾಲಯ ತಂಡಗಳ ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ. ವಿಮಾನದ ‘ಕಪ್ಪು ಪೆಟ್ಟಿಗೆ’ ಲಭ್ಯವಾಗಿದೆ ಎಂದು ಮೂಲಗಳು ತಿಳಿಸಿವೆ.

ಪವಾರ್ ಅವರಿಗೆ ಪತ್ನಿ ಸುನೇತ್ರಾ (ರಾಜ್ಯಸಭೆ ಸದಸ್ಯೆ), ಇಬ್ಬರು ಪುತ್ರರಾದ ಪಾರ್ಥ, ಜಯ್ ಇದ್ದಾರೆ. ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ಅಜಿತ್ ಅವರ ದೊಡ್ಡಪ್ಪ. ಇತ್ತೀಚೆಗೆ ಪುಣೆ ಮತ್ತು ಪಿಂಪ್ರಿ ಚಿಂಚವಾಡದಲ್ಲಿ ನಡೆದ ಮುನ್ಸಿಪಲ್ ಕಾರ್ಪೊರೇಷನ್ ಚುನಾವಣೆಯಲ್ಲಿ ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ, ಎನ್‌ಸಿಪಿ (ಎಸ್‌ಪಿ) ಜತೆ ಮೈತ್ರಿ ಮಾಡಿಕೊಂಡು ಸ್ಪರ್ಧಿಸಿತ್ತು.

**ಮೂರು ದಿನಗಳ ಶೋಕ:** ಉಪ ಮುಖ್ಯಮಂತ್ರಿ ಅಜಿತ್ ಪವಾರ್ ನಿಧನದ ಪ್ರಯುಕ್ತ ಮಹಾರಾಷ್ಟ್ರ ಸರ್ಕಾರ ಬುಧವಾರ ಸಾರ್ವಜನಿಕ ರಜಾ ಪ್ರಕಟಿಸಿತು. ಅಲ್ಲದೆ ಮೂರು ದಿನಗಳವರೆಗೆ ರಾಜ್ಯದಾದ್ಯಂತ ಶೋಕಾಚರಣೆ ಘೋಷಿಸಿದೆ.

ಈ ಸಮಯದಲ್ಲಿ ಸರ್ಕಾರಿ ಕಟ್ಟಡಗಳ ಮೇಲೆ ರಾಷ್ಟ್ರ ಧ್ವಜವನ್ನು ಅರ್ಧಕ್ಕೆ ಹಾರಿಸಲಾಗುತ್ತದೆ ಮತ್ತು ಯಾವುದೇ ಅಧಿಕೃತ ಮನರಂಜನೆ ಕಾರ್ಯಕ್ರಮಗಳು ಇರುವುದಿಲ್ಲ ಎಂದು ಸರ್ಕಾರದ ಪ್ರಕಟಣೆ ತಿಳಿಸಿದೆ.

**ಗುರುವಾರ ಅಂತ್ಯಕ್ರಿಯೆ:** ಬಾರಾಮತಿಯ ವಿದ್ಯಾ ಪ್ರತಿಷ್ಠಾನ ಮೈದಾನದಲ್ಲಿ ಗುರುವಾರ ಬೆಳಿಗ್ಗೆ 11 ಗಂಟೆಗೆ ಸಕಲ ಸರ್ಕಾರಿ ಗೌರವಗಳೊಂದಿಗೆ ಅಜಿತ್ ಪವಾರ್ ಅವರ ಅಂತ್ಯಕ್ರಿಯೆ ನಡೆಯಲಿದೆ.

ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ ಎಂದು ಎನ್‌ಸಿಪಿ ಪ್ರಕಟಣೆ ತಿಳಿಸಿದೆ.

## ಅಸ್ಪಷ್ಟ ಗೋಚರತೆ: ಪತನಕ್ಕೆ ಕಾರಣ

ಒಂದನೇ ಪುಟದಿಂದ...

ವಿಮಾನ ಅಪಘಾತಕ್ಕೀಡಾದ ಅಂತಿಮ ಕ್ಷಣಗಳ ವಿವರವನ್ನು ಸಚಿವಾಲಯ ಹಂಚಿಕೊಂಡಿದೆ.

ಬಾರಾಮತಿ ವಾಯು ಸಂಚಾರ ನಿಯಂತ್ರಣದ ಪ್ರಕಾರ ವಿಮಾನವು ಬೆಳಿಗ್ಗೆ 8.18ಕ್ಕೆ ಸಂಪರ್ಕಕ್ಕೆ ಬಂದಿತ್ತು. ನಂತರ ಅದು ಬಾರಾಮತಿಗೆ 30 ನಾಟಿಕಲ್ ಮೈಲುಗಳಷ್ಟು ದೂರದಲ್ಲಿದ್ದಾಗ ಅದರಿಂದ ಕರೆ ಸ್ವೀಕರಿಸಲಾಗಿತ್ತು. ಈ ವೇಳೆ ಗೋಚರತೆಯನ್ನು ಆಧರಿಸಿ ತಮ್ಮ ವಿವೇಚನೆ ಬಳಸಿ ವಿಮಾನ ಇಳಿಸುವಂತೆ ಪೈಲಟ್‌ಗೆ ಸೂಚಿಸಲಾಯಿತು.

ಬಳಿಕ ರನ್‌ವೇ ಗೋಚರಿಸದ ಬಗ್ಗೆ ವಿಮಾನದ ಸಿಬ್ಬಂದಿಯಿಂದ ವರದಿ ಬಂದಿತು. ನಂತರ ಪೈಲಟ್ ಮತ್ತೆ ‘ಗೋ–ಅರೌಂಡ್’ ಪ್ರಾರಂಭಿಸಿದರು. ಸುತ್ತಾಟದ ಬಳಿಕ ರನ್‌ವೇಯನ್ನು ಗುರುತಿಸಬಹುದೇ ಎಂದು ಕೇಳಲಾಯಿತು. ಆಗ ಪ್ರತಿಕ್ರಿಯಿಸಿದ ಪೈಲಟ್, ‘ರನ್‌ವೇ ಗೋಚರಿಸುತ್ತಿಲ್ಲ, ಗೋಚರಿಸದ ಬಳಿಕ ತಿಳಿಸುತ್ತೇನೆ’ ಎಂದು ಹೇಳಿದ್ದರು. ಕೆಲ ಸೆಕೆಂಡುಗಳಲ್ಲಿಯೇ ವಿಮಾನ ಸಿಬ್ಬಂದಿಯು, ರನ್‌ವೇಯನ್ನು ಗುರುತಿಸಬಹುದು ಎಂದು ವರದಿ ಮಾಡಿದರು.

ಅದರ ಬೆನ್ನಲ್ಲೇ ರನ್‌ವೇಯತ್ತ ಇಳಿಯಲು ವಿಮಾನ ಮುಂದಾಯಿತು. ಕೂಡಲೇ ವಿಮಾನ ಭೂಸ್ಪರ್ಶಕ್ಕೆ ಅನುಮತಿ ನೀಡಲಾಯಿತು. ಆದರೆ ಆ ಕಡೆಯಿಂದ ಸಂದೇಶ ಪಡೆದ ಯಾವುದೇ ದೃಢೀಕರಣ ಎಟಿಸಿಗೆ ಬರಲಿಲ್ಲ. ಕೆಲ ಸೆಕೆಂಡುಗಳಲ್ಲಿಯೇ ರನ್‌ವೇ ಬಳಿ ಬೆಂಕಿ ಕಾಣಿಸಿಕೊಂಡಿತು ಎಂದು ಪ್ರಕಟಣೆ ತಿಳಿಸಿದೆ.


ವಿಎಸ್‌ಆರ್ ವೆಂಚರ್ಸ್ ಏಳು ಲಿಯರ್‌ಜೆಟ್–45 ವಿಮಾನಗಳು, ಐದು ಎಂಬ್ರೇರ್–135ಬಿಜೆ ವಿಮಾನಗಳು, ನಾಲ್ಕು ಕಿಂಗ್ ಏರ್–ಬಿ200 ವಿಮಾನಗಳು ಮತ್ತು ಒಂದು ಪಿಲಾಟಸ್ ಪಿಸಿ–12 ವಿಮಾನವನ್ನು ಹೊಂದಿದೆ.

### ಏನಿದು ಗೋ– ಅರೌಂಡ್?

‘ಗೋ–ಅರೌಂಡ್’ ಎಂಬುದು ವಿಮಾನಯಾನ ಪರಿಭಾಷೆಯಲ್ಲಿ ಬಳಸುವ ಪ್ರಮಾಣಿತ ಕಾರ್ಯವಿಧಾನ. ವಿಮಾನ ಭೂಸ್ಪರ್ಶಿಸಲು ಸಾಧ್ಯವಾಗದೇ ಇದ್ದಾಗ, ಪೈಲಟ್ ವಿಮಾನವನ್ನು ಮತ್ತೆ ಮೇಲಕ್ಕೆ ಏರಿಸಿ ಸುತ್ತು ಹಾಕುತ್ತಾರೆ. ಕೆಟ್ಟ ಹವಾಮಾನ, ಅಸ್ಪಷ್ಟ ಗೋಚರತೆ, ಅಸ್ಥಿರ ಮಾರ್ಗ, ರನ್‌ವೇಯಲ್ಲಿನ ದಟ್ಟಣೆ ಕಾರಣಗಳಿಂದ ವಿಮಾನವನ್ನು ಸುರಕ್ಷಿತವಾಗಿ ಭೂಸ್ಪರ್ಶಿಸಲು ಸಾಧ್ಯವಾಗದಿದ್ದಾಗ ಇದನ್ನು ಬಳಸಲಾಗುತ್ತದೆ.

**‘ರೀಡ್‌ಬ್ಯಾಕ್’ ಬಗ್ಗೆ:** ವಿಮಾನಯಾನದಲ್ಲಿ ‘ರೀಡ್‌ಬ್ಯಾಕ್’ ಎಂಬುದು ಒಂದು ನಿರ್ಣಾಯಕ ಸುರಕ್ಷತಾ ಕಾರ್ಯವಿಧಾನ. ವಿಮಾನ ಸಂಚಾರ ನಿಯಂತ್ರಕರಿಂದ (ಎಟಿಸಿ) ಸ್ವೀಕರಿಸಿದ ಸಂದೇಶ ಅಥವಾ ಸೂಚನೆಯ ಅಗತ್ಯ ಭಾಗಗಳನ್ನು ಪೈಲಟ್ ಇಲ್ಲಿ ಪುನರಾವರ್ತಿಸುತ್ತಾರೆ. ಈ ಮೂಲಕ ಅವರು ನಿಯಂತ್ರಕರ ಸೂಚನೆಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡಿರುವುದನ್ನು ದೃಢೀಕರಿಸುತ್ತಾರೆ.

## ಸಣ್ಣ ವಿಮಾನ, ಹೆಲಿಕಾಪ್ಟರ್ ಪ್ರಯಾಣ ಸುರಕ್ಷಿತವೇ?



ವಾಣಿಜ್ಯ ಉದ್ದೇಶದ ದೊಡ್ಡ ವಿಮಾನಗಳಿಗೆ ಹೋಲಿಸಿದರೆ ಸಣ್ಣ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳು ಅಪಘಾತಕ್ಕೀಡಾಗುವ ಪ್ರಮಾಣ ಹೆಚ್ಚು. ಹಾಗಾಗಿ, ಅವುಗಳಲ್ಲಿ ಪ್ರಯಾಣ ಸುರಕ್ಷಿತವಲ್ಲ ಎಂಬ ವಾದ ಮೊದಲಿನಿಂದಲೂ ಇದೆ. ಹೆಲಿಕಾಪ್ಟರ್, ಪುಟ್ಟ ವಿಮಾನ ತಯಾರಿಕಾ ಕಂಪನಿಗಳು ಈ ವಾದವನ್ನು ತಳ್ಳಿ ಹಾಕುತ್ತಾ ಬಂದಿವೆ.

ಆದರೆ, ಈ ಕ್ಷೇತ್ರದಲ್ಲಿ ತೊಡಗಿಕೊಂಡವರು ಸಣ್ಣ ವಿಮಾನಗಳು/ಹೆಲಿಕಾಪ್ಟರ್‌ಗಳ ಅಪಘಾತಕ್ಕೆ ವಿವಿಧ ಕಾರಣಗಳನ್ನು ಪಟ್ಟಿ ಮಾಡುತ್ತಾರೆ


- ಪ್ರಯಾಣಿಕರ ವಿಮಾನಗಳು ತುಂಬಾ ಎತ್ತರದಲ್ಲಿ ಹಾರಾಡುವುದರಿಂದ (ಸರಾಸರಿ 30 ಸಾವಿರದಿಂದ 40 ಸಾವಿರ ಅಡಿಗಳಷ್ಟು ಎತ್ತರದಲ್ಲಿ) ಅವುಗಳ ಮೇಲೆ ಪ್ರತಿಕೂಲ ಹವಾಮಾನದ ಪರಿಣಾಮ ಹೆಚ್ಚು ಬೀರುವುದಿಲ್ಲ. ಆದರೆ, ಕಡಿಮೆ ಆಸನ ಸಾಮರ್ಥ್ಯವುಳ್ಳ ಸಣ್ಣ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳು ಕಡಿಮೆ ಎತ್ತರದಲ್ಲಿ ಹಾರಾಡುತ್ತವೆ. ಹೀಗಾಗಿ ಅವುಗಳು ಪ್ರತಿಕೂಲ ಹವಾಮಾನದ ಸನ್ನಿವೇಶಗಳನ್ನು ಎದುರಿಸುವ ಸಾಧ್ಯತೆ ಹೆಚ್ಚಿರುತ್ತದೆ
- ದೊಡ್ಡ ವಿಮಾನಗಳ ನಿರ್ಮಾಣದಲ್ಲಿ ಸುರಕ್ಷತೆಗೆ ಹೆಚ್ಚು ಮಹತ್ವ ಕೊಡಲಾಗುತ್ತದೆ. ಕಂಪನಿಗಳು ಹೆಚ್ಚು ಮುತುವರ್ಜಿಯಿಂದ ನಿರ್ವಹಣೆ ಮಾಡುತ್ತವೆ. ಆದರೆ, ಸಣ್ಣ ವಿಮಾನಗಳ ಮಾಲೀಕತ್ವ ಸಾಮಾನ್ಯವಾಗಿ ಸಣ್ಣ ಕಂಪನಿಗಳು/ಖಾಸಗಿ ವ್ಯಕ್ತಿಗಳ ಬಳಿ ಇರುತ್ತವೆ. ವಿಮಾನಯಾನ ಕಂಪನಿಗಳು ನಡೆಸುವ ಮಾದರಿಯಲ್ಲಿ ಇವುಗಳ ನಿರ್ವಹಣೆ ನಡೆಯುವುದಿಲ್ಲ
- ಪ್ರಯಾಣಿಕರ ವಿಮಾನಗಳಲ್ಲಿ ಅನುಭವಿ ಪೈಲಟ್‌ಗಳಿರುತ್ತಾರೆ. ಪೈಲಟ್‌ಗಳು ಕನಿಷ್ಠ ಇಬ್ಬರು ಇರುತ್ತಾರೆ. ಪುಟ್ಟ ವಿಮಾನ, ಹೆಲಿಕಾಪ್ಟರ್‌ಗಳನ್ನು ಚಲಾಯಿಸುವರು ಕಡಿಮೆ ಅನುಭವಿ ಪೈಲಟ್‌ಗಳಾಗಿರುತ್ತಾರೆ. ಮತ್ತು ಒಬ್ಬರೇ ಇರುತ್ತಾರೆ
- ದೊಡ್ಡ ವಿಮಾನಗಳಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚು ಎಂಜಿನ್‌ಗಳಿರುತ್ತವೆ. ಒಂದು ಎಂಜಿನ್ ನಿಷ್ಕ್ರಿಯಗೊಂಡರೂ ಇನ್ನೊಂದು ಅಥವಾ ಉಳಿದ ಎಂಜಿನ್‌ಗಳ ಸಹಾಯದಿಂದ ಸುರಕ್ಷಿತವಾಗಿ ಇಳಿಸಬಹುದು. ಬಹುತೇಕ ಸಣ್ಣ ವಿಮಾನಗಳಲ್ಲಿ ಇರುವುದು ಒಂದೇ ಎಂಜಿನ್. ತಾಂತ್ರಿಕ ದೋಷ ಕಂಡು ಬಂದರೆ ವಿಮಾನವನ್ನು ಸುರಕ್ಷಿತವಾಗಿ ಇಳಿಸುವುದು ಕಷ್ಟ

ಆಧುನಿಕ ತಂತ್ರಜ್ಞಾನದ ಅಡಿಯಲ್ಲಿ ತಯಾರಿಸಲಾಗಿರುವ ಸಣ್ಣ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳು ಯಾವುದೇ ಪ್ರತಿಕೂಲ ಸನ್ನಿವೇಶದಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಬಲ್ಲವು ಎಂಬ ವಾದವನ್ನೂ ಕಂಪನಿಗಳು ಮುಂದಿಡುತ್ತವೆ.

ಆಧಾರ: ಪಿಟಿಐ, ಲಿಯೊಪಾರ್ಡ್‌ಏವಿಯೇಷನ್.ಕಾಂ, ಹೆಲಿಕಾಪ್ಟರ್ ಎಕ್ಸ್‌ಪ್ರೆಸ್.ಕಾಂ, ಏವಿಯೇಷನ್.ಸ್ಟೇಕ್‌ಎಕ್ಸ್‌ಚೇಂಜ್.ಕಾಂ

## ಮರಕ್ಕೆ ದಕ್ಕಿದ ನೀರ ಪುರಾವೆ

ನುಡಿ ಬೆಳಗು



ಪಿ.ಚಂದ್ರಿಕಾ

**ಜ್ಞಾನದೇವನ** ಬಳಿ ಬಂದ ಒಬ್ಬ, ‘ದೇವರು ಅಂತ ಇದ್ದಿದ್ದರೆ ಕೆಟ್ಟವರೆಲ್ಲಾ ಸತ್ತು ಹೋಗಬೇಕಿತ್ತು. ಇಲ್ಲ ಕೆಡುಕೇ ನಾಶವಾಗಬೇಕಿತ್ತು. ನಮ್ಮ ಭ್ರಮೆಗಳಿಗೆ ಒಂದೊಂದು ಹೆಸರನ್ನು ಕೊಡುತ್ತೇವೆ ಅಷ್ಟೇ’ ಎಂದ. ಜ್ಞಾನದೇವ ಅವನ ಮಾತುಗಳನ್ನು ಸಮಾಧಾನದಿಂದ ಕೇಳಿಸಿಕೊಂಡ. ವಾದ ಮಾಡಿದವ ಅಂದುಕೊಂಡ, ‘ಇವನಿಗೆ ಹೇಳಲಿಕ್ಕೆ ಮತ್ತೇನೂ ಉಳಿದಿಲ್ಲ ನಾನು ಗೆದ್ದೆ’ ಎಂದು. ದೀರ್ಘಶ್ವಾಸ ತೆಗೆದುಕೊಂಡು ಜ್ಞಾನದೇವ ಮಾತನಾಡಲಾರಂಭಿಸಿದ, ‘ಗೆಳೆಯ ನಿನ್ನ ಮಾತನ್ನು ಒಪ್ಪುತ್ತೇನೆ. ನನ್ನದೂ ಒಂದು ಪ್ರಶ್ನೆ ಇದೆ. ಅದಕ್ಕೆ ಉತ್ತರಿಸಬಲ್ಲೆಯಾ?’. ಗೆದ್ದ ಹುಮ್ಮಸ್ಸಿನಲ್ಲಿದ್ದ ವ್ಯಕ್ತಿ ಸಮ್ಮತಿಸಿದ.

ಜ್ಞಾನದೇವ ಒಂದು ಮರದ ಬಳಿ ಅವನನ್ನು ಕರೆದೊಯ್ದು, ‘ಈ ಮರ ನೆಲದಿಂದ ಮೇಲೆ ಮಾತ್ರ ಇದೆಯೋ? ನೆಲದ ಕೆಳಗೆಯೂ ಇದೆಯೋ? ಎಂದ. ಅದಕ್ಕವನು ಇದೆಂಥಾ ಪ್ರಶ್ನೆ ಕೇಳುತ್ತಿರುವೆ? ನೆಲದೊಳಗೆ ಇಲ್ಲದಿದ್ದರೆ ಮೇಲೆ ಗಿಡ ಹೇಗೆ ಬೆಳೆಯುತ್ತೆ? ಮರ ಹೇಗಾಗುತ್ತೆ? ಮಗುಚಿಬಿದ್ದ ಮರದ ಬೊಡ್ಡೆಯನ್ನು ನಾನು ಕಂಡಿರುವೆ’ ಎಂದ. ಜ್ಞಾನದೇವ ಕೇಳಿದ, ‘ಹಾಗಾದರೆ ಕಾಣದಿದ್ದರೂ ಇರುತ್ತದೆ ಎಂದು ನಂಬುತ್ತೀಯ ಅಲ್ಲವೇ?’ ವಾದಿ ಹೇಳಿದ, ‘ಹೌದು’. ಜ್ಞಾನದೇವ ನಕ್ಕ, ‘ಅಂದರೆ ಪುರಾವೆಗಳನ್ನು ಕಾಣದಿದ್ದರೆ ಇಲ್ಲವೆಂದು ಹೇಳುವೆ ಅಲ್ಲವೇ? ಆದರೆ ಕೆಲ ಸಂಗತಿಗಳು ಅದು ಮರದ ಬೇರಿನ ಹಾಗೆ ಇದ್ದೇ ಇರುತ್ತವೆ. ಒಳಿತು ಸುಮ್ಮನೆ ಅದರ ಪಾಡಿಗೆ ಅದು ಇರುತ್ತದೆ. ಅದು ಯಾರಿಗೂ ಏನನ್ನೂ ಮಾಡುವುದಿಲ್ಲ. ಕೆಡುಕು ಹಾಗಲ್ಲ. ಎಲ್ಲರಿಗೂ ತಾನು ಇದ್ದೇನೆಂದು ತೋರಿಸುತ್ತದೆ. ಸುಮ್ಮನೆ ಗಮನಿಸು, ಕೆಡುಕು ಒಳಿತಿನ ಕೈಯಿಂದಲೇ ನಾಶವಾಗುವುದು’. ವಾದ ಮಾಡುವವ, ‘ಕಾಣದೇ ಇದ್ದರೂ ನೀನು ಅದು ಇದೆ ಎಂದಾಕ್ಷಣ ಒಪ್ಪಿಕೊಳ್ಳಬೇಕೇ?’ ತೀಕ್ಷ್ಣವಾಗಿ ಪ್ರಶ್ನಿಸಿದ.

‘ಇಲ್ಲೊಂದು ಚಿನ್ನದ ಗಣಿ ಇದೆ, ವಜ್ರಗಳ ನಿಕ್ಷೇಪವಿದೆ, ಇಲ್ಲ ರಾಜ ಮಹಾರಾಜರ ಕಾಲದ ದೊಡ್ಡ ಖಜಾನೆ ಇದೆ ಎಂದರೆ ನೀನು ಏನು ಮಾಡುತ್ತೀಯ? ಅದೆಲ್ಲಾ ಹೋಗಲಿ ಸುಮ್ಮನೆ ಯಾರೋ ಒಬ್ಬ ತನ್ನ ಒಂದು ಅಮೂಲ್ಯವಾದ ವಜ್ರದ ಹರಳು ಕಳೆದಿದೆ. ಹುಡುಕುತ್ತಿರುವೆ ಎಂದರೆ ನೀನೂ ಅವನ ಜೊತೆ ಸೇರಿ ಹುಡುಕುತ್ತೀಯ ಅಲ್ಲವೇ ಅದು ಯಾಕೆ?’ ಎಂದ ಜ್ಞಾನದೇವ. ‘ಹೇಳಿದವನ ಮೇಲೆ ನಂಬಿಕೆ ಅಷ್ಟೇ’ ಎಂದ ವಾದಿ. ಆಗ ಜ್ಞಾನದೇವ, ‘ಅಕಸ್ಮಾತ್ ಇದ್ದರೆ ಅದನ್ನು ಯಾಕೆ ಕಾಣಬಾರದು? ಹೇಳಿದವನ ಮಾತು ಸತ್ಯವೋ, ಸುಳ್ಳೋ ಎಂದು ಯೋಚಿಸದೆ ಅದನ್ನು ಪಡೆಯಲು ನಿರ್ಧಾರ ಮಾಡುತ್ತೀಯ. ಅದೇನಾದರೂ ಸಿಕ್ಕಿಬಿಟ್ಟರೆ ಎಂದು ಕನಸು ಕಾಣಲು ಆರಂಭಿಸುತ್ತೀಯ’. ವಾದಿ ಅವನ ಮಾತಿಗೆ ಮೆತ್ತಗಾದ. ಮತ್ತೆ ಜ್ಞಾನದೇವ, ‘ಅಮೂಲ್ಯವಾದ ಯಾವುದೋ ವಸ್ತುವಿದೆ ಎಂದ ತಕ್ಷಣ ಅದನ್ನು ಪಡೆಯಲು ಲಾಲಸೆಯಿಂದ ಹೊರಡುವ ನಾವು ಒಂದು ದೊಡ್ಡ ಶಕ್ತಿಯನ್ನು ಕಾಣಲು ಯಾಕೆ ವಾದ ಮಾಡುತ್ತೇವೆ? ಹುಡುಕುವುದಕ್ಕಿಂತಲೂ ಮುಂಚೆಯೇ, ಅನುಮಾನಕ್ಕೆ ಬೀಳುತ್ತೇವೆ. ಒಪ್ಪು ಬಿಡು, ಮರಕ್ಕೆ ದಕ್ಕುವ ನೀರ ಪುರಾವೆ ಸತ್ ಶಕ್ತಿಯಂತೆ ಇದ್ದೇ ಇರುತ್ತದೆ. ಅಜ್ಞಾನ ನಿನ್ನ ಸ್ವಭಾವ ಧರ್ಮವಾಗಿದ್ದರೆ ಯಾರೇನೂ ಮಾಡಲಾರ’ ಎಂದ.

ಪ್ರಕಾಶವನ್ನು ಕೊಡುವ ಜ್ವಾಲೆಗೆ ಕತ್ತಲೆ ಎನ್ನಲಿಕ್ಕಾಗುತ್ತದೆಯೇ? ❖

## ಪದಬಂಧ 6299


ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

2.ನೀರಿಗೆ ಆಶ್ರಯವಾದ ಕೊಳ ಸರೋವರ ಮುಂತಾದವು (4)
4.ಕೂರಿಸುವಾಗ ಮಗು ಕಾಣಿಸಿತಲ್ಲಾ! (2)
6.ಸಲೀಸಾಗಿ ಹಿಡಿದಿರುವ ನೀರು (3)
8.ಸುಪರ್ಣ ಹಿಡಿದಿರುವ ಎಲೆ! (2)
9.ನೈಟ್ರೋಜನ್ ಅನ್ನು ಕನ್ನಡೀಕರಿಸಿ (5)
10.ನೀರಿನಿಂದಾದ ಅನಿಲ (5)
12.ಭರವಸೆಯಲ್ಲಿನ ಧ್ವನಿಯಿದು! (2)
15.ನೀರನ್ನು ಕೊಡುವ ಮೋಡ (3)
16.ಜನನಿ ನುಡಿದಿರುವ ಸತ್ಯ (2)
17.ನೀರು ಧುಮ್ಮಿಕ್ಕುವ ಸ್ಥಳ (4)

**ಮೇಲಿಂದ ಕೆಳಕ್ಕೆ**

1.ಹೊಸ ಬಗೆಯಲ್ಲಿ ಬಂದಿರುವ ಸಂತೋಷ! (3)
2.ನೀರಿನಲ್ಲಿ ವಾಸಿಸುವ ಪ್ರಾಣಿಗಳು (4)
3.ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡಿರುವವನು (2)
5.ಪರ್ಣವನ್ನು ಹಿಡಿದಿರುವ ಗರುಡ (3)
7.ಈತ ಕಾಡನ್ನು ರಕ್ಷಿಸುವವನು (5)
8.ಈ ಪರಿ ಚಿಮುಕಿಸುವಿಕೆ! (4)
9.ಅವಯವಗಳಿಂದ ಕೂಡಿದುದು (4)
11.ಅದೇ ತಾನೆ ಕಡೆದ ಹೊಸ ಬೆಣ್ಣೆ (4)
12.ಇರುಳನ್ನು ಹೀಗೂ ಹೇಳುವರು (3)
13.ಮಡಿಕೆ ಅಥವಾ ಸ್ತರ (3)
14.ರಾಜಾಜಿಸುತ್ತಿರುವ ದೊರೆ (2)



### 6298ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 1.ಕಳಶ 5.ನಿನಿಮಾ 7.ದಶಕ 9.ವಚನ 11.ಕಲ್ಯಾಣಿ 12.ನವಣೆ 13.ಕಡಸು 15.ಹಿರಿಮೆ 17.ರುದ್ರಾಕ್ಷಿ 19.ತಿಲಕ

**ಮೇಲಿಂದ ಕೆಳಕ್ಕೆ:** 2.ಶನಿ 3.ಪ್ರಮಾದ 4.ಜಳಕ 6.ಮಾರೀಚ 8.ಶರಣೆ 9.ವಣಿಕ 10.ನನಸು 11.ಕಸ್ತೂರಿ 14.ಡಮರು 15.ಹಿಸುಣ 16.ಮೆದುಳು 18.ಕ್ಷಿತಿ

## ಸುಡೊಕು 6683

**ಆಡುವುದು ಹೀಗೆ:** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

| | | | | | | | | |
|---|---|---|---|---|---|---|---|---|
| | | | | 5 | | 2 | | 8 |
| 5 | | 4 | 1 | | 8 | | 3 | |
| | 8 | | | 7 | | | 5 | 4 |
| | 6 | | | 3 | | 1 | | 2 |
| 2 | | 5 | | 1 | 7 | | | |
| | 3 | | | 8 | | 5 | | 6 |
| | | 8 | | | 6 | | 2 | |
| 3 | | 2 | 7 | 4 | | | | |
| | 5 | | | 2 | | 4 | | 1 |

### 6682 ಸುಡೊಕು

| | | | | | | | | |
|---|---|---|---|---|---|---|---|---|
| 7 | 5 | 9 | 3 | 1 | 6 | 4 | 8 | 2 |
| 2 | 3 | 6 | 8 | 4 | 9 | 5 | 1 | 7 |
| 4 | 1 | 8 | 7 | 5 | 2 | 3 | 9 | 6 |
| 9 | 7 | 3 | 4 | 2 | 1 | 6 | 5 | 8 |
| 5 | 6 | 4 | 9 | 3 | 8 | 2 | 7 | 1 |
| 8 | 2 | 1 | 6 | 7 | 5 | 9 | 3 | 4 |
| 6 | 8 | 7 | 2 | 9 | 3 | 1 | 4 | 5 |
| 1 | 9 | 2 | 5 | 8 | 4 | 7 | 6 | 3 |
| 3 | 4 | 5 | 1 | 6 | 7 | 8 | 2 | 9 |

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

**29 ಜನವರಿ 2026 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ:** ಮಾಘ ಶುಕ್ಲ ಏಕಾದಶಿ ಗಂ. 13-56 **ನಕ್ಷತ್ರ:** ರೋಹಿಣಿ ಗಂ. 7-32 ನಂತರ ಮೃಗಶಿರ ಗಂ 29-30, **ಯೋಗ:** ಐಂದ್ರ ಗಂ. 20-28 ಕರಣ: ವಿಷ್ಟಿ ಗಂ. 13-56 ಮಕರ ಮಾಸದ 15 ನೇ ದಿನ. **ಮಳೆ ನಕ್ಷತ್ರ:** ಶ್ರವಣ 2 ನೇ ಪಾದ. **ರಾಹುಕಾಲ:** ಮಧ್ಯಾಹ್ನ 01-30 - 03-00, **ಸೂರ್ಯೋದಯ:** 07-01, **ಸೂರ್ಯಾಸ್ತ:** 06-26, **ಮುಸ್ಲಿಂ ದಿನಾಂಕ:** 9 ಶಬನ್, **ಅದೃಷ್ಟ ಸಂಖ್ಯೆ:** 11, 5

**ಮೇಷ:** ವೃತ್ತಿಯಲ್ಲಿ ಸ್ಥಾನಪಲ್ಲಟ ಬಯಸಿದ ನಿಮಗೆ ಹೊಸ ಕೆಲಸವು ಹಳೆಯ ಕೆಲಸಕ್ಕಿಂತ ಕಳಪೆ ಎನಿಸಬಹುದು. ಹಾಗಾಗಿ, ಔದ್ಯೋಗಿಕವಾಗಿ ಅನುಭವಸ್ಥರಿಂದ ಕೇಳಿ ಪಡೆದ ಸಲಹೆ ಸೂಚನೆಗಳಿಂದಾಗಿ ಅಭಿವೃದ್ಧಿ ಹೊಂದುವಿರಿ.

**ವೃಷಭ:** ಬಹುಕಾಲ ನೆನಪಿನಲ್ಲಿ ಉಳಿಯುವಂತಹ ಒಂದು ಮಧುರ ಘಟನೆ ಈ ದಿನ ನಿಮ್ಮ ಮನೆಯಲ್ಲಿ ನಡೆಯಲಿದೆ. ಜೀವನದ ಹಾದಿ ಬದಲಾಗುವುದನ್ನು ಕಾಣುವಿರಿ. ತಾಯಿಯ ಕಡೆಯ ನೆಂಟರು ಆಕಸ್ಮಿಕವಾಗಿ ಬರುವರು.

**ಮಿಥುನ:** ಬದಲಾದ ನಿಮ್ಮ ವೇಳಾಪಟ್ಟಿಗೆ ಸರಿಯಾಗುವಂತೆ ನಿಮ್ಮ ಮನಃಸ್ಥಿತಿಯನ್ನು ತಂದುಕೊಳ್ಳುವಲ್ಲಿ ಕಷ್ಟಪಡಬೇಕಾಗಬಹುದು. ರಾಜರಾಜೇಶ್ವರಿಯನ್ನು ಪ್ರಾರ್ಥಿಸಿ ನಿಮ್ಮ ಅಭೀಷ್ಟಗಳನ್ನು ನೆರವೇರಿಸಿಕೊಳ್ಳಿ.

**ಕರ್ಕಾಟಕ:** ನಿಮ್ಮ ಕೆಲಸವನ್ನು ಆದಷ್ಟು ನೀವೇ ಮಾಡಿಕೊಳ್ಳುವುದು ಉತ್ತಮ. ಗೃಹ ಉಪಯೋಗಿ ವಸ್ತುಗಳನ್ನು ಕೊಳ್ಳುವ ಬಗ್ಗೆ ಪತ್ನಿ ಮತ್ತು ಮಕ್ಕಳೊಂದಿಗೆ ಚರ್ಚಿಸುವಿರಿ. ಹಾಲು ಮಾರಾಟಗಾರರಿಗೆ ಲಾಭ ಇರುವುದು.

**ಸಿಂಹ:** ನಿಮ್ಮ ಮಗಳ ಮದುವೆಯ ವಿಷಯದಲ್ಲಿ ಜವಾಬ್ದಾರಿಯ ಹಂಚಿಕೆಗೆ ಸಂಬಂಧಿಸಿದಂತೆ ಮಗನೊಡನೆ ಮುಕ್ತ ಮಾತುಕತೆ ನಡೆಯುವುದು. ನಿಮ್ಮ ಜೊತೆ ಸ್ಪರ್ಧಿಸುತ್ತಿದ್ದವರಿಗೆ ನೀವು ಎಚ್ಚರ ತಪ್ಪಿದಲ್ಲಿ ಜಯ ಸಿಗುವುದು.

**ಕನ್ಯಾ:** ನಿಮ್ಮ ಹಿರಿಯರ ಕಸುಬನ್ನೇ ಮುಂದುವರಿಸುತ್ತಿರುವವರು ಅವರು ಹಾಕಿಕೊಟ್ಟಂತಹ ಪಥದಲ್ಲಿಯೇ ನಡೆಯುವುದರಿಂದ ಶ್ರೇಯಸ್ಸು. ವಾತಾವರಣದಿಂದಾಗಿ ಮಂಡಿ ಹಾಗೂ ಸಂದುಗಳಲ್ಲಿ ನೋವು ಕಾಣಿಸುವುದು.

**ತುಲಾ:** ಇಂದು ವಿದೇಶಿ ಒಪ್ಪಂದಗಳನ್ನು ಮಾಡಿಕೊಳ್ಳದಿರುವುದು ಒಳ್ಳೆಯದು. ಮನೆಯವರ ಅಥವಾ ಹಿರಿಯರ ಮಾತಿನಂತೆ ಕೆಲಸ ಕೈಗೊಳ್ಳುವುದು ಉತ್ತಮ. ಹೊಸ ವಾಹನ ಖರೀದಿಸುವ ಯೋಗವಿದೆ.

**ವೃಶ್ಚಿಕ:** ನಿಮ್ಮ ಎದುರು ಸಹೋದರ ಸಹೋದರಿಯರನ್ನು ಹೊಗಳಿದ ಕಾರಣ ನೀವು ಮುನಿಸಿಕೊಳ್ಳುವ ಸಾಧ್ಯತೆ ಇದೆ. ನೂತನ ಮನೆ ಕೊಳ್ಳಲು ಹಣದ ವ್ಯವಸ್ಥೆ ಆಗುವುದು. ಸಾಮಾಜಿಕ ವಲಯದಲ್ಲಿ ನಿಮ್ಮ ವರ್ಚಸ್ಸು ಬೆಳೆಯಲಿದೆ.

**ಧನು:** ನಿಮ್ಮ ವಿಷಯಗಳನ್ನು ಸೋರಿಕೆ ಮಾಡುತ್ತಿರುವವರು ಕುಟುಂಬದವರೇ ಇರಬಹುದು ಎಂಬ ಅನುಮಾನದಿಂದ ಎಲ್ಲರನ್ನೂ ಪರೀಕ್ಷಿಸುವಿರಿ. ವೃತ್ತಿ ಬದುಕಿನ ಗುರಿಗಳ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಪಡೆಯುವಿರಿ.

**ಮಕರ:** ನಿಮ್ಮ ಕೆಲಸದ ಗುಣಮಟ್ಟ ಹೆಚ್ಚಿಸಿಕೊಳ್ಳುವ ಸಲುವಾಗಿ ಕಾರ್ಯಾಗಾರಗಳಲ್ಲಿ ಭಾಗವಹಿಸುವಿರಿ. ಕನ್ನಡ ಅಥವಾ ಮಾತೃಭಾಷೆಯ ಸಾಹಿತ್ಯದಲ್ಲಿ ಸಂಶೋಧನೆ ನಡೆಸುತ್ತಿರುವವರಿಗೆ ಸಮ್ಮಾನವಾಗುವ ಸಾಧ್ಯತೆ ಇದೆ.


**ಕುಂಭ:** ಇಂದು ಕುಟುಂಬದಲ್ಲಾಗಲಿ ಅಥವಾ ಕಾರ್ಯಕ್ಷೇತ್ರದಲ್ಲಾಗಲಿ ನಿಮ್ಮ ಅಭಿಪ್ರಾಯವನ್ನು ಬಹಿರಂಗವಾಗಿ ತಿಳಿಸದಿದ್ದರೆ ನಷ್ಟವಾಗುತ್ತದೆ. ಪ್ರವಾಸಕ್ಕಾಗಿ ಹೋದ ಪ್ರದೇಶದಲ್ಲಿ ಕೆಲವು ತೊಂದರೆಗಳಾಗುವಂತಹ ಸಂದರ್ಭಗಳಿವೆ.

**ಮೀನ:** ಕಾರ್ಯವು ಮಧ್ಯದಲ್ಲಿ ನಿಲ್ಲುವ ಸಾಧ್ಯತೆ ಇರುವುದರಿಂದ ದೃಢವಾದ ನಿರ್ಧಾರದ ನಂತರವಷ್ಟೇ ಹೊಸ ಕೆಲಸ ಮಾಡುವುದು ಉತ್ತಮ. ನಿಮ್ಮ ಜೀವನದ ವಿಶೇಷ ದಿನದ ಪ್ರಯುಕ್ತವಾಗಿ ವೃದ್ಧರ ಸೇವೆಯನ್ನು ಮಾಡಿ.

## ಗುಂಡಣ್ಣ



ಷೇರುಪೇಟೆ ವಹಿವಾಟು




ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ: | 25,175 |
| ಇಂದಿನ ಅಂತ್ಯ: | 25,342 |
| ದಿನದ ಗರಿಷ್ಠ: | 25,372 |
| | 167 |

ಮೊಟ್ಟೆ ಧಾರಣೆ (ಎನ್‌ಇಸಿಸಿ)

| | | |
|---|---|---|
| ಬೆಂಗಳೂರು | 100 ಕ್ಕೆ | ₹575 |
| | 12 ಕ್ಕೆ | ₹75 |
| ಮೈಸೂರು: | 100 ಕ್ಕೆ | ₹577 |

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

| | |
|---|---|
| ಆರ್‌ಎಸ್‌ಎಸ್-4 | ₹196 |
| ಆರ್‌ಎಸ್‌ಎಸ್-5 | ₹191 |
| ಗುಡ್ ಲಾಟ್ | ₹179 |

ರಾಮನಗರ ರೇಷ್ಮೆಗೂಡು

| | |
|---|---|
| ಮಿಶ್ರತಳಿ(ಸಿ.ಬಿ) | ₹490-765 |
| ದ್ವಿತಳಿ (ಬಿ.ವಿ) | ₹232-925 |

ಮುದ್ರಮನೆ ಕಾಫಿ

| | |
|---|---|
| ಎಪಿ | ₹26450 |
| ಎಸಿ | ₹14425 |
| ಆರ್‌ಪಿ | ₹17850 |
| ಆರ್‌ಸಿ | ₹10500 |

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1680 (1680) |
| ಸೋಯಾ (ರಿಫೈನ್ಡ್) | ₹1390 (1390) |
| ಸೂರ್ಯಕಾಂತಿ (ರಿಫೈನ್ಡ್) | ₹1630 (1630) |
| ಪಾಮೋಲಿನ್ | ₹1340 (1300) |

# ಎಫ್‌ಟಿಎ: ತಯಾರಿಕೆಗೆ ಉತ್ತೇಜನ

## ಭಾರತ ಮತ್ತು ಇ.ಯು ನಡುವಿನ ಒಪ್ಪಂದದ ಕುರಿತು ಮೂಡಿಸ್ ರೇಟಿಂಗ್ಸ್ ಅಭಿಮತ

MOODY'S

ನವದೆಹಲಿ (ಪಿಟಿಐ): ಭಾರತ ಮತ್ತು ಐರೋಪ್ಯ ಒಕ್ಕೂಟದ (ಇಯು) ನಡುವಿನ ಮುಕ್ತ ವ್ಯಾಪಾರ ಒಪ್ಪಂದವು (ಎಫ್‌ಟಿಎ) ಭಾರತಕ್ಕೆ ಹೆಚ್ಚಿನ ವಿದೇಶಿ ಹೂಡಿಕೆ ತರಲು ನೆರವಾಗಲಿದೆ, ಭಾರತದ ತಯಾರಿಕಾ ವಲಯಕ್ಕೆ ಬಲ ನೀಡಲಿದೆ, ಭಾರತದ ಕೆಲವು ವಲಯಗಳ ರಫ್ತು ಸ್ಪರ್ಧಾತ್ಮಕತೆಯನ್ನು ಹೆಚ್ಚು ಮಾಡಲಿದೆ ಎಂದು ಜಾಗತಿಕ ರೇಟಿಂಗ್ಸ್ ಸಂಸ್ಥೆ ಮೂಡಿಸ್ ಹೇಳಿದೆ.

ಮುಕ್ತ ವ್ಯಾಪಾರ ಒಪ್ಪಂದಕ್ಕೆ (ಎಫ್‌ಟಿಎ) ಸಂಬಂಧಿಸಿದ ಮಾತುಕತೆಗಳು ಪೂರ್ಣಗೊಂಡಿವೆ ಎಂದು ಭಾರತ ಮತ್ತು ಐರೋಪ್ಯ ಒಕ್ಕೂಟ ಮಂಗಳವಾರ ಘೋಷಿಸಿವೆ. ಈ ಒಪ್ಪಂದ ಜಾರಿಗೆ ಬಂದ ನಂತರದಲ್ಲಿ ಭಾರತದ ಶೇ 93ರಷ್ಟು ಸರಕುಗಳು ಇ.ಯು ದೇಶಗಳ ಮಾರುಕಟ್ಟೆಯನ್ನು ಸುಂಕರಹಿತವಾಗಿ ಪ್ರವೇಶಿಸಲಿವೆ.

ಈ ಒಪ್ಪಂದವು 200 ಕೋಟಿ ಜನರ ಮಾರುಕಟ್ಟೆಯೊಂದನ್ನು ಸೃಷ್ಟಿಸಲಿದೆ. ಭಾರತವು ತನ್ನ ವ್ಯಾಪಾರ ಸಂಬಂಧವನ್ನು ವೈವಿಧ್ಯಮಯ ಆಗಿಸಲು ನಿರಂತರ ಪ್ರಯತ್ನ ನಡೆಸಿದೆ ಎಂಬುದನ್ನು ಈ ಮಾತುಕತೆ ಪೂರ್ಣಗೊಂಡಿರುವುದು ಹೇಳುತ್ತಿದೆ ಎಂದು ಕೂಡ ಮೂಡಿಸ್ ರೇಟಿಂಗ್ಸ್ ಅಭಿಪ್ರಾಯಪಟ್ಟಿದೆ.

'ಯುರೋಪಿನ ಕಾರು ತಯಾರಿಕಾ ಕಂಪನಿಗಳು ಜಗತ್ತಿನ ಮೂರನೆಯ ಅತಿದೊಡ್ಡ ಕಾರು ಮಾರುಕಟ್ಟೆಗೆ ಹೆಚ್ಚು ಸುಲಭವಾಗಿ ಪ್ರವೇಶ ಪಡೆಯಲಿವೆ. ಇದರಿಂದಾಗಿ ಆ ಕಂಪನಿಗಳಿಗೆ ಇನ್ನಷ್ಟು ಹೆಚ್ಚಿನ ಗುಣಮಟ್ಟದ ಕಾರುಗಳನ್ನು ಭಾರತದ ಮಾರುಕಟ್ಟೆಯಲ್ಲಿ ಬಿಡುಗಡೆ ಮಾಡಲು ಸಾಧ್ಯವಾಗುತ್ತದೆ. ಆದರೆ ಇದರಿಂದ ಭಾರತದ ಕಾರು ತಯಾರಿಕಾ ಕಂಪನಿಗಳಿಗೆ ಹೆಚ್ಚು ಸ್ಪರ್ಧೆ ಎದುರಾಗಲಿದೆ' ಎಂದು ಮೂಡಿಸ್ ಹೇಳಿದೆ.

## ವೈನ್ ಉದ್ಯಮಕ್ಕೆ ರಕ್ಷಣೆ: ಸುಲಾ ವಿನ್‌ಯಾರ್ಡ್ಸ್

ಭಾರತ ಮತ್ತು ಇ.ಯು ನಡುವಿನ ವ್ಯಾಪಾರ ಒಪ್ಪಂದದಲ್ಲಿ ದೇಶೀಯ ವೈನ್ ಉದ್ಯಮದ ರಕ್ಷಣೆಗೆ ಅಗತ್ಯವಿರುವ ಅಂಶಗಳನ್ನು ಹೊಂದಿದೆ ಎಂದು ದೇಶದ ಅತಿದೊಡ್ಡ ವೈನ್ ತಯಾರಿಕಾ ಕಂಪನಿ ಸುಲಾ ವಿನ್‌ಯಾರ್ಡ್ಸ್ ಪ್ರಕಟಣೆ ಹೇಳಿದೆ.

750 ಮಿ.ಲೀ ವೈನ್ ಬಾಟಲಿಯ ಕನಿಷ್ಠ ಆಮದು ದರವು 2.5 ಯೂರೊ ಆಗಿರಬೇಕು ಎಂಬ ಅಂಶವನ್ನು ಒಪ್ಪಂದದಲ್ಲಿ ಸೇರಿಸಲಾಗಿದೆ. ಈ ಮೂಲಕ ದೇಶದ ವೈನ್ ಉದ್ಯಮದ ಪ್ರಮುಖ ಕಳವಳಗಳಿಗೆ ಸ್ಪಂದಿಸುವ ಕೆಲಸವನ್ನು ಒಪ್ಪಂದವು ಮಾಡಿದೆ ಎಂದು ತಿಳಿಸಿದೆ.

'ಇ.ಯು ದೇಶಗಳಿಂದ ಆಮದು ಮಾಡಿಕೊಳ್ಳುವ ವೈನ್ ಮೇಲಿನ ಸುಂಕವು ಈಗ ಶೇ 150ರಷ್ಟು ಇದ್ದು, ಒಪ್ಪಂದ ಜಾರಿಗೆ ಬಂದ ನಂತರದಲ್ಲಿ ಶೇ 20ಕ್ಕೆ (ದುಬಾರಿ ಬೆಲೆಯ ವೈನ್‌ಗಳಿಗೆ ಅನ್ವಯ) ಇಳಿಯಲಿದೆ. ಸುಂಕ ತಗ್ಗಿಸುವಿಕೆ ಎಂಬುದು ಇ.ಯು ಒಕ್ಕೂಟದ ಪ್ರಮುಖ ಬೇಡಿಕೆಯಾಗಿತ್ತು.

ಆದರೆ 2.5 ಯೂರೊಗಿಂತ ಕಡಿಮೆ ಬೆಲೆಯ ವೈನ್‌ಗಳಿಗೆ ಸುಂಕ ವಿನಾಯಿತಿ ನೀಡಲು ಭಾರತ ನಿರಾಕರಿಸಿದೆ. ಭಾರತದಲ್ಲಿ ತಯಾರಾದ ವೈನ್‌ಗಳಿಗೆ ಇ.ಯು ದೇಶಗಳಲ್ಲಿ ಸುಂಕ ವಿನಾಯಿತಿ ಸಿಗಲಿದೆ. 'ಇದು ದೇಶದ ಶೇ 90ರಷ್ಟಕ್ಕಿಂತ ಹೆಚ್ಚಿನ ವೈನ್ ಉದ್ಯಮವನ್ನು ರಕ್ಷಿಸುತ್ತದೆ' ಎಂದು ಹೇಳಿದೆ.

'ಕಡಿಮೆ ಬೆಲೆಯ ಉತ್ಪನ್ನಗಳನ್ನು ಭಾರತದ ಮಾರುಕಟ್ಟೆಗೆ ತಂದು ಸುರಿಯುವುದನ್ನು, ದರವನ್ನು ಉದ್ದೇಶಪೂರ್ವಕವಾಗಿ ಕಡಿಮೆ ಮಾಡುವುದನ್ನು ತಡೆಯುವುದಕ್ಕೆ ಸಂಬಂಧಿಸಿದಂತೆ ನಮ್ಮ ವ್ಯಕ್ತಪಡಿಸಿದ ಆತಂಕಗಳಿಗೆ ಸರ್ಕಾರ ಸ್ಪಂದಿಸಿದ್ದಕ್ಕೆ ಅಭಿನಂದನೆ ಸಲ್ಲಿಸುತ್ತೇವೆ' ಎಂದು ಭಾರತೀಯ ವೈನ್ ಕಂಪನಿಗಳ ಒಕ್ಕೂಟದ (ಸಿಐಡಬ್ಲ್ಯುಸಿ) ಮಹಾನಿರ್ದೇಶಕ ಅನಂತ ಎಸ್. ಅಯ್ಯರ್ ಹೇಳಿದ್ದಾರೆ.

ಒಪ್ಪಂದದಲ್ಲಿ ಭಾರತ ಪ್ರಾಯೋಗಿಕವಾಗಿ ದೇಶಗಳು, ಇ.ಯು ದೇಶಗಳ ಮೂಲಕ ತಮ್ಮ ಉತ್ಪನ್ನಗಳನ್ನು ಭಾರತಕ್ಕೆ ಕಳುಹಿಸುವುದನ್ನು ತಡೆಯಲು ಕಠಿಣ ನಿಯಮ ಜಾರಿಗೆ ತರಬೇಕು ಎಂದು ಕೂಡ ಒಕ್ಕೂಟ ಹೇಳಿದೆ.

## ಕ್ವಿಂಟಲ್ ಶೇಂಗಾ ಬೆಲೆ ₹13,269

ಪ್ರಜಾವಾಣಿ ವಾರ್ತೆ



ಬಳ್ಳಾರಿ: ಬಳ್ಳಾರಿಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ (ಎಪಿಎಂಸಿ) ಒಂದು ಕ್ವಿಂಟಲ್ ಶೇಂಗಾ ಬುಧವಾರ ಗರಿಷ್ಠ ದಾಖಲೆ ದರ ₹13,269ಕ್ಕೆ ಮಾರಾಟವಾಯಿತು.

ಗಡಿಭಾಗದ, ಆಂಧ್ರ ಪ್ರದೇಶದ ಡಿ. ಹಿರೇಹಾಳ್ ಮಂಡಲದ ಮಲ್ಲಿಕೇತಿ ಗ್ರಾಮದ ರೈತ ಹನುಮಂತ ತಂದ 45 ಚೀಲ (6 ಕ್ವಿಂಟಲ್) ಶೇಂಗಾ ಉತ್ಕೃಷ್ಟ ಗುಣಮಟ್ಟದ್ದಾಗಿದ್ದು, ಹೆಚ್ಚು ಬೆಲೆಗೆ ಮಾರಾಟವಾಯಿತು.

'ಜ.23ರಂದು 1 ಕ್ವಿಂಟಲ್ ಶೇಂಗಾ ಗರಿಷ್ಠ ₹10,259ಕ್ಕೆ ಮಾರಾಟವಾಗಿತ್ತು. ದರ ₹11 ಸಾವಿರ ದಾಟಿದರೂ ಅಚ್ಚರಿಯಿಲ್ಲ' ಎಂದು ವರ್ತಕರು ಮತ್ತು ಮಧ್ಯವರ್ತಿಗಳು ಹೇಳಿದ್ದರು.

'ಈ ಬಾರಿ ಫಸಲು ಕಡಿಮೆಯಾಗಿದೆ' ಎಂದು ರೈತ ಹನುಮಂತ ಹೇಳಿದರು.

'ಮಾರುಕಟ್ಟೆಗೆ ಶೇಂಗಾ ಹೆಚ್ಚು ಬರುತ್ತಿಲ್ಲ. ಬೇಡಿಕೆ ಹೆಚ್ಚಾಗಿದೆ' ಎಂದು ವರ್ತಕ ಮರಿಬಸಪ್ಪ ಹೇಳಿದರು.

ಮುಂಬೈ ಧಾರಣೆ (ಶೇಂಗಾ)

28-01-2026

| | |
|---|---|
| ಜಾವಾ 70/80(ಹೊಸ) | 11400-11500 |
| ಜಾವಾ 80/90(ಹೊಸ) | 10700-10800 |
| ದಪ್ಪ ಮಧ್ಯಪ್ರದೇಶ (ಹೊಸ) | 8400-8500 |
| ದಪ್ಪ ಗುಜರಾತ್ (ಹೊಸ) | 9700-9800 |
| **ಶೇಂಗಾ ಎಣ್ಣೆ (10 ಕೆಜಿಗೆ)** | |
| ಕಚ್ಚಾ (ತೆರಿಗೆ ಬಿಟ್ಟು) | 1690 (1690) |
| ಒಂದು ವಾರದ ಡೆಲಿವರಿ | 1685 (1685) |
| ಪಾಮ್ ವಾರದ ಡೆಲಿವರಿ | 1338 (1298) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1535 (1535) |
| **ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)** | |
| ಅಪರಂಜಿ ಚಿನ್ನ 10 ಗ್ರಾಂ | 1,64,000 (1,57,900) |
| ಬೆಳ್ಳಿ ಕೆ.ಜಿಗೆ | 3,62,000 (3,46,000) |

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

| | |
|---|---|
| ಅರಸೀಕೆರೆ | ₹29488-29488 |
| ಪುತ್ತೂರು | ₹6000-22500 |

**ವೆನೆಜುವೆಲಾ ಸಹಕರಿಸದಿದ್ದರೆ ಸೈನಿಕ ಕಾರ್ಯಾಚರಣೆ ನಡೆಸುವ ಅಮೆರಿಕ ಹೇಳಿಕೆ ಸಮರ್ಥನೀಯವೆ?**

● ಹೌದು ● ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

# ಎ.ಐನಿಂದ ಐಷಾರಾಮಿ ವಿಮಾನ

## 'ವಿಂಗ್ಸ್ ಇಂಡಿಯಾ 2026' ವೈಮಾನಿಕ ಪ್ರದರ್ಶನದಲ್ಲಿ ಪ್ರಮುಖ ಆಕರ್ಷಣೆ

• ಪ್ರವೀಣ ಕುಮಾರ್ ಪಿ.ವಿ.




ನವದೆಹಲಿಯಿಂದ ಹೈದರಾಬಾದ್‌ಗೆ ಮಂಗಳವಾರ ಚೊಚ್ಚಲ ಪ್ರಯಾಣ ಬೆಳೆಸಿದ ಏರ್‌ಇಂಡಿಯಾ ಎಕ್ಸ್‌ಪ್ರೆಸ್‌ನ ಬಿ787– 9 ವಿಮಾನದ ಸಿಬ್ಬಂದಿ ಸಂಸ್ಥೆಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ವ್ಯವಸ್ಥಾಪಕ ನಿರ್ದೇಶಕ ಕ್ಯಾಂಬೆಲ್ ವಿಲ್ಸನ್ ಅವರ ಜೊತೆ ಹೈದರಾಬಾದ್‌ನ ಬೇಗಂಪೇಟ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಛಾಯಾಚಿತ್ರ ತೆಗೆಸಿಕೊಂಡರು

ಹೈದರಾಬಾದ್: ಏರ್ ಇಂಡಿಯಾ (ಎ.ಐ) ಕ್ಕಾಗಿಯೇ ತಯಾರಿಸಲಾದ ವಿಶಿಷ್ಟ ಒಳಾಂಗಣ ವ್ಯವಸ್ಥೆಯ ಬೋಯಿಂಗ್ 737-9 ಐಷಾರಾಮಿ ವಿಮಾನವನ್ನು ಇಲ್ಲಿ ಮಂಗಳವಾರ ಲೋಕಾರ್ಪಣೆಗೊಳಿಸಲಾಯಿತು.

ಮಾರ್ಕ್ ವಿಟಿ -ಎಡಬ್ಲ್ಯುಎ ನೋಂದಣಿಯ ಈ ವಿಮಾನ ಸಂಪೂರ್ಣವಾಗಿ ಬೋಯಿಂಗ್ ವಿಮಾನ ಕಾರ್ಖಾನೆಯಲ್ಲೇ ತಯಾರಾಗಿದೆ. ಏರ್ ಇಂಡಿಯಾ ಸಂಸ್ಥೆಗಾಗಿ ತಯಾರಿಕಾ ಹಂತದಲ್ಲೇ ಪೂರ್ತಿ ಹೊಸತನದಿಂದ ವಿನ್ಯಾಸಗೊಳಿಸಲಾಗಿದೆ. ಈ ವಿಮಾನವು ಇದೇ 11ರಂದು ಏರ್ ಇಂಡಿಯಾ ತೆಕ್ಕೆಗೆ ಸೇರಿದೆ. ಫೆ 1ರಿಂದ ಮುಂಬೈ – ಫ್ರಾಂಕ್‌ಫರ್ಟ್ ನಡುವೆ ಹಾರಾಟ ನಡೆಸುವ ಮೂಲಕ ವಾಣಿಜ್ಯ ಸೇವೆಯನ್ನು ಆರಂಭಿಸಲಿದೆ.

ಏರ್ ಇಂಡಿಯಾದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ವ್ಯವಸ್ಥಾಪಕ ನಿರ್ದೇಶಕ ಕ್ಯಾಂಬೆಲ್ ವಿಲ್ಸನ್, 'ಮೂರು ವರ್ಷಗಳ ಹಿಂದೆ ಸಂಸ್ಥೆಯು 470 ವಿಮಾನಗಳ ಖರೀದಿಗೆ ಬೋಯಿಂಗ್ ಜೊತೆ ಒಪ್ಪಂದ ಮಾಡಿಕೊಂಡಿತ್ತು. ಅದರ ಮೊದಲ ವಿಮಾನ ಬೋಯಿಂಗ್ 787-9 ಸಂಸ್ಥೆಗೆ ಸೇರ್ಪಡೆಯಾಗಿದೆ. ವಿಹಾನ್. ಎಐ ರೂಪಾಂತರ ಕಾರ್ಯಕ್ರಮದ ಮಹತ್ವದ ಕ್ಷಣವಿದು. ಇಂತಹದ್ದೇ ಇನ್ನೂ 19 ವಿಮಾನಗಳು ತಯಾರಾಗುತ್ತಿವೆ. ಇಂತಹದ್ದೇ ಒಳಾಂಗಣ ವಿನ್ಯಾಸವನ್ನು ಸಂಸ್ಥೆಯ ಎಲ್ಲ 26 ಬೋಯಿಂಗ್ 787-8 ವಿಮಾನಗಳಲ್ಲೂ ಅಳವಡಿಸಲಾಗುತ್ತದೆ' ಎಂದರು.

**ಐಷಾರಾಮಿ ವಿಮಾನದಲ್ಲಿ 296 ಆಸನಗಳು:** ಈ ವಿಮಾನದಲ್ಲಿ ಬ್ಯುಸಿನೆಸ್, ಪ್ರೀಮಿಯಂ ಎಕಾನಮಿ ಹಾಗೂ ಎಕಾನಮಿ ಎಂಬ ಮೂರು ಕ್ಯಾಬಿನ್ ದರ್ಜೆಗಳಿದ್ದು ಒಟ್ಟು 296 ಆಸನಗಳಿವೆ. ಬ್ಯುಸಿನೆಸ್ ದರ್ಜೆಯಲ್ಲಿ 1–2–1 ವಿನ್ಯಾಸದ ಐಷಾರಾಮಿ ಆಸನ ವ್ಯವಸ್ಥೆ ಇದೆ. ಬ್ಯುಸಿನೆಸ್ ದರ್ಜೆ ಪ್ರಯಾಣಿಕರಿಗೆ ಪ್ರತ್ಯೇಕ ಪ್ರವೇಶ ವ್ಯವಸ್ಥೆ ಇದೆ. 17 ಇಂಚಿನ 4 ಕೆ ರೆಸಲ್ಯೂಷನ್‌ನ ಕ್ಯುಎಲ್‌ಇಡಿ ಎಚ್‌ಡಿಆರ್ ಟಚ್‌ಸ್ಕ್ರೀನ್ ಮತ್ತು ಒಳಾಂಗಣ ಮನರಂಜನಾ ವ್ಯವಸ್ಥೆಯ ಹ್ಯಾಂಡ್‌ಸೆಟ್, ಬ್ಲೂಟೂತ್ ಹೆಡ್‌ಫೋನ್ ಪೇರಿಂಗ್, ವೈರ್‌ಲೆಸ್ ಚಾರ್ಜಿಂಗ್ ಸೌಕರ್ಯವಿದೆ ಎಂದು ಸಂಸ್ಥೆಯ ಅಧಿಕಾರಿಗಳು ತಿಳಿಸಿದರು.

'ಪ್ರೀಮಿಯಂ ಎಕಾನಮಿ ದರ್ಜೆಯಲ್ಲಿ 2-3-2 ವಿನ್ಯಾಸದಲ್ಲಿ 28 ಆಸನಗಳಿವೆ. 13.3-ಇಂಚಿನ 4 ಕೆ ರೆಸಲ್ಯೂಷನ್‌ನ ಕ್ಯುಎಲ್‌ಇಡಿ ಎಚ್‌ಡಿಆರ್ ಟಚ್‌ಸ್ಕ್ರೀನ್ ಒದಗಿಸಲಾಗಿದೆ. ಎಕಾನಮಿ ದರ್ಜೆಯಲ್ಲಿ 3-3-3 ವಿನ್ಯಾಸದ, ಸುರಕ್ಷಿತ ಹಾಗೂ ಆರಾಮದಾಯಕ 238 ಆಸನಗಳಿವೆ. 11.6-ಇಂಚಿನ 4 ಕೆ ರೆಸಲ್ಯೂಷನ್‌ನ ಕ್ಯುಎಲ್‌ಇಡಿ ಎಚ್‌ಡಿಆರ್ ಟಚ್‌ಸ್ಕ್ರೀನ್ ಹೊಂದಿದೆ. ಮೂರೂ ದರ್ಜೆಯ ಕ್ಯಾಬಿನ್‌ಗಳಲ್ಲೂ ಟೈಪ್ ಎ ಮತ್ತು ಟೈಪ್ ಸಿ ಫಾಸ್ಟ್ ಚಾರ್ಜಿಂಗ್ ಪೋರ್ಟ್‌ಗಳು ಲಭ್ಯ. ಭಾರತೀಯ ಪುರಾತನ ಆರೋಗ್ಯ ಸಂಪ್ರದಾಯಗಳಿಂದ ಪ್ರೇರಿತವಾದ ಮೂಡ್ ಲೈಟಿಂಗ್ ಇದರ ಇನ್ನೊಂದು ವಿಶೇಷ' ಎಂದರು.

'ವಿಂಗ್ಸ್ ಇಂಡಿಯಾ 2026' ವೈಮಾನಿಕ ಪ್ರದರ್ಶನದಲ್ಲಿ ಭಾಗವಹಿಸಲು ಈ ವಿಮಾನವು ದೆಹಲಿಯಿಂದ ಹೈದರಾಬಾದ್‌ನ ಬೇಗಂಪೇಟ್ ವಿಮಾನ ನಿಲ್ದಾಣಕ್ಕೆ ಮಂಗಳವಾರ ಪ್ರಯಾಣಿಕರೊಂದಿಗೆ ತನ್ನ ಚೊಚ್ಚಲ ಪ್ರಯಾಣ ಬೆಳೆಸಿತು.

## ಸೆನ್ಸೆಕ್ಸ್, ನಿಫ್ಟಿ ಏರಿಕೆ



ಮುಂಬೈ (ಪಿಟಿಐ): ಕೈಗಾರಿಕೆ, ಇಂಧನ ಮತ್ತು ಲೋಹ ವಲಯದ ಕಂಪನಿಗಳ ಷೇರುಗಳ ಖರೀದಿ ಹೆಚ್ಚಳದಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಬುಧವಾರದ ವಹಿವಾಟಿನಲ್ಲಿ ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 487 ಅಂಶ ಏರಿಕೆಯಾಗಿ, 82,344ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 167 ಅಂಶ ಹೆಚ್ಚಳವಾಗಿ, 25,342ಕ್ಕೆ ಕೊನೆಗೊಂಡಿದೆ.

'ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವಿನ ಮುಕ್ತ ವ್ಯಾಪಾರ ಒಪ್ಪಂದದ ಮಾತುಕತೆ ಪೂರ್ಣಗೊಂಡ ಘೋಷಣೆ ಆಗಿದೆ. ಇದು ದೇಶದ ಷೇರುಪೇಟೆ ಸೂಚ್ಯಂಕಗಳ ಏರಿಕೆಗೆ ಕಾರಣವಾಯಿತು' ಎಂದು ಎನ್ರಿಚ್ ಮನಿ ಸಂಸ್ಥೆಯ ಸಿಇಒ ಪೊನ್ಮುಡಿ ಆರ್. ಹೇಳಿದ್ದಾರೆ.

ಡಾಲರ್ ಮೌಲ್ಯ ಇಳಿಕೆ ಆಗಿರುವುದು ಮತ್ತು ವಿವಿಧ ದೇಶಗಳ ಮಾರುಕಟ್ಟೆಗಳು ಸಕಾರಾತ್ಮಕ ವಹಿವಾಟು ಕಂಡಿರುವುದು ದೇಶದ ಷೇರುಪೇಟೆ ಸೂಚ್ಯಂಕಗಳ ಏರಿಕೆಗೆ ಉತ್ತೇಜನ ನೀಡಿದವು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

# ಸುದ್ದಿ 2 ನಿಮಿಷ

## ಚಿನ್ನ ₹1.71 ಲಕ್ಷ, ಬೆಳ್ಳಿ ₹3.85 ಲಕ್ಷ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರದ ವಹಿವಾಟಿನಲ್ಲೂ ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿಕೆ ಮುಂದುವರಿದಿದ್ದು, ಬೆಲೆ ಇಳಿಕೆಯ ಲಕ್ಷಣಗಳು ಕಾಣಿಸುತ್ತಿಲ್ಲ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹5 ಸಾವಿರ ಹೆಚ್ಚಳವಾಗಿ, ₹1.71 ಲಕ್ಷದಂತೆ ಮಾರಾಟವಾಗಿದೆ. ಬೆಳ್ಳಿ ದರವು ಕೆ.ಜಿಗೆ ₹15 ಸಾವಿರ ಏರಿಕೆಯಾಗಿ, ₹3.85 ಲಕ್ಷಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ತಮಿಳುನಾಡಿನ ಚೆನ್ನೈನಲ್ಲಿ 1 ಕೆ.ಜಿ ಬೆಳ್ಳಿ ದರವು ₹4 ಲಕ್ಷಕ್ಕೆ ಮುಟ್ಟಿದೆ.

ಅಮೆರಿಕದ ಡಾಲರ್ ಮೌಲ್ಯ ಇಳಿಕೆ ಮತ್ತು ಜಾಗತಿಕ ಮಾರುಕಟ್ಟೆಯಲ್ಲಿ ಹೂಡಿಕೆದಾರರು ನಿರಂತರವಾಗಿ ಚಿನ್ನ ಮತ್ತು ಬೆಳ್ಳಿ ಖರೀದಿಗೆ ಮುಂದಾಗಿರುವುದು ಬೆಲೆ ಏರಿಕೆಗೆ ಕಾರಣ ಎಂದು ತಿಳಿಸಿದೆ.

'ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ರಾಜಕೀಯ ಬಿಕ್ಕಟ್ಟು ಮತ್ತು ವ್ಯಾಪಾರ ಸಂಬಂಧಿತ ಅನಿಶ್ಚಿತತೆಯು ಮುಂದುವರಿದಿದೆ. ಇದು ಹೂಡಿಕೆದಾರರಿಗೆ ಸುರಕ್ಷಿತ ಹೂಡಿಕೆಯಾದ ಚಿನ್ನ ಮತ್ತು ಬೆಳ್ಳಿಯಲ್ಲಿ ಹೂಡಿಕೆ ಮಾಡಲು ಉತ್ತೇಜಿಸಿದೆ. ಇದು ದರ ಏರಿಕೆಗೆ ಕಾರಣ' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಸರಕುಗಳ ವಿಭಾಗದ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.




## 16 ಸಾವಿರ ಉದ್ಯೋಗಿಗಳ ವಜಾಕ್ಕೆ ಅಮೆಜಾನ್ ನಿರ್ಧಾರ

ನ್ಯೂಯಾರ್ಕ್ (ಎಎಫ್‌ಪಿ): ಇ-ಕಾಮರ್ಸ್ ವಲಯದ ಜಾಗತಿಕ ದೈತ್ಯ ಕಂಪನಿ ಅಮೆಜಾನ್, ವಿಶ್ವದಾದ್ಯಂತ 16 ಸಾವಿರ ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸಲು ಮುಂದಾಗಿದೆ.

ಕಂಪನಿಯ ಪುನರ್‌ರಚನೆಯ ಭಾಗವಾಗಿ ಉದ್ಯೋಗಿಗಳನ್ನು ವಜಾಗೊಳಿಸಲು ಮುಂದಾಗಿರುವುದಾಗಿ ಅಮೆಜಾನ್ ಕಂಪನಿಯು ಬುಧವಾರ ತಿಳಿಸಿದೆ.

ಕಳೆದ ಅಕ್ಟೋಬರ್ ತಿಂಗಳಿನಲ್ಲಿ 14 ಸಾವಿರ ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸಲಾಗುವುದು ಎಂದು ಕಂಪನಿ ಹೇಳಿತ್ತು.

ಅಕ್ಟೋಬರ್‌ನಲ್ಲಿ ಮಾಧ್ಯಮ ವರದಿಗಳ ಪ್ರಕಾರ, ಅಮೆಜಾನ್ ಕಂಪನಿಯು 3.50 ಲಕ್ಷ ಕಚೇರಿ ಸಿಬ್ಬಂದಿ ಪೈಕಿ 30 ಸಾವಿರ (ಶೇ 10ರವರೆಗೆ) ಸಿಬ್ಬಂದಿಯನ್ನು ವಜಾಗೊಳಿಸಲಿದೆ ಎನ್ನಲಾಗಿತ್ತು. ಇದು ಕಂಪನಿಯ ವಿತರಣಾ ಮತ್ತು ದಾಸ್ತಾನು ಕೇಂದ್ರಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಯ ಮೇಲೆ ಪರಿಣಾಮ ಬೀರುವುದಿಲ್ಲ ಎಂದು ಹೇಳಲಾಗಿತ್ತು. ಕಂಪನಿಯು 15 ಲಕ್ಷ ಉದ್ಯೋಗಿಗಳನ್ನು ಹೊಂದಿದೆ.

## ಬಿಇಎಲ್ ಲಾಭ ಶೇ 20ರಷ್ಟು ಏರಿಕೆ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ (ಬಿಇಎಲ್) ತೆರಿಗೆ ನಂತರದ ಲಾಭದಲ್ಲಿ ಶೇ 20ರಷ್ಟು ಹೆಚ್ಚಳವಾಗಿದೆ.

ಕಳೆದ ಆರ್ಥಿಕ ವರ್ಷದಲ್ಲಿ ₹1,316 ಕೋಟಿ ಲಾಭ ಆಗಿತ್ತು. ಅದು ಈ ಬಾರಿ ₹1,590 ಕೋಟಿಯಷ್ಟಾಗಿದೆ ಎಂದು ಕಂಪನಿ ಷೇರುಪೇಟೆಗೆ ಬುಧವಾರ ತಿಳಿಸಿದೆ. ವರಮಾನದಲ್ಲಿ ಶೇ 23ರಷ್ಟು ಹೆಚ್ಚಳವಾಗಿದ್ದು, ₹7,121 ಕೋಟಿಗೆ ತಲುಪಿದೆ.

ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿ ಉತ್ತಮ ಫಲಿತಾಂಶ ದಾಖಲಿಸಿದೆ. ಹೀಗಾಗಿ ಕಂಪನಿಯ ಷೇರಿನ ಮೌಲ್ಯ ಬುಧವಾರದ ವಹಿವಾಟಿನಲ್ಲಿ ಶೇ 9ರವರೆಗೆ ಹೆಚ್ಚಳವಾಗಿದೆ. ಪ್ರತಿ ಷೇರಿನ ಬೆಲೆ ಬಿಎಸ್‌ಇಯಲ್ಲಿ ₹453.40 ಆಗಿದೆ.

ಷೇರಿನ ಮೌಲ್ಯ ಏರಿಕೆಯಿಂದ ಕಂಪನಿಯ ಮಾರುಕಟ್ಟೆ ಮೌಲ್ಯಕ್ಕೆ ಒಂದೇ ದಿನ ₹27,082 ಕೋಟಿ ಸೇರ್ಪಡೆಯಾಗಿದ್ದು, ಕಂಪನಿಯ ಒಟ್ಟು ಮಾರುಕಟ್ಟೆ ಮೌಲ್ಯ ₹3.31 ಲಕ್ಷ ಕೋಟಿಯಾಗಿದೆ.

ಅಡಿಕೆ ಧಾರಣೆ

| ಕುಮಟಾ | | ಶಿವಮೊಗ್ಗ | | ಶಿರಸಿ | |
|---|---|---|---|---|---|
| ಬೆಟ್ಟೆ | 42699-50469 | ಹಳತು | 41500-53500 | ಹೊಸಚಾಲಿ | 36899-44599 |
| ಚಾಲಿ | 46999-49699 | ಬೆಟ್ಟೆ | 53009-66700 | ಕೆಂಪುಗೋಟು | 32900-35289 |
| ಚಿಪ್ಪು | 29869-36609 | ಗೊರಬಲು | 19009-41786 | ರಾಶಿ | 48600-53759 |
| ಕೋಕ | 15019-32699 | ರಾಶಿ | 43069-56699 | ತಟ್ಟಿಬೆಟ್ಟೆ | 37309-47339 |
| ಫ್ಯಾಕ್ಟರಿ | 10019-26269 | ಸರಕು | 61009-91069 | **ಶಿರಸಿ** | |
| ಹೊಸಚಾಲಿ | 41689-46101 | **ಸಿದ್ದಾಪುರ** | | ಬೆಟ್ಟೆ | 45059-52099 |
| **ಪುತ್ತೂರು** | | ಬಿಳಿಗೋಟು | 22699-31809 | ಬಿಳಿಗೋಟು | 30309-41980 |
| ಕೋಕ | 23000-35500 | ಚಾಲಿ | 41600-48600 | ಚಾಲಿ | 45499-50681 |
| ಹೊಸತು | 26000-46000 | ಕೋಕ | 22589-30899 | ಕೆಂಪುಗೋಟು | 26499-37399 |
| | | | | ರಾಶಿ | 53049-57099 |

## ಟಿವಿಎಸ್ ಲಾಭ ಶೇ 46ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಡಿಸೆಂಬರ್ ತ್ರೈಮಾಸಿಕದಲ್ಲಿ ವಾಹನ ತಯಾರಿಕಾ ಕಂಪನಿ ಟಿವಿಎಸ್ ಮೋಟರ್ ಲಾಭ ಶೇ 46ರಷ್ಟು ಹೆಚ್ಚಳವಾಗಿದೆ.

ಕಳೆದ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು ₹609 ಕೋಟಿ ಲಾಭ ಗಳಿಸಿತ್ತು. ಅದು ಈ ಬಾರಿ ₹891 ಕೋಟಿಗೆ ಏರಿಕೆಯಾಗಿದೆ ಎಂದು ಕಂಪನಿ ಷೇರುಪೇಟೆಗೆ ಬುಧವಾರ ತಿಳಿಸಿದೆ.

2024ರ ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ವರಮಾನವು ₹11,034 ಕೋಟಿಯಷ್ಟಿತ್ತು. ಅದು ಈ ಬಾರಿ ₹14,755 ಕೋಟಿಗೆ ಏರಿಕೆಯಾಗಿದೆ. ಒಟ್ಟು ವೆಚ್ಚವು ₹10,175 ಕೋಟಿಯಿಂದ ₹13,369 ಕೋಟಿಗೆ ಹೆಚ್ಚಳವಾಗಿದೆ.

ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳ ಮಾರಾಟದಲ್ಲಿ ಶೇ 27ರಷ್ಟು ಹೆಚ್ಚಳವಾಗಿದ್ದು, 15.44 ಲಕ್ಷ ವಾಹನಗಳು ಮಾರಾಟವಾಗಿವೆ ಎಂದು ಕಂಪನಿ ತಿಳಿಸಿದೆ.

## ಬಂಧನ್ ಬ್ಯಾಂಕ್ ಎಂಎಬಿ ಇಳಿಕೆ

ಬೆಂಗಳೂರು: ಖಾಸಗಿ ವಲಯದ ಬಂಧನ್‌ಬ್ಯಾಂಕ್ ತನ್ನ ಸ್ಟ್ಯಾಂಡರ್ಡ್ ಉಳಿತಾಯ ಖಾತೆಗಳಲ್ಲಿ ತಿಂಗಳೊಂದರಲ್ಲಿ ಕಾಯ್ದುಕೊಳ್ಳಬೇಕಾದ ಸರಾಸರಿ ಮೊತ್ತವನ್ನು (ಎಂಎಬಿ) ತಗ್ಗಿಸುತ್ತಿರುವುದಾಗಿ ಹೇಳಿದೆ.

ಆದರೆ ಎಂಎಬಿ ಮೊತ್ತ ತಗ್ಗಿದ್ದರೂ ಖಾತೆಯ ಜೊತೆ ಸಿಗುವ ವೈಶಿಷ್ಟ್ಯಗಳು ಮೊದಲಿನಂತೆಯೇ ಮುಂದುವರಿಯಲಿವೆ ಎಂದು ಬ್ಯಾಂಕ್‌ನ ಪ್ರಕಟಣೆ ತಿಳಿಸಿದೆ. ಸ್ಟ್ಯಾಂಡರ್ಡ್ ಉಳಿತಾಯ ಖಾತೆಗಳಿಗೆ ಅನ್ವಯವಾಗುವ ಎಂಎಬಿ ಮೊತ್ತ ₹5,000 ಇದ್ದಿದ್ದು ಫೆಬ್ರುವರಿ 1ರಿಂದ ಅನ್ವಯವಾಗುವಂತೆ ₹2,000ಕ್ಕೆ ಇಳಿಕೆ ಆಗಲಿದೆ.

'ದೇಶದಾದ್ಯಂತ ಇರುವ ಬ್ಯಾಂಕ್‌ನ ಲಕ್ಷಾಂತರ ಗ್ರಾಹಕರಿಗೆ ಬ್ಯಾಂಕಿಂಗ್ ಸೇವೆಗಳು ಇನ್ನಷ್ಟು ಕೈಗೆಟಕುವಂತೆ ಆಗಲಿ, ಹೆಚ್ಚು ಸುಲಭವಾಗಿ ಅವರಿಗೆ ಸೇವೆಗಳು ಲಭ್ಯವಾಗಲಿ ಎಂಬ ಅಪೇಕ್ಷೆಯೊಂದಿಗೆ ಈ ಬದಲಾವಣೆ ತರಲಾಗಿದೆ' ಎಂದು ಪ್ರಕಟಣೆ ತಿಳಿಸಿದೆ.

## ಎಕ್ಸೈಸ್ ಸುಂಕ: ಸಿಗರೇಟು ಮಾರಾಟ ಇಳಿಕೆ?

ನವದೆಹಲಿ (ಪಿಟಿಐ): ಮುಂಬರುವ ಹಣಕಾಸು ವರ್ಷದಲ್ಲಿ ದೇಶಿ ಸಿಗರೇಟ್ ಉದ್ಯಮವು ಶೇಕಡ 6ರಿಂದ ಶೇ 8ರಷ್ಟು ಮಾರಾಟ ಇಳಿಕೆಯನ್ನು ಕಾಣಲಿದೆ ಎಂದು ಕ್ರಿಸಿಲ್ ರೇಟಿಂಗ್ಸ್ ಸಂಸ್ಥೆ ಅಂದಾಜು ಮಾಡಿದೆ.

ಸಿಗರೇಟಿಗೆ ಅನ್ವಯವಾಗುವ ಜಿಎಸ್‌ಟಿ ಏರಿಕೆ, ಹೆಚ್ಚುವರಿ ಎಕ್ಸೈಸ್ ಸುಂಕದ ಕಾರಣದಿಂದಾಗಿ ಹೀಗಾಗಲಿದೆ ಎಂದು ಕ್ರಿಸಿಲ್ ಹೇಳಿದೆ. ಹೆಚ್ಚುವರಿ ತೆರಿಗೆಯು ಫೆಬ್ರುವರಿ 1ರಿಂದ ಜಾರಿಗೆ ಬರಲಿದೆ.

ಈಗ ಸಿಗರೇಟಿನ ಮೇಲೆ ಶೇ 28ರಷ್ಟು ಜಿಎಸ್‌ಟಿ ಹಾಗೂ ಪರಿಹಾರ ಸೆಸ್ ವಿಧಿಸಲಾಗುತ್ತಿದೆ. ಆದರೆ ಫೆಬ್ರುವರಿ 1ರಿಂದ ಪರಿಹಾರ ಸೆಸ್ ಇಲ್ಲವಾಗುತ್ತದೆ, ಹೆಚ್ಚುವರಿ ಎಕ್ಸೈಸ್ ಸುಂಕ (ಸಿಗರೇಟಿನ ಉದ್ದ ಆಧರಿಸಿ ₹2.05ರಿಂದ ₹8.5ರವರೆಗೆ ಇರಲಿದೆ) ಜಾರಿಗೆ ಬರಲಿದೆ.

65 ಮಿ.ಮೀ.ಗಿಂತ ಹೆಚ್ಚಿನ ಉದ್ದದ ಸಿಗರೇಟುಗಳಿಗೆ ₹3.06ರಿಂದ ₹8.5ರವರೆಗೆ ಎಕ್ಸೈಸ್ ಸುಂಕ ಜಾರಿಯಾಗಲಿದೆ. 65 ಮಿ.ಮೀ.ಗಿಂತ ಕಡಿಮೆ ಉದ್ದದ ಸಿಗರೇಟುಗಳಿಗೆ ₹2.05ರಿಂದ ₹2.1ರವರೆಗೆ ಎಕ್ಸೈಸ್ ಸುಂಕ ಅನ್ವಯವಾಗಲಿದೆ ಎಂದು ಕ್ರಿಸಿಲ್ ಹೇಳಿದೆ. ಇಷ್ಟೇ ಅಲ್ಲ, ಸಿಗರೇಟಿನ ಅಂತಿಮ ಬೆಲೆಯ ಮೇಲೆ ಅನ್ವಯವಾಗುವ ಜಿಎಸ್‌ಟಿ ದರವು ಶೇ 40ಕ್ಕೆ ಹೆಚ್ಚಳವಾಗಲಿದೆ.

ಸಿಗರೇಟು ತಯಾರಿಕಾ ಕಂಪನಿಗಳು ಬೆಲೆ ಏರಿಕೆಯ ಅಷ್ಟೂ ಪಾಲನ್ನು ಗ್ರಾಹಕರಿಗೆ ವರ್ಗಾಯಿಸಲಿಕ್ಕಿಲ್ಲ. ಹೀಗಾಗಿ ಕಂಪನಿಗಳ ವರಮಾನದ (ಬಡ್ಡಿ ಮತ್ತು ತೆರಿಗೆಪೂರ್ವ) ಪ್ರಮಾಣದಲ್ಲಿ ಶೇ 2ರಿಂದ ಶೇ 3ರಷ್ಟು ಇಳಿಕೆ ಆಗಬಹುದು ಎಂದು ಹೇಳಿದೆ.





## ಇರಾನ್‌ನಲ್ಲಿ ಅಮೆರಿಕ ದಾಳಿಯ ಭೀತಿ

ದುಬೈ (ಎಪಿ): ಅಮೆರಿಕ ಸೇನೆಯ ದಾಳಿಯ ಸಾಧ್ಯತೆಯ ಕಾರಣಕ್ಕೆ ಇರಾನ್ ಅಧಿಕಾರಿಗಳು ಪಶ್ಚಿಮ ಏಷ್ಯಾದ ಇತರ ದೇಶಗಳನ್ನು ಬುಧವಾರ ಸಂಪರ್ಕಿಸಿದ್ದಾರೆ.

ಯಾವುದೇ ದಾಳಿಗೆ ತಮ್ಮ ವಾಯುಪ್ರದೇಶವನ್ನು ಬಳಕೆ ಮಾಡಲು ಅವಕಾಶ ನೀಡುವುದಿಲ್ಲ ಎಂದು ಸೌದಿ ಅರೇಬಿಯಾ ಮತ್ತು ಯುಎಇ ದೇಶಗಳು ಹೇಳಿವೆ. ಆದರೆ ಅಮೆರಿಕ ತನ್ನ ಯುಎಸ್‌ಎಸ್ ಅಬ್ರಹಾಂ ಲಿಂಕನ್ ಯುದ್ಧನೌಕೆ ಮತ್ತು ಕ್ಷಿಪಣಿ ನಾಶಕಗಳನ್ನು ಸಮುದ್ರ ಪ್ರದೇಶಕ್ಕೆ ಸ್ಥಳಾಂತರಿಸಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮುಂದಿನ ನಡೆ ಏನು ಎಂಬುದು ಅಸ್ಪಷ್ಟವಾಗಿದೆ. ಆದರೆ, ಇರಾನ್ ಮೇಲೆ ತಾವು ದಾಳಿ ನಡೆಸುವುದಾಗಿ ಅವರು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಹಾಕಿರುವುದರಿಂದ ಆತಂಕ ಸೃಷ್ಟಿಯಾಗಿದೆ. ದಾಳಿ ಯಾವಾಗ ಎನ್ನುವುದನ್ನು ಅವರು ಬರೆದಿಲ್ಲ.

## 'ಜಾಗತಿಕ ವ್ಯಾಪಾರದಲ್ಲಿ ಭಾರತದ ಶಕೆ'

ನ್ಯೂಯಾರ್ಕ್ (ಪಿಟಿಐ): ಭಾರತ–ಐರೋಪ್ಯ ಒಕ್ಕೂಟದೊಟ್ಟಿಗಿನ ಮುಕ್ತ ವ್ಯಾಪಾರ ಒಪ್ಪಂದ ಅಂತಿಮಗೊಂಡಿದೆ. ಈ ಮೂಲಕ ಭಾರತವು ಜಾಗತಿಕ ವ್ಯಾಪಾರದ ವಿಷಯದಲ್ಲಿ ಮೇಲ್ಮಟ್ಟಕ್ಕೆ ಏರಿದಂತಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತದ ವ್ಯಾಪಾರ ಪ್ರತಿನಿಧಿ ಜೇಮಿಸನ್ ಗ್ರೀರ್ ಹೇಳಿದರು.

ವ್ಯಾಪಾರ ಒಪ್ಪಂದ ಕುರಿತ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಗ್ರೀರ್ ಅವರು, 'ಅದನ್ನು ಐತಿಹಾಸಿಕ ಒಪ್ಪಂದ ಎಂದು ವರ್ಣಿಸಲಾಗಿದೆ. ಒಪ್ಪಂದದ ಕೆಲವು ಅಂಶಗಳನ್ನು ಗಮನಿಸಿದೆ. ಇದರಿಂದ ಜಾಗತಿಕ ವ್ಯಾಪಾರದಲ್ಲಿ ಭಾರತವು ಹೊಸ ಶಕೆ ಆರಂಭಿಸಲಿದೆ' ಎಂದು ತಿಳಿಸಿದರು.

'ಒಪ್ಪಂದದ ಬಳಿಕ ಭಾರತವು ಹೆಚ್ಚುವರಿ ವಲಸೆ ಹಕ್ಕನ್ನು ಪಡೆಯುವ ಸಾಧ್ಯತೆ ಇದೆ. ಭಾರತೀಯ ಉದ್ಯೋಗಿಗಳ ಸಂಚಾರಕ್ಕೂ ಅವಕಾಶ ಮಾಡಿಕೊಡುವ ಬಗ್ಗೆ ಇ.ಯು ನಾಯಕರಾದ ಉರ್ಸುಲಾ ಫಾಂಡರ್ ಲೇಯನ್ ಮಾತನಾಡಿದ್ದಾರೆ ಎಂದು ತಿಳಿದುಬಂದಿದೆ' ಎಂದರು.

'ಅಮೆರಿಕವು ಜಾಗತೀಕರಣದ ಸಮಸ್ಯೆಗಳ ಇತ್ಯರ್ಥಕ್ಕೆ ಯತ್ನಿಸುತ್ತಿರುವಾಗಲೇ, ಐರೋಪ್ಯ ಒಕ್ಕೂಟವು ಜಾಗತಿಕ ವ್ಯಾಪಾರಕ್ಕೆ ಇನ್ನಷ್ಟು ವೇಗ ನೀಡುತ್ತಿರುವಂತೆ ಕಾಣುತ್ತಿದೆ' ಎಂದು ಹೇಳಿದರು.

# ಬ್ರಿಟನ್‌ಗೆ ಚೀನಾ ಮುಖ್ಯ: ಕಿಯರ್ ಸ್ಟಾರ್ಮರ್

ಲಂಡನ್ (ಪಿಟಿಐ): 'ಇಷ್ಟವಿರಲಿ ಇಲ್ಲದೇ ಇರಲಿ, ಬ್ರಿಟನ್‌ಗೆ ಚೀನಾ ಮುಖ್ಯವಾಗಿದೆ' ಎಂದು ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಹೇಳಿದ್ದಾರೆ.

ಅವರು 60 ಜನರ ವ್ಯಾಪಾರ ಮತ್ತು ಸಾಂಸ್ಕೃತಿಕ ನಿಯೋಗದೊಂದಿಗೆ ಬೀಜಿಂಗ್‌ಗೆ ಬುಧವಾರ ಭೇಟಿ ಕೊಡುವುದಕ್ಕೂ ಮುನ್ನ ನೀಡಿರುವ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಬ್ರಿಟನ್‌ನ ಲೇಬರ್ ಪಾರ್ಟಿ ಸರ್ಕಾರವು, ಎಂಟು ವರ್ಷಗಳ ನಂತರ ಚೀನಾಕ್ಕೆ ನೀಡುತ್ತಿರುವ ಈ ಮೊದಲ ಭೇಟಿಯ ಮೂಲಕ ಆ ದೇಶದೊಂದಿಗೆ ಮತ್ತೆ ಸಂಬಂಧ ವೃದ್ಧಿಸಿಕೊಳ್ಳಲು ಆಸಕ್ತಿ ತೋರುತ್ತಿದೆ. ಅದರಲ್ಲೂ ವಿಶೇಷವಾಗಿ, ಲಂಡನ್‌ನಲ್ಲಿ ಚೀನಾದ ವಿವಾದಾತ್ಮಕ 'ರಾಯಭಾರ ಕಚೇರಿ' ನಿರ್ಮಾಣಕ್ಕೆ ಸಚಿವರು ಅನುಮತಿ ನೀಡಿದ ಬೆನ್ನಲ್ಲೇ ಈ ಭೇಟಿ ನಡೆಯುತ್ತಿರುವುದು ಗಮನಾರ್ಹವಾಗಿದೆ.

'ಹಲವು ವರ್ಷಗಳಿಂದ ಚೀನಾದ ಬಗ್ಗೆ ನಮ್ಮ ಧೋರಣೆಯು ಅಸ್ಥಿರತೆಯಿಂದ ಕೂಡಿದೆ. ಆದರೆ, ಇಷ್ಟವಿರಲಿ ಇಲ್ಲದಿರಲಿ, ಬ್ರಿಟನ್‌ಗೆ ಚೀನಾ ಮುಖ್ಯ. ವಿಶ್ವದ ಅತಿದೊಡ್ಡ ಆರ್ಥಿಕ ಶಕ್ತಿಗಳಲ್ಲಿ ಒಂದಾಗಿರುವ ಆ ದೇಶದೊಂದಿಗೆ ಸ್ಥಿರವಾದ ಸಂಬಂಧವನ್ನು ಹೊಂದುವುದು ಅಗತ್ಯವಾಗಿದೆ. ನಮ್ಮ ಮಿತ್ರ ರಾಷ್ಟ್ರಗಳು ಇದನ್ನೇ ಮಾಡುತ್ತವೆ ಮತ್ತು ನಾನು ಇದನ್ನೇ ಮಾಡುತ್ತಿದ್ದೇನೆ' ಎಂದು ಹೇಳಿದ್ದಾರೆ.

ಕಿಯರ್ ಸ್ಟಾರ್ಮರ್ ಅವರು ಗುರುವಾರ ಬೀಜಿಂಗ್‌ನಲ್ಲಿ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಮತ್ತು ಪ್ರಧಾನಿ ಲಿ ಕಿಯಾಂಗ್ ಅವರನ್ನು ಭೇಟಿಯಾಗಿ ವ್ಯಾಪಾರ, ಹೂಡಿಕೆ ಮತ್ತು ರಾಷ್ಟ್ರೀಯ ಭದ್ರತೆ ಕುರಿತು ಮಾತುಕತೆ ನಡೆಸಲಿದ್ದಾರೆ.

ಪ್ರಮುಖರ ನಿಯೋಗದೊಂದಿಗೆ ಭೇಟಿ ನೀಡಿರುವ ಸ್ಟಾರ್ಮರ್ ಅವರು, ಹಣಕಾಸು ಸೇವಾ ವಲಯ, ಕೈಗಾರಿಕೆಗಳು ಮತ್ತು ಜೀವ ವಿಜ್ಞಾನ ಕ್ಷೇತ್ರಗಳಲ್ಲಿ ಉಭಯ ದೇಶಗಳ ನಡುವಿನ ವ್ಯಾಪಾರ ಸಂಬಂಧಗಳನ್ನು ವೃದ್ಧಿಸಲು ಪ್ರಯತ್ನಿಸುತ್ತಿದ್ದಾರೆ.

## 'ಗುಂಡಿನ ದಾಳಿ ಕಳವಳಕಾರಿ'

ಬೀಜಿಂಗ್ (ಎಎಫ್‌ಪಿ): 'ಅಮೆರಿಕದ ವಲಸೆ ಅಧಿಕಾರಿಗಳು ಮಿನ್ನೆಪೊಲೀಸ್‌ನಲ್ಲಿ ನರ್ಸ್ ಅಲೆಕ್ಸ್ ಪ್ರೆಟಿ (37) ಎಂಬವರನ್ನು ಗುಂಡಿಟ್ಟು ಕೊಂದಿರುವುದು ಕಳವಳಕಾರಿ' ಎಂದು ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಹೇಳಿದ್ದಾರೆ.

'ಘಟನೆಯ ಕೆಲ ದೃಶ್ಯಾವಳಿಗಳನ್ನು ನೋಡಿದ ಯಾರೇ ಆದರೂ ಅವು ಕಳವಳಕಾರಿ ಎಂದು ಹೇಳದಿರಲು ಸಾಧ್ಯವಿಲ್ಲ. ಆದರೆ, ನಾನು ಎಲ್ಲ ದೃಶ್ಯಾವಳಿ ಅಥವಾ ವಿವರಗಳನ್ನು ನೋಡಿದ್ದೇನೆ ಎಂದು ಹೇಳಿಕೊಳ್ಳುತ್ತಿಲ್ಲ. ಆದರೂ, ನಾನು ನೋಡಿರುವ ದೃಶ್ಯಗಳ ಮಟ್ಟಿಗೆ ಅವು ನಿಜಕ್ಕೂ ಆತಂಕಕಾರಿ ಎಂದೇ ಹೇಳುತ್ತೇನೆ' ಎಂದು ಸ್ಟಾರ್ಮರ್ ಅವರು ಬುಧವಾರ ಅಧಿಕೃತ ಭೇಟಿಗಾಗಿ ಚೀನಾಕ್ಕೆ ಆಗಮಿಸಿದ ವಿಮಾನದಲ್ಲಿ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಕಳೆದ ಶನಿವಾರ ನಡೆದ ಪ್ರತಿಭಟನೆ ವೇಳೆ, ವಲಸೆ ಅಧಿಕಾರಿಗಳು ಪ್ರತಿಭಟನಾನಿರತ ಮಹಿಳೆಯೊಬ್ಬರನ್ನು ದೂರಕ್ಕೆ ತಳ್ಳಿದಾಗ ಆಕೆಯ ನೆರವಿಗೆ ಅಲೆಕ್ಸ್ ಪ್ರೆಟಿ ಧಾವಿಸಿದ್ದರು. ಅಲ್ಲಿದ್ದ ಅಧಿಕಾರಿಗಳು ಅವರನ್ನು ನೆಲಕ್ಕೆ ಉರುಳಿಸಿ ಸಮೀಪದಿಂದಲೇ ಗುಂಡು ಹಾರಿಸುತ್ತಿರುವುದು ವಿಡಿಯೊದಲ್ಲಿ ಸೆರೆಯಾಗಿದೆ.


ವಿಜಯ್ ದೇವರಕೊಂಡ

# ರಣಬಾಲಿಯಾದ ವಿಜಯ್ ದೇವರಕೊಂಡ

**ತೆಲುಗು ನಟ** ವಿಜಯ್ ದೇವರಕೊಂಡ ಹಿಟ್ ನಿರೀಕ್ಷೆಯಲ್ಲಿದ್ದಾರೆ. 2018ರಲ್ಲಿ ತೆರೆಕಂಡ 'ಗೀತ ಗೋವಿಂದಂ' ಬಳಿಕ ಅವರ ಸಿನಿಮಾಗಳು ದೊಡ್ಡ ಮಟ್ಟದಲ್ಲಿ ಬಾಕ್ಸ್ ಆಫೀಸ್‌ನಲ್ಲಿ ಸದ್ದು ಮಾಡಿಲ್ಲ. ಇದೀಗ ವಿಜಯ್ ದೇವರಕೊಂಡ–ರಶ್ಮಿಕಾ ಮಂದಣ್ಣ ನಟನೆಯ ಹೊಸ ಸಿನಿಮಾದ ಶೀರ್ಷಿಕೆ ಘೋಷಣೆಯಾಗಿದ್ದು, ಸಾಕಷ್ಟು ನಿರೀಕ್ಷೆ ಇದರ ಮೇಲಿದೆ.

ಈ ಹಿಂದೆ 'ಗೀತ ಗೋವಿಂದಂ' ಮತ್ತು 'ಡಿಯರ್ ಕಾಮ್ರೇಡ್'ನಲ್ಲಿ ವಿಜಯ್ ಜೊತೆ ರಶ್ಮಿಕಾ ನಟಿಸಿದ್ದರು. ಈಗ 'ರಣಬಾಲಿ'ಯಲ್ಲಿ ಮತ್ತೊಮ್ಮೆ ಈ ಜೋಡಿ ತೆರೆ ಮೇಲೆ ಬರಲಿದೆ. ವಿಜಯ್ 14ನೇ ಸಿನಿಮಾ ಇದಾಗಿದೆ. '19ನೇ ಶತಮಾನದಲ್ಲಿ ಬ್ರಿಟಿಷರ ದೌರ್ಜನ್ಯದ ಮೇಲೆ ಬೆಳಕು ಚೆಲ್ಲುವುದಲ್ಲದೆ, ಭಾರತದಲ್ಲಿ ನಡೆದ ಆರ್ಥಿಕ ಶೋಷಣೆಯ ಉಲ್ಲೇಖವೂ ಚಿತ್ರದಲ್ಲಿದೆ' ಎಂದಿದೆ ಚಿತ್ರತಂಡ. ಸಿನಿಮಾಗೆ ರಾಹುಲ್ ಸಂಕ್ರಿತ್ಯಾನ್ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ರಾಹುಲ್ ಈ ಹಿಂದೆ 'ಟ್ಯಾಕ್ಸಿವಾಲಾ' ಹಾಗೂ 'ಶ್ಯಾಮ್ ಸಿಂಗ್ ರಾಯ್' ಸಿನಿಮಾಗಳನ್ನು ನಿರ್ದೇಶಿಸಿದ್ದಾರೆ.

'ಜಯಮ್ಮ' ಪಾತ್ರದಲ್ಲಿ ರಶ್ಮಿಕಾ ಮಂದಣ್ಣ, 'ದಿ ಮಮ್ಮಿ' ಖ್ಯಾತಿಯ ಅರ್ನಾಲ್ಡ್ ವೊಸ್ಲೂ ಅವರು 'ಸರ್ ಥಿಯೋಡರ್ ಹೆಕ್ಟರ್' ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. 'ಡಿಯರ್ ಕಾಮ್ರೇಡ್' ಮತ್ತು 'ಖುಷಿ' ಸಿನಿಮಾ ಬಳಿಕ ಮೈತ್ರಿ ಮೂವೀ ಮೇಕರ್ಸ್ ಈ ಸಿನಿಮಾಗೆ ಹಣ ಹೂಡುತ್ತಿದೆ. ಇದೇ ವರ್ಷ ಸೆಪ್ಟೆಂಬರ್ 11ರಂದು 'ರಣಬಾಲಿ' ಸಿನಿಮಾ ಬಿಡುಗಡೆಯಾಗಲಿದೆ. ❖


ಸಪ್ತಮಿ ಗೌಡ, ಸತೀಶ್ ನೀನಾಸಂ

# '...ಅಶೋಕ'ನ ಹೊಸ ಹಾಡು

**ಸತೀಶ್ ನೀನಾಸಂ,** ಸಪ್ತಮಿ ಗೌಡ ಮುಖ್ಯಭೂಮಿಕೆಯಲ್ಲಿರುವ 'ದಿ ರೈಸ್ ಆಫ್ ಅಶೋಕ' ಚಿತ್ರದ 'ಕಲ್ಯಾಣವೇ ಗೌರಿ' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಿರ್ದೇಶಕ ವಿನೋದ್ ದೋಂಡಾಳೆ ಈ ಚಿತ್ರ ಪ್ರಾರಂಭಿಸಿದ್ದರು. ಅವರ ಅಕಾಲಿಕ ಮರಣದಿಂದ ಮನು ಶೆಡ್ಗಾರ್ ಚಿತ್ರವನ್ನು ಪೂರ್ಣಗೊಳಿಸಿದ್ದಾರೆ.

ಹಾಡಿಗೆ ಪೂರ್ಣಚಂದ್ರ ತೇಜಸ್ವಿ ಸಂಗೀತವಿದ್ದು, ಪಂಚಮ್ ಜೀವ, ಶ್ವೇತಾ ಹಿರೇಮಠ ಧ್ವನಿಯಾಗಿದ್ದಾರೆ. ಜನಪದ ಗೀತೆಯ ಸಾಹಿತ್ಯ ಹೊಂದಿರುವ ಈ ಹಾಡಿನಲ್ಲಿ ನಾಯಕ ಮತ್ತು ನಾಯಕಿ ನಡುವಿನ ಮದುವೆ ಸನ್ನಿವೇಶಗಳನ್ನು ಕಟ್ಟಿಕೊಡಲಾಗಿದೆ.

ವೃದ್ಧಿ ಕ್ರಿಯೇಷನ್ ಹಾಗೂ ಸತೀಶ್ ಪಿಕ್ಚರ್ಸ್ ಹೌಸ್ ಪ್ರೊಡಕ್ಷನ್ ಅಡಿ ವರ್ಧನ್ ನರಹರಿ, ಜೈಷ್ಣವಿ ಜೊತೆ ಸೇರಿ ಸತೀಶ್ ನೀನಾಸಂ ಕೂಡಾ ಸಿನಿಮಾ ನಿರ್ಮಾಣದಲ್ಲಿ ಭಾಗಿಯಾಗಿದ್ದಾರೆ. 'ಕನ್ನಡ, ತೆಲುಗು ಹಾಗೂ ತಮಿಳು ಭಾಷೆಗಳಲ್ಲಿ ಸಿನಿಮಾ ಬಿಡುಗಡೆ ಮಾಡಲು ಆಲೋಚಿಸಿದ್ದೇವೆ. ಪ್ರಚಾರ ಕಾರ್ಯ ಪ್ರಾರಂಭಿಸಿದ್ದು, ಶೀಘ್ರದಲ್ಲಿಯೇ ಬಿಡುಗಡೆ ದಿನಾಂಕ ಘೋಷಿಸುತ್ತೇವೆ' ಎಂದಿದೆ ಚಿತ್ರತಂಡ.

70 ರ ದಶಕದಲ್ಲಿ ಹಾಗೂ ಪ್ರಸ್ತುತ ಕಾಲಘಟ್ಟದಲ್ಲಿ ನಡೆಯುವ ಸಿನಿಮಾವಿದು. ಚಿತ್ರದಲ್ಲಿ ಸತೀಶ್ ನೀನಾಸಂ ಕ್ರಾಂತಿಕಾರಿ ಯುವಕನ ಪಾತ್ರಕ್ಕೆ ಜೀವ ತುಂಬಿದ್ದಾರೆ. ಅನ್ಯಾಯದ ವಿರುದ್ಧ ಹೋರಾಡುವ ಯುವಕನ ಬದುಕು ಹಾಗೂ ಸಂಘರ್ಷದ ಸುತ್ತಾ ಸಾಗುವ ಕಥೆ ಇದಾಗಿದೆ.

ದಯಾನಂದ್ ಟಿ.ಕೆ ಕಥೆ ಬರೆದಿದ್ದಾರೆ. ಲವಿತ್ ಛಾಯಾಚಿತ್ರಗ್ರಹಣ, ಮನು ಶೆಡ್ಗಾರ್ ಸಂಕಲನದ ಜವಾಬ್ದಾರಿ ಹೊತ್ತಿದ್ದಾರೆ. ❖

# 'ಅನಂತ ಪದ್ಮನಾಭ'ನಾದ ರಿಷಿ

**'ಆಪರೇಷನ್ ಅಲಮೇಲಮ್ಮ'**, 'ಕವಲುದಾರಿ' ಸಿನಿಮಾ ಖ್ಯಾತಿಯ ನಟ ರಿಷಿ ಸಾಲು ಸಾಲು ಸಿನಿಮಾಗಳನ್ನು ಒಪ್ಪಿಕೊಳ್ಳುತ್ತಿದ್ದಾರೆ. ಇತ್ತೀಚೆಗಷ್ಟೇ ಅವರ 'ಮಂಗಳಾಪುರಂ' ಹಾಗೂ 'ಜವರ' ಸಿನಿಮಾ ಘೋಷಣೆಯಾಗಿತ್ತು. ಇದೀಗ ನಟ ಪ್ರಕಾಶ್ ಬೆಳವಾಡಿಯವರ ಜೊತೆ ಲಾಂಗ್‌ಡ್ರೈವ್‌ಗೆ ಹೊರಡಲು ಸಜ್ಜಾಗಿರುವ ರಿಷಿ 'ಅನಂತ ಪದ್ಮನಾಭ'ನಾಗಿದ್ದಾರೆ.

'ಅಧ್ಯಕ್ಷ', 'ವಿಕ್ಟರಿ', 'ರನ್ನ', 'ಪೊಗರು', 'ತೀರ್ಥರೂಪ ತಂದೆಯವರಿಗೆ', 'ಅಣ್ಣ ಫ್ರಂ ಮೆಕ್ಸಿಕೋ' ಸಿನಿಮಾಗಳಿಗೆ ಸಂಭಾಷಣೆ ಬರೆದಿರುವ ಪ್ರಶಾಂತ್ ರಾಜಪ್ಪ ನಿರ್ದೇಶನ ಮಾಡಿದ್ದಾರೆ. 'ರಿಷಿ ನಾಯಕನಾಗಿ ಕಾಣಿಸಿಕೊಳ್ಳಲಿರುವ 'ಅನಂತ ಪದ್ಮನಾಭ' ಸಿನಿಮಾದಲ್ಲಿ ಪ್ರಕಾಶ್ ಬೆಳವಾಡಿ ಅವರದ್ದು ವಿಶೇಷ ಪಾತ್ರ. ನಾಯಕಿಯಾಗಿ ಅಂಜಲಿ ಅನೀಶ್ ಬಣ್ಣಹಚ್ಚಿದ್ದಾರೆ' ಎಂದಿದೆ ಚಿತ್ರತಂಡ.


ಪ್ರಕಾಶ್ ಬೆಳವಾಡಿ, ರಿಷಿ

ಎರಡು ಪೀಳಿಗೆಯ ಬಗ್ಗೆ ಇರುವ ಈ ಸಿನಿಮಾ ಕಥೆಯಲ್ಲಿ ಜೀವನದ ಮೌಲ್ಯಗಳ ಬಗ್ಗೆ ಉಲ್ಲೇಖವಿರಲಿದೆ. ಕಾಮಿಡಿ ಡ್ರಾಮಾ ಜಾನರ್‌ನಲ್ಲಿರುವ ಈ ಸಿನಿಮಾದ ನಿರ್ಮಾಪಕ ಅಮ್ರೇಜ್ ಸೂರ್ಯವಂಶಿ. ಚಿತ್ರದ ಚಿತ್ರೀಕರಣ ಕೊನೆಯ ಹಂತದಲ್ಲಿದ್ದು, ಎರಡು ಹಾಡುಗಳ ಚಿತ್ರೀಕರಣ ಬಾಕಿಯಿದೆ.

'ಅನಂತ ಪದ್ಮನಾಭ' ಸಿನಿಮಾವನ್ನು ಬೆಂಗಳೂರು, ಸಾಗರ, ತೀರ್ಥಹಳ್ಳಿ ಸುತ್ತಮುತ್ತ ಚಿತ್ರೀಕರಣ ಮಾಡಲಾಗಿದೆ. ಸಿನಿಮಾಗೆ ಅಶ್ವಿನ್ ಪಿ. ಕುಮಾರ್ ಸಂಗೀತ, ವೀನಸ್ ನಾಗರಾಜ್ ಮೂರ್ತಿ ಛಾಯಾಚಿತ್ರಗ್ರಹಣವಿದೆ. ಸಿನಿಮಾ ಶೀಘ್ರದಲ್ಲೇ ತೆರೆಗೆ ಬರಲಿದೆ ಎಂದು ಚಿತ್ರತಂಡ ತಿಳಿಸಿದೆ. ❖

# ವಿನಾಶ ಕಾಲೆ ವಿಪರೀತ ಬುದ್ಧಿ ಎಂದ ಹೊಸಬರು


ಚಿತ್ರತಂಡ

**ಬಹುತೇಕ** ಹೊಸಬರಿಂದಲೇ ಕೂಡಿರುವ 'ವಿನಾಶ ಕಾಲೆ ವಿಪರೀತ ಬುದ್ಧಿ' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಎಸ್.ಕಿರಣ್ ಕುಮಾರ್ ಆ್ಯಕ್ಷನ್ ಕಟ್ ಹೇಳುತ್ತಿರುವ ಚಿತ್ರಕ್ಕೆ ಶಕ್ತಿ ಫಿಲ್ಮ್ಸ್ ಬಂಡವಾಳ ಹೂಡುತ್ತಿದೆ.

'ಅಗಲಿದ ಗೆಳೆಯನೊಬ್ಬನ ಜೀವನದಲ್ಲಿ ನಡೆದಂಥ ಸತ್ಯ ಘಟನೆಯನ್ನೇ ಚಿತ್ರವಾಗಿಸುತ್ತಿದ್ದೇನೆ. ವೇಗವಾಗಿ ದುಡ್ಡು ಮಾಡಬೇಕೆಂಬ ದುರಾಸೆಯಿಂದ ದೈವದ ಸಂಪತ್ತಿಗೆ ಕೈ ಹಾಕಿದರೆ ಏನೇನು ಅನಾಹುತಗಳು ನಡೆಯುತ್ತವೆ ಎಂಬುದನ್ನು ಚಿತ್ರದಲ್ಲಿ ಹೇಳುತ್ತೇವೆ. ಮಧ್ಯಮ ವರ್ಗದ ಕುಟುಂಬದಿಂದ ಬಂದ ಐದು ಹುಡುಗರು ಮತ್ತು ಹುಡುಗಿಯರು ಉದ್ಯೋಗ ಅರಸಿಕೊಂಡು ನಗರಕ್ಕೆ ಬರುತ್ತಾರೆ. ಸಂಬಳ ಸಾಕಾಗದೆ ಶ್ರೀಮಂತರಾಗಲು ಬೇರೆ ಹಾದಿ ಹಿಡಿಯುತ್ತಾರೆ. ಅದರ ಸುತ್ತ ಕಥೆ ಸಾಗುತ್ತದೆ' ಎಂದರು ನಿರ್ದೇಶಕ.

ಪಾವನಿ ಸಿರಿ, ರಿಷಿಕ ಗೌಡ, ವೈಷ್ಣವಿ, ಶ್ರೀನಿಧಿ, ರಚನಾ, ಶೋಭ, ಮಂಡ್ಯ ಸಿದ್ದು, 'ಬಿಗ್‌ಬಾಸ್' ಖ್ಯಾತಿಯ ಮಲ್ಲಮ್ಮ ಮುಂತಾದವರು ಚಿತ್ರದಲ್ಲಿದ್ದಾರೆ. ಮಾರ್ಚ್‌ನಿಂದ ಬೆಂಗಳೂರು, ಚಿಕ್ಕಮಗಳೂರು ಮುಂತಾದೆಡೆ ಚಿತ್ರೀಕರಣ ನಡೆಸಲು ತಂಡ ಆಲೋಚಿಸಿದೆ.

ಮೂರು ಹಾಡುಗಳಿಗೆ ಮಂಜು ಕವಿ ಸಾಹಿತ್ಯ-ಸಂಗೀತ, ವಿನಯ್‌ಗೌಡ ಛಾಯಾಚಿತ್ರಗ್ರಹಣ, ಜೀವನ್ ಸಂಕಲನವಿದೆ. ❖

# 'ಟೋಲ್ ಸಂಗ್ರಹ: ಹೊಸ ವ್ಯವಸ್ಥೆ'

## ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಜಿಪಿಎಸ್ ಆಧಾರಿತ ವ್ಯವಸ್ಥೆ ಶೀಘ್ರ

• ಓದೇಶ ಸಕಲೇಶಪುರ

ರಾಮನಗರ: ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯ ಟೋಲ್ ಪ್ಲಾಜಾಗಳಲ್ಲಿ ಇನ್ನು ಮುಂದೆ ಟೋಲ್ ಪಾವತಿಸಲು ವಾಹನಗಳು ಸಾಲುಗಟ್ಟಿ ನಿಲ್ಲಬೇಕಾಗಿಲ್ಲ. 117 ಕಿ.ಮೀ ಉದ್ದದ ಹೆದ್ದಾರಿಯಲ್ಲಿ ಜಿಪಿಎಸ್ ಆಧಾರಿತ ಟೋಲ್ ಸಂಗ್ರಹ ವ್ಯವಸ್ಥೆ ಜಾರಿಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಮುಂದಾಗಿದೆ.

ವಾಹನಗಳ ತಡೆ ರಹಿತ ಸಂಚಾರದೊಂದಿಗೆ ಪ್ರಯಾಣದ ಅವಧಿ ತಗ್ಗಿಸುವ ಬಹುಪಥ ಮುಕ್ತ ಹರಿವಿನ ವ್ಯವಸ್ಥೆ ಜಾರಿಗೊಳಿಸಲಿರುವ ರಾಜ್ಯದ ಮೊದಲ ಹೆದ್ದಾರಿ ಇದಾಗಲಿದೆ. ಹೊಸ ವ್ಯವಸ್ಥೆಗೆ ಈಗಾಗಲೇ ಟೆಂಡರ್ ಕರೆಯಲಾಗಿದೆ ಎಂದು ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಾಯೋಗಿಕವಾಗಿ ಅನುಷ್ಠಾನವಾಗಲಿರುವ ಈ ವ್ಯವಸ್ಥೆ ಯಶಸ್ವಿಯಾದರೆ ಟೋಲ್ ಬೂತ್ ಮುಕ್ತ ಹೆದ್ದಾರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ. ಈ ರೀತಿಯ ದೇಶದ ಮೊದಲ ಹೆದ್ದಾರಿ ಟೋಲ್ ಗುಜರಾತ್‌ನಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ. ಅದೇ ಮಾದರಿ ರಾಜ್ಯದಲ್ಲಿಯೂ ಜಾರಿಗೆ ಬರಲಿದೆ.



> ತಡೆರಹಿತ ಟೋಲ್ ಸಂಗ್ರಹಕ್ಕಾಗಿ ಭಾರತೀಯ ಹೆದ್ದಾರಿಗಳ ನಿರ್ವಹಣಾ ಕಂಪನಿ ಹೊಸ ಟೋಲ್ ಸಂಗ್ರಹ ವ್ಯವಸ್ಥೆಯನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಲಿದೆ
>
> **ವಿಲಾಸ್ ಪಿ. ಬ್ರಹ್ಮಂಕರ್**
> ಪ್ರಾದೇಶಿಕ ಅಧಿಕಾರಿ, ಎನ್‌ಎಚ್‌ಎಐ

**ಏನಿದು ವ್ಯವಸ್ಥೆ?:** 'ಸ್ವಯಂಚಾಲಿತವಾಗಿ ವಾಹನಗಳ ಸಂಖ್ಯಾಫಲಕ ಗುರುತಿಸುವಿಕೆ (ಎಎನ್‌ಪಿಆರ್) ಕ್ಯಾಮೆರಾ, ಉಪಗ್ರಹ ಆಧರಿತ ಜಿಪಿಎಸ್ ವ್ಯವಸ್ಥೆಯಡಿ ಫಾಸ್ಟ್ಯಾಗ್ ಮೂಲಕವೇ ಟೋಲ್ ಸಂಗ್ರಹಿಸಲಾಗುತ್ತದೆ. ವಾಹನಗಳು ಸಂಚರಿಸುತ್ತಿರುವ ವೇಗದಲ್ಲೇ ಅವುಗಳ ನೋಂದಣಿ ಸಂಖ್ಯೆ ರೀಡ್ ಆಗಿ ಟೋಲ್ ಕಡಿತವಾಗಲಿದೆ.

'ಪ್ರಾಯೋಗಿಕ ಹಂತದಲ್ಲಿ ಹೊಸ ವ್ಯವಸ್ಥೆಯ ಸಾಧಕ–ಬಾಧಕಗಳನ್ನು ಗುರುತಿಸಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಾಗುವುದು. ಅಲ್ಲಿಯವರೆಗೆ ಫಾಸ್ಟ್ಯಾಗ್ ಬೂತ್ ಇರಲಿವೆ. ಬಳಿಕ, ಪೂರ್ಣವಾಗಿ ಹೊಸ ವ್ಯವಸ್ಥೆ ಅಳವಡಿಸಿ ಹಂತ ಹಂತವಾಗಿ ಟೋಲ್ ಬೂತ್‌ಗಳನ್ನು ತೆಗೆಯಲಾಗುವುದು' ಎಂದು ಅಧಿಕಾರಿಗಳು ಹೇಳಿದ್ದಾರೆ.


ರಾಮನಗರ ತಾಲ್ಲೂಕಿನ ಶೇಷಗಿರಿಹಳ್ಳಿ ಬಳಿ ಇರುವ ಟೋಲ್ ಪ್ಲಾಜಾ

### ಕಾಯುವಿಕೆ, ದಟ್ಟಣೆಗೆ ಬ್ರೇಕ್

'ಉಪಗ್ರಹ ಆಧಾರಿತ ಟೋಲ್ ಸಂಗ್ರಹ ವ್ಯವಸ್ಥೆಯಿಂದ ಟೋಲ್‌ಗಳಲ್ಲಿ ವಾಹನಗಳ ಕಾಯುವಿಕೆ, ದಟ್ಟಣೆ ತಪ್ಪಲಿದೆ. ಪ್ರಯಾಣದ ಅವಧಿ ತಗ್ಗಿಸಿ, ಇಂಧನ ಕ್ಷಮತೆ ಹೆಚ್ಚಿಸಲಿದೆ' ಎಂದು ಪ್ರಾದೇಶಿಕ ಅಧಿಕಾರಿ ವಿಲಾಸ್ ಪಿ. ಬ್ರಹ್ಮಂಕರ್ 'ಪ್ರಜಾವಾಣಿ'ಗೆ ತಿಳಿಸಿದರು.

ಕಳೆದ ವರ್ಷ ಗುಜರಾತ್‌ನ ರಾಷ್ಟ್ರೀಯ ಹೆದ್ದಾರಿ 48ರ ಟೋಲ್ ಪ್ಲಾಜಾದಲ್ಲಿ ಇಂತಹ ವ್ಯವಸ್ಥೆಯನ್ನು ಮೊದಲ ಬಾರಿಗೆ ಪ್ರಾಧಿಕಾರ ಜಾರಿಗೊಳಿಸಿತ್ತು. ಎಐ ಆಧಾರಿತ ಎನ್‌ಪಿಆರ್ ಮತ್ತು ಆರ್‌ಎಫ್‌ಐಡಿ ಫಾಸ್ಟ್ಯಾಗ್‌ನ ಈ ವ್ಯವಸ್ಥೆಯಿಂದ ತಡೆರಹಿತ ಸಂಚಾರ ಸಾಧ್ಯವಾಗಿದೆ. ಅಲ್ಲಿ ಟೋಲ್ ಬೂತ್‌ಗಳು ತೆರವಾಗಿವೆ. ದಟ್ಟಣೆ, ಪ್ರಯಾಣದ ಅವಧಿ ಇಳಿಕೆಯಾಗಿದೆ.

# 'ಸಂವಿಧಾನ'ಕ್ಕಾಗಿ ಹುಮ್ಮಸ್ಸಿನಿಂದ ಹೆಜ್ಜೆ

ಸಂವಿಧಾನವೇ ಬೆಳಕು



• ಬಷೀರ್‌ಅಹ್ಮದ್ ನಗಾರಿ

ಕಲಬುರಗಿ: 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಬಳಗವು ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ನಗರದ ಗುಲಬರ್ಗಾ ವಿಶ್ವವಿದ್ಯಾಲಯದ ಆವರಣದಲ್ಲಿ 'ಸಂವಿಧಾನವೇ ಬೆಳಕು' ಅಭಿಯಾನದಡಿ ಬುಧವಾರ ಹಮ್ಮಿಕೊಂಡಿದ್ದ ವಿಚಾರ ಸಂಕಿರಣ ಹಾಗೂ ವಾಕಥಾನ್ ನೂರಾರು ವಿದ್ಯಾರ್ಥಿಗಳಲ್ಲಿ 'ಭಾರತೀಯರಿಗೆ ಸಂವಿಧಾನವೇ ಧರ್ಮ ಗ್ರಂಥ' ಎಂಬ ಅರಿವಿನ ಕಿಡಿ ಹೊತ್ತಿಸುವಲ್ಲಿ ಯಶಸ್ವಿಯಾಯಿತು.

ಮೂಡಣದಿಂದ ಸೂರ್ಯರಶ್ಮಿಗಳು ಭುವಿಯತ್ತ ನುಗ್ಗಿದಂತೆ ನೂರಾರು ಯುವಜನರು ವಿವಿಧೆಡೆಯಿಂದ ಗುಲಬರ್ಗಾ ವಿಶ್ವವಿದ್ಯಾಲಯ ಡಾ.ಬಿ.ಆರ್. ಅಂಬೇಡ್ಕರ್ ಭವನದತ್ತ ಧಾವಿಸಿ ಬಂದರು. ಅತಿಥಿಗಳ 'ಸಂವಿಧಾನ'ದ ತಿಳಿವಳಿಕೆಯ ನುಡಿಗಳಿಗೆ ಕಿವಿಯಾದರು.

ಬಳಿಕ ಮೂರು ಕಿ.ಮೀ ವಾಕಥಾನ್ ನಡೆಯಿತು. ವಿಶ್ವವಿದ್ಯಾಲಯದ ಹಸಿರು ಹೊನ್ನಿನ ಪರಿಸರದಲ್ಲಿ ಸಂವಿಧಾನಕ್ಕಾಗಿ ಹುಮ್ಮಸ್ಸಿನಿಂದ ಹೆಜ್ಜೆಹಾಕಿದರು. ಅತಿಥಿ ಗಣ್ಯರು ಮುಂಚೂಣಿಯಲ್ಲಿ ಸಾಗಿ 'ಸಂವಿಧಾನ' ಪ್ರೇಮ ಮೆರೆದರು.

ಅಂಬೇಡ್ಕರ್ ಭವನದಿಂದ ರಾಷ್ಟ್ರಕೂಟರ ಮಹಾದ್ವಾರ, ಚಾಲುಕ್ಯ ಮಹಾದ್ವಾರದ ಮೂಲಕ ಕಾರ್ಯಸೌಧದ ಎದುರಿನಿಂದ ಅಂಬೇಡ್ಕರ್ ಭವನದವರೆಗೆ ಸಾಗಿದ ವಾಕಥಾನ್ ಉದ್ದಕ್ಕೂ 'ಸಂವಿಧಾನವೇ ಶಕ್ತಿ ಸಂವಿಧಾನವೇ ಬೆಳಕು', 'ಸಂವಿಧಾನ ಗೌರವಿಸಿ, ರಾಷ್ಟ್ರ ಬಲಪಡಿಸಿ', 'ಎಲ್ಲರಿಗೂ ಹಕ್ಕು, ಎಲ್ಲರಿಗೂ ಕರ್ತವ್ಯ– ಸಂವಿಧಾನದ ಕೊಡುಗೆ' ಘೋಷಣೆಗಳು ಮೊಳಗಿದವು.

ಇದಕ್ಕೂ ಮುನ್ನ ಅಂಬೇಡ್ಕರ್ ಭವನದಲ್ಲಿ ಸಂವಿಧಾನ ಕುರಿತು ವಿಚಾರ ಸಂಕಿರಣ ನಡೆಯಿತು. ಕಾರ್ಯಕ್ರಮ ಉದ್ಘಾಟಿಸಿದ ಗುಲಬರ್ಗಾ ವಿವಿ ಕುಲಪತಿ ಪ್ರೊ.ಶಶಿಕಾಂತ ಉಡಿಕೇರಿ, 'ಬ್ರಿಟಿಷರು–ಅರಸೊತ್ತಿಗೆ ವ್ಯವಸ್ಥೆಯಿಂದ ಸ್ವತಂತ್ರಗೊಂಡ ಭಾರತದ ಆಡಳಿತಕ್ಕಾಗಿ ಡಾ.ಬಿ.ಆರ್.ಅಂಬೇಡ್ಕರ್ ರೂಪಿಸಿದ ದಿಕ್ಸೂಚಿಯೇ ಸಂವಿಧಾನ' ಎಂದರು.

'ಸಮಾನತೆ, ಶಿಕ್ಷಣ, ಆಡಳಿತ ವ್ಯವಸ್ಥೆ ಹಾಗೂ ಪ್ರಜಾಸತ್ತಾತ್ಮಕವಾಗಿ ಧ್ವನಿ ಎತ್ತುವ ಬಲ ಕೊಟ್ಟಿದ್ದೇ ಸಂವಿಧಾನ. ಅಂಥ ಸಂವಿಧಾನ ಬಿಟ್ಟು ನೋಡುವ ಯಾವುದೇ ಚಿಂತನೆ ಭವ್ಯ ಭಾರತದ ಹಿತಾಸಕ್ತಿಗೆ ಮಾರಕ. ಯುವಪೀಳಿಗೆಗೆ ಹಿಂದೆ, ಇಂದು, ಎಂದೂ ಸಂವಿಧಾನವೇ ಆಶಯ ಹಾಗೂ ಆಶ್ರಯ. ಸಂವಿಧಾನವನ್ನು ಸಂಪೂರ್ಣವಾಗಿ ಅಳವಡಿಸಿಕೊಂಡು ಮುನ್ನಡೆದರೆ ಜಗತ್ತಿನಲ್ಲೇ ಭಾರತ ಅತ್ಯುತ್ತಮ ರಾಷ್ಟ್ರವಾಗಿ ಹೊರಹೊಮ್ಮುವುದು ನಿಸ್ಸಂಶಯ' ಎಂದು ಪ್ರತಿಪಾದಿಸಿದರು.

ಗುಲಬರ್ಗಾ ವಿವಿ ಕುಲಸಚಿವ ಪ್ರೊ.ರಮೇಶ ಲಂಡನಕರ್, 'ಸಂವಿಧಾನ ಜಾರಿಯಾಗಿ ಏಳೂವರೆ ದಶಕಗಳಾದರೂ ಇಂದಿಗೂ ಸಂಪೂರ್ಣವಾಗಿ ಅನುಷ್ಠಾನಗೊಂಡಿಲ್ಲ. ಇದರ ನಡುವೆಯೇ ಸಂವಿಧಾನ ತಿರುಚುವ ಪ್ರಯತ್ನಗಳು ನಡೆಯುತ್ತಿವೆ. ಇಂಥ ಸಂದಿಗ್ಧ ಕಾಲಘಟ್ಟದಲ್ಲಿ ಸಂವಿಧಾನದ ಅರಿವು ವಿಶ್ವವಿದ್ಯಾಲಯ, ವಿದ್ಯಾರ್ಥಿಗಳ ಸಮೂಹ ದಾಟಿ ಜನಮಾನಸ ಮುಟ್ಟಬೇಕಿದೆ' ಎಂದರು.

ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕಿ ಪ್ರೀತಿ ದೊಡ್ಡಮನಿ ಮಾತನಾಡಿ, 'ದೇಶದ ಪ್ರಜೆಗಳಿಗೆ ಡಾ.ಅಂಬೇಡ್ಕರ್ ಸಂವಿಧಾನದ ಬೆಳಕು ಕೊಟ್ಟಿದ್ದಾರೆ. ಈ ಬೆಳಕು ಬಳಸಿ ನಾವೆಲ್ಲ ಭಾರತವನ್ನು ಮುನ್ನಡೆಸೋಣ' ಎಂದರು.

'ಪ್ರಜಾವಾಣಿ' ಕಲಬುರಗಿ ಬ್ಯುರೊ ಮುಖ್ಯಸ್ಥ ವಿನಾಯಕ ಭಟ್ ಪ್ರಾಸ್ತಾವಿಕವಾಗಿ ಮಾತನಾಡಿದರು.


'ಸಂವಿಧಾನಕ್ಕಾಗಿ ನಡೆಯೋಣ' ವಾಕಥಾನ್‌ಗೆ ಗಣ್ಯರು ಚಾಲನೆ ನೀಡಿ ಹೆಜ್ಜೆ ಹಾಕಿದರು –ಪ್ರಜಾವಾಣಿ ಚಿತ್ರ

### 'ಜೀವಕ್ಕೆ ರಕ್ತ, ಬದುಕಿಗೆ ಸಂವಿಧಾನ ಮುಖ್ಯ'

'ಸಂವಿಧಾನ ಬರೀ ಹಾಳೆಗಳ ಕಟ್ಟಲ್ಲ; ಭಾರತೀಯರ ಬದುಕಿನ ಭಾಗ. ಜೀವಕ್ಕೆ ರಕ್ತ ಎಷ್ಟು ಮುಖ್ಯವೋ ಬದುಕಿಗೆ ಸಂವಿಧಾನವೂ ಅಷ್ಟೇ ಮುಖ್ಯ' ಎಂದು ಗುಲಬರ್ಗಾ ವಿವಿ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ.ಎಚ್.ಟಿ. ಪೋತೆ ಪ್ರತಿಪಾದಿಸಿದರು.

ನೆರೆದಿದ್ದ ನೂರಾರು ವಿದ್ಯಾರ್ಥಿಗಳಿಗೆ ಸಂವಿಧಾನದ ಪ್ರತಿ ಪ್ರದರ್ಶಿಸಿದ ಅವರು, ತಮ್ಮ ಉಪನ್ಯಾಸದಲ್ಲಿ 'ಸಂವಿಧಾನ'ದ ಮಹತ್ವವನ್ನು ಅರುಹಿದರು.

'ಭಾರತದ ಪ್ರಜೆಗಳಾದ ನಾವು...' ಎಂದು ನಮ್ಮ ಸಂವಿಧಾನದ ಪೀಠಿಕೆ ಶುರುವಾಗುತ್ತದೆ. ಈ ಮೂಲಕ ದೇಶದ ಸಮಸ್ತ ನಾಗರಿಕರನ್ನೂ ಒಳಗೊಳ್ಳುತ್ತದೆ. ಸಂವಿಧಾನವು ಪ್ರತಿಯೊಬ್ಬ ಭಾರತೀಯರ ಮನೆಯಲ್ಲಿ ಇರಬೇಕಾದ ಗ್ರಂಥ. ದೇಶದಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ, ಸಿಖ್, ಪಾರ್ಸಿ, ಬೌದ್ಧ ಹೀಗೆ ಎಲ್ಲ ಧರ್ಮಗಳಿಗೂ ಧರ್ಮಗ್ರಂಥಗಳಿವೆ. ಆ ಎಲ್ಲ ಗ್ರಂಥಗಳಿಗೆ ರಕ್ಷಣೆ ಕೊಡುವ ಗ್ರಂಥ ಸಂವಿಧಾನ. ದೇಶದ ಸರ್ವ ಜನಾಂಗವನ್ನೂ ಮುಷ್ಟಿಯಂತೆ ಒಗ್ಗಟ್ಟಿನಿಂದ ಹಿಡಿದಿಟ್ಟ ಬಲ ಸಂವಿಧಾನ' ಎಂದು ಅಭಿಪ್ರಾಯಪಟ್ಟರು.

'ಸಂವಿಧಾನವು ಮಹಿಳೆಯರಿಗೆ, ಹಿಂದುಳಿದ ವರ್ಗಗಳಿಗೆ, ನಿಮ್ನ ವರ್ಗಗಳಿಗೆ ಅವಕಾಶ, ಹಕ್ಕುಗಳನ್ನು ಕೊಟ್ಟಿದೆ. ಸಂವಿಧಾನವೇ ಇಲ್ಲದಿದ್ದರೆ ಇವರ‍್ಯಾರೂ ಉಳಿಯಲ್ಲ. ಆದರೆ, ಸಂವಿಧಾನದ ಆಶಯಕ್ಕೆ ಧಕ್ಕೆ ಬಂದಾಗ, ಅದನ್ನು ರಚಿಸಿದ ಅಂಬೇಡ್ಕರ್‌ಗೆ ಅಪಮಾನವಾದಾಗ ಬರೀ ದಲಿತ ಧ್ವನಿಗಳಷ್ಟೇ ಮೊಳಗುತ್ತವೆ. ಸಂವಿಧಾನದ ಸಂರಕ್ಷಣೆ ಬರೀ ದಲಿತರ ಹೊಣೆಯಲ್ಲ; ಅದು ಸಮಸ್ತರ ಕರ್ತವ್ಯ' ಎಂದು ಪ್ರತಿಪಾದಿಸಿದರು.




## ಸಂಕ್ಷಿಪ್ತ ಸುದ್ದಿ

### ರಾಜೀವ್ ಗೌಡ ಜಾಮೀನು ಅರ್ಜಿ: ನಾಳೆ ಆದೇಶ

ಚಿಕ್ಕಬಳ್ಳಾಪುರ: ಶಿಡ್ಲಘಟ್ಟ ನಗರಸಭೆ ಆಯುಕ್ತೆ ಅಮೃತಾ ಗೌಡಗೆ ಕರೆ ಮಾಡಿ ಧಮ್ಕಿ ಹಾಕಿದ ಪ್ರಕರಣದಲ್ಲಿ ಬಂಧನದಲ್ಲಿರುವ ಕಾಂಗ್ರೆಸ್ ಮುಖಂಡ ರಾಜೀವ್ ಗೌಡ ಅವರ ಜಾಮೀನು ಅರ್ಜಿ ಕುರಿತ ಆದೇಶವನ್ನು ಸ್ಥಳೀಯ ಕೋರ್ಟ್ 30ರಂದು ಪ್ರಕಟಿಸಲಿದೆ.

ಹಿರಿಯ ಸಿವಿಲ್ ನ್ಯಾಯಾಧೀಶ ಮೊಹಮ್ಮದ್ ರೋಷನ್ ಷಾ ಬುಧವಾರ ಅರ್ಜಿ ವಿಚಾರಣೆ ನಡೆಸಿದರು. ವಿಚಾರಣೆಗಾಗಿ ರಾಜೀವ್ ಗೌಡ ಅವರನ್ನು ಎರಡು ದಿನ ಪೊಲೀಸರ ವಶಕ್ಕೆ ಒಪ್ಪಿಸಿದ ನ್ಯಾಯಾಲಯ, ಅವರ ವಿಚಾರಣೆ ವೇಳೆ ವಕೀಲರೂ ಹಾಜರಿಬೇಕು ಎಂದು ಸೂಚಿಸಿದೆ.

### 'ಯುವರಾಜ' ಇನ್ನಿಲ್ಲ



ಮೈಸೂರು: ಇಲ್ಲಿನ ಚಾಮರಾಜೇಂದ್ರ ಮೃಗಾಲಯದ ದೀರ್ಘಾಯುಷಿ ಜಿರಾಫೆ 'ಯುವರಾಜ' ವೃದ್ಧಾಪ್ಯದ ಕಾರಣ ಬುಧವಾರ ಬೆಳಿಗ್ಗೆ 10.30ಕ್ಕೆ ಮೃತಪಟ್ಟಿತು.

1987ರಲ್ಲಿ ಜರ್ಮನಿ ಮೃಗಾಲಯದಿಂದ ತರಲಾಗಿದ್ದ ಹೆನ್ರಿ ಮತ್ತು ಹನಿ ಜಿರಾಫೆಗಳಿಗೆ 9ನೇ ಮರಿಯಾಗಿ 2001ರ ಡಿ.7ರಂದು 'ಯುವರಾಜ' ಜನಿಸಿದ್ದ.

'ಯುವರಾಜ ಮೃಗಾಲಯದಲ್ಲಿ ದೀರ್ಘಕಾಲ ಬದುಕಿದ್ದ. ಆತನ ಸಾವಿನಿಂದ ಮೃಗಾಲಯಕ್ಕೆ ತುಂಬಲಾರದ ನಷ್ಟವಾಗಿದೆ' ಎಂದು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕಿ ಪಿ.ಅನುಷಾ ವಿಷಾದಿಸಿದ್ದಾರೆ.

### ಉತ್ಖನನ ಸ್ಥಳ: ಸ್ಥಳೀಯರ ಆಕ್ಷೇಪ

ಗದಗ: ತಾಲ್ಲೂಕಿನ ಲಕ್ಕುಂಡಿ ಗ್ರಾಮದ ಕೋಟೆ ವೀರಭದ್ರೇಶ್ವರ ದೇವಸ್ಥಾನದಲ್ಲಿ ನಡೆದಿರುವ ಉತ್ಖನನದಲ್ಲಿ ಬುಧವಾರ ಮಡಕೆ ಚೂರುಗಳಷ್ಟೇ ಪತ್ತೆಯಾಗಿವೆ. ಉತ್ಖನನ 11 ದಿನಗಳನ್ನು ಪೂರ್ಣಗೊಳಿಸಿದೆ. ಈವರೆಗೆ ಮಹತ್ವದ ಪ್ರಾಚ್ಯ ಅವಶೇಷಗಳು ಸಿಗದ ಕಾರಣ ಬುಧವಾರ ಸ್ಥಳೀಯರು ಅಪಸ್ವರ ಎತ್ತಿದ್ದಾರೆ.

'ನೀರಿನ ಪೈಪ್‌ಗಳನ್ನು ಅಳವಡಿಸಲು ದೇವಸ್ಥಾನದ ಆವರಣದಲ್ಲಿ ಹಿಂದೆ 15 ಅಡಿ ಆಳ ಅಗೆದು ಮಣ್ಣು, ಕಲ್ಲು ತುಂಬಿದ್ದೇವೆ. ಇಲ್ಲಿ ಉತ್ಖನನಕ್ಕೆ ಸ್ಥಳ ಗುರುತು ಮಾಡಿದ್ದು ಏಕೆ' ಎಂದು ಪ್ರಶ್ನಿಸಿದ್ದಾರೆ.

### ಮಂಗನಕಾಯಿಲೆ: ಯುವಕ ಸಾವು

ತೀರ್ಥಹಳ್ಳಿ (ಶಿವಮೊಗ್ಗ): ತಾಲ್ಲೂಕಿನ ಹೊನ್ನೇಕೇರಿ ಗ್ರಾಮದ ನಿವಾಸಿ, ಕೃಷಿ ಕಾರ್ಮಿಕ 29 ವರ್ಷದ ಯುವಕ ಮಂಗನ ಕಾಯಿಲೆಯಿಂದ (ಕ್ಯಾಸನೂರು ಫಾರೆಸ್ಟ್ ಡಿಸೀಸ್) ಮೃತಪಟ್ಟಿದ್ದಾರೆ.

ಯುವಕ ಜ. 22ರಂದು ಜ್ವರಪೀಡಿತನಾಗಿ ಕಟ್ಟೇಹಕ್ಕಲು ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದಿದ್ದರು. 23ರಂದು ಕೆಎಫ್‌ಡಿ ದೃಢಪಟ್ಟಿದ್ದರಿಂದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ತಾಲ್ಲೂಕಿನಲ್ಲಿ ಅಕ್ಟೋಬರ್‌ನಿಂದ 7 ಕೆಎಫ್‌ಡಿ ಪ್ರಕರಣ ವರದಿಯಾಗಿವೆ.

## ಗದಗ ಜಿಲ್ಲೆ ರೋಣ ಬಳಿ ಅರಣ್ಯ ಇಲಾಖೆ ಸಿಬ್ಬಂದಿಯಿಂದ ಪತ್ತೆ

# ಹೈಬ್ರಿಡ್ ಕಾಡು ಬೆಕ್ಕು ಗೋಚರ

ಪ್ರಜಾವಾಣಿ ವಾರ್ತೆ

ಗದಗ: ರೋಣ ಮತ್ತು ಗಜೇಂದ್ರಗಡ ತಾಲ್ಲೂಕು ವ್ಯಾಪ್ತಿಯಲ್ಲಿ ಮಾಂಸಾಹಾರಿ ಪ್ರಾಣಿಗಳ ಸಮೀಕ್ಷೆ ನಡೆಸುವಾಗ ಅರಣ್ಯ ಇಲಾಖೆ ಸಿಬ್ಬಂದಿಗೆ ಹೈಬ್ರಿಡ್ ಕಾಡು ಬೆಕ್ಕು ಕಾಣಿಸಿದೆ. ಕಳೆದ ವರ್ಷ 'ವೂಲ್ಫ್‌ಡಾಗ್' ಕಂಡುಬಂದಿದ್ದವು.

'ರೋಣ– ಇಟಗಿ ಮಾರ್ಗದ ಹುಲ್ಲುಗಾವಲಿನಲ್ಲಿ ಪಕ್ಷಿಯನ್ನು ಹಿಡಿದು ತಿನ್ನುತ್ತಿದ್ದ ಹೈಬ್ರಿಡ್ ಕಾಡು ಬೆಕ್ಕು ಗೋಚರಿಸಿತು. ಕಾಡಂಚಿನ ಗ್ರಾಮಗಳಲ್ಲಿ ಈಚೆಗೆ ಇಂತಹ ಬೆಕ್ಕುಗಳ ಸಂಖ್ಯೆ ಸ್ವಲ್ಪಮಟ್ಟಿಗೆ ಹೆಚ್ಚುತ್ತಿದೆ' ಎಂದು ಉಪ ವಲಯ ಅರಣ್ಯಾಧಿಕಾರಿ (ಡಿಆರ್‌ಎಫ್‌ಒ) ಅನ್ವರ್ ಕೋಲ್ಹಾರ ತಿಳಿಸಿದರು.


ಹೈಬ್ರಿಡ್ ಬೆಕ್ಕು

'ಗಜೇಂದ್ರಗಡ, ರೋಣ ಭಾಗದಲ್ಲಿ ತೋಳಗಳ ಸಂಖ್ಯೆ ಜಾಸ್ತಿ ಇದೆ. ಬೀದಿನಾಯಿಗಳು ಕಾಡಿಗೆ ಲಗ್ಗೆ ಇಡುತ್ತಿರುವ ಕಾರಣ ಕ್ರಾಸ್ ಬ್ರೀಡ್ ಆಗುತ್ತಿವೆ. ಅದೇ ರೀತಿ, ಬೆಕ್ಕುಗಳಲ್ಲೂ ಕ್ರಾಸ್‌ಬ್ರೀಡ್ ಆಗುತ್ತಿದೆ' ಎಂದು ತಿಳಿಸಿದರು.

'ಹೈಬ್ರಿಡ್ ಕಾಡು ಬೆಕ್ಕುಗಳ ಗುಣಲಕ್ಷಣವು ನಾಡು, ಕಾಡು ಬೆಕ್ಕುಗಳಿಗಿಂತ ಭಿನ್ನವಾಗಿರುತ್ತದೆ. ಮುಖದ ಕೆಳಭಾಗ ಮತ್ತು ಕಾಲಿನಲ್ಲಿ ಬಿಳಿ ಬಣ್ಣ ಇರುತ್ತದೆ. ಮೈಮೇಲಿನ ಪಟ್ಟೆಗಳೂ ಸ್ವಲ್ಪ ಭಿನ್ನವಾಗಿರುತ್ತದೆ' ಎಂದು ರೋಣ ತಾಲ್ಲೂಕು ಜಕ್ಕಲಿ ಗ್ರಾಮದ ಜೀವವೈವಿಧ್ಯ ಸಂಶೋಧಕ ಸಂಗಮೇಶ ಕಡಗದ ತಿಳಿಸಿದರು.

'ನಾಡಿನ ಬೆಕ್ಕು, ನಾಯಿಗಳಿಂದ ಕಾಡು ಬೆಕ್ಕು, ತೋಳ ಮತ್ತು ನರಿಗಳ ವಂಶವಾಹಿಗೆ ಧಕ್ಕೆಯಾಗುತ್ತದೆ. ಇದು ಹೀಗೆ ಮುಂದುವರಿದರೆ ಮೂಲವೇ ಮರೆಯಾಗುವ ಅಪಾಯ ಹೆಚ್ಚಿದೆ' ಎಂದು ಅಭಿಪ್ರಾಯಪಟ್ಟರು.

# ಹೊತ್ತಿ ಉರಿದ ಬಸ್: 38 ಪ್ರಯಾಣಿಕರು ಪಾರು

ಪ್ರಜಾವಾಣಿ ವಾರ್ತೆ

ರಿಪ್ಪನ್‌ಪೇಟೆ (ಶಿವಮೊಗ್ಗ): ಹೊಸನಗರ ತಾಲ್ಲೂಕಿನ ನಿಟ್ಟೂರಿನಿಂದ ಬೆಂಗಳೂರಿಗೆ ಹೊರಟಿದ್ದ ಖಾಸಗಿ ಸ್ಲೀಪರ್ ಬಸ್ ಮಂಗಳವಾರ ತಡರಾತ್ರಿ ಮಾರ್ಗಮಧ್ಯೆ ಸಂಪೂರ್ಣ ಸುಟ್ಟುಹೋಗಿದೆ. ಅದೃಷ್ಟವಶಾತ್ ಜೀವಹಾನಿಯಾಗಿಲ್ಲ. ಇಬ್ಬರು ಚಾಲಕರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಬಿಎಸ್ 4 ಮಾದರಿಯ ಬಸ್‌ನಲ್ಲಿ 35 ಜನ ಪ್ರಯಾಣಿಕರು, ಮೂವರು ಸಿಬ್ಬಂದಿ ಇದ್ದರು. ಬೆಂಗಳೂರಿನ ಅನ್ನಪೂರ್ಣ ಟ್ರಾವೆಲ್ಸ್ ಸಂಸ್ಥೆಗೆ ಸೇರಿದ ಸ್ಲೀಪರ್ ಬಸ್, ಶಿವಮೊಗ್ಗದತ್ತ ಬರುವಾಗ ಸೂಡೂರು ಗೇಟ್ ನಡುವಿನ ಅವಣಿಗೆ ಕ್ರಾಸ್ ಬಳಿ ಕಾಡಿನ ಮಧ್ಯೆ ಇದ್ದಾಗ ಬೆಂಕಿ ಕಾಣಿಸಿಕೊಂಡಿದೆ.

ಮೊದಲಿಗೆ ಬಸ್‌ನಲ್ಲಿ ಹೊಗೆ ಕಾಣಿಸಿದ್ದು, ಬ್ರೇಕ್ ವೈಫಲ್ಯವಾಗಿದ್ದರಿಂದ ಬಸ್ ನಿಲ್ಲಿಸಲು ಆಗಿಲ್ಲ. ಚಾಲಕ ದೇವರಾಜ್ ಸಮಯಪ್ರಜ್ಞೆ ಮೆರೆದಿದ್ದು, ರಸ್ತೆಬದಿ ಮರಕ್ಕೆ ಡಿಕ್ಕಿ ಹೊಡೆಸಿ ಬಸ್ ನಿಲ್ಲಿಸಿದ್ದಾರೆ. ನಿರ್ವಾಹಕ ನಿಶ್ಚಲ್, ಹಿಂದಿನ ತುರ್ತು ಬಾಗಿಲಿನಿಂದ ಪ್ರಯಾಣಿಕರನ್ನು ಇಳಿಸಿದ್ದಾರೆ. ಈ ವೇಳೆ ಕೆಲವರಿಗೆ ಗಾಯಗಳಾಗಿವೆ.

ಘಟನೆಯಲ್ಲಿ ಕೆಲ ಪ್ರಯಾಣಿಕರ ಲಗೇಜ್ ಸಹಿತ ಬಸ್ ಸಂಪೂರ್ಣವಾಗಿ ಸುಟ್ಟು ಕರಕಲಾಗಿದೆ. ಸ್ಥಳಕ್ಕೆ ರಿಪ್ಪನ್‌ಪೇಟೆ ಠಾಣೆ ಪೊಲೀಸರು ಬಂದು ಪ್ರಯಾಣಿಕರಿಗೆ ನೆರವಾಗಿದ್ದಾರೆ.


ಹೊತ್ತಿ ಉರಿದ ಖಾಸಗಿ ಸ್ಲೀಪರ್ ಬಸ್

# ಸಾಂಘಿಕ ಆಟ; ನ್ಯೂಜಿಲೆಂಡ್‌ಗೆ ಜಯ

## ಸೀಫರ್ಟ್‌– ಕಾನ್ವೆ ಶತಕದ ಜೊತೆಯಾಟ
## • ಶಿವಂ ದುಬೆ ಏಕಾಂಗಿ ಹೋರಾಟ

**ವಿಶಾಖಪಟ್ಟಣ (ಪಿಟಿಐ):** ಬ್ಯಾಟರ್‌ಗಳ ಉತ್ತಮ ಪ್ರದರ್ಶನ ಮತ್ತು ಬೌಲರ್‌ಗಳ ಸಂಘಟಿತ ನಿರ್ವಹಣೆಯ ನೆರವಿನಿಂದ ನ್ಯೂಜಿಲೆಂಡ್ ತಂಡ ನಾಲ್ಕನೇ ಟಿ20 ಪಂದ್ಯದಲ್ಲಿ ಬುಧವಾರ ಭಾರತ ತಂಡದ ಮೇಲೆ 50 ರನ್‌ಗಳ ಅರ್ಹ ಜಯ ಪಡೆಯಿತು. ಟಿ20 ವಿಶ್ವಕಪ್‌ಗೆ ಕೇವಲ ಹತ್ತು ದಿನಗಳು ಉಳಿದಿರುವಾಗ ಪ್ರವಾಸಿ ತಂಡಕ್ಕೆ ಈ ಗೆಲುವು ವಿಶ್ವಾಸ ಮೂಡಿಸಲು ನೆರವಾಯಿತು.

ಬ್ಯಾಟಿಂಗಿಗೆ ಇಳಿಸಲ್ಪಟ್ಟ ನ್ಯೂಜಿಲೆಂಡ್ ತಂಡಕ್ಕೆ ಟಿಮ್ ಸೀಫರ್ಟ್ (62; 36ಎ, 4x7, 6x3) ಮತ್ತು ಡೆವಾನ್ ಕಾನ್ವೆ (44; 23ಎ 4x4, 6x3) ಅವರು ಶತಕದ ಜೊತೆಯಾಟದೊಂದಿಗೆ (100 ರನ್; 50ಎ) ಬಿರುಸಿನ ಆರಂಭ ನೀಡಿದರು. ಮಧ್ಯಮ ಹಂತದಲ್ಲಿ ತಂಡ ಪರದಾಡಿದರೂ 7 ವಿಕೆಟ್‌ಗೆ 215 ರನ್‌ಗಳ ಸವಾಲಿನ ಮೊತ್ತ ಪೇರಿಸಿತು. ನಂತರ ಕಿವೀಸ್ ಬೌಲರ್‌ಗಳು ಆತಿಥೇಯ ತಂಡಕ್ಕೆ ಆರಂಭದಲ್ಲೇ ಪೆಟ್ಟು ನೀಡಿದರು.

ಮಧ್ಯಮ ಹಂತದಲ್ಲಿ ಶಿವಂ ದುಬೆ (65; 23ಎ, 4x3, 6x7) ಸ್ಫೋಟಕ ಆಟದಿಂದ ಎದುರಾಳಿ ಪಾಳೆಯದಲ್ಲಿ ಆತಂಕ ಮೂಡಿಸಿದರೂ, ಅವರ ರನೌಟ್ ನಂತರ ನ್ಯೂಜಿಲೆಂಡ್ ಸಂಪೂರ್ಣ ಹಿಡಿತ ಸಾಧಿಸಿತು. ಐದು ಪಂದ್ಯಗಳ ಸರಣಿಯಲ್ಲಿ ಹಿನ್ನಡೆಯನ್ನು 3–1ಕ್ಕೆ ಇಳಿಸಿತು.

ಅಮೋಘ ಲಯದಲ್ಲಿರುವ ಅಭಿಷೇಕ್ ಶರ್ಮಾ ಅವರು ಇನಿಂಗ್ಸ್‌ನ ಮೊದಲ ಓವರ್‌ನ ಮೊದಲ ಎಸೆತದಲ್ಲೇ ಸಿಕ್ಸರ್ ಎತ್ತುವ ಭರದಲ್ಲಿ ಡೆವಾನ್ ಕಾನ್ವೆಗೆ ಕ್ಯಾಚ್ ನೀಡಿದರು. ನಾಯಕ ಸೂರ್ಯಕುಮಾರ್ ಯಾದವ್ ಅವರೂ ತಂಡವು ಎರಡಂಕಿ ಮುಟ್ಟುವ ಮೊದಲೇ ನಿರ್ಗಮಿಸಿದರು. ವಿಕೆಟ್ ಕೀಪರ್ ಸಂಜು ಸ್ಯಾಮ್ಸನ್ ಅವರು ದೊಡ್ಡ ಇನಿಂಗ್ಸ್ ಕಟ್ಟುವಲ್ಲಿ ಮತ್ತೆ ವಿಫಲರಾದರು. ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ 2 ರನ್‌ಗಳಿಗೆ ಔಟಾದರು.

ಈ ವೇಳೆ ರಿಂಕು ಸಿಂಗ್ (39; 30ಎ, 4x3, 6x2) ಹಾಗೂ ದುಬೆ ಬಿರುಸಿನ ಬ್ಯಾಟಿಂಗ್ ಮೂಲಕ ತಂಡಕ್ಕೆ ಚೇತರಿಕೆ ನೀಡಲು ಯತ್ನಿಸಿದರು. ಸಿಕ್ಸರ್– ಬೌಂಡರಿಗಳನ್ನು ಸಿಡಿಸಿದ ದುಬೆ ಕೇವಲ 15 ಎಸೆತಗಳಲ್ಲಿ ಅರ್ಧಶತಕ ದಾಟಿದರು. ಇವರಿಬ್ಬರು ಔಟಾದಂತೆ ಕಿವೀಸ್ ಬೌಲರ್‌ಗಳು ಮತ್ತೆ ನಿಯಂತ್ರಣ ಸಾಧಿಸಿದರು. ಭಾರತ 18.4 ಓವರ್‌ಗಳಲ್ಲಿ 165 ರನ್‌ಗಳಿಗೆ ಹೋರಾಟ ಮುಗಿಸಿತು.




ಬಿರುಸಿನ ಅರ್ಧ ಶತಕ ಗಳಿಸಿದ ಸೀಫರ್ಟ್ ಎಎಫ್‌ಪಿ ಚಿತ್ರ


ಇದಕ್ಕೆ ಮೊದಲು, ಟಿಮ್ ಸೀಫರ್ಟ್ ಮತ್ತು ಡೆವಾನ್ ಕಾನ್ವೆ ಅವರು ನ್ಯೂಜಿಲೆಂಡ್ ತಂಡಕ್ಕೆ ಮಿಂಚಿನ ಆರಂಭ ಒದಗಿಸಿದರು. ಸೀಫರ್ಟ್ ಅವರು ಅರ್ಷದೀಪ್ ಅವರ ಮೊದಲ ಓವರಿನಲ್ಲೇ ಮೂರು ಬೌಂಡರಿ ಬಾರಿಸಿದರು. ಇದರಲ್ಲಿ ಎರಡು ಬ್ಯಾಟಿನಂಚಿಗೆ ತಗುಲಿ ಬೌಂಡರಿ ದಾಟಿದವು. ಹರ್ಷಿತ್ ರಾಣಾ ಮಾಡಿದ ಮುಂದಿನ ಓವರಿನಲ್ಲಿ ಅವರು ಲಾಂಗ್‌ಆನ್‌ಗೆ ಸಿಕ್ಸರ್ ಎತ್ತಿ ಬಾಹುಬಲ ಮೆರೆದರು. ಜಸ್‌ಪ್ರೀತ್ ಬೂಮ್ರಾ ಬೌಲಿಂಗ್‌ನಲ್ಲೂ ಚೆಂಡನ್ನು ಸೈಟ್‌ಸ್ಕ್ರೀನ್ ಮೇಲೆ ಸಿಕ್ಸರ್ ಎತ್ತಿದ್ದರು.

ತಂಡ ನಾಲ್ಕನೇ ಓವರಿನಲ್ಲೇ 50ರ ಗಡಿ ದಾಟಿತು. ಪವರ್‌ಪ್ಲೇ ಮುಗಿದಾಗ ಮೊತ್ತ ವಿಕೆಟ್ ನಷ್ಟವಿಲ್ಲದೇ 71. ಸೀಫರ್ಟ್ ತೋಳೇರಿಸಿ ಆಡಿದ ಕಾರಣ ಡೆವಾನ್ ಕಾನ್ವೆ (44) ಅವರಿಗೆ ಒತ್ತಡ ಬೀಳಲಿಲ್ಲ. ಮೊದಲ 9 ರನ್‌ಗಳಿಗೆ 9 ಎಸೆತ ತೆಗೆದುಕೊಂಡ ಕಾನ್ವೆ ನಂತರ ಆಕ್ರಮಣಕಾರಿಯಾದರು. ಮುಂದಿನ 13 ಎಸೆತಗಳಲ್ಲಿ 35 ರನ್ ಚಚ್ಚಿದರು.

ಮೊತ್ತ 100 ರನ್ ತಲುಪಿದಾಗ, ಕೊನೆಗೂ ಕುಲದೀಪ್ ಈ ಅಪಾಯಕಾರಿ ಜೊತೆಯಾಟ ಮುರಿದರು. ಕಾನ್ವೆ ಹೊಡೆದ ಚೆಂಡನ್ನು ಡೀಪ್ ಕವರ್ಸ್‌ನಲ್ಲಿ ರಿಂಕು ಸಿಂಗ್ ಕ್ಯಾಚ್ ಹಿಡಿದರು. ನಂತರ ಬೌಲರ್‌ಗಳು ಕಡಿವಾಣ ಹಾಕಿದರು. ಇದರಿಂದ 37 ರನ್ ಅಂತರದಲ್ಲಿ ನಾಲ್ಕು ವಿಕೆಟ್‌ಗಳು ಬಿದ್ದವು. ರನ್ ವೇಗ ಹೆಚ್ಚಿಸುವ ಭರದಲ್ಲಿ ವಿಕೆಟ್‌ಗಳು ಬಿದ್ದವು.

ಡೇರಿಲ್ ಮಿಚೆಲ್ (ಔಟಾಗದೇ 39, 18ಎ, 4x2, 6x3) ಕೊನೆಯಲ್ಲಿ ಮಿಂಚಿನ ಆಟವಾಡಿದ್ದರಿಂದ ತಂಡದ ಮೊತ್ತ ಸುಲಭವಾಗಿ 200ರ ಗಡಿ ದಾಟಿತು.

**ಸಂಕ್ಷಿಪ್ತ ಸ್ಕೋರು:** ನ್ಯೂಜಿಲೆಂಡ್: 7 ವಿಕೆಟ್‌ಗೆ 215 (ಡೆವಾನ್ ಕಾನ್ವೆ 55, ಟಿಮ್ ಸೀಫರ್ಟ್ 62, ಡೇರಿಲ್ ಮಿಚೆಲ್ ಔಟಾಗದೇ 39; ಅರ್ಷದೀಪ್ 33ಕ್ಕೆ2, ಕುಲದೀಪ್ 39ಕ್ಕೆ2); ಭಾರತ: 18.4 ಓವರುಗಳಲ್ಲಿ 165 (ಸಂಜು ಸ್ಯಾಮ್ಸನ್ 24, ರಿಂಕು ಸಿಂಗ್ 39, ಶಿವಂ ದುಬೆ 65; ಜೇಕಬ್ ಡಫಿ 33ಕ್ಕೆ2, ಈಶ್ ಸೋಧಿ 46ಕ್ಕೆ2, ಮಿಚೆಲ್ ಸ್ಯಾಂಟ್ನರ್ 26ಕ್ಕೆ3).
**ಪಂದ್ಯದ ಆಟಗಾರ:** ಟಿಮ್ ಸೀಫರ್ಟ್.



**ಟಿ20ಯಲ್ಲಿ ವೇಗದ ಅರ್ಧಶತಕ (ಭಾರತದ ಬ್ಯಾಟರ್)**

| ಎಸೆತ | ಬ್ಯಾಟರ್ | ವಿರುದ್ಧ | ತಾಣ | ವರ್ಷ |
|---|---|---|---|---|
| 12 | ಯುವರಾಜ್ ಸಿಂಗ್ | ಇಂಗ್ಲೆಂಡ್ | ಡರ್ಬನ್ | 2007 |
| 14 | ಅಭಿಷೇಕ್ ಶರ್ಮಾ | ನ್ಯೂಜಿಲೆಂಡ್ | ಗುವಾಹಟಿ | 2026 |
| 15 | ಶಿವಂ ದುಬೆ | ನ್ಯೂಜಿಲೆಂಡ್ | ವಿಶಾಖಪಟ್ಟಣ | 2026 |

## ರಣಜಿ ಟ್ರೋಫಿ: ಪಂಜಾಬ್ ವಿರುದ್ಧ ಪಂದ್ಯ ಇಂದಿನಿಂದ

# ಕರ್ನಾಟಕಕ್ಕೆ ಗೆಲುವಿನ ಒತ್ತಡ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹೋದ ವಾರ ಮಧ್ಯಪ್ರದೇಶ ತಂಡದ ವಿರುದ್ಧ ಅನುಭವಿಸಿದ ಸೋಲು ಕರ್ನಾಟಕ ತಂಡದ ಈ ಮೊದಲಿನ ಭರವಸೆಯ ಅಭಿಯಾನಕ್ಕೆ ತೀವ್ರ ಹಿನ್ನಡೆ ಉಂಟುಮಾಡಿದೆ. ಗುರುವಾರ ಮೊಹಾಲಿಯಲ್ಲಿ ಆತಿಥೇಯ ಪಂಜಾಬ್ ವಿರುದ್ಧ ನಡೆಯಲಿರುವ ಎಲೀಟ್ ಬಿ ಗುಂಪಿನ ಪಂದ್ಯ ಕರ್ನಾಟಕದ ಪಾಲಿಗೆ ಮಾಡು–ಮಡಿ ಎಂಬಂತಾಗಿದೆ.

ಎಂಟು ಬಾರಿಯ ಚಾಂಪಿಯನ್ ತಂಡವು ಐದು ಪಂದ್ಯಗಳ ನಂತರ ಗುಂಪಿನಲ್ಲಿ ಅಗ್ರಸ್ಥಾನಕ್ಕೆ ಏರಿತ್ತು. ಆದರೆ ಸೀಮಿತ ಓವರುಗಳ ಎರಡು ಟೂರ್ನಿಗಳ ವಿರಾಮದ ಬಳಿಕ ಶುರುವಾದ ಎರಡನೇ ಹಂತದ ಮೊದಲ ಪಂದ್ಯದಲ್ಲೇ ಮುಗ್ಗರಿಸಿದ ಪರಿಣಾಮ ತಂಡ (21 ಪಾಯಿಂಟ್ಸ್) ಮೂರನೇ ಸ್ಥಾನಕ್ಕೆ ಜಾರಿದೆ. ಈ ಗೆಲುವಿನಿಂದ ಮಧ್ಯಪ್ರದೇಶ (22) ಎರಡನೇ ಸ್ಥಾನಕ್ಕೆ ಏರಿದರೆ, ಮಹಾರಾಷ್ಟ್ರ (24) ಮೊದಲ ಸ್ಥಾನದಲ್ಲಿ ಕುಳಿತಿದೆ.

ಗುಂಪಿನ ಅಂತಿಮ ಪಂದ್ಯಗಳು ಗುರುವಾರ ಆರಂಭವಾಗಲಿದ್ದು, ಈ ಮೂರು ತಂಡಗಳಲ್ಲದೇ, ನಾಲ್ಕನೇ ಸ್ಥಾನದಲ್ಲಿರುವ ಸೌರಾಷ್ಟ್ರ (19) ಸಹ ಎರಡು ಕ್ವಾರ್ಟರ್‌ಫೈನಲ್ ಟಿಕೆಟ್ ಪಡೆಯಲು ಪೈಪೋಟಿಯಲ್ಲಿವೆ.

ಭಾರತ ತಂಡದ ಆಟಗಾರರಾದ ಕೆ.ಎಲ್.ರಾಹುಲ್ ಮತ್ತು ಪ್ರಸಿದ್ಧ ಕೃಷ್ಣ ಅವರು ಮರಳುತ್ತಿರುವುದು ತಂಡದ ಬಲ ಹೆಚ್ಚಿಸಿದೆ. ಕರ್ನಾಟಕದ ಗುರಿ ಸರಳ. ಪಂಜಾಬ್ (11 ಪಾಯಿಂಟ್ಸ್) ವಿರುದ್ಧ ಗೆದ್ದರೆ ನಾಕೌಟ್ ಸ್ಥಾನ ಭದ್ರವಾಗಲಿದೆ. ಮಧ್ಯಪ್ರದೇಶ– ಮಹಾರಾಷ್ಟ್ರ, ಚಂಡೀಗಢ– ಸೌರಾಷ್ಟ್ರ ಹಣಾಹಣಿಯ ಫಲಿತಾಂಶ ಆಗ ಕರ್ನಾಟಕದ ಭವಿಷ್ಯದ ಮೇಲೆ ಯಾವುದೇ ರೀತಿಯಲ್ಲಿ ಪರಿಣಾಮ ಬೀರುವುದಿಲ್ಲ.

ಒಂದೊಮ್ಮೆ ಪಂಜಾಬ್ ತಂಡವನ್ನು ಸೋಲಿಸಲಾಗದಿದ್ದಲ್ಲಿ, ಕನಿಷ್ಠ ಮೊದಲ ಇನಿಂಗ್ಸ್ ಮುನ್ನಡೆ ಪಡೆದಲ್ಲಿ ನಾಕೌಟ್ ಭವಿಷ್ಯ ಇತರ ಪಂದ್ಯಗಳ ಫಲಿತಾಂಶವನ್ನು ಅವಲಂಬಿಸುತ್ತದೆ. ಮಾಜಿ ಚಾಂಪಿಯನ್ ಸೌರಾಷ್ಟ್ರ ತನ್ನ ಪಂದ್ಯ ಗೆದ್ದು, ಇತರ ಪಂದ್ಯಗಳ ಫಲಿತಾಂಶ ಅದರಿಚ್ಛೆಯಂತೆ ಬಂದರೆ ಆ ತಂಡಕ್ಕೂ ಅವಕಾಶವಿದೆ.

‘ನಮ್ಮ ನಿಯಂತ್ರಣದಲ್ಲಿ ಏನು ಸಾಧ್ಯವಿದೆಯೋ ಅದನ್ನು ಸಾಧಿಸಲು ಪ್ರಯತ್ನಿಸುವುದು ನಮಗೆ ಮುಖ್ಯವಾಗಿದೆ. ಯಾವ ಕ್ಷೇತ್ರದಲ್ಲಿ ನಾವು ಸುಧಾರಿಸಬೇಕೆಂಬುದನ್ನು ಕಳೆದ ಪಂದ್ಯದಿಂದ ಕಂಡುಕೊಂಡಿದ್ದೇವೆ. ತುಂಬಾ ತಲೆಕೆಡಿಸಿಕೊಂಡು ಒತ್ತಡಕ್ಕೆ ಸಿಲುಕಲು ಬಯಸುವುದಿಲ್ಲ’ ಎಂದು ಕರ್ನಾಟಕ ತಂಡದ ಕೋಚ್ ಯರೇಗೌಡ ‘ಪ್ರಜಾವಾಣಿ’ಗೆ ತಿಳಿಸಿದರು.

ರಾಹುಲ್ ಅವರು ಮಯಂಕ್ ಅವರೊಂದಿಗೆ ಇನಿಂಗ್ಸ್ ಆರಂಭಿಸಲಿದ್ದಾರೆ ಎಂದು ಕೋಚ್ ಖಚಿತಪಡಿಸಿದರು. ಮಧ್ಯ ಪ್ರದೇಶ ವಿರುದ್ಧ ಹಿನ್ನಡೆಯಿಂದಾಗಿ ಮಯಂಕ್ ನಾಯಕತ್ವವನ್ನು ದೇವದತ್ತ ಪಡಿಕ್ಕಲ್‌ಗೆ ಬಿಟ್ಟುಕೊಡಬೇಕಾಯಿತು. ಈ ಹಿಂದಿನ ಪಂದ್ಯದಲ್ಲಿ ಉತ್ತಮವಾಗಿ ಆಡಿದ್ದ ಕೆ.ವಿ.ಅನೀಶ್ ಮೂರನೇ ಕ್ರಮಾಂಕದಲ್ಲಿ ಆಡಲಿದ್ದಾರೆ. ಪಡಿಕ್ಕಲ್ ನಂತರದ ಸ್ಥಾನದಲ್ಲಿ ಬ್ಯಾಟಿಂಗ್ ಮಾಡಲಿದ್ದಾರೆ.

ಕೆಲದಿನಗಳಿಂದ ಮೊಹಾಲಿಯಲ್ಲಿ ತೇವದ ವಾತಾವರಣ ಇರುವ ಕಾರಣ ಬೌಲಿಂಗ್ ಸಂಯೋಜನೆ ಟಾಸ್ ಮೊದಲು ನಿರ್ಧಾರವಾಗಲಿದೆ. ಮಳೆಯ ಮುನ್ಸೂಚನೆಯಿಲ್ಲದಿದ್ದರೂ, ಮಂಜು ಮುಸುಕುವ ಸಾಧ್ಯತೆಯಿದೆ. ಪಿಚ್‌ಗೆ ಹೊದಿಕೆ ಹಾಕಲಾಗಿದೆ. 25 ವರ್ಷದ ಪಡಿಕ್ಕಲ್ ಅವರಿಗೆ ನಿರ್ಣಾಯಕ ಸಂದರ್ಭದಲ್ಲಿ ನಾಯಕತ್ವ ಹೆಗಲೇರಿದೆ. ಅತ್ಯುತ್ತಮ ಲಯದಲ್ಲಿರುವ ಅವರ ನಾಯಕತ್ವದ ನಿರ್ವಹಣೆಯ ಮೇಲೂ ಗಮನ ಇರಲಿದೆ.



ಕರ್ನಾಟಕ ತಂಡದ ನಾಯಕ ದೇವದತ್ತ ಪಡಿಕ್ಕಲ್

**ಅಂಕಪಟ್ಟಿ: ಎಲೀಟ್ ಬಿ ಗುಂಪು**

| ತಂಡ | ಪಂದ್ಯ | ಗೆಲುವು | ಸೋಲು | ಡ್ರಾ | ಪಾಯಿಂಟ್ಸ್ |
|---|---|---|---|---|---|
| ಮಹಾರಾಷ್ಟ್ರ | 6 | 3 | 0 | 3 | 24 |
| ಮಧ್ಯಪ್ರದೇಶ | 6 | 2 | 0 | 4 | 22 |
| ಕರ್ನಾಟಕ | 6 | 2 | 1 | 3 | 21 |
| ಸೌರಾಷ್ಟ್ರ | 6 | 2 | 0 | 4 | 19 |
| ಗೋವಾ | 6 | 1 | 3 | 2 | 11 |
| ಪಂಜಾಬ್ | 6 | 1 | 2 | 3 | 11 |
| ಚಂಡೀಗಢ | 6 | 1 | 4 | 1 | 8 |
| ಕೇರಳ | 6 | 0 | 2 | 4 | 8 |

## ಡಬ್ಲ್ಯುಪಿಎಲ್: ಆರ್‌ಸಿಬಿಗೆ ಇಂದು ಯುಪಿ ವಾರಿಯರ್ಸ್ ಸವಾಲು

# ಗೆಲುವಿನ ಹಳಿಗೆ ಮರಳುವತ್ತ ಚಿತ್ತ

**ವಡೋದರ (ಪಿಟಿಐ):** ಮಹಿಳಾ ಪ್ರೀಮಿಯರ್ ಲೀಗ್ ಪಾಯಿಂಟ್ ಪಟ್ಟಿಯಲ್ಲಿ ಅಗ್ರ ಸ್ಥಾನದಲ್ಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಕೊನೆಯ ಎರಡು ಪಂದ್ಯಗಳಲ್ಲಿ ಸೋಲನುಭವಿಸಿದೆ. ಕೊನೆಯ ಸ್ಥಾನದಲ್ಲಿರುವ ಯುಪಿ ವಾರಿಯರ್ಸ್ ವಿರುದ್ಧ ಗುರುವಾರ ನಡೆಯುವ ಪಂದ್ಯದಲ್ಲಿ ಗೆಲುವಿನ ಹಳಿಗೆ ಮರಳುವ ವಿಶ್ವಾಸದಲ್ಲಿರುವ ಆರ್‌ಸಿಬಿ ತಂಡ ಆ ಮೂಲಕ ಫೈನಲ್ ಸ್ಥಾನವನ್ನೂ ಕಾದಿರಿಸಲು ಯತ್ನಿಸಲಿದೆ.




ಪ್ಲೇ ಆಫ್‌ಗೆ ಸ್ಥಾನ ಖಚಿತಪಡಿಸಿರುವ ಏಕೈಕ ತಂಡವೆನಿಸಿರುವ ಆರ್‌ಸಿಬಿಗೆ, ಯುಪಿ ವಿರುದ್ಧದ ಗೆಲುವು ಅಗ್ರಸ್ಥಾನ ಖಚಿತಪಡಿಸಲಿದೆ. ಸ್ಮೃತಿ ಮಂದಾನ ಪಡೆಯು ಏಳು ಪಂದ್ಯಗಳಿಂದ 10 ಅಂಕ ಗಳಿಸಿದೆ.

ಪ್ಲೇಆಫ್ ಸ್ಥಾನ ಪಡೆಯಬೇಕಾದರೆ ವಾರಿಯರ್ಸ್ ತಂಡ ಉಳಿದೆರಡೂ ಪಂದ್ಯ ಗೆಲ್ಲಲೇಬೇಕಾಗಿದೆ. ಈ ಒತ್ತಡದ ಜೊತೆಗೆ ಗಾಯಾಳುಗಳ ಸಮಸ್ಯೆ ತಂಡವನ್ನು ಬಾಧಿಸುತ್ತಿದೆ. ತಂಡದ ಯಶಸ್ವಿ ಬ್ಯಾಟರ್ ಫೋಬಿ ಲಿಚ್‌ಫೀಲ್ಡ್ (243 ರನ್) ಅವರು ಗಾಯಾಳಾಗಿದ್ದಾರೆ. ಅವರ ಬದಲು ಆಮಿ ಜೋನ್ಸ್ ತಂಡಕ್ಕೆ ಸೇರ್ಪಡೆಯಾಗಿದ್ದಾರೆ.

ಸತತ ಐದು ಪಂದ್ಯಗಳನ್ನು ಗೆದ್ದು ಯಶಸ್ಸಿನ ಓಟದಲ್ಲಿದ್ದ ಮಂದಾನ ಬಳಗಕ್ಕೆ ಎರಡು ಸೋಲುಗಳಿಂದ ತಡೆ ಬಿದ್ದಿದೆ. ಇನ್ನೊಂದು ಪಂದ್ಯ ಗೆದ್ದರೆ ನೇರ ಫೈನಲ್ ತಲುಪುವ ಅವಕಾಶವಿದ್ದು, ಅದಕ್ಕಾಗಿ ಲೀಗ್‌ನ ಕೊನೆಯ ಪಂದ್ಯಕ್ಕೆ ಕಾಯಬೇಕಾಗಿದೆ. ಬ್ಯಾಟರ್‌ಗಳ ವೈಫಲ್ಯದಿಂದ ತಂಡವು, ಡೆಲ್ಲಿ ಕ್ಯಾಪಿಟಲ್ಸ್ ಎದುರು 7 ವಿಕೆಟ್‌ಗಳಿಂದ ಸೋಲಬೇಕಾಯಿತು. 2024 ಸಾಲಿನ ವಿಜೇತ ತಂಡ ನಂತರದ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಎದುರು ಸೋಲನುಭವಿಸುವ ಮೊದಲು ಹೋರಾಟ ತೋರಿತು. ರಿಚಾ ಘೋಷ್ ಅವರ ಆಟ (90; 50ಎ) ಸೋಲಿನಲ್ಲೂ ಬೆಳ್ಳಿರೇಖೆಯಾಯಿತು.

ಲಾರೆನ್ ಬೆಲ್ (11 ವಿಕೆಟ್) ಆರ್‌ಸಿಬಿಯ ಯಶಸ್ವಿ ಬೌಲರ್ ಎನಿಸಿದ್ದಾರೆ. ಅವರಿಗೆ ಸಯಾಲಿ ಸತ್ಘರೆ (8) ಮತ್ತು ನದಿನ್ ಡಿ ಕ್ಲರ್ಕ್ (11 ವಿಕೆಟ್) ಬೆಂಬಲ ನೀಡಿದ್ದಾರೆ.

ವಾರಿಯರ್ಸ್‌ಗೆ ಈ ಪಂದ್ಯ ಮಾಡು–ಮಡಿ ರೀತಿಯದ್ದಾಗಿದೆ. ಎರಡು ಪಂದ್ಯ ಗೆದ್ದರೂ ಪ್ಲೇಆಫ್ ಸ್ಥಾನ ಖಚಿತವಿಲ್ಲ. ಅದು ಇತರ ತಂಡಗಳ ಮರ್ಜಿಯನ್ನು ಅವಲಂಬಿಸಿದೆ. ಆರು ಪಂದ್ಯಗಳಲ್ಲಿ ಎರಡು ಮಾತ್ರ ಗೆದ್ದು 4 ಅಂಕ ಗಳಿಸಿರುವ ವಾರಿಯರ್ಸ್‌ನ ನೆಟ್ ರನ್‌ರೇಟ್ (-0.769) ಕೂಡ ಕಳಪೆಯಾಗಿದೆ.

**ಪಂದ್ಯ ಆರಂಭ:** ರಾತ್ರಿ 7.30
**ನೇರ ಪ್ರಸಾರ:** ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್.




ಆರ್‌ಸಿಬಿ ತಂಡದ ಬ್ಯಾಟರ್ ರಿಚಾ ಘೋಷ್ (ಎಡ) ಹಾಗೂ ವೇಗದ ಬೌಲರ್ ಲಾರೆನ್ ಬೆಲ್ ‘ಎಕ್ಸ್’ ಚಿತ್ರಗಳು

### ನಿಧಾನಗತಿಯ ಓವರ್: ಜೆಮಿಮಾಗೆ ದಂಡ

**ವಡೋದರ (ಪಿಟಿಐ):** ಗುಜರಾತ್ ಜೈಂಟ್ಸ್ ವಿರುದ್ಧ ಮಂಗಳವಾರ ನಡೆದ ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡ ನಿಗದಿತ ಅವಧಿಯಲ್ಲಿ ಓವರುಗಳನ್ನು ಪೂರೈಸಲು ವಿಫಲರಾದ ಕಾರಣಕ್ಕೆ ನಾಯಕಿ ಜೆಮಿಮಾ ರಾಡ್ರಿಗಸ್ ಅವರಿಗೆ ₹12 ಲಕ್ಷ ದಂಡ ವಿಧಿಸಲಾಗಿದೆ. ಬರೋಡ ಕ್ರಿಕೆಟ್ ಸಂಸ್ಥೆ ಮೈದಾನದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡ ಮೂರು ರನ್‌ಗಳಿಂದ ಪಂದ್ಯ ಸೋತು ಐದು ತಂಡಗಳ ಲೀಗ್‌ನಲ್ಲಿ ನಾಲ್ಕನೇ ಸ್ಥಾನಕ್ಕೆ ಸರಿದಿತ್ತು.

## ಐ–ಲೀಗ್ ಇನ್ನುಮುಂದೆ ಎಐಎಫ್‌ಎಲ್

**ನವದೆಹಲಿ (ಪಿಟಿಐ):** ದೇಶದ ಎರಡನೇ ಸ್ತರದ ಫುಟ್‌ಬಾಲ್ ಲೀಗ್ ಆಗಿರುವ ಐ ಲೀಗ್‌ಗೆ ‘ಇಂಡಿಯನ್ ಫುಟ್‌ಬಾಲ್ ಲೀಗ್’ (ಐಎಫ್‌ಎಲ್) ಎಂದು ಮರುನಾಮಕರಣ ಮಾಡಲಾಗಿದೆ. ಲೀಗ್ ಪುನರ್ರಚಿಸಲೂ ನಿರ್ಧರಿಸಲಾಗಿದೆ. ಫೆಬ್ರುವರಿ 21ರಂದು ಆರಂಭವಾಗುವ ಐಎಫ್‌ಎಲ್ ಆಯೋಜನೆಯಲ್ಲಿ ಕ್ಲಬ್‌ಗಳೇ ಹೆಚ್ಚಿನ ಪಾಲುದಾರಿಕೆ ಹೊಂದಲಿವೆ.

ಕ್ಲಬ್ ಪ್ರತಿನಿಧಿಗಳು ಮತ್ತು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಪದಾಧಿಕಾರಿಗಳ ನಡುವೆ ಬುಧವಾರ ನಡೆದ ಚರ್ಚೆಯ ನಂತರ ಐ ಲೀಗ್‌ಗೆ ಹೊಸ ಹೆಸರಿಡಲು ನಿರ್ಧರಿಸಲಾಯಿತು. ಈ ನಿರ್ಧಾರಕ್ಕೆ ಎಐಎಫ್‌ಎಫ್‌ನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅಂಗೀಕಾರ ದೊರೆಯಬೇಕಿದೆ. ಆದರೆ ಇದು ಔಪಚಾರಿಕವಷ್ಟೇ ಆಗಿದೆ.

‘ಐ ಲೀಗ್ ಹೆಸರು ಬದಲಿಸಲು ಮತ್ತು ಲೀಗ್ ಆಯೋಜನೆಯಲ್ಲಿ ಬದಲಾವಣೆಗಳನ್ನು ತರಲು ಈ ಸಭೆಯಲ್ಲಿ ನಿರ್ಧರಿಸಲಾಗಿದೆ. ಇದಕ್ಕೆ ಫೆಡರೇಷನ್‌ನ ಕಾರ್ಯಕಾರಿ ಸಮಿತಿಯ ಸಮ್ಮತಿ ದೊರೆಯಬೇಕಿದೆ’ ಎಂದು ಶಿಲ್ಲಾಂಗ್ ಲಾಜೊಂಗ್ ಮಾಲೀಕ ಲರ್ಸಿಂಗ್ ಮಿಂಗ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಎಫ್‌ಎಸ್‌ಡಿಎಲ್, ಮೂಲ ಒಪ್ಪಂದ ನವೀಕರಣಕ್ಕೆ ವಿಫಲವಾದ ನಂತರ ಎಐಎಫ್‌ಎಫ್ ಹೊಸ ವಾಣಿಜ್ಯ ಪಾಲುದಾರನನ್ನು ಕಂಡುಕೊಳ್ಳುವಲ್ಲಿ ವಿಫಲವಾಗಿತ್ತು. ಹೀಗಾಗಿ ಐಎಸ್‌ಎಲ್ ಮತ್ತು ಐ ಲೀಗ್ ನಡೆಯುವುದು ಅನಿಶ್ಚಿತವಾಗಿತ್ತು. ಕ್ರೀಡಾ ಸಚಿವಾಲಯ ಮಧ್ಯಪ್ರವೇಶಿಸಿದ ನಂತರ ಈ ಲೀಗ್‌ಗಳ ಆರಂಭಕ್ಕೆ ಕ್ಷಣಗಣನೆ ನಡೆಯುತ್ತಿದೆ. ಐಎಸ್‌ಎಲ್ ಫೆ. 14ರಂದು ಆರಂಭವಾಗಲಿದೆ. ಇದಾಗಿ ವಾರದ ಬಳಿಕ ಐಎಫ್‌ಎಲ್ ಆರಂಭವಾಗಲಿದೆ.

1996 ರಿಂದ 2007ರವರೆಗೆ ದೇಶದ ಅಗ್ರಸ್ತರದ ಲೀಗ್‌ಗೆ ಈ ಹಿಂದೆ ಎನ್‌ಎಫ್‌ಎಲ್ ಎಂಬ ಹೆಸರಿತ್ತು. 2014ರಲ್ಲಿ ಐಎಸ್‌ಎಲ್ ಆರಂಭವಾಯಿತು. ಐ ಲೀಗ್ ದೇಶದ ಎರಡನೇ ಸ್ತರದ ಲೀಗ್ ಆಯಿತು.

ಪಶ್ಚಿಮ ಬಂಗಾಳದ ಡೈಮಂಡ್ ಹಾರ್ಬರ್ ಮತ್ತು ಮಿಜೋರಾಮ್‌ನ ಚನ್ಮಾರಿ ಎಫ್‌ಸಿ ತಂಡಗಳು 2024–25ನೇ ಸಾಲಿಗೆ ಐ ಲೀಗ್‌ಗೆ ಬಡ್ತಿ ಪಡೆದಿವೆ.

### ಬಡೋಣಿ, ಪ್ರಿಯಾಂಶ್ ಅಲಭ್ಯ

**ಮುಂಬೈ (ಪಿಟಿಐ):** ದೆಹಲಿ ತಂಡದ ನಾಯಕ ಆಯುಷ್ ಬಡೋಣಿ ಮತ್ತು ಬ್ಯಾಟರ್ ಪ್ರಿಯಾಂಶ್ ಆರ್ಯ ಅವರು ಮುಂಬೈ ಎದುರು ಗುರುವಾರ ಆರಂಭವಾಗುವ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯಕ್ಕೆ ಅಲಭ್ಯರಾಗಿದ್ದಾರೆ. ಇವರಿಬ್ಬರೂ ಟಿ20 ವಿಶ್ವಕಪ್ ಸಿದ್ಧತಾ ಪಂದ್ಯಗಳನ್ನು ಆಡಲಿರುವ ಭಾರತ ‘ಎ’ ತಂಡಕ್ಕೆ ಆಯ್ಕೆಯಾಗಿದ್ದಾರೆ.

ಬಡೋಣಿ ಸ್ಥಾನದಲ್ಲಿ ಆಯುಷ್ ದೊಸೇಜಾ ಅವರು ದೆಹಲಿ ತಂಡವನ್ನು ಮುನ್ನಡೆಸಲಿದ್ದಾರೆ. ಬಡೋಣಿ ಈಚೆಗಷ್ಟೇ ನ್ಯೂಜಿಲೆಂಡ್ ವಿರುದ್ಧ ನಡೆದಿದ್ದ ಮೂರು ಪಂದ್ಯಗಳ ಏಕದಿನ ಸರಣಿಗೆ ಭಾರತ ತಂಡಕ್ಕೆ ಬುಲಾವ್ ಪಡೆದಿದ್ದರು.



ಬಡೋಣಿ

ಭಾರತ ‘ಎ’ ತಂಡವು ಅಮೆರಿಕ ವಿರುದ್ಧ ನವಿ ಮುಂಬೈನಲ್ಲಿ ಫೆ. 2 ರಂದು ನಡೆಯಲಿರುವ ಅಭ್ಯಾಸ ಪಂದ್ಯ ಆಡಲಿದೆ. ನಂತರ ತಂಡವು ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರಕ್ಕೆ ತೆರಳಲಿದ್ದು ಅಲ್ಲಿ ನಮೀಬಿಯಾ ವಿರುದ್ಧ ಆಡಲಿದೆ.

## ಟಿ20 ರ‍್ಯಾಂಕಿಂಗ್: ಏಳನೇ ಸ್ಥಾನಕ್ಕೆ ಸೂರ್ಯ

**ದುಬೈ (ಪಿಟಿಐ):** ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರು ಬುಧವಾರ ಪ್ರಕಟವಾದ ಐಸಿಸಿ ಪುರುಷರ ಟಿ20 ರ‍್ಯಾಂಕಿಂಗ್ ಪಟ್ಟಿಯ ಬ್ಯಾಟರ್‌ಗಳ ವಿಭಾಗದಲ್ಲಿ ಏಳನೇ ಸ್ಥಾನಕ್ಕೆ ಏರಿದ್ದಾರೆ. ನ್ಯೂಜಿಲೆಂಡ್ ವಿರುದ್ಧ ಹಾಲಿ ಟಿ20 ಸರಣಿಯಲ್ಲಿ ತೋರಿದ ಉತ್ತಮ ಪ್ರದರ್ಶನದಿಂದ ಅವರು ಐದು ಸ್ಥಾನಗಳಷ್ಟು ಬಡ್ತಿ ಪಡೆದಿದ್ದಾರೆ.

ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರನಾಗಿರುವ ಸೂರ್ಯ ಈ ಸರಣಿಯಲ್ಲಿ 32, ಅಜೇಯ 82 ಮತ್ತು ಅಜೇಯ 57 ರನ್ ಗಳಿಸಿದ್ದರು. ಅಭಿಷೇಕ್ ಶರ್ಮಾ ಮೊದಲ ಸ್ಥಾನ ಕಾಪಾಡಿಕೊಂಡಿದ್ದು, ತಿಲಕ್ ವರ್ಮಾ ಮೂರನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.

ಅಫ್ಗಾನಿಸ್ತಾನದ ಬ್ಯಾಟರ್ ಇಬ್ರಾಹಿಂ ಜದ್ರಾನ್ ಎರಡು ಸ್ಥಾನ ಬಡ್ತಿ ಪಡೆದು 13ನೇ ಸ್ಥಾನದಲ್ಲಿದ್ದಾರೆ. ರಹಮಾನುಲ್ಲಾ ಗುರ್ಬಾಜ್ ಅವರು ಮೂರು ಸ್ಥಾನ ಮೇಲೇರಿ 15ನೇ ಸ್ಥಾನಕ್ಕೇರಿದ್ದಾರೆ. ಈ ಇಬ್ಬರೂ ಆಟಗಾರರು ವೆಸ್ಟ್ ಇಂಡೀಸ್ ವಿರುದ್ಧ ಸರಣಿಯಲ್ಲಿ ಉತ್ತಮವಾಗಿ ಆಡಿದ್ದರು.

ಟಿ20 ಬೌಲರ್‌ಗಳ ರ‍್ಯಾಂಕಿಂಗ್‌ನಲ್ಲಿ ಅಫ್ಗಾನಿಸ್ತಾನದ ಸ್ಪಿನ್ನರ್ ಮುಜಿಬುರ್ ರಹಮಾನ್ ಅವರು 9ನೇ ಸ್ಥಾನಕ್ಕೇರಿದ್ದಾರೆ. ವೆಸ್ಟ್ ಇಂಡೀಸ್ ವಿರುದ್ಧ ಸರಣಿಯ ಎರಡನೇ ಪಂದ್ಯದಲ್ಲಿ ಅವರು 21 ರನ್ನಿಗೆ 4 ವಿಕೆಟ್ ಕಬಳಿಸಿದ್ದು, ಐದು ಸ್ಥಾನ ಮೇಲೇರಲು ನೆರವಾಗಿದೆ. ಜಸ್‌ಪ್ರೀತ್ ಬೂಮ್ರಾ (4 ಸ್ಥಾನ ಮೇಲೇರಿ 13ನೇ ಸ್ಥಾನ) ಮತ್ತು ರವಿ ಬಿಷ್ಣೋಯಿ (13 ಸ್ಥಾನ ಬಡ್ತಿ ಪಡೆದು 19ನೇ ಸ್ಥಾನ) ಕೂಡ ಪ್ರಗತಿ ಕಂಡಿದ್ದಾರೆ.

**ಬ್ರೂಕ್, ರೂಟ್ ಪ್ರಗತಿ:** ಏಕದಿನ ಕ್ರಮಾಂಕಪಟ್ಟಿಯಲ್ಲಿ ಇಂಗ್ಲೆಂಡ್‌ನ ಹ್ಯಾರಿ ಬ್ರೂಕ್ ಮತ್ತು ಜೋ ರೂಟ್ ಅವರು ಶ್ರೀಲಂಕಾ ವಿರುದ್ಧ ತೋರಿದ ಉತ್ತಮ ಆಟದಿಂದಾಗಿ ಪ್ರಗತಿ ಸಾಧಿಸಿದ್ದಾರೆ. ಬ್ರೂಕ್ 3 ಪಂದ್ಯಗಳಿಂದ 247 ರನ್ ಗಳಿಸಿದ್ದು, 17 ಸ್ಥಾನಗಳಷ್ಟು ಬಡ್ತಿ ಪಡೆದು 11ನೇ ಸ್ಥಾನಕ್ಕೇರಿದ್ದಾರೆ. ಅನುಭವಿ ರೂಟ್ 23 ರಿಂದ 17ನೇ ಸ್ಥಾನಕ್ಕೆ ಜಿಗಿದಿದ್ದಾರೆ.

## ಥಾಯ್ಲೆಂಡ್ ಮಾಸ್ಟರ್ಸ್: ಕಿರಣ್, ಮಿಥುನ್ ಶುಭಾರಂಭ

**ಬ್ಯಾಂಕಾಕ್ (ಪಿಟಿಐ):** ಭಾರತದ ಕಿರಣ್ ಜಾರ್ಜ್ ಹಾಗೂ ತರುಣ್ ಮನ್ನೆಪಲ್ಲಿ ಅವರು ಥಾಯ್ಲೆಂಡ್ ಮಾಸ್ಟರ್ಸ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಬುಧವಾರ ಶುಭಾರಂಭ ಮಾಡಿದರು.

ಏಳನೇ ಶ್ರೇಯಾಂಕ ಪಡೆದಿರುವ ಕಿರಣ್, ಮೊದಲ ಸುತ್ತಿನ ಪಂದ್ಯದಲ್ಲಿ 21–15, 21–9ರಿಂದ ನೇರ ಆಟಗಳಲ್ಲಿ ಮಲೇಷ್ಯಾದ ಶೋಲೆ ಐದಿಲ್ ಅವರನ್ನು ಮಣಿಸಿದರು. ಕೊಚ್ಚಿಯ ಆಟಗಾರ ಕೇವಲ 27 ನಿಮಿಷಗಳಲ್ಲಿ ಪಂದ್ಯವನ್ನು ಗೆದ್ದುಕೊಂಡರು.

ವಿಶ್ವಕ್ರಮಾಂಕದಲ್ಲಿ 60ನೇ ಸ್ಥಾನದಲ್ಲಿರುವ ಮಿಥುನ್ ಮಂಜುನಾಥ್ ಅವರು 21–12, 9–21, 21–17ರಿಂದ ಎಂಟನೇ ಶ್ರೇಯಾಂಕದ ಆಟಗಾರ, ಡೆನ್ಮಾರ್ಕ್‌ನ ಮ್ಯಾಗ್ನಸ್ ಯೊಹಾನಸನ್ ವಿರುದ್ಧ ಜಯ ಗಳಿಸಿದರು.



ಮಿಥುನ್

ತರುಣ್ ಅವರು 22–20, 21–17ರಿಂದ ಆತಿಥೇಯ ರಾಷ್ಟ್ರದ ಕಾಂಟಫೊನ್ ವಾಂಗ್‌ಚರೋನ್ ಅವರನ್ನು ಸೋಲಿಸಿ, ಎರಡನೇ ಸುತ್ತಿಗೆ ಮುನ್ನಡೆದರು.

ಆದರೆ, ಕಣದಲ್ಲಿದ್ದ ಭಾರತದ ಇತರ ಆಟಗಾರರಾದ ಪ್ರಿಯಾಂಶು ರಾಜಾವತ್, ಮನರಾಜ್ ಸಿಂಗ್ ಹಾಗೂ ಎಸ್.ಶಂಕರ್ ಮುತ್ತುಸ್ವಾಮಿ ಸುಬ್ರಮಣ್ಯನ್ ಅವರು ತಮ್ಮ ಪಂದ್ಯಗಳಲ್ಲಿ ಸೋತರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಉದಯೋನ್ಮುಖ ಆಟಗಾರ್ತಿ ಅನ್ಮೋಲ್ ಖರ್ಬ್ ಅವರು 21–12, 21–12ರಿಂದ ಹಾಂಗ್‌ಕಾಂಗ್‌ನ ಲೊ ಸಿನ್ ಯಾನ್ ಹ್ಯಾಪಿ ವಿರುದ್ಧ ಸುಲಭ ಜಯ ಸಾಧಿಸಿದರು. ಇಶಾರಾಣಿ ಬರೂವಾ 21–12, 21–8ರಿಂದ ಸ್ವದೇಶದ ಮಾಳವಿಕಾ ಬನ್ಸೋದ್ ಎದುರು ನಿರಾಯಾಸವಾಗಿ ಗೆದ್ದರು.

ಅನುಪಮಾ ಉಪಾಧ್ಯಾಯ ಅವರು 13–21, 20–22ರಲ್ಲಿ ತೈವಾನ್‌ನ ಪೆಂಗ್ ಯು ವೀಯಿ ಎದುರು ಸೋತರು. ಶ್ರೀಯಾಂಶಿ ವಾಲಿಶೆಟ್ಟಿ ಅವರು 14–21, 21–13, 21–19ರಿಂದ ಕೆನಡಾದ ವೆನ್ ಯು ಝುಂಗ್ ವಿರುದ್ಧ ಜಯಿಸಿದರು.

ತಾನ್ಯಾ ಹೇಮಂತ್ ಅವರು 11–21, 13–21ರಿಂದ ಏಳನೇ ಶ್ರೇಯಾಂಕದ ಆಟಗಾರ್ತಿ, ಡೆನ್ಮಾರ್ಕ್‌ನ ಜೂಲಿ ಜೇಕಬ್‌ಸನ್ ಅವರಿಗೆ ಶರಣಾದರು.

### 2 ಸೆಟ್ ಮುನ್ನಡೆಯಲ್ಲಿದ್ದಾಗ ಗಾಯಾಳಾದ ಇಟಲಿಯ ಮುಸೆಟ್ಟಿ • ಪೆಗುಲಾ, ರಿಬಾಕಿನಾ ಮುನ್ನಡೆ

# ಆಸ್ಟ್ರೇಲಿಯಾ ಓಪನ್: ಸೆಮಿಗೆ ಸಿನ್ನರ್, ಜೊಕೊ

**ಮೆಲ್ಬರ್ನ್ (ಎಎಫ್‌ಪಿ):** ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿರುವ ಸರ್ಬಿಯಾದ ತಾರೆ ನೊವಾಕ್ ಜೊಕೊವಿಚ್ ಅವರಿಗೆ ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯಲ್ಲಿ ಅದೃಷ್ಟವೂ ಜೊತೆಯಾಯಿತು. ಬುಧವಾರ ನಡೆದ ಕ್ವಾರ್ಟರ್‌ಫೈನಲ್‌ನಲ್ಲಿ ಗೆಲುವಿನ ಸನಿಹದಲ್ಲಿದ್ದ ಇಟಲಿಯ ಲೊರೆಂಜೊ ಮುಸೆಟ್ಟಿ ಅವರು ಗಾಯಾಳಾಗಿ ಹೊರನಡೆದಿದ್ದು ದಿಗ್ಗಜ ಆಟಗಾರನಿಗೆ ವರದಾನವಾಯಿತು.

ಹ್ಯಾಟ್ರಿಕ್ ಸಾಧನೆಯ ಉತ್ಸಾಹದಲ್ಲಿರುವ ಇಟಲಿಯ ಯಾನಿಕ್ ಸಿನ್ನರ್ ಅವರು ಅಮೆರಿಕದ ಬೆನ್ ಶೆಲ್ಟನ್ ಅವರನ್ನು ನೇರ ಸೆಟ್‌ಗಳಲ್ಲಿ ಮಣಿಸಿದರು. ಆ ಮೂಲಕ, ಜೊಕೊವಿಕ್ ಅವರೊಂದಿಗೆ ಸೆಮಿಫೈನಲ್ ಹಣಾಹಣಿಗೆ ವೇದಿಕೆ ಸಿದ್ಧಪಡಿಸಿದರು.

ಮಹಿಳಾ ಸಿಂಗಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ ಐದನೇ ಶ್ರೇಯಾಂಕದ ಎಲೆನಾ ರಿಬಾಕಿನಾ ಅವರು ಎರಡನೇ ಶ್ರೇಯಾಂಕದ ಆಟಗಾರ್ತಿ ಇಗಾ ಶ್ವಾಂಟೆಕ್ ಅವರಿಗೆ ಆಘಾತ ನೀಡಿದರು. ಅಮೆರಿಕದ ಆಟಗಾರ್ತಿಯರ ವ್ಯವಹಾರವಾಗಿದ್ದ ಎಂಟರ ಘಟ್ಟದ ಇನ್ನೊಂದು ಪಂದ್ಯದಲ್ಲಿ ಜೆಸ್ಸಿಕಾ ಪೆಗುಲಾ 6–2, 7–6 (7–1)ರಿಂದ ಅಮಂಡಾ ಅನಿಸಿಮೊವಾ ವಿರುದ್ಧ ಗೆಲುವು ಸಾಧಿಸಿದರು.

ರಾಡ್ ಲೇವರ್ ಅರೇನಾದಲ್ಲಿ ನಡೆದ ಪಂದ್ಯದಲ್ಲಿ 23 ವರ್ಷ ವಯಸ್ಸಿನ ಮುಸೆಟ್ಟಿ ಅವರು ಗೆಲುವಿನ ಹಾದಿಯಲ್ಲಿದ್ದರು. ಮೊದಲ ಎರಡು ಸೆಟ್‌ಗಳಲ್ಲಿ ಕ್ರಮವಾಗಿ 6–4, 6–3ರಲ್ಲಿ ಮುನ್ನಡೆ ಸಾಧಿಸಿದ್ದರು. ಮೂರನೇ ಸೆಟ್ ವೇಳೆಗೆ (1–3), ಬಲಗಾಲಿನ ವಿಪರೀತ ನೋವಿನಿಂದಾಗಿ ನಿರಾಶೆಯಿಂದಲೇ ಪಂದ್ಯ ತೊರೆದರು. ಐದನೇ ಶ್ರೇಯಾಂಕದ ಮುಸೆಟ್ಟಿ ಇಲ್ಲಿ ಪ್ರಥಮ ಬಾರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದರು.

‘ಮುಸೆಟ್ಟಿ ಬಗ್ಗೆ ನನಗೆ ಅನುಕಂಪವಿದೆ. ಅವರು ಈ ಪಂದ್ಯದಲ್ಲಿ ನನಗಿಂತಲೂ ಚೆನ್ನಾಗಿ ಆಟವಾಡುತ್ತಿದ್ದರು. ನಾನು ತವರಿಗೆ ಮರಳಲು ಸಿದ್ಧನಾಗಿದ್ದೆ’ ಎಂದು ಪಂದ್ಯದ ನಂತರ ಜೊಕೊವಿಕ್ ಪ್ರತಿಕ್ರಿಯಿಸಿದರು.

16ರ ಘಟ್ಟದಲ್ಲಿ ಜೊಕೊವಿಕ್ ಅವರು ಒಂದೂ ಸೆಟ್ ಆಡದೆ ಜೆಕ್ ಗಣರಾಜ್ಯದ ಜೇಕಬ್ ಮೆನ್ಸಿಕ್ ಅವರಿಂದ ವಾಕ್ ಓವರ್ ಪಡೆದಿದ್ದರು.

ಅಮೋಘ ಲಯದಲ್ಲಿರುವ ಎರಡನೇ ಶ್ರೇಯಾಂಕದ ಆಟಗಾರ ಸಿನ್ನರ್, ಎಂಟರ ಘಟ್ಟದಲ್ಲಿ 6–3, 6–4, 6–4ರಿಂದ ಶೆಲ್ಟನ್ ವಿರುದ್ಧ ನಿರಾಯಾಸವಾಗಿ ಗೆದ್ದರು. ‘ಹ್ಯಾಟ್ರಿಕ್’ ಪ್ರಶಸ್ತಿಯತ್ತ ಕಣ್ಣಿಟ್ಟಿರುವ ಅವರು, ಸೆಮಿಫೈನಲ್‌ನಲ್ಲಿ ಜೊಕೊವಿಕ್ ಅವರನ್ನು ಎದುರಿಸಲಿದ್ದಾರೆ. 10 ಬಾರಿಯ ಚಾಂಪಿಯನ್ ಜೊಕೊವಿಕ್, ಟೂರ್ನಿಯಲ್ಲಿ ಹ್ಯಾಟ್ರಿಕ್ ಪ್ರಶಸ್ತಿ ಗೆದ್ದ ಏಕೈಕ ಆಟಗಾರ ಎನಿಸಿದ್ದಾರೆ.

24 ವರ್ಷ ವಯಸ್ಸಿನ ಸಿನ್ನರ್ ಹಾಗೂ 38 ವರ್ಷದ ಜೊಕೊವಿಕ್ ಅವರು ಈವರೆಗೆ 10 ಬಾರಿ ಮುಖಾಮುಖಿಯಾಗಿದ್ದು, ಇಟಲಿಯ ಆಟಗಾರ 6ರಲ್ಲಿ ಜಯ ಸಾಧಿಸಿದ್ದಾರೆ. ಕಳೆದ ಐದು ಪಂದ್ಯಗಳಲ್ಲಿ ಸಿನ್ನರ್ ಅವರೇ ‘ವಿನ್ನರ್’ ಆಗಿದ್ದಾರೆ.

2022ರ ವಿಂಬಲ್ಡನ್ ಚಾಂಪಿಯನ್ ರಿಬಾಕಿನಾ ಅವರು 7–5, 6–1ರಿಂದ ನೇರ ಸೆಟ್‌ಗಳಲ್ಲಿ ಪೋಲೆಂಡ್‌ನ ಶ್ವಾಂಟೆಕ್ ಅವರಿಗೆ ಆಘಾತ ನೀಡಿದರು. 2023ರಲ್ಲಿ ಇಲ್ಲಿ ಫೈನಲ್ ತಲುಪಿದ್ದ ರಿಬಾಕಿನಾ, ಸೆಮಿಫೈನಲ್‌ನಲ್ಲಿ ಆರನೇ ಶ್ರೇಯಾಂಕದ ಆಟಗಾರ್ತಿ ಪೆಗುಲಾ ಅವರನ್ನು ಎದುರಿಸಲಿದ್ದಾರೆ.



ಇಗಾ ಶ್ವಾಂಟೆಕ್ ಅವರನ್ನು ಮಣಿಸಿ ಸಂಭ್ರಮಿಸಿದ ಎಲೆನಾ ರಿಬಾಕಿನಾ ಎಎಫ್‌ಪಿ ಚಿತ್ರ